ಪುಸ್ತಕ ಪ್ರಪಂಚ

ಫೆಬ್ರವರಿ–ಮಾರ್ಚ್ ೧೯೮೯



ಶ್ರೀಕೃಷ್ಣ ಆಲನಹಳ್ಳಿ : ವಿಶೇಷ ಸಂಚಿಕೆ

PUSTAKA PRAPANCHA : Monthly

Published and printed by Karnataka State Adult Eductaion Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು - 570 004

ಎಂದೆಂದಿಗೂ ಮಾಸಲಾಗದ ಆತ್ಮೀಯ ನೆನಪು

ಚದುರಂಗ

ಶ್ರೀಕೃಷ್ಣ ಆಲನಹಳ್ಳಿ ಕನ್ನಡದಲ್ಲಿ ಒಂದು ವಿಶಿಷ್ಟ ಪ್ರತಿಭೆ. ಮಿಂಚು ಸುಳಿದಾಡುವಂಥ ಪ್ರತಿಭೆ. ಇನ್ನೂ ಕಾಲೇಜಿನಲ್ಲಿ ಓದುತ್ತಿರುವಾಗಲೇ "ಮಣ್ಣಿನ ಹಾಡು" ಕವನ ಸಂಕಲನದ ಮೂಲಕ ಕನ್ನಡ ಸಾರಸ್ವತ ಲೋಕವನ್ನು ದಿಗ್ಭ್ರಮೆಗೊಳಿಸಿದ ಪ್ರತಿಭೆ. ಕವಿ ಗೋಪಾಲಕೃಷ್ಣ ಅಡಿಗರಂತೂ ಇವರ ಕಾವ್ಯವನ್ನು ಎಷ್ಟು ಹೊಗಳಿದರೂ ಸಾಲದು "ಈ ಕವನಗಳಲ್ಲಿ ಮಿಡಿಯುತ್ತಿರುವುದು ನಿಜವಾದ ಸತ್ವಶಾಲಿಯಾದ ಕವಿಯೊಬ್ಬನ ಜ್ವಲಂತ ಅಂತರಂಗ.... ಮುಕ್ತವಾದ, ಬದುಕಿಗೆ ಹತ್ತಿರವಾದ, ಗಡಸಾದ ತ್ರಾಣವುಳ್ಳ ಭಾಷೆ. ಜೀವಂತ ಭಾಷೆಯಲ್ಲಿ ಅನುಭವವನ್ನು ಕೆತ್ತುವ ಕಡೆಯುವ ನಿಜವಾದ ಕಸಬುಗಾರಿಕೆ....ಗಟ್ಟಿಯಾದ ಕಲ್ಲುನೆಲವನ್ನೊಡೆದು ಹೊರಬೀಳುವ ಈ ಹಸುರು ಕೋಲಾಹಲ ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಹೊಸ ಶಕೆಯ ಆರಂಭವನ್ನು ಸೂಚಿಸುತ್ತದೆ."

ಕವಿಯಾಗಿ ಹೆಸರುಗಳಿಸಿದಂತೆ, ಸಣ್ಣ ಕತೆಗಾರರಾಗಿಯೂ ಕಾದಂಬರಿಕಾರರಾಗಿಯೂ ಶ್ರೀಕೃಷ್ಣ ಪ್ರಸಿದ್ಧಿ ಪಡೆದಿದ್ದರು. 'ಕಾಡು' ಕಾದಂಬರಿ ಅನೇಕ ಭಾರತೀಯ ಹಾಗೂ ಪಾಶ್ಚಾತ್ಯ ಭಾಷೆಗಳಿಗೆ ಅನುವಾದವಾಗಿದೆ. 'ಪರಸಂಗದ ಗೆಂಡೆತಿಮ್ಮ' ಮತ್ತು 'ಭುಜಂಗಯ್ಯನ ದಶಾವತಾರಗಳು' ಮಲಯಾಳಂ ಭಾಷೆಗೆ ಅನುವಾದಗೊಂಡಿವೆ. 'ಫೀನಿಕ್ಸ್', 'ಗೀಜಗನಗೂಡು', 'ಕುರುಬರ ಲಕ್ಕನೂ ಎಲಿಜಬೆತ್ ರಾಣಿಯೂ'—ಇಂಥ ಸಣ್ಣ ಕತೆಗಳ ಜತೆಗೆ 'ಕಾಡು' ಮತ್ತು 'ಪರಸಂಗದ ಗೆಂಡೆತಿಮ್ಮ' ಕಾದಂಬರಿಗಳು ಚಲನಚಿತ್ರಗಳಾಗಿಯೂ ಪ್ರಸಿದ್ಧಿ ಪಡೆದಿವೆ. 'ಕಾಡು' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿಯೂ ಲಭಿಸಿದೆ.

ಇಷ್ಟು ಸಮೃದ್ಧ ಪ್ರತಿಭೆಯ ಶ್ರೀಕೃಷ್ಣ ಆಲನಹಳ್ಳಿ ಇನ್ನಿಲ್ಲ ಎಂದು ನಂಬುವುದಕ್ಕೇ ಸಾಧ್ಯವಾಗುತ್ತಿಲ್ಲ. ಯಾರಾದರೂ ಹೇಳುವಂತೆ ನಲವತ್ತೆರಡು ಸಾಯುವ ವಯಸ್ಸೇನಲ್ಲ. ಪುಟ ಪುಟಿಯುವ

ಜೀವನೋತ್ಸಾಹದ ಇಂಥ ಜೀವಂತ ಚಿಲುಮೆಯನ್ನು ನಾನು ಕಂಡಿದ್ದೇ ಇಲ್ಲ! ಆತ ಎಲ್ಲಿದ್ದರೆ ಅಲ್ಲಿ ನಗು, ಕೇಕೆ, ಗದ್ದಲ. ಹುಟ್ಟು ಮಾತುಗಾರ. ಎಂಥದೇ ಗುಂಪಿನಲ್ಲಿದ್ದರೂ ಆತ ತಮ್ಮ ದಪ್ಪದನಿಯ ಮಾತುಗಾರಿಕೆಯಿಂದ ಪ್ರಮುಖ ವ್ಯಕ್ತಿಯಾಗಿಬಿಡುತ್ತಿದ್ದರು. ವಾದದಲ್ಲಿ ಸುಲಭವಾಗಿ ಸೋಲೊಪ್ಪುತ್ತಿರಲಿಲ್ಲ. ಆದರೆ ಹಿರಿಯರೆಂದರೆ ಎಲ್ಲಿಲ್ಲದ ಗೌರವ, ಅಭಿಮಾನ. ಹಿರಿಯ ಕವಿ ಪು. ತಿ. ನರಸಿಂಹಾಚಾರ್ ಅವರನ್ನು ಕುರಿತು ಒಂದು ಸುಂದರ ಕವನ ರಚಿಸಿ ನನ್ನ ಮುಂದೆ ಓದಿದ್ದರು. ಸಾಯುವುದಕ್ಕೆ ಕೆಲವೇ ದಿನಗಳ ಮುಂಚೆ ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಅಧ್ಯಯನ ಸಂಸ್ಥೆ ಜತೆಯಾಗಿ ಏರ್ಪಡಿಸಿದ್ದ 'ಸಾಹಿತ್ಯ ಮತ್ತು ಪ್ರತಿಭಟನೆ' ಕುರಿತ ವಿಚಾರ ಸಂಕಿರಣದ ಕವಿಗೋಷ್ಠಿಯಲ್ಲಿ 'ಅಜ್ಜ' ಕವನವನ್ನು ವಾಚಿಸಿ, ಮಾಸ್ತಿಯವರ ಬಗೆಗೆ ತಮಗಿದ್ದ ಗೌರವಾದರಗಳನ್ನು ಪ್ರಕಟಪಡಿಸಿದ್ದರು.

ಹೀಗೆಯೇ ನಾನೂ ಸಹ ಅವರ ಪ್ರೀತಿಗೆ ಪಾತ್ರನಾಗಿದ್ದೆ. ಹೆಗ್ಗಡದೇವನಕೋಟೆ ಮತ್ತು ಹುಣಸೂರು ಅಕ್ಕಪಕ್ಕದ ತಾಲ್ಲೂಕುಗಳು. ಜೀವನ ವ್ಯಾಪಾರ ಒಂದಕ್ಕೊಂದು ಅಂಟಿಕೊಂಡೇ ನಡೆದುಬಂದಿದೆ. ನನ್ನ ಹುಟ್ಟೂರಾದ ಕಲ್ಲಹಳ್ಳಿಗೂ ಆಲನಹಳ್ಳಿಗೂ ಕೇವಲ ಇಪ್ಪತ್ತು ಮೈಲಿಗಳ ಅಂತರ. ಅಲ್ಲದೆ ಶ್ರೀಕೃಷ್ಣರಿಗೂ ನಮ್ಮ ಹಳ್ಳಿಯ ಕೆಲವು ಮನೆತನಗಳಿಗೂ ನೆಂಟಸ್ತನದ ಬಾಂಧವ್ಯವಿತ್ತು. ಎಲ್ಲಕ್ಕೂ ಮಿಗಿಲಾಗಿ ಸಮಾನವಾದ ಮಣ್ಣಿನ ಪ್ರೇಮ, ನಮ್ಮಿಬ್ಬರನ್ನೂ ಹತ್ತಿರ ತಂದಿತ್ತು.

ಅವರು ಏನು ಬರೆದರೂ ನನ್ನ ಮುಂದೆ ತಂದು ಓದುತ್ತಿದ್ದರು. 'ಒಂದು ಅರಮನೆಯ ಕತೆ' ಕಾದಂಬರಿಯ ಸ್ವಲ್ಪ ಭಾಗವನ್ನು ನನ್ನ ಮುಂದೆ ಓದಿ, "ಅರಮನೆ ಬದುಕು ನೀವು ಬಾಲ್ಯದಲ್ಲಿ ನೀವು ಕಂಡಿದ್ದು, ಅನುಭವಿಸಿದ್ದು, ನೀವೇ ಬರೆಯಬೇಕಾಗಿದ್ದ ವಸ್ತು. ಅಂಥ ವಸ್ತುವನ್ನು ಬಳಸಿ ಬರೆಯುವ ಸಾಹಸ ಮಾಡಿದ್ದೇನೆ. ನೀವು ಸರಿಯಾಗಿದೆ ಎಂದರೆ ಮುಂದುವರಿಸುತ್ತೇನೆ", ಎಂದರು. "ಸೊಗಸಾಗಿ ಬಂದಿದೆ. ಒಂದೇ ವಸ್ತುವನ್ನು ಬೇರೆ ಬೇರೆ ದೃಷ್ಟಿಯಿಂದ ನೋಡಬಹುದಲ್ಲ. ಅದಕ್ಕೇಕೆ ಯೋಚನೆ ಮಾಡುತ್ತೀರಿ, ಮುಂದುವರಿಸಿ", ಎಂದೆ. "ಬೇರೆ ಯಾರು ಹೇಳಿದರೂ ನನಗೆ ಇಷ್ಟು ಸಂತೋಷವಾಗುತ್ತಿರಲಿಲ್ಲ" ಎಂದು ತೃಪ್ತಿಯ ಮಂದಹಾಸ ಬೀರಿದರು.

ನಾನು ನನ್ನ 'ವೈಶಾಖ' ಕಾದಂಬರಿಯ ಎರಡು ಪುಟಗಳನ್ನು ಬರೆದಿದ್ದೆ. ಬರವಣಿಗೆ ಸಂಪೂರ್ಣವಾಗಿ ಹಳ್ಳಿಯ ಆಡುಮಾತಿನಲ್ಲಿ ಸಾಗಿತ್ತು. ನನಗೆ ಆತಂಕ. ಇದನ್ನು ಯಾರು ಓದುತ್ತಾರೆಂದು! ನನ್ನ ಬರವಣಿಗೆ ಹೀಗೆ ಚಿಂತೆಯಲ್ಲಿ ಸಾಗಿದ್ದಾಗ, ಕೃಷ್ಣ ಬಂದರು. ಅವರ ಮುಂದೆ ನನ್ನ ಆತಂಕ ವ್ಯಕ್ತಪಡಿಸಿದೆ. ಅವರು ಸಾವಧಾನವಾಗಿ ಓದಿದರು. ಓದಿ, "ಛೆ, ನೀವ್ಯಾಕೆ ಸಾರ್ ಯೋಚ್ನೆಮಾಡ್ತೀರಿ. ಒಳ್ಳೆ ಕಸುವಾದ ಭಾಷೆ. ಹೇಗೆ ಬರುತ್ತೋ ಹಾಗೆ ಬರಕೊಂಡೋಗಿ. ಇದು ಆರಂಭ ಆಗಿರೊ ರೀತಿ ನೋಡಿದ್ರೆ, ಕನ್ನಡಕ್ಕೆ ಒಂದು ಮಹತ್ವದ ಕೃತಿ ನಿಮ್ಮ ಲೇಖನಿಯಿಂದ ಬರೋವಂಗೆ ಕಾಣಿಸತ್ತೆ", ಎಂದು ದೃಢವಾಗಿ ಹೇಳಿ ಪ್ರೋತ್ಸಾಹಿಸಿದರು. ಮುಂದೆ ಇನ್ನೂ ಕೆಲವು ಪುಟಗಳು ಇದೇ ರೀತಿ ಆಡುಮಾತಿನಲ್ಲೇ ಮುಂದುವರಿದಿದ್ದಾಗ ಕನ್ನಡದ ಸೃಜನಶೀಲ ವಿಮರ್ಶಕರಲ್ಲೊಬ್ಬರಾದ

ಶ್ರೀ ಜಿ. ಎಚ್. ನಾಯಕರೂ ಶ್ರೀಕೃಷ್ಣರ ಅಭಿಪ್ರಾಯವನ್ನೇ ಸಮರ್ಥಿಸಿದಾಗ ನನ್ನ ಬರವಣಿಗೆ ಮುನ್ನಡೆಯಲು ಮತ್ತಷ್ಟು ಇಂಬು ದೊರಕಿತು.

ಪುಸ್ತಕ ಪ್ರಪಂಚದ ಗೌರವ ಸಂಪಾದಕರಾಗಿ ನೇಮಕಗೊಂಡ ಶ್ರೀಕೃಷ್ಣ ಅದಕ್ಕೆ ಹೊಸ ವರ್ಚಸ್ಸು ಹಾಗೂ ಆಯಾಮಗಳನ್ನು ತಂದುಕೊಟ್ಟರು. ಮೊದಲ ಸಂಪುಟದಲ್ಲಿ ಮಹಾನ್ ಲೇಖಕ ಟಾಲ್‌ಸ್ಟಾಯ್ ಅವರನ್ನು ಪರಿಚಯ ಮಾಡಿಕೊಡುವುದರ ಜತೆಗೆ ನನ್ನ ಕೃತಿಗಳನ್ನು ಕುರಿತೂ ಲೇಖನಗಳನ್ನು ಪ್ರಕಟಿಸಿ, ನನ್ನ ಬಗ್ಗೆ ತಮಗಿದ್ದ ಅತಿಶಯ ಪ್ರೀತಿಯನ್ನು ಸಾದರಪಡಿಸಿದ್ದರು.

ಇಂಥ ಮಿತ್ರನನ್ನು ನೆನೆದಾಗ, ಅವರು ಇನ್ನೂ ಸಾಧಿಸಬಹುದಾಗಿದ್ದುದನ್ನು ಮೆಲುಕು ಹಾಕಿದಾಗ ಹೃದಯ ಸಂಕಟದಿಂದ ಭಾರವಾಗುತ್ತದೆ. ಆದರೆ ಶ್ರೀಕೃಷ್ಣ ಬದುಕಿದ್ದು ಆತನ ಮುಂದೆ ಇಂಥ ಭಾವನೆ ವ್ಯಕ್ತಪಡಿಸಿದ್ದರೆ, "ಅಯ್ಯೋ, ಬಿಡಿ ಸಾರ್. ಕನ್ನಡಕ್ಕೆ ಸಾಕಷ್ಟು ಕೊಟ್ಟಿದ್ದೇನೆ. ಅದಕ್ಕೆ ಯಾಕೆ ಚಿಂತೆ," ಎಂದು ನಿಖರವಾಗಿ ದೊಡ್ಡ ದನಿಯಲ್ಲಿ ನಕ್ಕುಬಿಡುತ್ತಿದ್ದರು.

ಆ ದನಿ, ಆ ನಗು, ಆ ಜೀವನೋತ್ಸಾಹ, ಆ ಪ್ರೀತಿ, ಇನ್ನು ಕೇವಲ ನೆನಪು. ಎಂದೆಂದಿಗೂ ಮರೆಯಲಾಗದ ಸುಂದರ ನೆನಪು. ಎಂದೆಂದಿಗೂ ಮಾಸಲಾಗದ ಆತ್ಮೀಯ ನೆನಪು. ಬದುಕಿನ ಜಂಜಾಟಕ್ಕೆ ಸಿಕ್ಕಿ ಮನಸ್ಸು ಜರ್ಜರಿತವಾದಾಗ ಹುರುಪು ತುಂಬುವ ಭರವಸೆಯ ನೆನಪು.

ತನಗೆ ಅವಶ್ಯವಿದ್ದಷ್ಟೇ ಪಡೆಯುವುದು ಧರ್ಮ. ಅವಶ್ಯಕತೆಯಿಲ್ಲದಿದ್ದುದನ್ನು ಪಡೆದರೂ ಕಳ್ಳತನ ಮಾಡಿದಂತೆಯೇ.

ಸ್ವರಾಜ್ಯವೆಂದರೆ ಸ್ವೈರ್ಯವಲ್ಲ. ಸ್ವಾತಂತ್ರ್ಯದ ನಿಜವಾದ ಅರ್ಥ ಸ್ವಸಂಯಮ, ಸ್ವನಿಯಮಗಳಲ್ಲಿ ಅಡಗಿದೆ.

ಗಾಂಧೀಜಿ

ಶ್ರೀಕೃಷ್ಣ ಆಲನಹಳ್ಳಿ—ಒಂದು ನೆನಪು

ಕೃಷ್ಣಮೂರ್ತಿ ಚಂದರ್

ಶ್ರೀಕೃಷ್ಣ ಆಲನಹಳ್ಳಿಯ ಬಗೆಗಿನ ನನ್ನ ನೆನಪು ಕನಿಷ್ಠ ಇಪ್ಪತ್ತು ವರ್ಷ ಹಳೆಯದು; ನಾನು ಆಗತಾನೇ ಅಂದರೆ ೬೯ರಲ್ಲಿ ಯುವರಾಜ ಕಾಲೇಜಿಗೆ ಸೇರಿದ್ದೆ; ಶ್ರೀಕೃಷ್ಣ ಕೂಡ ಆಗತಾನೇ ಎಂ. ಎ. ಮುಗಿಸಿ ನಮ್ಮ ಕಾಲೇಜಿಗೆ ಕನ್ನಡ ಲೆಕ್ಚರರ್ ಆಗಿ ಸೇರಿದ್ದ. ಅದಕ್ಕೆ ಮುಂಚೆಯೇ ಚರ್ಚಾ ಸ್ಪರ್ಧೆಗಳಲ್ಲಿ ಆತನನ್ನೂ, ಅದೇ ಪೀಳಿಗೆಯ ಶ್ರೀ ಕೆ. ರಾಮದಾಸರನ್ನೂ ಕಂಡಿದ್ದೆನಾದರೂ ಈ ರೀತಿ ಪರಿಚಯವಾಗಿರಲಿಲ್ಲ. ಸಾಲದ್ದಕ್ಕೆ ಕವನ, ಕತೆ ಬರೆಯುವ ಆಸೆ ಇಟ್ಟುಕೊಂಡಿದ್ದ ನಾವೆಲ್ಲ ಸದಸ್ಯರಾಗಿದ್ದ ಚೇತನ ಕನ್ನಡ ಸಂಘದ ಮಿತ್ರರೆಲ್ಲರಿಗೂ ಚಿಕ್ಕ ವಯಸ್ಸಿನಲ್ಲೇ ಕಾವ್ಯ ಸಂಕಲನ, ಕಥೆಗಳನ್ನು ಬರೆದು, ಮೆಚ್ಚುಗೆ, ಅವಾರ್ಡುಗಳನ್ನೂ ಗಳಿಸಿದ್ದ ಶ್ರೀಕೃಷ್ಣ ಚೆನ್ನಾಗಿಯೇ ಪರಿಚಿತನಾಗಿದ್ದ.

ನನಗೆ ಚೆನ್ನಾಗಿ ನೆನೆಪಿದೆ ಕೃಷ್ಣನ ಮೊದಲನೆಯ ಪೀರಿಯಡ್! ಕೃಷ್ಣನಿಗೆ ಪರಿಚಿತರ್‍ಯಾರೋ ಹಳ್ಳಿಯಿಂದ ತಮ್ಮ ಮಗನನ್ನೂ, ಆತನ ವಿದ್ಯಾಭ್ಯಾಸದ ಲಕ್ಷಣಗಳನ್ನೂ ನೋಡಿ, ಆನಂದಿಸಲು ಬಂದಿದ್ದರಂತೆ. ಅವರ ಮಗನೋ ಪಟ್ಟಣವಾಸಿಯಾಗಿದ್ದರಿಂದ ತನ್ನ ತಂದೆತಾಯಿಯರು ಬಂದಿದ್ದು ತನ್ನ ಹಳ್ಳಿಯಲ್ಲಿನ ಬೇರುಗಳನ್ನು ಪ್ರತಿನಿಧಿಸುತ್ತಿದ್ದುದು ಬಹಳ ಅಸಮಂಜಸವಾಗಿ ಕೀರ ಕೀಳು ರೀತಿಯಲ್ಲಿ, ಅಂದರೆ, ಅವರು ತನ್ನ ಅಪ್ಪ, ಅಮ್ಮಂದಿರೇ ಅಲ್ಲ ಅನ್ನುವಂತೆ ನಡೆದುಕೊಂಡನಂತೆ. ಕೃಷ್ಣನಿಗೆ ವಿಷಯ ತಿಳಿದು ವ್ಯಗ್ರನಾಗಿದ್ದ. ನಮ್ಮ ಕ್ಲಾಸಿಗೆ ಬಂದು, ಆ ವ್ಯಕ್ತಿಯನ್ನಲ್ಲದಿದ್ದರೂ, ಆ ರೀತಿಯ ನಡತೆಯ ಬಗ್ಗೆ ಅತ್ಯಂತವಾಗಿ ವಿಷಕಾರಿದ. "ನೀವು ನಿಮ್ಮ ಅಪ್ಪ, ಅಮ್ಮನನ್ನೇ ಅಪ್ಪ ಅಮ್ಮ ಅಂತ ಒಪ್ಪಿಕೊಳ್ಳದಿದ್ದರೆ ಇನ್ಯಾರನ್ನು ತಾನೇ ಒಪ್ಪಿಕೊಳ್ಳುತ್ತೀರಿ" ಅಂತ ಛೇಡಿಸಿದ. ಹಳ್ಳಿ, ಹಳ್ಳಿಯ ವಾತಾವರಣ, ಜನ, ಹೊಗ್ಗಳಿಕೆಗೆ, ಹೊಮ್ಮಿಗೆ ತಕ್ಕದ್ದು ಎಂದೆಲ್ಲ ಹೇಳಿ ಪಟ್ಟಣವಾಸಿ

ಗಳಾಗಿದ್ದ ನಮ್ಮನ್ನು ಚಿಂತನೆಗೆ ಒಳಗಾಗುವಂತೆ ಮಾಡಿದ್ದ. ಹೆಚ್ಚು ಹೆಚ್ಚಾಗುತ್ತಿದ್ದ ಆ ರೀತಿಯ ಟೆಂಡೆನ್ಸಿಯ ಬಗ್ಗೆ ನಾವು ಕಣ್ತೆರೆಯುವಂತೆ ಮಾಡಿದ. ಕೃಷ್ಣನ ಆ ಮಾತುಗಳು ನನಗೆ, ಮತ್ತೊಂದು ಸಂದರ್ಭದಲ್ಲಿ, ಆಫ್ರಿಕಾದ ಪ್ರಸಿದ್ಧ ಲೇಖಕ ಚಿನುವ ಅಚೀಬೆ ತನ್ನ ದೇಶದ ಕಿರಿ ಬರಹಗಾರರೊಬ್ಬನಿಗೆ ಕೊಡುವ ಬುದ್ಧಿವಾದ ನೆನಪಿಗೆ ತಂದಿತು; ಅಚೀಬೆ ಆ ಯುವಕನಿಗೆ ನೀನು ಪ್ರತಿಯೊಂದಕ್ಕೂ ಯೂರೋಪಿನತ್ತ ದೃಷ್ಟಿ ಹಾಯಿಸುವುದನ್ನು ಬಿಡು. ನಮ್ಮಲ್ಲಿನ ಪಾಮ್‌ಮರ ಕೂಡ ಕವಿತೆಯ ವಸ್ತುವಾಗಲಿಕ್ಕೆ ಯೋಗ್ಯವಾದದ್ದು" ಎಂಬ ಅರ್ಥ ಬರುವಂತೆ ಹೇಳಿದ್ದನ್ನು ಬರೆದಿದ್ದಾನೆ.

ನಂತರ ಕೃಷ್ಣನ **ಕಾಡು** ಬರೆದು ಹೊರಬಂದ ಸಮಯಕ್ಕಾಗಲೇ ನಾನು ಗಂಗೋತ್ರಿ ಸೇರಿದ್ದೆ. ಆಗಾಗಲೇ ವಿಶಿಷ್ಟ ವಿಮರ್ಶೆಗೆ ಹೆಸರುವಾಸಿಯಾಗಿದ್ದು, ನಾವೆಲ್ಲ ಅವರ ಒಪ್ಪಿಗೆಗೇ ಕಾದು ನೋಡುತ್ತಿದ್ದ ಜಿ. ಎಚ್. ನಾಯಕರ ಮನೆಯಲ್ಲಿ ಮತ್ತೊಮ್ಮೆ ಕೃಷ್ಣನ ಪರಿಚಯವಾಗಿತ್ತು. **ಕಾಡುವಿನ** ಬಗ್ಗೆ, ನಂತರ ಬಂದ ಅದರ ಸಿನಿಮಾ ಅವತರಣ ಇತ್ಯಾದಿ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅಷ್ಟೊತ್ತಿಗಾಗಲೇ, ನಾನು ಸಣ್ಣ ಪುಟ್ಟ ಕತೆಗಳನ್ನು ಬರೆದು ಪ್ರಕಟಿಸಿದ್ದೆ. ಸಿಕ್ಕಿದಾಗಲೆಲ್ಲ ಕೃಷ್ಣ ವಿಚಾರಿಸುತ್ತಿದ್ದ; ನನ್ನ ವ್ಯಕ್ತಿತ್ವ ಹಾಗೂ ಬರವಣಿಗೆಯ ಮೇಲೆ ನಮ್ಮಲ್ಲಿ ಅಗ್ರರಾದ ಯು. ಆರ್. ಅನಂತ ಮೂರ್ತಿ, ಅಡಿಗ ಅಂತಹವರ ಪ್ರಭಾವ ಹೆಚ್ಚಿಗೆ ಇದ್ದುದನ್ನು ಕಂಡು ಹುಷಾರಾಗಿರು, ಎಂದೆಲ್ಲ ಎಚ್ಚರಿಸುತ್ತಿದ್ದ. ಎಂಭತ್ತೊಂದರಲ್ಲಿ ನನ್ನ ಕಥಾಸಂಕಲನ ಹಾಗೂ ಕಾಫ್ಕನ ಕತೆಗಳ ಭಾಷಾಂತರ ಎರಡೂ ಹೊರಬಂದಾಗ ತುಂಬ ಅಭಿಮಾನದಿಂದ ಅವುಗಳನ್ನು ಸ್ವೀಕರಿಸಿದ್ದ. ಕೆಲವು ಮುದ್ರಣದ ತಪ್ಪುಗಳು ಇದ್ದ ಕಾಫ್ಕನ ಕತೆಗಳನ್ನು ಓದಿದ್ದ ಅಂತ ತೋರುತ್ತೆ. "ತಕಾರ, ಸಕಾರ ನಮಗೇ ಸರಿಯಾಗಿ ಹೊರಡಲ್ಲ, ಬರಿಯಕ್ಕೆ ಬರಲ್ಲ ಅಂತಿದ್ದೆ. ಈಗ ನೋಡು, ನಿನ್ನ ಪುಸ್ತಕ ಓದಿದ ಮೇಲೆ ಸಮಾಧಾನ ಆಯ್ತು. ನಿಮಗೂ ಇದರ ಬಗ್ಗೆ ಕಷ್ಟ ಇದೆ" ಅಂತ ಕ್ಯಾಂಟೀನಿನಲ್ಲಿ ಎಲ್ಲರ ಎದುರೂ ಜೋರಾಗಿ ಹೇಳಿ ನಕ್ಕಿದ್ದ.

ಕೃಷ್ಣ ಸಮೀಪವಾಗುವುದಕ್ಕೆ **ಪುಸ್ತಕ ಪ್ರಪಂಚ** ಮುಖ್ಯವಾಗಿ ಕಾರಣ. ಆತ ಅದರ ಮುಂಚೂಣಿಯನ್ನು ಹೊತ್ತಮೇಲೆ, ಇಂಗ್ಲಿಷ್ ಡಿಪಾರ್ಟ್‌ಮೆಂಟಿನ ಎಲ್ಲರನ್ನೂ ಅದಕ್ಕೆ ಬರೆಯಲು ಆತನೇ ಮುಖ್ಯ ಕಾರಣ ಎಂತಲೇ ಹೇಳಬೇಕು. **ಪುಸ್ತಕ ಪ್ರಪಂಚ**ವನ್ನು ಅತ್ಯಂತ ಎತ್ತರಕ್ಕೆ ಕರೆದೊಯ್ಯಬೇಕು, ಅದು ಕನ್ನಡದ ಮಿಕ್ಕೆಲ್ಲ ಮಾಸಿಕಗಳಿಗಿಂತಲೂ ಮಿಗಿಲಾಗಿಸಬೇಕು ಎಂದು ಆತನ ಆಸೆ. ಮುಖ್ಯವಾಗಿ ಕನ್ನಡದ ಓದುಗರಿಗೆ ಪ್ರಪಂಚದಲ್ಲಿರುವ ಎಲ್ಲ ಶ್ರೇಷ್ಠ ಲೇಖಕರನ್ನೂ, ಅವರ ಕೃತಿಗಳನ್ನೂ ಭಾಷಾಂತರಿಸಿ, ಪರಿಚಯಿಸಬೇಕು ಎಂದು ಅವನ ಇಷ್ಟ. ಹಾಗಾಗಿ ಆತನ ಮಾತಿಗೆ ಪ್ರತಿ ಇಲ್ಲವೇ ಇಲ್ಲ. ಎಷ್ಟು ಕಾರಣ ಕೇಳಿದರೂ ಒಪ್ಪದೇ, ಪ್ರೀತಿಯಿಂದ, ವಿನಯದಿಂದಲೇ ಆದರೆ ದೃಢವಾಗಿ ಹೇಳಿ, ಪದೇ ಪದೇ ಫೋನ್ ಮಾಡಿ ಕೆಲಸ ಮಾಡಿಸಿದ. ನಾನಂತೂ ಆ ಸಮಯದಲ್ಲಿ ಮಾಡಿದ ಭಾಷಾಂತರಕಾರ್ಯ, ವಿಮರ್ಶಾ ಲೇಖನಕಾರ್ಯ ಇನ್ಯಾವಾಗಲೂ ಮಾಡಿಲ್ಲ. ಬರೆದ ಪ್ರತಿಯೊಂದು ಲೇಖನಗಳನ್ನೂ ಪರಿಶೀಲಿಸಿ, ಚೆನ್ನಾಗಿರುವ ಲೇಖನಗಳನ್ನು ಸೂಕ್ಷ್ಮವಾಗಿ ಓದಿ ಬರೆದವರನ್ನು ಮುಜುಗರ ಮಾಡಿಸುವವರೆಗೂ ಹೊಗಳುವ. ಇನ್ನೂ

ನೆನಪಿದೆ. ಇಂಗ್ಲಿಷ್ ಡಿಪಾರ್ಟ್‌ಮೆಂಟಿನಲ್ಲೇ ಉಪನ್ಯಾಸಕರಾಗಿರುವ ಡಾ. ರಾಮಚಂದ್ರ ಅವರು ಜೋಸೆಫ್ ಕಾನ್ರಾಡ್‌ನ ಮೇಲೆ ಬರೆದಿದ್ದ ಲೇಖನ ಅದ್ಭುತವಾಗಿತ್ತು. ಕೃಷ್ಣ ಅವರನ್ನು ಎದುರೇ ಹೊಗಳಿ, ಹೊಗಳಿ ಸ್ವಭಾವತಃ ಹೊಗಳಿಕೆಯಿಂದ ಹಿಂಜರಿಯುವ ರಾಮಚಂದ್ರರನ್ನು ಪೇಚಿಗೆ ಸಿಲುಕಿಸಿದ್ದ!

ಆದರೆ ಕೃಷ್ಣನದು ನೇರ ಸ್ವಭಾವ—ಮುಚ್ಚುಮರೆ ಒಂದಿಷ್ಟೂ ಇಲ್ಲದ ವ್ಯಕ್ತಿ ಆತ. ಸಾಹಿತ್ಯ ಲೋಕದಲ್ಲಿ ಇದ್ದುದನ್ನು ನೇರವಾಗಿ ಹೇಳದೆ, ಕಹಿಯಾದ ವಿಷಯ ಗಳನ್ನು ಹೇಳಲೇಬೇಕಾಗಿ ಬಂದರೆ, ಮರೆಮಾಚುವುದು, ಇಲ್ಲವೇ ಸುತ್ತಿ ಬಳಸಿ ಹೇಳು ವುದು ಸಾಮಾನ್ಯ. ಆದರೆ ಕೃಷ್ಣನಿಗೆ ಅದು ಸಲ್ಲದು. ಇದೇ ಆತನನ್ನು ಅನೇಕ ಸಲ ಬೇರೆ ಸಾಹಿತಿಗಳಿಂದ ದೂರವಾಗುವಂತೆಯೂ ಮಾಡಿದ್ದು ಎಲ್ಲರಿಗೂ ತಿಳಿದ ವಿಷಯ. ಹಾಗೆಂದ ಪಕ್ಷದಲ್ಲಿ ಕೃಷ್ಣನಿಗೆ ಪೂರ್ವಗ್ರಹಗಳು ಇರಲಿಲ್ಲವೆಂತಲ್ಲ. ಪೂರ್ವಗ್ರಹ ಇದ್ದರೂ ಮರೆಮಾಚುವ ನಮ್ಮ ಸಾಹಿತ್ಯ ಪ್ರಪಂಚದಲ್ಲಿ, ತನ್ನ ಪೂರ್ವಗ್ರಹಗಳೂ ಸರಿಯಾದವೇ ಎಂದು ವಾದಿಸುವಂತಹ ವ್ಯಕ್ತಿ ಶ್ರೀಕೃಷ್ಣ. ಹೀಗೇ ಒಂದು ಸಂಜೆ ಗೆಳೆಯರಾದ ಶೂದ್ರ ಶ್ರೀನಿವಾಸ್, ಡಿ. ಆರ್. ನಾಗರಾಜ್ ಮತ್ತಿವರೆಲ್ಲ ಸೇರಿದ್ದೆವು. ಅವರ ಪ್ರಕಾರ ಕನ್ನಡದ ಹತ್ತು ಅತಿ ಶ್ರೇಷ್ಠ ಕಾದಂಬರಿಗಳಲ್ಲಿ ಕಾಡೂ ಒಂದು. ಆ ಪಟ್ಟಿಯಲ್ಲಿ ಅನಂತ ಮೂರ್ತಿಯವರ 'ಸಂಸ್ಕಾರ' ಇಲ್ಲ. ಚರ್ಚೆ ಇದರಿಂದ ಪ್ರಾರಂಭವಾಗಿ ಎಲ್ಲೆಲ್ಲೋ ಹೋಯಿತು. ಕೃಷ್ಣನಿಗೆ ಸಹಜವಾಗಿಯೇ ಇದ್ದ ಕಂಚಿನ ಕಂಠದಲ್ಲಿ ಬೇರೆಯವರ ಬಾಯಿ ಮುಚ್ಚಿಸಿದ!

ಕೃಷ್ಣನಿಗೆ ಯಾವಾಗಲೂ ಒಂದು ಸಣ್ಣ ಕೊರಗು ಒಳಗೊಳಗೇ ಭಾದಿಸಿತ್ತು. ಪ್ರಾಯಃಶಃ ಅದು ಎಲ್ಲ ಶ್ರೇಷ್ಠ ಲೇಖಕರನ್ನೂ ಭಾದಿಸುತ್ತದೆ ಅನ್ನಿಸುತ್ತದೆ—ವಿಮರ್ಶಕರು ತನ್ನ ಕೃತಿಗಳಲ್ಲಿ ಸಲ್ಲಬೇಕಾದ ವಿಮರ್ಶಾಗೌರವವನ್ನು ಸಲ್ಲಿಸುವುದಿರಲಿ, ಅವನ್ನು ಸಾಕಷ್ಟು ಗಂಭೀರವಾಗಿಯೇ ತೆಗೆದುಕೊಂಡಿಲ್ಲ ಎಂದು. ಹೀಗಾಗಿ ಅವನಿಗೆ "ಎಸ್ಟಾಬ್ಲಿಷ್" ಆದ ವಿಮರ್ಶಕರ ಬಗ್ಗೆ ವೈಯುಕ್ತಿಕವಾಗಿ ಕೊಂಚ ಸಿಟ್ಟೂ ಇತ್ತು ಅನ್ನಿಸುತ್ತಿತ್ತು. ಡಾ. ಅನಂತಮೂರ್ತಿ ಕೃಷ್ಣನ ಬಗ್ಗೆ ಬರೆಯುತ್ತ ಈತನ ಸಾಮಗ್ರಿ, ವಸ್ತು ಹಳ್ಳಿಯ ಜೀವನದ್ದು. ಅದು ಎಷ್ಟು ದಿನ ಈತನಿಗೆ ಉಳಿದಿರೊತ್ತೋ ಅಲ್ಲಿಯ ವರೆಗೆ ಈತ ಒಳ್ಳೆಯ ಕೃತಿ ಕೊಡಬಲ್ಲ" ಅನ್ನುವ ಅರ್ಥದಲ್ಲಿ ಹೇಳಿದ್ದಾರಂತೆ—ಅದೂ ನನಗೆ ಕೃಷ್ಣನೇ ಹೇಳಿದ್ದು. ಯಾರೋ, ಏನೋ ಒಂದು ದಿನ ಆತನ ಸಂಯಮ ಇಲ್ಲದ ಗಳಿಗೆಯಲ್ಲಿ "ಅವರಿಗೆ ಹೇಳು, ಇನ್ನೂ ಸಾವಿರ ವರ್ಷವಾದರೂ ಮುಗಿಯದ ಸಾಮಗ್ರಿ ನನ್ನಲ್ಲಿದೆ" ಅಂದಿದ್ದ.

ಅದೂ ನಿಜವೇ; ಪ್ರತಿನಿತ್ಯ ಕೃಷ್ಣನಿಂದ ಅವನು ಬರೆಯಬೇಕೆಂದಿದ್ದ ಹೊಸ ಹೊಸ ವಸ್ತುವಿನ ಪರಿಚಯ ಸಿಗುತ್ತಿತ್ತು. ಹೀಗೆ ನೂರಾರು ಕತೆಗಳ ಬಗ್ಗೆ, ಕಾದಂಬರಿಯ ಬಗೆಗಿನ ವಸ್ತುವನ್ನು ನಮಗೆ ತಿಳಿಸುವ. ಅವೆಲ್ಲಕ್ಕೂ ಕೇಂದ್ರೀಕೃತ ವಸ್ತು ಅಂದರೆ ಹಳ್ಳಿಯೇ, ಹಳ್ಳಿಯ ವಾತಾವರಣ, ಹಳ್ಳಿಯ ಜನ, ಅವರಲ್ಲಿನ ಭೇದ, ಭಾವ, ಎಲ್ಲವನ್ನು ಪೂರ್ಣವಾಗಿ ಅರಿತಿದ್ದು, ಆ ವಸ್ತುವನ್ನು ಕಲೆಯಾಗಿ ಮಾಡಬಲ್ಲ ಚೈತನ್ಯ ಕೃಷ್ಣನೊಬ್ಬನಿಗೆ ಮಾತ್ರ ಇದ್ದುದು ಅನಿಸತ್ತೆ.

ಕೃಷ್ಣನ ಬಗ್ಗೆ ಜನ ಬಹಳ ಕಟುವಾಗಿ, ಕಹಿಯಾಗಿ ಮಾತನಾಡುವುದನ್ನೆ ನಾನು ಕೇಳಿದ್ದೇನೆ. ಆದ್ದರಿಂದ ಆತನೇ ನನಗೊಂದು ಬಾರಿ ಹೇಳಿದ ಆತನ ಬೃಹತ್ ಯೋಜನೆಯ ಬಗ್ಗೆ ಹೇಳದಿದ್ದರೆ ಆತನ ನೆನಪಿಗೇ ಮೋಸ ಮಾಡಿದಂತೆ—ಅದರಿಂದಾಗಿ ಅದನ್ನು ಇಲ್ಲಿ ಹೇಳಿಬಿಡುತ್ತೇನೆ. ಹೀಗೇ ಒಂದು ಸಾರಿ, ಸಂಜೆ ನಾವೆಲ್ಲ ಸೇರಿದ್ದಾಗ, ಕೃಷ್ಣ "ಈ ಸಲ ನನ್ನ ತೋಟದ ಎಳನೀರು ಎಂಭತ್ತೈದು ಸಾವಿರಕ್ಕೆ ಹೋಯಿತು. ಯಾವನು ಅದನ್ನ ಕಾಯ್ಕೊಳ್ತೋನು; ಗುತ್ತಿಗೆ ಕೊಟ್ಟಿದ್ದೆ" ಅಂದ. ನಾನು ತಮಾಷೆಗೆ "ಅಷ್ಟೆಲ್ಲ ದುಡ್ಡು ತಗೊಂಡು ಏನು ಮಾಡ್ತೀ ಕೃಷ್ಣ?" ಅಂದೆ. ಇದ್ದಕ್ಕಿದ್ದ ಹಾಗೆ ನಗುನಗುತ್ತಿದ್ದವ ಗಂಭೀರವಾದ. ಈ ರೀತಿ ದುಡ್ಡು ಬಂದಿದ್ದನ್ನು ಕೂಡಿಹಾಕಿ ತನ್ನ ತೋಟದ ಹಿಂದೆ ಇನ್ನೂ ಹತ್ತು ಎಕರೆ ಜಮೀನು ಕೊಂಡು, ದೊಡ್ಡ ರೆಸಿಡೆನ್ಷಿಯಲ್ ಸ್ಕೂಲು ಕಟ್ಟಿಸ್ತೀನಿ. ಆದರೆ ಅದು ಹಳ್ಳಿಯ, ಅನಾಥ ಮಕ್ಕಳಿಗೆ ಮಾತ್ರ. ಒಂದಕ್ಕೆರಡು ಸಂಬಳ ಕೊಟ್ಟು ಅತ್ಯಂತ ಮೇಧಾವಿ ಉಪಾಧ್ಯಾಯರನ್ನ ಕರೆಸುತ್ತೀನಿ. ನಮ್ಮ ಕಡೆ ಬಡತನ ವಿಪರೀತ. ಹಾಗಾಗಿ ಮಕ್ಕಳು ಅಂದರೆ ಊಟಕ್ಕೆ ಇನ್ನೊಂದು ಬಾಯಿ—ಬಿಟ್ಟಿ ಊಟ, ವಸತಿ ಅಂದರೆ ನಮ್ಮ ಸುತ್ತಮುತ್ತ ಇರುವ ಮಕ್ಕಳಿಗೆ, ಕನಿಷ್ಠ ಒಂದು ಹಂತಕ್ಕಾದರೂ ವಿದ್ಯಾಭ್ಯಾಸವನ್ನು, ಉಚಿತವಾಗಿ ಕೊಡಿಸ್ತೀನಿ" ಎಂತೆಲ್ಲ ಉದ್ವೇಗದಿಂದ ನುಡಿದಿದ್ದ. ಕೃಷ್ಣ ಬದುಕಿದ್ದರೆ, ಒಂದಲ್ಲ ಒಂದು ದಿನ ಈ ತನ್ನ ಯೋಜನೆಯನ್ನ ಕಾರ್ಯಗತ ಮಾಡುವುದರಲ್ಲಿ ಸಂಶಯವಿಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಬೇಕಾದಷ್ಟು ಜನಕ್ಕೆ ಕೃಷ್ಣನ ಪರಿಚಯ, ಸಾಮೀಪ್ಯ ನಿಧಾನವಾಗಿ ಕಹಿಯಾಗಿರುವುದನ್ನು ನಾನು ಕಂಡಿದ್ದೇನೆ. ಆದರೆ ಅವುಗಳಿಗೆ ಕಾರಣ, ಸಮಜಾಯಿಷಿ ಕೊಡುವುದು ನನ್ನ ಉದ್ದೇಶವಲ್ಲ. ಅವನು ತನ್ನೆಲ್ಲ ಹಿರಿಮೆ, ಕ್ರಿಯಾಶೀಲತೆ ಹಾಗೂ ಲೋಪ, ದೋಷಗಳ ಮಧ್ಯೆ ಲೇಖಕನಿಗೆ ಅತ್ಯಂತ ಖಂಡಿತವಾಗಿ ಬೇಕಾದ ಒಂದು ರೀತಿಯ ಮುಗ್ಧತೆಯನ್ನೂ ಉಳಿಸಿಕೊಂಡಿದ್ದ. ಆ ಮುಗ್ಧತೆ ಆತನಿಗೆ ಬೇಗಲೇ ಬಂದಿದ್ದ ಯಶಸ್ಸು, ಹಣ ಮುಕ್ಕಾಲು ಲೇಖಕರಲ್ಲಿ ಆಗುವಂತೆ ಮರೆಯಾಗಿರಲಿಲ್ಲ. ಕೃಷ್ಣ ಅಷ್ಟೊಂದು ಪ್ರೀತಿಪಾತ್ರನಾಗಲು ಅದೇ ಮುಖ್ಯ ಕಾರಣವಾಗಿತ್ತು. ಸಾಹಿತ್ಯಕ್ಕೆ ಇನ್ನಷ್ಟು ಕೊಡಲು ಚೈತನ್ಯ, ಸಾಮಗ್ರಿ ಹಾಗೂ ಆ ಮುಗ್ಧತೆಯನ್ನಿಟ್ಟುಕೊಂಡಿದ್ದ ಶ್ರೀಕೃಷ್ಣ ಆಲನಹಳ್ಳಿಯ ಸಾವು ನಾವೆಲ್ಲ ಕೊರಗುವಂತೆ ಮಾಡಿದೆ.

ಅಸ್ಪೃಶ್ಯತೆ ಒಂದು ಪಾಪ, ಘೋರ ಅಪರಾಧ.

ಗಾಂಧೀಜಿ

ಶ್ರೀಕೃಷ್ಣ ಆಲನಹಳ್ಳಿ : ಒಂದು ಅನಿಸಿಕೆ

ಡಾ. ಕೆ. ಸಿ. ಬೆಳ್ಳಿಯಪ್ಪ

ಶ್ರೀಕೃಷ್ಣ ಆಲನಹಳ್ಳಿ ಸಾಹಿತಿಯಾಗಿ ನನಗೆ ಪರಿಚಯವಾದದ್ದು 'ಕಾಡು' ಕಾದಂಬರಿ ಮೂಲಕ. ಗ್ರಾಮೀಣ ಜೀವನದ ಬದುಕು, ಅಲ್ಲಿನ ಜಗಳ, ಜಂಜಾಟ, ಇವೆಲ್ಲವನ್ನು ಕಿಟ್ಟಿಯ ಕೇಂದ್ರ ಪ್ರಜ್ಞೆಯಿಂದ ಚಿತ್ರಿಸಿ ಕನ್ನಡ ಸಾಹಿತ್ಯಕ್ಕೆ ಕೃಷ್ಣ ನೀಡಿದ ಶ್ರೇಷ್ಠ ಕೃತಿ 'ಕಾಡು'. ಒಬ್ಬ ಲೇಖಕ ಈ ರೀತಿಯ epic simplicity ಯನ್ನು ತನ್ನ ಮೊದಲನೆಯ ಕಾದಂಬರಿಯಲ್ಲೇ ಗಿಟ್ಟಿಸಿಕೊಳ್ಳುವುದು ದೊಡ್ಡ ಸಾಧನೆಯೇ ಸರಿ. ತನ್ನ ದಟ್ಟವಾದ ಅನುಭವವನ್ನು ಪರಿಪಕ್ವವಾಗಿ ಸಾಹಿತ್ಯ ಕೃತಿಯಾಗಿ ರೂಪಾಂತರಗೊಳಿಸುವುದರಲ್ಲಿ ಅಪರೂಪದ ಯಶಸ್ಸನ್ನು ಕಂಡ ಲೇಖಕ, ಕೃಷ್ಣ. ಅವನ 'ಬೆಳುಗು' ನನ್ನನ್ನು ಇಂದೂ ಕೂಡ ಮನಮುಟ್ಟುವ ಪದ್ಯ.

ಕೃಷ್ಣನನ್ನು ಪ್ರಥಮಬಾರಿ ಭೇಟಿಯಾದದ್ದು ಡಾ|| ಅನಂತಮೂರ್ತಿಯವರ ರೂಮಿನಲ್ಲಿ. ನಾನು ಆಗ ಪ್ರಥಮ ಎಂ.ಎ. ವಿದ್ಯಾರ್ಥಿ. ಅವನ ಕಿರಿಚಾಟದ ಮಾತು, ಆವೇಶದಿಂದ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಮಾರುಹೋಗಿದ್ದೆ. ಆದರೆ ಕೃಷ್ಣನನ್ನು ಹತ್ತಿರದಿಂದ ನೋಡಿ, ಬಲು ಆತ್ಮೀಯನಾಗಿದ್ದು ಕೇವಲ ಕಳೆದ ಎರಡು ಮೂರು ವರ್ಷಗಳಲ್ಲಿ. ಚಿಕ್ಕವಯಸ್ಸಿನಿಂದ diary ಬರೆಯುವ ಹುಚ್ಚು ಬೆಳಿಸಿಕೊಂಡಿರುವ ನಾನು ನನ್ನ diary ತೆಗೆದು ನೋಡಿದಾಗ ಆ ದಿನ ನೆನಪಿಗೆ ಬರುತ್ತದೆ. ೧೯೮೭ರ ಜನವರಿ ೨೧. ಅಂದು ನಾನು ಪೋಲಂಕಿ ರಾಮಮೂರ್ತಿಯವರ ಮನೆಯಲ್ಲಿ ದೇವನೂರು ಮಹಾದೇವನ 'ಒಡಲಾಳ'ದ ಇಂಗ್ಲಿಷ್ ಭಾಷಾಂತರವನ್ನು ಓದಿ ಚರ್ಚಿಸುತ್ತಾ ಕುಳಿತಿದ್ದೆ. ರಾತ್ರಿ ಸುಮಾರು ಒಂಬತ್ತು ಗಂಟೆಯ ಸಮಯ. ಕೃಷ್ಣ ಮತ್ತು ಮಹಾದೇವ ಅಲ್ಲಿಗೆ ಬಂದರು. ಕೃಷ್ಣನ ಆಗಮನದ ನಂತರ ನಮ್ಮ ಕೆಲಸ ಅಲ್ಲಿಗೆ ನಿಂತಿತು ಎಂದೇನು ಹೇಳಬೇಕಾಗಿಲ್ಲ. ಅವನು ಆಗ ತಾನೆ 'ಪುಸ್ತಕ ಪ್ರಪಂಚ'ದ ಗೌರವ ಸಂಪಾದಕನಾಗಿ ನೇಮಕಗೊಂಡಿದ್ದ. ಈ ಮಾಸಿಕವನ್ನು

ಸಂಪೂರ್ಣವಾಗಿ ಬದಲಾಯಿಸಿ, ಅದಕ್ಕೆ ಹೊಸತಿರುವು ಕೊಡಬೇಕೆನ್ನುವ ತನ್ನ ಯೋಜನೆಯ ಬಗ್ಗೆ ಉದ್ವೇಗದಿಂದ ಮಾತನಾಡತೊಡಗಿದ. ಕೃಷ್ಣ ನನಗೆ "ಚೆಲ್ಯಯ್ಯಪ್ಪ, paper ತಗೊಂಡು ಬರಿ" ಎಂದು ಹೇಳಿದ. ವಿಶ್ವದ ಶ್ರೇಷ್ಠ ಲೇಖಕರ ಪಟ್ಟಿ ಮಾಡ ತೊಡಗಿದೆವು. ಯಾರನ್ನು ಲೇಖನಗಳಿಗಾಗಿ ಕೇಳಬೇಕು, ಯಾರು ಬರೆಯಬಲ್ಲರು ಎಂಬುದರ ಬಗ್ಗೆ ಯೋಚಿಸಿದೆವು. ಕೆಲವು ಇಂಗ್ಲಿಷ್ ಕಾದಂಬರಿಕಾರರ ಹೆಸರು ಬಂದಾಗ —ಹಾರ್ಡಿ, ಜೇನ್ ಆಸ್ಟಿನ್ ಇತ್ಯಾದಿ—"ನೀನು ಬರೆಯಬೇಕು" ಎಂದ ಕೃಷ್ಣ. ನಾನು ಕನ್ನಡದಲ್ಲಿ ಎಂದೂ ಬರೆದವನಲ್ಲ. ನಮ್ಮ ಇಂಗ್ಲಿಷ್ ವಿಭಾಗದಲ್ಲಿ ಅನಂತಮೂರ್ತಿ, ರಾಮಮೂರ್ತಿ, ದಾಮೋದರರಾವ್, ಡಿ. ಎ. ಶಂಕರ್, ರಾಮಚಂದ್ರ ಮತ್ತು ಚಂದರ್ ಎಲ್ಲರೂ ಕನ್ನಡದಲ್ಲಿ ಕ್ರಿಯಾತ್ಮಕವಾಗಿ ಮತ್ತು ವಿಮರ್ಶಾತ್ಮಕವಾಗಿ ಬರೆಯುತ್ತಿದ್ದರು. ನಾನು ನನ್ನನ್ನು ನಮ್ಮ ವಿಭಾಗದ black sheep ಎಂದು ಭಾವಿಸಿದ್ದೂ ಉಂಟು. ನನ್ನ ಈ ಹಿಂಜರಿಕೆ ಕಂಡ ಕೃಷ್ಣ "ನೀನು ಬರೆಯಲೇಬೇಕು. ನಾನು ನಿನ್ನ ಕನ್ನಡವನ್ನು ಓದಿ ತಿದ್ದಿಕೊಡುತ್ತೇನೆ ಇಲ್ಲ ಗಿಲ್ಲ ಎನ್ನಬೇಡ. ನಾನು ನಿನ್ನನ್ನು ಸುಲಭದರಲ್ಲಿ ಬಿಡುವು ದಿಲ್ಲ" ಎಂದು ಗದರಿಸಿದ. ನಾನು ಅವನಿಗೆ ಮರು ಉತ್ತರ ಹೇಳಲಾರದೆ ಸುಮ್ಮನಾದೆ. ಆ ರಾತ್ರಿ ಅವನ ಅಪರಿಮಿತ ಉತ್ಸಾಹ, ತಾನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಒಂದು ಹೊಸ ಮಾಸಿಕವನ್ನು ಕೊಡುವೆ ಎನ್ನುವ ನಂಬಿಕೆ ನೋಡಿ, ಅವನ ಈ ಯೋಜನೆ ಯಶಸ್ವಿ ಯಾಗಲಿ ಎಂದು ಮನಸ್ಸಿನಲ್ಲಿ ಆಶಿಸಿದ್ದೆ.

ಜೂನ್‌ನಲ್ಲಿ ಕೃಷ್ಣ ಭೇಟಿಯಾಗಿ ಆಗಸ್ಟ್ ಸಂಚಿಕೆ ಟಾಮಸ್ ಹಾರ್ಡಿಯದು ಎಂದು ಹೇಳಿ ನನ್ನನ್ನು ಟೆಸ್ ಕಾದಂಬರಿಯ ಮೇಲೆ ಒಂದು ಲೇಖನ ಬರೆಯಬೇಕು ಎಂದು ಅವನದೇ ಶೈಲಿಯಲ್ಲಿ order ಮಾಡಿದ. ಆ ಲೇಖನ ಬರೆದು ಮುಗಿಸಲು ಪಟ್ಟ ಕಷ್ಟ, ಪರದಾಟ ನನಗೆ ಮಾತ್ರ ಗೊತ್ತು. ಅದನ್ನು ಬರೆದು ಮುಗಿಸಿದ್ದು ಕೇವಲ ಕೃಷ್ಣ ನನ್ನಲ್ಲಿಟ್ಟಿದ್ದ ನಂಬಿಕೆಯನ್ನು ಉಳಿಸಿಕೊಳ್ಳಲು ಮಾಡಿದ ಕೆಲಸ ಎಂದು ಇಂದೂ ಕೂಡ ನಾನೂ ಭಾವಿಸುತ್ತೇನೆ. ಆ ಲೇಖನದ galley proofs ಅನ್ನು ಕೃಷ್ಣ ತರಿಸಿ ರಾಮಮೂರ್ತಿಯವರ ರೂಮಿನಲ್ಲಿ ಜೋರಾಗಿ ಓದಿ, ತಿದ್ದಿ ಖುಷಿ ಪಟ್ಟ. "ಯಾರೋ ನಿನಗೆ ಹೇಳಿದ್ದು ನಿನಗೆ ಕನ್ನಡದಲ್ಲಿ ಬರೆಯಲು ಬರುವುದಿಲ್ಲ" ಎಂದು ಕೃಷ್ಣ ನನ್ನನ್ನು ಬೈದ. ನನಗೆ ನಾನು ಕನ್ನಡದಲ್ಲಿ ಬರೆಯಬಲ್ಲೆ ಎಂಬ ವಿಶ್ವಾಸವನ್ನು ಗಳಿಸಿಕೊಟ್ಟದ್ದು ಕೃಷ್ಣ. ಅದಾದನಂತರ ಕಾನ್ರಾಡ್, ಅಚೇಬೆ ಮತ್ತು ಜೇನ್ ಆಸ್ಟಿನ್‌ರವರ ಕಾದಂಬರಿ ಗಳ ಬಗ್ಗೆ ಲೇಖನಗಳನ್ನು ಬರೆದೆ. ನನ್ನ "ಆ್ಯರೋ ಆಫ್ ಗಾಡ್" ಲೇಖನವನ್ನು ಬಹಳ ವಾಗಿ ಮೆಚ್ಚಿಕೊಂಡು ಕೃಷ್ಣ "ನೀನು ಒಬ್ಬ tribe ನೋಡು, ಅದಕ್ಕೇ ನೋಡು ಆಫ್ರಿಕದ tribe ಬಗ್ಗೆ ಚೆನ್ನಾಗಿ ಬರೆಯಬಲ್ಲೆ" ಎಂದು ಹೇಳಿ ನಕ್ಕ.

ನನ್ನ ಬಗ್ಗೆ ಇಷ್ಟು ಹೇಳುವುದಕ್ಕೆ ಕಾರಣ ಇದೆ. ಕೃಷ್ಣನಂತಹ ವ್ಯಕ್ತಿತ್ವ ಉಳ್ಳ ವನು ಮಾತ್ರ ಕನ್ನಡದಲ್ಲಿ ಬರೆಯಲು ಅಂಜುತ್ತಿದ್ದ ನನ್ನಂತಹವನ ಈ ಹೆದರಿಕೆಯನ್ನು ಹೋಗಲಾಡಿಸಬಲ್ಲವನಾಗಿದ್ದ. ಕಳೆದ ಎರಡು ವರ್ಷಗಳಲ್ಲಿ ನಮ್ಮ ವಿಭಾಗದಲ್ಲಿ ಬಹಳಷ್ಟು ಕಾಲ ಕೃಷ್ಣ ನಮ್ಮೊಡನೆ ಕಳೆದ. ಅವನು ಗೆಳೆಯರಾಗಲಿ, ನಾಯಕಿಯರಾಗಲಿ, ರಾಜಕಾರಣಿ ಗಳಾಗಲಿ, ಸಾಹಿತ್ಯ ಕೃತಿಗಳಾಗಲಿ—ಎಲ್ಲರ ಬಗ್ಗೆ ನಿಷ್ಠುರವಾಗಿ ಮಾತನಾಡುವಂತಹ

ವನು. ವ್ಯಕ್ತಿ ಮತ್ತು ವಿಷಯಗಳ ಬಗ್ಗೆ ಅವನಿಗಿದ್ದ irrevernce ನಿಜವಾದ ಆರೋಗ್ಯಕರ ಮನಸ್ಸಿನ ಚಿಹ್ನೆ ಎಂದು ಹೇಳಬಹುದಿತ್ತು. ಇದರಿಂದ ಹಲವಾರು ಜನರಲ್ಲಿ ಅಸಮಾಧಾನ ಇತ್ತು ನಿಜ. ಆದರೆ ಕೃಷ್ಣ ಇದರಿಂದ ಎಂದೂ ವಿಚಲಿತನಾಗಲಿಲ್ಲ. ಒಬ್ಬ ವ್ಯಕ್ತಿ ತನ್ನತನವನ್ನು ಉಳಿಸಿಕೊಳ್ಳುವುದು ನಿಜಕ್ಕೂ ಕಷ್ಟಕರವಾದ ಸಂಗತಿ. ನನಗೆ ಪರಿಚಯ ಇರುವ ವ್ಯಕ್ತಿಗಳಲ್ಲಿ ಈ ಗುಣವನ್ನು ನಾನು ಕಂಡಿದ್ದು ಬಲು ಅಪರೂಪ. ನಮ್ಮ ಸಮಾಜದಲ್ಲಿರುವ ವ್ಯಕ್ತಿಗಳು—ಪದವಿ, ಅಧಿಕಾರ, ಕುರ್ಚಿ ಇತ್ಯಾದಿ—ಆಮಿಷ ಗಳಿಗೆ ಗೋಸಂಬಿಯಂತೆ ಬದಲಾಗುವುದನ್ನು ನಾವು ದಿನನಿತ್ಯ ಕಾಣುವಾಗ ಕೃಷ್ಣನ ವಿಶಿಷ್ಟವಾದ ವ್ಯಕ್ತಿತ್ವವನ್ನು ಗುರುತಿಸಲು ಸಾಧ್ಯ.

ಕೃಷ್ಣ ಎಲ್ಲರ ಸಮಸ್ಯೆ, ಕಷ್ಟಗಳಲ್ಲಿ ತನ್ನನ್ನು ತೊಡಗಿಸಿಕೊಂಡು ತಲೆಕೆಡಿಸಿ ಕೊಳ್ಳುತ್ತಿದ್ದ. 'ಪುಸ್ತಕ ಪ್ರಪಂಚ'ದ ಗುಣಮಟ್ಟವನ್ನು ಉಳಿಸಿಕೊಳ್ಳುವುದರಿಂದ ಹಿಡಿದು, ನನ್ನ ರೀಡರ್‌ಷಿಪ್ ಮತ್ತು ರಾಮಮೂರ್ತಿಯವರ ಜಮೀನಿಗೆ ಬೇಲಿ ಹಾಕಿಸುವ ಕೆಲಸದ ತನಕ ಅವನ ಪ್ರೀತಿ, ವಿಶ್ವಾಸ ಹಬ್ಬಿತ್ತು. ನಾನು ರೀಡರ್ ಆಗಿ ಆಯ್ಕೆಗೊಂಡಾಗ ಅವನ ಖುಷಿಯನ್ನು ನೆನಸಿಕೊಂಡರೆ ನನ್ನ ಕಣ್ಣು ತೇವವಾಗುತ್ತದೆ. ಅವನ ಮತ್ತು ನನ್ನ ನಡುವೆ ಆತ್ಮೀಯ ಸಂಬಂಧ ಈ ಎರಡು ವರ್ಷಗಳಲ್ಲಿ ಹೇಗೆ ಬೆಳೆಯಿತು ಎಂದು ನಾನು ಯೋಚಿಸತೊಡಗಿದರೆ, ಅದಕ್ಕೆ ಕಾರಣ ನಾನಲ್ಲ, ಕೃಷ್ಣ ಮಾತ್ರ. ಅವನ ಸಂತಸ, ಕೋಪ, ವ್ಯಂಗ್ಯ, ಕೂಗಾಟ ಎಲ್ಲದರಲ್ಲೂ ಅವನದೇ ಆದ ಒಂದು ಸ್ವಂತಿಕೆಯ ಮುದ್ರೆ ಇತ್ತು.

ಇತ್ತೀಚೆಗೆ ಕೃಷ್ಣ ನಮ್ಮ ವಿಭಾಗಕ್ಕೆ ಬರುತ್ತಿರಲಿಲ್ಲ. ಆದುದರಿಂದ ನಮ್ಮ ಭೇಟಿ ಅಪರೂಪವಾಗಿತ್ತು. ಅವನ ಆರೋಗ್ಯದ ಬಗ್ಗೆ ಎಂದೂ ಮಾತನಾಡಿದವನಲ್ಲ. ತನ್ನ ಕಣ್ಣಿನ ಬಗ್ಗೆ ಮಾತ್ರ ಹಲವು ಭಾರಿ ಹೇಳಿದ. ತನ್ನ ಖಾಯಿಲೆಗಳನ್ನು ತನ್ನೊಳಗೆ ಬಚ್ಚಿಟ್ಟುಕೊಂಡು ತನಗಲ್ಲದೆ, ಎಲ್ಲರಿಗೂ ಬದುಕಿದಂತವನು ಕೃಷ್ಣ. ಈ ಸ್ವಾರ್ಥ ಪ್ರಪಂಚದಲ್ಲಿ ನಿಜಕ್ಕೂ ನಿಸ್ವಾರ್ಥಿಯಾಗಿ ಬದುಕಿ ಅತ್ಯಂತ ಸಣ್ಣವಯಸ್ಸಿನಲ್ಲಿ ಅಸು ನೀಗಿದ್ದು ಅವನ ಕುಟುಂಬಕ್ಕೆ, ದೊಡ್ಡ ಗೆಳೆಯರ ಬಳಗಕ್ಕೆ ಮತ್ತು ಕನ್ನಡ ಸಾಹಿತ್ಯ ಲೋಕಕ್ಕೆ ಬಲು ದೊಡ್ಡ ಪೆಟ್ಟು. ಅವನನ್ನು ಬಲ್ಲ ಎಲ್ಲರ ಜೀವನ ಬಡವಾಗಿದೆ. ಕನ್ನಡ ಸಾಹಿತ್ಯ ತನ್ನ ಅತ್ಯಂತ ಪ್ರತಿಭಾನ್ವಿತ ಲೇಖಕನೊಬ್ಬನನ್ನು ಕಳೆದುಕೊಂಡಿದೆ. ಕೃಷ್ಣ ನಂತಹ ಇನ್ನೊಬ್ಬ ಲೇಖಕ, ಅದಕ್ಕಿಂತ ಮುಖ್ಯವಾಗಿ ಅಂತಹ ವ್ಯಕ್ತಿ ನಮಗೆ ಇನ್ನು ಸಿಗಲಾರ.

ರಾಷ್ಟ್ರೀಯ ಶಬ್ದಕೋಶದಲ್ಲಿ ಹೇಡಿ ಶಬ್ದಕ್ಕೆ ಸ್ಥಾನವೇ ಇಲ್ಲ.

ಗಾಂಧೀಜಿ

ಕೃಷ್ಣಾ—ಮೃಗ ತೃಷ್ಣಾ

ಕೆ. ನ. ಶಿವತೀರ್ಥನ್

ಮಲೆನಾಡಲ್ಲ ಬಯಲು ಸೀಮೆಯಲ್ಲ
ಅಲೆಯ ಕಡಲಲ್ಲ ಕಾಡುವ ಕಾಡು
ಕಾಡಿನ ಕೂಗು ಕೂಗುವ ಕೋಕಿಲ
ಕೃಷ್ಣಾ...

ಸಿಡಿತೆರಗಿ ಜೋಳು ಫಲಭರಿತ ಮಾಮರ
ನೆಲಕೊರಗಿ ತೇರು ದನಿ ಕೂಗು ಹಾಳು
ಮಣ್ಣಲ್ಲಿ ಮಣ್ಣು ಹಾಡೆಲ್ಲ ಗೋಳು
ಉಣಲಿಲ್ಲ ಗಿಣ್ಣು ಕೃಷ್ಣಾ...

ಹಠಮಾರಿ ಕೆಚ್ಚು ಸಾಹಸದ ಹುಚ್ಚು
ತೆಂಗುಬಾಳೆ ಗಂಧಶಾಲಿ ಅರಸಿನ
ಕಲ್ಲು ಮಳಲಲ್ಲಿ ನಂದನವನ
ಕೆರೆ ಕಟ್ಟಿ ತಿದ್ದಿ ಬಯಲೆಲ್ಲ ನಾಕೆ
ಕಲ್ಲು ಬಾವಿಯಲ್ಲಿ ನೀರುಕ್ಕಿಸಿದ್ದೆ

ನೀ ಕಂಡದ್ದು ಉಂಡದ್ದು ಬಿತ್ತಿದ್ದು ಬೆಳೆಸಾಯ್ತು
ಮಾತೆಲ್ಲ ಕಥೆ ಕಾವ್ಯ ಕಾದಂಬರಿ
ಬಂದಿತ್ತು ಸುಗ್ಗಿ
ಉಣಲಿಲ್ಲ ಹುಗ್ಗಿ

ಝುಗ ಮಗ ಝುಗ ಮಗ
ಝುಗ ಝುಗಿಸುತ್ತ
ಎಳನೀರ ಕುಡಿಸಿ
ಬಂದವರ ತಣಿಸಿ
ಪರಸಂಗ ಬಿಚ್ಚಿ
ಪರಸಂಗ ಅರಳಿ
ಪರಸಂಗ ಹೀರಿ
ದೀಡಿಯಾಡುತ್ತ ನೋಡಿ ಮಾಡುತ್ತ
ಕೂಡಿಕೊಳ್ಳುತ್ತ ಪರಸಂಗ ಮುಗಿಸಿ
ಗ್ರಾಮೀಣ ಕುಶಲಿ
ಹಿಂಗಿ ಹೋದದ್ದೆಲ್ಲಿ
ಮುರುಟಿ ಹೋದದ್ದೆಲ್ಲಿ
ಮೃಗ ತೃಷ್ಣಾ...

ರಾಜಕೀಯ ಕ್ಷೇತ್ರದಲ್ಲಿಯ ನನ್ನ ಪ್ರಯೋಗಗಳನ್ನು ಭಾರತವೇ ಅಲ್ಲದೆ ಬಹುಮಟ್ಟಿಗೆ ನಾಗರಿಕ ಜಗತ್ತೂ ಅರಿತಿದೆ. ನನಗಾದರೋ ಅವುಗಳು ಹೆಚ್ಚು ಮೌಲ್ಯವಾದವುಗಳಲ್ಲ. ನಾನು ಸಾಧಿಸಬೇಕೆಂದಿರುವದು ಆತ್ಮ ಸಾಕ್ಷಾತ್ಕಾರ; ದೇವರನ್ನು ಮುಖತಃ ದರ್ಶಿಸಿ ಮೋಕ್ಷಸಾಧನೆ ಮಾಡುವದು.

ಗಾಂಧೀಜಿ

ಶ್ರೀಕೃಷ್ಣ ಆಲನಹಳ್ಳಿ—ನೆನಪು

ಸುಜನಾ

ಶ್ರೀಕೃಷ್ಣ ಆಲನಹಳ್ಳಿ ಬಗೆಗಿನ ನನ್ನ ಅನುಭವಗಳು ಒಂದು ರೀತಿಯಲ್ಲಿ ಪಳೆಯುಳಿಕೆಯಾಗಿರುವ ಹಳೆಯ ಅನುಭವಗಳು (Fossilised Experiences) ಸುಮಾರು ೧೫ ವರ್ಷಗಳ ಹಿಂದಿನ ಅವಧಿಗೆ ಸಂಬಂಧಪಟ್ಟ ಅನುಭವಗಳು ಇಂದಿಗೂ ಹಾಗೆಯೇ ಹಸಗೆಡದೆ ಹೊಸತೆಂಬ ಭ್ರಮೆಯನ್ನು ಉಂಟು ಮಾಡುತ್ತ ಉಳಿದುಕೊಂಡಿವೆ. ಈ ೧೦-೧೮ ವರ್ಷಗಳ ಅವಧಿಯಲ್ಲಿ ನನ್ನ ಮತ್ತು ಶ್ರೀಕೃಷ್ಣ ಆಲನಹಳ್ಳಿಯ ಪರಸ್ಪರ ಭೇಟಿ ಅಷ್ಟಾಗಿ ಇರಲಿಲ್ಲ. ಆದ್ದರಿಂದ ನನ್ನ ಮನಸ್ಸಿನಲ್ಲಿ ಯಾವ ಅನುಭವಗಳೂ ಆಳವಾಗಿ ಇತ್ತೀಚಿನ ದಿನಗಳ ಬಗೆಗೆ ದಾಖಲುಗೊಂಡಿಲ್ಲ. ಕೆಲವೊಮ್ಮೆ ಆತನನ್ನು ನಾನು ನೋಡಬೇಕೆಂದು ಹಳೆಯ ಸಹಜ ಪ್ರೇರಣೆಯಂತೆ-ಅನಿಸುತ್ತಿತ್ತು. ಆ ತುಡಿತ ತೀವ್ರವಾಗಿರಲಿಲ್ಲವೋ ಏನೋ ; ಕೆಲವು ತಿಂಗಳ ಹಿಂದೆ ಆಲನಹಳ್ಳಿಯ "ಭುಜಂಗಯ್ಯನ ದಶಾವತಾರಗಳು" ಕಾದಂಬರಿಯನ್ನು ಓದಲು ಪ್ರಾರಂಭಿಸಿದ್ದೆ. ಆಗಲೂ ಆ ತುಡಿತ ಬಂತು. ಆದರೆ ಅದು ಕೈಗೂಡಿದ್ದು ಅಕಾಲಮರಣಕ್ಕೆ ತುತ್ತಾದ ಶ್ರೀಕೃಷ್ಣ ಆಲನಹಳ್ಳಿಯ ಅಂತಿಮ ದರ್ಶನವನ್ನು ಪಡೆಯಲು ಹೋದಾಗ ಮಾತ್ರವೆ. ಕಡೆಗೂ ಜೀವಂತ ಕೃಷ್ಣನನ್ನು ಆತನ ಮನೆಯಲ್ಲಿಯೇ ಗೃಹಸ್ಥನಾಗಿ ನೋಡಲಾಗಲಿಲ್ಲ. ಮುಂದೆಲ್ಲೊ ಸಂಧಿಸಬಹುದು, ಅಷ್ಟೆ.

೧೯೬೪ ನೆಯ ಇಸವಿಯ ಶೈಕ್ಷಣಿಕ ವರ್ಷದ ಪ್ರಾರಂಭದ ದಿನ—ಪ್ರಾಯಶಃ ಜುಲೈ ತಿಂಗಳ ಒಂದು ದಿವಸ. ಮಹಾರಾಜ ಕಾಲೇಜಿನ ಕನ್ನಡ ಐಚ್ಛಿಕ ವಿಷಯದ ವಿದ್ಯಾರ್ಥಿಗಳನ್ನೆಲ್ಲ ಎದುರುಗೊಳ್ಳುವ ದಿನ ಅದು. ನಮ್ಮ ವಿಭಾಗದಲ್ಲಿ ಆಗ ಸುಮಾರು ೮ ಜನ ಅಧ್ಯಾಪಕರಿದ್ದರು. ಅವರಿಗೆಲ್ಲ ಈ ಹೊಸಬರನ್ನು ಎದುರುಗೊಳ್ಳುವ ಉತ್ಸಾಹ. ೩ ವರ್ಷದ ವಿದ್ಯಾರ್ಥಿಗಳನ್ನೂ ಒಂದೆಡೆ ಕೂಡಿಸಿ ಅವರಿಗೆ ಅವರ ಅಧ್ಯಯನ ವಿಷಯದ ಬಗೆಗೆ ಒಂದು ಪಕ್ಷಿನೋಟ

ವನ್ನು ಕೊಡುವ, ಧೈರ್ಯವನ್ನು ಮೂಡಿಸುವ, ಆದರ್ಶಗಳನ್ನು ಚಿಗುರಿಸುವ ಕಾರ್ಯಕ್ರಮವನ್ನು ಆ ತಿಂಗಳು ಇಟ್ಟುಕೊಂಡೆವು. ಅದಕ್ಕೆ ಮೊದಲು ಮೊದಲವರ್ಷದ ವಿದ್ಯಾರ್ಥಿಗಳು ನನಗೆ ವೈಯಕ್ತಿಕವಾಗಿ ಪರಿಚಯವಾಗಲೆಂದು ನಾನೊಂದು ಯೋಜನೆಯನ್ನು ಕಲ್ಪಿಸಿಕೊಂಡೆ. ಪಿ. ಯು. ಸಿ. ಯಿಂದ ಬರುವ ಈ ತರುಣರಲ್ಲಿ ಒಬ್ಬಿಬ್ಬರಾದರೂ ಸಾಹಿತ್ಯಾಸಕ್ತರು ಇದ್ದಾರು, ಕೆಲವು ಕನಸುಗಳನ್ನು ಕಂಡಿದ್ದಾರು; ಅದರ ಪರಿಚಯವನ್ನು ನಾನು ಮಾಡಿಕೊಳ್ಳುವುದು ಒಳ್ಳೆಯದು ಎಂದು ಮೊದಲ ವರ್ಷದ ವಿದ್ಯಾರ್ಥಿಗಳಲ್ಲಿ ಯಾರಾದರೂ ಬರಹದ ವ್ಯವಸಾಯವನ್ನು ನಡೆಸಿದ್ದರೆ-ಕವನ, ಕಥೆ, ಹರಟೆ, ಚಿತ್ರ, ನಾಟಕ ಇತ್ಯಾದಿ ಬರೆದಿದ್ದರೆ—ಅವುಗಳನ್ನು ನನಗೆ ತಂದು ತೋರಿಸಬೇಕು ಎಂದು ಕೋರಿ ಪ್ರಕಟಿಸಿದ್ದೆ. ಒಬ್ಬ ಅದಮ್ಯ ಉತ್ಸಾಹದ ತರುಣ ಬಂದು ಒಂದು ಕವನಗಳ ಕಟ್ಟನ್ನೇ ನನಗೆ ಒಪ್ಪಿಸಿದ. ಅವುಗಳು ಏಣುಮುರಿಯದ, ಥಾಳಿನಿಂದ ಹೊಳೆಯುವ ನಾಣ್ಯಗಳಂತಿದ್ದವು. ಹಳ್ಳಿಯಿಂದ ಬಂದ ತರುಣನ ಕಾಗುಣಿತಗಳ ಧಾರಾಳವಾದ ತಪ್ಪನ್ನು ಮೆಟ್ಟಿಕ್ಕುವ ಅನುಭವದ, ಕಲ್ಪನೆಯ ಹೊಸತನವನ್ನು ಆ ಕವನಗಳು ತೋರುತ್ತಿದ್ದವು. ನನಗಂತೂ ಅತಿಶಯ ಸಂತೋಷವಾಯಿತು. ಹೊಸತೊಂದು ಬುಗ್ಗೆಯನ್ನು ಕಂಡಂತಾಯಿತು. ಅದು ಬತ್ತದೆ ಬಗ್ಗಡಗೊಳ್ಳದೆ ಇರಲೆಂದು ಮನಸ್ಸು ಹಾರೈಸಿತು. ಅಂದಿನ ಕಾರ್ಯಕ್ರಮದಲ್ಲಿ ಅಧ್ಯಕ್ಷನ ಮಾತನ್ನು ಆಡುತ್ತ, ಪ್ರತ್ಯೇಕವಾಗಿ ಆ ತರುಣನ ಪ್ರತಿಭೆಯನ್ನು ನಾನು ಸಭೆಗೆ ಮನದಟ್ಟುಮಾಡಿ, 'ಸ್ನಾನಗೃಹ' ಎಂಬ ಆತನ ಕವನವನ್ನು ಸಭೆಗೆ ವಾಚಿಸಿ ಆ ಕವನವನ್ನು ಗ್ರಹಿಸಿಕೊಂಡ ರೀತಿಯನ್ನು ಪಂಕ್ತಿ ಪಂಕ್ತಿಗಳ ಉಲ್ಲೇಖದೊಡನೆ ವಿವರಿಸಿದೆ.


ಹೀಗೆ ಆತನ ಪ್ರತಿಭೆಯನ್ನು ಕಂಡುಕೊಂಡಮೇಲೆ ಆ ತರುಣ ನನ್ನ ಒಳಮನದ ಹತ್ತಿರಕ್ಕೆ ಗೊತ್ತಿಲ್ಲದಯೆ ಬಂದ. ತರಗತಿಯಲ್ಲಿ ಆತ ಸಾಮಾನ್ಯವಾಗಿ ಅನಾಸಕ್ತನಾಗಿಯೇ ಇರುತ್ತಾನೆ ಎಂಬ ಸಮಾಚಾರ ಇದ್ದರೂ, ನನ್ನ ತರಗತಿಯಲ್ಲಿ—ಬಿ. ಎ. ೩ ವರ್ಷ, ಎಂ. ಎ. ೨ ವರ್ಷ ಒಟ್ಟು ೫ ವರ್ಷದ ತರಗತಿಗಳಲ್ಲಿ—ಸದಾ ವಿಸ್ಮಯ ದೀಪ್ತನಾಗಿಯೇ ಇರುವಂತೆ ತೋರುತ್ತಿದ್ದ. ಅದರಲ್ಲಿ ತುಂಟತನ ಇಲ್ಲದೇ ಇರುತ್ತಿರಲಿಲ್ಲ. ಆತ ತರಗತಿಯ ಬಗೆಗೆ ಅನಾಸಕ್ತ ಎಂಬಂಶ ತೋರಿಬಂದುದ್ದು ಮೊದಲನೇ ವರ್ಷದ, ಅಥವಾ ಎರಡನೇ ವರ್ಷದ ಪರೀಕ್ಷೆಗೆ ಆತನನ್ನು ಹಾಜರಾತಿ ಇಲ್ಲವೆಂಬ ಕಾರಣಕ್ಕಾಗಿ ಪರೀಕ್ಷೆಗೆ ಕೂರಿಸದೆ ಇದ್ದಾಗ ಮಾತ್ರವೆ. ಅದು ನನಗೆ ಒಂದು ಇಕ್ಕಟ್ಟಿನ ಸನ್ನಿವೇಶವನ್ನೂ ಉಂಟುಮಾಡಿತು. ಪರೀಕ್ಷೆಯ ಪ್ರಾರಂಭದ ದಿನ, ಈ ತರುಣ ಆತುರಾತುರವಾಗಿ ಬಂದ. "ಸರ್, ನೋಡಿ ನಾನು ತರಗತಿಗೆ ರೆಗ್ಯುಲರ್ ಅಲ್ಲವಾ? ನನಗೆ ಅಟೆಂಡೆನ್ಸ್ ಇಲ್ಲಾಂತ ಪರೀಕ್ಷೆಗೆ ಕೂರಿಸೋಲ್ವಂತೆ, ಸರ್!" ಎಂದು ಮುಗ್ಧನಗೆ ಬೀರಿದ. ತಾನು ತರಗತಿಗಳಿಗೆ ರೆಗ್ಯುಲರ್ ಎಂದೂ ನನ್ನಲ್ಲಿ ಭಾವನೆಯನ್ನು ಮೂಡಿಸಿದ. ಅದು ಎಷ್ಟು ಸತ್ಯ ಎನ್ನುವುದೂ ನನಗೆ ಗೊತ್ತಾಯಿತು. ಆದರೇನುಮಾಡುವುದು? ಪ್ರಾಂಶುಪಾಲರ ಬಳಿ ಆತನ ಅಹವಾಲನ್ನು ತೆಗೆದುಗೊಂಡು ಹೋದೆ. ಆಗ ಪ್ರೊ. ಖೈಸರ್ ಆಲಿಖಾನ್ ಅವರು ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅವರು ಉರ್ದು, ಅರಾಬಿಕ್, ಮತ್ತು ಪರ್ಶಿಯನ್ ಪ್ರಾಧ್ಯಾಪಕರು; ತುಂಬಾ ಮೃದು ವ್ಯಕ್ತಿ; ನಮ್ಮ ಕನ್ನಡ ವಿಭಾಗದ ಪಕ್ಕದಲ್ಲಿ ಅವರ



ಮಾಜಿ ರಾಷ್ಟ್ರಪತಿ ಶ್ರೀ ಜೇಲ್‌ಸಿಂಗ್, ಮಾಜಿ ರಾಜ್ಯಪಾಲ ಶ್ರೀ ಅಶೋಕನಾಥ ಬ್ಯಾನರ್ಜಿಯವರೊಡನೆ ಶ್ರೀಕೃಷ್ಣ ಆಲನಹಳ್ಳಿ



ಮಲೆಯಾಳಂ ಖ್ಯಾತ ಲೇಖಕ ಶ್ರೀ ವೈಕಂ ಮಹಮದ್ ಬಷೀರ್ ಅವರ ಕುಟುಂಬ ಸದಸ್ಯರೊಡನೆ ಶ್ರೀಕೃಷ್ಣ ಆಲನಹಳ್ಳಿ



ಪ್ರಧಾನಿ ದಿ॥ ಇಂದಿರಾಗಾಂಧಿಯವರೊಡನೆ ಶ್ರೀಕೃಷ್ಣ ಆಲನಹಳ್ಳಿ



ಕುವೆಂಪು ಅವರಿಗೆ ಹುಟ್ಟುಹಬ್ಬದ ಸಂದರ್ಭದಲ್ಲಿ ಶಾಲು ಹೊದೆಸುತ್ತಿರುವ
ಶ್ರೀಕೃಷ್ಣ ಆಲನಹಳ್ಳಿ



ಹೆಂಡತಿ ಶ್ರೀಮತಿ ವಿನುತ, ಮಗ ಪ್ರದ್ಯುಮ್ನರೊಡನೆ ಶ್ರೀಕೃಷ್ಣ ಆಲನಹಳ್ಳಿ

ಕೊರತಡಿಯೂ ಇತ್ತು. ಕಾಲೇಜ್ ಮಂಡಳಿಯ ಸದಸ್ಯನೂ ನಾನಾಗಿದ್ದುದರಿಂದ ಈ ಎಲ್ಲ ಸಲಿಗೆಯನ್ನು ನಾನು ಬಳಸಿಕೊಂಡು ಅವರಲ್ಲಿ ಈ ಅಹವಾಲನ್ನು ಮಂಡಿಸಿದೆ. ಅವರಿಗೆ ಮನದಟ್ಟಾಗುವಂತೆ "He is one of my best student's in the college, sir, peraphs the very best this year. And he is an energetic young poet" ಎಂದೆಲ್ಲಾ ಹೇಳಿ, ಆತ ತರಗತಿಗೆ ತಪ್ಪದೆಯೇ ಬರುವುದನ್ನು ಸ್ವತಃ ಅನುಭವದಿಂದ ಕಂಡಿದ್ದೇನೆ ಎಂದೂ ವಾದ ಮಂಡಿಸಿದೆ. ಅವರು ತಮ್ಮ ಚುಟ್ಟದ ಹೊಗೆ ಬಿಡುತ್ತ ಮೊದಮೊದಲು ಆಗುವುದಿಲ್ಲ ಎಂದು ಹೇಳಿದರೂ, ನಾನು ಹೇಳಿದುದನ್ನೆಲ್ಲ ಬರೆದು ಕೊಡಬೇಕೆಂದು ಸೂಚಿಸಿದರು. ಹಾಗೆಯೇ ಬರೆದುಕೊಟ್ಟುದಾಯಿತು. ಇಷ್ಟಾದರೂ ನನಗೆ ಆತಂಕ ಇದ್ದೇ ಇದ್ದಿತು. ಕಾರಣ ನಾನು ವಿದ್ಯಾರ್ಥಿಯಾಗಿದ್ದಾಗ ನನ್ನ ಕಿರಿಯ ಸಮಕಾಲೀನರಾಗಿದ್ದ ಪ್ರೊ. ಯು. ಆರ್. ಅನಂತಮೂರ್ತಿ ಹಾಜರಾತಿ ಇಲ್ಲದೆಯೆ ಒಂದು ವರ್ಷವನ್ನು ಕಳೆದುಕೊಂಡಿದ್ದರು. ಆ ಘಟನೆ ನಡೆದಾಗ ಇಂಗ್ಲಿಷ್ ಮತ್ತು ಕನ್ನಡದ ಅದ್ವಿತೀಯ ವಿದ್ವಾಂಸರಾಗಿದ್ದ ಪ್ರೊ. ಎಸ್. ವಿ. ರಂಗಣ್ಣನವರು ಪ್ರಾಂಶುಪಾಲರಾಗಿದ್ದರು. ಅವರು ನಿಯಮವನ್ನು ಹೇಗೂ ಮುರಿಯಲು ಇಷ್ಟಪಡಲಿಲ್ಲ. ಹಾಗೆಯೇ ಇದೂ ಆದೀತು ಎನ್ನುವ ಭೀತಿ. ಪ್ರೊ. ಖಾನ್ ಅವರಿಗೆ ಏನನ್ನಿಸಿತೋ ತಿಳಿಯದು. ಸಾರಾಸಗಟಾಗಿ ಆ ಬಾರಿ ಹಲವರಿಗೆ ಈ ಕಾರಣದಿಂದಾಗಿ ರಿಯಾಯಿತಿಯನ್ನು ನೀಡಿದರು. ಇಂತಹ ಇಕ್ಕಟ್ಟುಗಳನ್ನು ಸಹಜ ಎಂಬಂತೆ ಉಂಟುಮಾಡುವ ತುಂಟತನ ಆಲನಹಳ್ಳಿಯದಾಗಿತ್ತು. ತರಗತಿಯ ಪಾಠಗಳಲ್ಲಷ್ಟೆ ಅಲ್ಲದೆ ಕನ್ನಡ ಸಂಘದ ಚಟುವಟಿಕೆಗಳಲ್ಲೂ ಎಲ್ಲ ರೀತಿಯ ನೆರವನ್ನು ನೀಡುವ ಉತ್ಸಾಹಿಯಾಗಿದ್ದ. ೧೯೬೪–೬೫ ರಲ್ಲಿ ಶ್ರೀ ಕುವೆಂಪು ಅವರ ೬೦ ನೆಯ ಹುಟ್ಟುಹಬ್ಬದ ಸನ್ನಿವೇಶದಲ್ಲಿ ಕನ್ನಡ ಸಂಘದ ವತಿಯಿಂದ "ಕವಿಶೈಲ" ಎನ್ನುವ ಸನ್ಮಾನ ಗ್ರಂಥವನ್ನು ತರಲಾಯಿತು. ಇನ್ನೂ ಮೊದಲ ಬಿ. ಎ. ತರಗತಿಯ ವಿದ್ಯಾರ್ಥಿಯಾಗಿದ್ದ ಆತ ಶ್ರೀ ಕುವೆಂಪು ಅವರನ್ನು ಕುರಿತ ಒಂದು ಒಳ್ಳೆಯ ಲೇಖನವನ್ನು ನೀಡಿದುದು ಮಾತ್ರವಲ್ಲದೆ ಇಡೀ ಸುಮಾರು ೨೦೦ ಪುಟದ ಡೆಮ್ಮಿ ಅಷ್ಟದಲಾಕೃತಿಯ ಗ್ರಂಥ ಕೇವಲ ೧೫ ದಿವಸಗಳಲ್ಲಿ ಅಚ್ಚಿನ ಮನೆಯಿಂದ ಸುಂದರವಾಗಿ ಹೊರಬರಲು ತುಂಬ ಅತಿಶಯವಾದ ನೆರವನ್ನು ನೀಡಿದುದುಂಟು. ಆ ೩ ವರ್ಷದ ಅವಧಿಯಲ್ಲಿ ಕನ್ನಡ ಸಂಘ ಹಮ್ಮಿಕೊಂಡ ಏನೆಲ್ಲ ಚಟುವಟಿಕೆಗಳ ಹಿಂದೆ ಈ ತರುಣನ ಶಕ್ತಿ ನೆರವಾಗುತ್ತಿತ್ತು. ಆ ವೇಳೆಯಲ್ಲೆ "ಮಣ್ಣಿನ ಹಾಡು" ಕವನ ಸಂಕಲನ ರೂಪು ತಳೆಯುತ್ತಿತ್ತು. ಆ ವೇಳೆಗೆ ಆತ ಬಿ. ಎ. ತರಗತಿಯಲ್ಲಿ ತೇರ್ಗಡೆಗೊಂಡು ಕನ್ನಡ ಎಂ. ಎ. ವಿದ್ಯಾರ್ಥಿಯಾಗಿ ಗಂಗೋತ್ರಿಯ ಕಡೆಗೆ ನಡೆದುಹೋದ. ಆಶ್ಚರ್ಯವೆಂದರೆ ನನಗೂ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗವಾಯಿತು. ಆ ತುಂಟನ ಪ್ರತಿಕ್ರಿಯೆ ಎಂದರೆ, "ನೋಡಿ ಸರ್, ನಾವೆಲ್ಲ ನಿಮ್ಮನ್ನೂ ಜೊತೆಗೇ ಕರೆದುಕೊಂಡು ಹೋಗ್ತಾಯಿದ್ದೀವಿ; ನೋಡಿದಿರಾ ನಮ್ಮ ಶಕ್ತೀನಾ" ಎಂದು ಅವನದೇ ಭಂಗಿಯಿಂದ—ಸೊಟ್ಟಗೊಂಡ ಮುಖದ ಭಂಗಿಯಿಂದ—ನುಡಿದ. ಮೊದಲ ವರ್ಷದ ಪಾಠಗಳೇನೋ ನನಗೆ ಕೈತುಂಬ ಕೆಲಸವನ್ನು

ಕೊಟ್ಟದ್ದುಂಟು. ವಾರಕ್ಕೆ ೪ ಗಂಟೆ ಕುಮಾರವ್ಯಾಸ, ೨ ಗಂಟೆ ಜಾನಪದ ಪಾಠಗಳಿಗೆ ತಪ್ಪಿಸಿಕೊಳ್ಳದಂತೆ ಬರುತ್ತಿದ್ದ. ಅವನ ಆಸಕ್ತಿ, ಚೆಚ್ಚರ ಮೆಚ್ಚಿಕೊಳ್ಳುವಂತಿತ್ತು. ಆದರೂ ಅವನ ಗಮನವನ್ನು ತರಗತಿಯಲ್ಲಿ ಹಿಡಿದಿಡಲಾಗುತ್ತಿರಲಿಲ್ಲ. ಅದರ ಪರಿಣಾಮವಾಗಿ ಕೆಲವೊಂದು ಬೇರೆ ತರಗತಿಗಳಿಗೆ ಅನಾಸಕ್ತನೂ ಆಗಿದ್ದಿರಬಹುದು. ಅಂತಹ ಒಂದು ತಲೆನೋವು ತರುವ ಪ್ರಸಂಗವೂ ಬಂತು. ಒಂದು ಸಂಜೆಯ ವಾಕ್ ಮುಗಿದ ಮೇಲೆ ಪ್ರೊ. ಜವರೇಗೌಡರು ಏನೋ ಮರೆತದ್ದನ್ನು ನೆನೆದುಕೊಂಡಂತೆ ಹೇಳಿದರು. "ನೋಡಿ ಸುಜನಾ, ನಿಮ್ಮ ಕೃಷ್ಣ ಇದಾನಲ್ಲ, ನೋಡಿ ಆತ ಶ್ರೀ....ಅವರ ತರಗತಿಗಳಿಗೆ ಹೋಗ್ತಾಯಿಲ್ಲಂತೆ. ಅವರು ಬೇಸರಪಟ್ಟುಕೊಳ್ಳಬಹುದು. ಅವನಿಗೆ ಹೇಳಿ ಸರಿಪಡಿಸಿ", ಎಂದರು. ಇದು ಕಷ್ಟದ ಸಮಸ್ಯೆ ಅಲ್ಲದಿದ್ದರೂ ಇಕ್ಕಟ್ಟಿಗೆ ದೂಡುವಂತಹ ವಿಷಯ. ಮಿತ್ರ ಕೃಷ್ಣನನ್ನೇನೊ ಮಾರನೆಯ ದಿವಸವೇ ಕರೆದು ಛೇಡಿಸಿ ಹೇಳಿದೆ. ಅಂತಹ ಸನ್ನಿವೇಶಗಳು ನನ್ನನ್ನು ಸಂದಿಗ್ಧ ಅಪಾರ್ಥಕ್ಕೆ ನೂಕುವುದು ಸಾಧ್ಯ. ಕೃಷ್ಣ ಗೈರು ಹಾಜರಾಗುತ್ತಿದ್ದ ಪಾಠಗಳನ್ನು ತೆಗೆದುಕೊಳ್ಳುತ್ತಿದ್ದವರು ನನಗಿಂತಲೂ ಹೆಚ್ಚು ಪ್ರಸಿದ್ಧರೂ, ಯಶೋವಂತರೂ, ಸಮರ್ಥರೂ, ನಿಷ್ಠುರ ವಿಮರ್ಶಕರೂ ಆಗಿದ್ದರು. ಆದರೆ ಸೃಜನಶೀಲನಾದ ಒಬ್ಬ ವಿದ್ಯಾರ್ಥಿಗೆ ತಾನೇ ಬರೆಯ ಬಹುದಾದಂತಹ ಅತಿಶಯವಾದ ಆತ್ಮವಿಶ್ವಾಸ ಇರುವಾಗ ಅಂತಹಪಠ್ಯಗಳನ್ನು ಓದುವ ಆಸೆ ಇರುವುದಿಲ್ಲ. ಆ ಪಾಠಗಳನ್ನು ಬೋಧಿಸುವ ಪ್ರಾಧ್ಯಾಪಕರು ಎಷ್ಟೇ ದೊಡ್ಡವರಾದರೂ ಪಠ್ಯದ ಕಾರಣದಿಂದಾಗಿ ಅನಾಸಕ್ತಿ ಬರಬಹುದು. ಈ ಪರಿಸ್ಥಿತಿ ಸಹಜವಾದರೂ ತಪ್ಪರ್ಥಕ್ಕೆ ಸಂಬಂಧಪಟ್ಟವರನ್ನೆಲ್ಲ ಒಳಪಡಿಸಬಲ್ಲದು. ಮುಂದೇನಾಯಿತೊ ನನಗೆ ತಿಳಿಯಲಿಲ್ಲ. ಈಗಲೂ ತಿಳಿದಿಲ್ಲ. ಶ್ರೀಕೃಷ್ಣ ಗೊತ್ತಿಲ್ಲದೆಯೋ ಗೊತ್ತಿದ್ದೊ ಇಂತಹ ಹುಡುಗಾಟಗಳ ಪರಿಣಾಮಗಳನ್ನು ನಾನು ಅನುಭವಿಸುವಂತೆ ಮಾಡುತ್ತಿದ್ದ. ಏನೇ ಆದರೂ ಈ ಅಸಾಧಾರಣ ಸತ್ವದ ತರುಣನನ್ನು ಅಡ್ಡಹೋಗ ಬಿಡಬಾರದೆಂದು, ಒಮ್ಮೊಮ್ಮೆ ಅತಿ ಎನ್ನಬಹುದಾದ ಅವನ ಆಟಗಳನ್ನು ತಾಳಿಕೊಳ್ಳುತ್ತಾ, ಅವನ ಸತ್ವಗಳು ಪೋಲಾಗಲು ಎಡೆಗೊಡದೆ ಇರುತ್ತಿದ್ದೆ. ಅವನ ವಿದ್ಯಾರ್ಥಿತನದ ೫ ವರ್ಷಗಳಲ್ಲಿ ನಾನು ತುಂಬ ಸಂತೋಷಪಟ್ಟದ್ದುಂಟು. ಇತರ ಸಹೋದ್ಯೋಗಿಗಳು ನನ್ನಷ್ಟೇ ಸಂತೋಷಪಡಲಿಕ್ಕಾಗದೆ ಇರುವುದು ಸಾಧ್ಯ. ನನ್ನ ಮನಸ್ಸಿನಲ್ಲಿ ಸದಾ ಹಳ್ಳಿಯಿಂದ ಬಂದ ತರುಣನೊಬ್ಬನ ಅದಮ್ಯ ಶಕ್ತಿಯ ಚಿತ್ರವಿತ್ತು.

ಶ್ರೀಕೃಷ್ಣ ಎಂ.ಎ. ವಿದ್ಯಾರ್ಥಿಯಾಗಿದ್ದಾಗ "ಗಂಗೋತ್ರಿ ಸಂಭಾವನಾ ಗ್ರಂಥವನ್ನು" ಶ್ರೀ ಕುವೆಂಪು ಅವರಿಗೆ ನಿವೇದಿಸಲು ಸಿದ್ಧಪಡಿಸಲಾಗುತ್ತಿತ್ತು. ಆಗಷ್ಟೆ 'ಮಲೆಗಳಲ್ಲಿ ಮದುಮಗಳು' ಪ್ರಕಟವಾಗಿತ್ತು. ಅದರ ಬಗೆಗೆ ನಮ್ಮ ಅಧ್ಯಯನ ಸಂಸ್ಥೆಯಲ್ಲಿ ವಿಚಾರಗೋಷ್ಠಿಯೂ ನಡೆದಿತ್ತು. ಅದಕ್ಕೆ ಮುನ್ನ ಒಂದು ಘಟನೆ ನಡೆದದ್ದುಂಟು. ಒಂದುದಿನ ಪ್ರೊ|| ಹಾ. ಮಾ. ನಾಯಕರು "ಮಲೆಗಳಲ್ಲಿ ಮದುಮಗಳನ್ನು ಓದಿದ್ದೀರಾ? ಆ ಬಗ್ಗೆ ನಿಮ್ಮ ಅಭಿಪ್ರಾಯವೇನು ?" ಎಂದು ಕೇಳಿದರು. ನಾನು ತುಂಬಾ ಆತುರಗಾರ. ಹಿಂದುಮುಂದು ನೋಡದೆ ಹೇಳಿದೆ. "ಇನ್ನೂ ಒಂದು ೩೦೦ ಪುಟ ಓದಿರುವೆ. ತುಂಬಾ

ಅದ್ಭುತವಾಗಿದೆ" ಎಂದೆ. ಅದಕ್ಕವರು "ನಿಜಕ್ಕೂ?" "ನಿಜಕ್ಕೂ!—ಹೆಗ್ಗಡತಿಗಿಂತ ಇದು ಬಹಳ ಮುಂದಿದೆ" ಎಂದೆ. "You are too hasty" ಎಂದರವರು. ಕಾದಂಬರಿಯನ್ನು ಪೂರ್ಣವಾಗಿ ಓದಿದಮೇಲೆ ನನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳುವ ಅಗತ್ಯ ನನಗೆ ಕಾಣಲಿಲ್ಲ. ಹೀಗಿರುವಾಗ ಮಲೆಗಳಲ್ಲಿ ಮದುಮಗಳನ್ನು ಕುರಿತ ಒಂದು ಚರ್ಚಾ ಸಂಜೆಯೂ ಆಯಿತು. ಶ್ರೀಕೃಷ್ಣನದೂ ಪರಿಣಾಮಕಾರಿಯಾದ ಪಾತ್ರ ಅದರಲ್ಲಿತ್ತು. ಬೇರೆಯವರು ನೋಡಿದ ನಿಟ್ಟನಿಂದ ನೋಡದೆ ಒಂದು ಸುಂದರವಾದ ಲೇಖನವನ್ನು ಆತ "ಗಂಗೋತ್ರಿ" ಸಂಭಾವನಾ ಗ್ರಂಥಕ್ಕೆ ನೀಡಿದ. ಕಾದಂಬರಿಕಾರ ಕೃಷ್ಣ ವಿಮರ್ಶಕನಾದರೆ ಹೇಗೆ ಬರೆಯಬಹುದು ಎಂಬುದಕ್ಕೆ ಅದೇ ಸಾಕ್ಷಿ. ವಿಶಿಷ್ಟವಾದ ಒಂದು ನೋಟದ ಲೇಖನವದು.

ಯಾರ ಜೀವನದಲ್ಲೇ ಆಗಲಿ ಇತರರೊಡನೆ ಕೂಡಿ ನಡೆಯುವ ಅವಧಿ ತುಂಬ ದೀರ್ಘವಾಗಿ ಇರಲಾರದು. ವಿದ್ಯಾರ್ಥಿಯಾಗಿ ಅಷ್ಟು ಆತ್ಮೀಯವಾಗಿ ನನ್ನ ಮನಸ್ಸಿನ ಒಂದು ವಿಶೇಷ ಭಾಗದಂತೆ ಕಾಣುತ್ತಿದ್ದ ಶ್ರೀಕೃಷ್ಣ ಅಧ್ಯಾಪಕನಾದ ನಂತರದಲ್ಲಿ ಏಕೊ ದೂರ ಸರಿಯುತ್ತಿರುವಂತೆ ತೋರಿತು. ಪ್ರಾಯಶಃ 'ಮಣ್ಣಿನ ಹಾಡು' ಕವನ ಸಂಕಲನ ಹಾಗೂ 'ಕಾಡು' ಕಾದಂಬರಿಯ ಬಗೆಗೆ ಶ್ರೀಕೃಷ್ಣ ಇತರರಿಂದ ಪಡೆದ ಅಸಾಧಾರಣ ಮೆಚ್ಚಿಕೆಯನ್ನು ನಾನು ನೀಡಲಾಗದಿದ್ದುದು ಇರಬಹುದು. ನಾನು ಒಂದು ಎಚ್ಚರಿಕೆಯ ಮಾತನ್ನೂ ಮೆಚ್ಚಿಕೆಯ ಮಾತಿನ ಜೊತೆಯಲ್ಲಿಯೆ ಕೊಂಚ ಒತ್ತುಕೊಟ್ಟು ಹೇಳಿದೆ. ಮಣ್ಣಿನ ಹಾಡಿನ 'ಸ್ನಾನಗೃಹ' ಮುಂತಾದ ನಾನು ಮೆಚ್ಚಿಕೊಂಡ ಕವನ ಪ್ರತಿಭಾವಂತನ ಪ್ರತಿಮಾ ಸೃಷ್ಟಿಯನ್ನು ತೋರಿಸುವಂತೆ, ಬೆಳಗನ್ನು ಕುರಿತ ಅವನ ಕವನ ತೋರುವು ದಿಲ್ಲ ಎನ್ನುವ ನನ್ನ ಅನಿಸಿಕೆ ಇತರರ ಮೆಚ್ಚುಗೆಗಿಂತ ಬೇರೆಯಾಗಿತ್ತು. ಬೆಚ್ಚಿಬೀಳಿಸುವ ಚಿತ್ರಗಳು ಪ್ರತಿಭಾಸೃಷ್ಟಿಯಾಗದಿರಬಹುದು; ಹೊಸತನವನ್ನು ತೋರಬೇಕೆನ್ನುವ ಕುತೂಹಲದಿಂದಲೂ ಬಂದಂತಹವು ಆಗಿರಬಹುದು. ಅದು ನನ್ನ ನಿಲವಾಗಿತ್ತು. ಹಾಗೆಯೇ 'ಕಾಡು' ಕಾದಂಬರಿ ತುಂಬಾ ಮನೋಜ್ಞವಾಗಿರುವುದರ ಜೊತೆಗೆ, ಹೀಗಿರು ವುದಕ್ಕೆ ಕಾರಣ ಕೃತಿಕಾರನ ಬಾಲ್ಯಾನುಭವಗಳಲ್ಲಿ ಹೊಚ್ಚ ಹೊಸತನವಿರುವುದೇ ಆಗಿದೆ; ಆ ಬಾಲ್ಯಾನುಭವಗಳನ್ನೇ ಬಂಡವಾಳವಾಗಿ ಹಲವಾರು ಕೃತಿಗಳನ್ನು ಕೊಡಬರುವುದಿಲ್ಲ. ಕೋಟ್ಯಂತರ ವರ್ಷಗಳ ಮಾಗುವಿಕೆಯ ಫಲವಾಗಿ ಬಂದ ಪೆಟ್ರೋಲಿಯಂ ಇಂಧನದಂತೆ ಆ ಬಾಲ್ಯಾನುಭವಗಳು ಪ್ರಥಮಾಭಿವ್ಯಕ್ತಿಯಲ್ಲಿ ಶ್ರೀಮಂತಿಕೆಯನ್ನು ಮೆರೆಯುತ್ತವೆ. ಅವು ಅತಿಬಳಕೆಯಿಂದಾಗಿ ರಿಕ್ತವಾಗುವ ಅಪಾಯ ಉಂಟು. ಈ ಎಚ್ಚರಿಕೆಯನ್ನು ಆಗಲೇ ನಾನು ಹೇಳಿದುದು ಅನಗತ್ಯವಾಯಿತು ಎಂದು ತೋರುತ್ತದೆ. ಪರಿಣಾಮ ವೆಂದರೆ, ಶ್ರೀಕೃಷ್ಣನಿಗೆ ನಾನು Lukeworm ಎಂಬಂತೆ cold ಎಂಬಂತೆ ಕಂಡು ಬಂದೆನೋ ಏನೋ? ನಮ್ಮದ ಬೀಸಪ್ಪುಗೆ ಅವನನ್ನ ತನ್ನಕಡೆಗೆ ಸೆಳೆದುಕೊಂಡಿತ್ತು. ಆತನೇನೋ ಅದರಿಂದ ಬಿಡಿಸಿಕೊಂಡು ಸ್ವತಂತ್ರವಾದದ್ದೂ ಉಂಟು. ಆದರೆ ನಮ್ಮಿಬ್ಬರ ನಡುವಣ ಅಂಟುನಂಟು ಬಹಳ ತೆಳುವಾಯಿತು; ಉಗುಳಂಟು ಎಂಬಂತಾಯಿತು. ಐದಾರುವರ್ಷ ನಮ್ಮ ಮನೆಗೆ ಆತ ಬರದೇ ಇದ್ದ ರಜಾ ದಿನಗಳೇ ಇರಲಿಲ್ಲ. ನಾನಿನ್ನೂ

ಮಲಗಿರುವಾಗಲೆ ಬಂದು ಕೂಗುತ್ತಿದ್ದ. ಅವನ ಜೊತೆಯಲ್ಲಿ ತಿಂಡಿ, ಮಧ್ಯಾಹ್ನದ ಊಟ, ಸಂಜೆಯತನಕ ಮಾತು—ಹೀಗೆ ಎಷ್ಟೋದಿನಗಳು ನಾವಿಬ್ಬರೂ ಕಳೆದದ್ದುಂಟು. ಯಾವ ವಿದ್ಯಾರ್ಥಿಯೂ ಅಧ್ಯಾಪಕನ ಮಟ್ಟಕ್ಕಷ್ಟೇ ಬೆಳೆಯಬೇಕಾಗಿಲ್ಲ. ಮೀರಿಯೇ ಬೆಳೆಯಬೇಕು. ಆ ಬೆಳೆಯುವ ಆತುರದಲ್ಲಿ ಶಕ್ತಿಸ್ರಾವವಾದಾಗ ತುಂಬಾ ನೋವುಂಟಾಗುತ್ತದೆ. ಶ್ರೀಕೃಷ್ಣ ತುಂಬ ಅಗಲದ ರೆಕ್ಕೆಗಳನ್ನು ಬೆಳೆಸಿಕೊಂಡ ಹಕ್ಕಿಯಂತೆ ಬಾನ್ ಅಗಲಕ್ಕೆ ಎತ್ತರಕ್ಕೆ ಹಾರುವ ಸತ್ವಶಾಲಿ. ಆದರೆ ಎಲ್ಲೋ ಆ ಸತ್ವವನ್ನು ಸಂಯಮನಗೊಳಿಸುವ ಶಕ್ತಿ ಕುಗ್ಗಿತೇನೋ ಎನಿಸುತ್ತದೆ. ೧೯೨೦ರ ದಶಕದಲ್ಲಿ ಮಲೆನಾಡಿನ ಕಾಡುಗಳಿಂದ ದೂರದ ಮೈಸೂರು ನಗರಕ್ಕೆ ಬಂದ ಶ್ರೀ ಕುವೆಂಪು ತರುಣ ಚೇತನ ತನ್ನ ಅಸಾಮಾನ್ಯ ವಿಕಾಸವನ್ನು ಕಂಡುಕೊಳ್ಳುವ ಆತುರದಲ್ಲಿ ಶ್ರೀ ರಾಮಕೃಷ್ಣ ಆಶ್ರಮದಂತಹ ಭದ್ರಕವಚಕ್ಕೆ ಒಪ್ಪಿಸಿಕೊಳ್ಳದಿದ್ದರೆ ಅಥವಾ ನಿರಂಕುಶತೆಯನ್ನು ಆತ್ಮಶ್ರೀಗಾಗಿ ಎಂದು ಭಾವಿಸದಿದ್ದರೆ, ಈಗ ಅವರು ಈಗಿನ ಎತ್ತರದಲ್ಲಿ ಇರುತ್ತಿದ್ದರೆ? ಎನ್ನುವ ಸಂದೇಹವಾಗುತ್ತದೆ. ಎತ್ತರೆತ್ತರದ ಮೌಲ್ಯಗಳನ್ನು ಆಭರಣಕ್ಕಿಂತಲೂ ಬೆಲೆಯುಳ್ಳ ಮಾಂಗ್ಯಲದಂತೆ ಅವರು ಗೌರವಿಸದಿದ್ದರೆ ಈಗಿನ ವಿಶಿಷ್ಟ ಚೇತನವಾಗುವುದು ಕಷ್ಟವಾಗುತ್ತಿತ್ತು. ಶ್ರೀಕೃಷ್ಣನಂತಹ ಕಾಡಿನ ಹುಡುಗನಿಗೆ ಅಂತಹ ಸಂಯಮಕಗಳು ದೊರೆಯಲಿಲ್ಲವೆ? ಅಗತ್ಯವಾಗಲಿಲ್ಲವೆ? ಅಸಹ್ಯವಾದುವೆ? ಈ ಅಂಶ ನನ್ನನ್ನು ಇಂದೂ ಕೂಡ ಕಾಡುತ್ತಿವೆ. ಗೇರುಸೊಪ್ಪೆಯ ಜಲಪಾತದ ನೀರು ಆ ಕಣಿವೆಯಲ್ಲಿ ಕೋಟ್ಯಂತರ ವರ್ಷಗಳಿಂದ ಬೀಳುತ್ತಲೇ ಇದೆ. ಆ ನೀರಿನ ಮಹಾ ಭಾರದ ಘಾತಕ್ಕೆ ಎದೆಕೊಟ್ಟ ಬುಡದ ಬಂಡೆ ತನ್ನ ಟೊಳ್ಳನ್ನೆಲ್ಲಾ ಕಳೆದುಕೊಂಡು ಇನ್ನು ಸವೆಯಲಾರದ ಗಟ್ಟಿತನವನ್ನು ಕಂಡುಕೊಂಡಿದೆ. ಆದರೆ, ಅದೇ ಕೊಳಾಯಿಯಲ್ಲಿ ವಿದ್ಯುತ್ ಉತ್ಪಾದನಕ್ಕಾಗಿ ಹಾದುಕೊಂಡು ಹೋಗುವ ನೀರು, ಮೇಲಿನಿಂದ ಕೆಳಗೆ ಇಳಿಯುವಾಗ ಹೆಚ್ಚು ಒತ್ತಡವನ್ನು ತರುತ್ತಾ ಆ ತಳದ ಕೊಳವೆಯ ದುರ್ಬಲಭಾಗವನ್ನು ಸಿಡಿಸಿಬಿಡಬಹುದು. ಕಾರಣ ಈ ಕೊಳವೆ ಸಹಸ್ರಾರು ವರ್ಷಗಳಿಂದ ಪರೀಕ್ಷೆಗೆ ಒಳಪಟ್ಟಿದ್ದಲ್ಲಿ. ಆದದ್ದರಿಂದ ಇದರ ಬಗೆಗೆ ಹೆಚ್ಚು ಎಚ್ಚರವಿರಬೇಕು. ಶ್ರೀಕೃಷ್ಣನಂತಹ ವಿಶೇಷಶಕ್ತಿಗಳು ತುಂಬು ಮೈದಾಳುವ ಮೊದಲೇ ಮೈಗರೆದಾಗ ಈ ಮೇಲಣ ಎಚ್ಚರಿಕೆ ಸರಿ ಎಂದು ತೋರುತ್ತದೆ.

ವಿಷಾದವೆಂದರೆ, ಒಂದೇ ಊರಿನಲ್ಲಿದ್ದರೂ ಏಕೋ ಏನೋ ಈ ೧೫ ವರ್ಷಗಳ ಅವಧಿಯಲ್ಲಿ ನಾವು ಪರಸ್ಪರ ೪–೫ ಬಾರಿಗಿಂತ ಹೆಚ್ಚು ಭೇಟಿಯಾದದ್ದೇ ಇಲ್ಲ. ನಾನು ತಪ್ಪುಮಾಡಿದೆ ಎನ್ನುವ ಭಾವ ಕಾಡುತ್ತಿದೆ. ಆತನನ್ನು ಹುಡುಕಿಕೊಂಡು ಹೋಗಿ ನೋಡಬೇಕೆನ್ನುವ ಆಸೆಯನ್ನು ಹತ್ತಿಕ್ಕಿದೆ ಎನ್ನುವ ನೋವಿದೆ. ಜನವರಿ ೪ರ ಸಂಜೆ ೭ ಘಂಟೆಯತನಕ ಕಾಲೇಜಿನಲ್ಲಿಯೆ ಇದ್ದು ಏನನ್ನೂ ಬರೆಯಲು, ಓದಲು ಆಗದೆ ಶತಪಥ ತಿರುಗುತ್ತಿದ್ದ ನಾನು ಮನೆಗೆ ಹೋದೆ. ೫–೧೦ ನಿಮಿಷಗಳಲ್ಲಿ ಆತನ ಸಾವಿನ ಸುದ್ದಿ ಬಂತು. ಫೋನಿನಮೂಲಕ ಸುದ್ದಿ ಬಂದಾಗ ನಾನು ಬಿಕ್ಕಳಿಸಿದೆ. ನನ್ನ ಮನೆಯಾಕೆ ಗಾಬರಿಗೊಂಡಳು. ವಿಷಯ ತಿಳಿದಾಗ ನನ್ನೊಡನೆ ಆಕೆಯೂ ನಿಟ್ಟುಸಿರುಬಿಟ್ಟು ತಾನೂ ಆತನ ಅಂತಿಮ ದರ್ಶನವನ್ನು ಪಡೆಯುವುದಕ್ಕಾಗಿ ಬರುವುದಾಗಿ ಹೇಳಿದಳು. ಮದುವೆಗೆ

ಪೂರ್ವದಲ್ಲಿ ಶ್ರೀಕೃಷ್ಣ ತನ್ನ ಭಾವೀ ಪತ್ನಿಯ ಜೊತೆಯಲ್ಲಿ ಮನೆಗೆ ಬಂದಿದ್ದು, ನಮ್ಮಿಬ್ಬರ ಜೊತೆಯಲ್ಲಿ ಕಾಲಕಳೆದು ಕಡೆಗೆ ಹೋಗುವಾಗ ಮದುವೆಗೆ ಒಪ್ಪಿಕೊಳ್ಳುವಂತೆ ತಮ್ಮ ತಾಯಿಗೆ ಅನುನಯ ಮಾಡಬೇಕೆಂದು ನಮಗೆ ಹೇಳಿದ್ದನ್ನು ನನ್ನ ಮನೆಯಾಕೆ ನೆನಪುಮಾಡಿಕೊಟ್ಟಳು. ಆ ನೆನಪು ಮತ್ತಷ್ಟು ದುಃಖ ತಂದಿತು. ಕಡೆಗೂ ನಾನು ಗೃಹಸ್ಥ ಶ್ರೀಕೃಷ್ಣನನ್ನು ಅವನ ಮನೆಯಲ್ಲಿ ಕಂಡದ್ದು ಹೀಗಲ್ಲ, ಎಂಬ ನೋವು ನನ್ನನ್ನು ಅಪರಾಧ ಭಾವಕ್ಕೆ ದೂಡಿತು. ಪ್ರಕೃತಿ ಎಷ್ಟೊ ಧಾರಾಳವಾಗಿ ಒಮ್ಮೊಮ್ಮೆ ಶಕ್ತಿಯನ್ನು ವಿತರಿಸಿದರೂ ಅಷ್ಟೇ ಕ್ರೂರವಾಗಿ ಅದನ್ನೆಲ್ಲ ಹಿಂದಕ್ಕೆ ಸೆಳೆದುಕೊಂಡು ಬಿಡಬಹುದು. ದತ್ತವಾದ ಶಕ್ತಿಯನ್ನು ಬೆಳೆಸಿಕೊಳ್ಳುವ ಬಳಸಿಕೊಳ್ಳುವ ಹೊಣೆಗಾರಿಕೆಯನ್ನು ಪ್ರಕೃತಿ ಮನುಷ್ಯನಿಗೇ ಬಿಟ್ಟುಬಿಡುವಂತೆ ತೋರುತ್ತದೆ. ಶ್ರೀಕೃಷ್ಣನ ಸಾವು ಅಕಾಲೀನ ಮರಣ ಈ ಭಾವನೆಯನ್ನು ದಟ್ಟವಾಗಿ ಕವಿಸಿದೆ.

ನಿಜವಾದ ಸಮಾಜವಾದವು ನಮಗೆ ನಮ್ಮ ಪೂರ್ವಜರಿಂದ ಪರಂಪರಾಗತವಾಗಿ ಬಂದಿದೆ. "ಸಭೀ ಭೂಮಿ ಗೋಪಾಲಕಿ" 'ಭೂಮಿ ಎಲ್ಲ ಪರಮಾತ್ಮನದು' ಎಂದು ಅವರು ನಮಗೆ ಕಲಿಸಿದ್ದಾರೆ. ಅಂದಮೇಲೆ "ನನ್ನದು, ನಿನ್ನದು" ಎಂಬ ಹಕ್ಕಿನ ರೇಖೆಗೆ ಸ್ಥಾನವೆಲ್ಲಿದೆ? ಇಂಥ ಹಕ್ಕಿನ ಗಡಿಯನ್ನು ಮನುಷ್ಯನೇ ಉಂಟುಮಾಡಿದನು. ಆದುದರಿಂದ ಅವನು ಅವನ್ನು ತೆಗೆದುಹಾಕಬಲ್ಲನು.

ಗಾಂಧೀಜಿ

ತುಂಬು ಲವಲವಿಕೆಯ ಜೀವ ಆಲನಹಳ್ಳಿ

ಡಾ|| ಕಾಳೇಗೌಡ ನಾಗವಾರ

ಸದಾ ಚಟುವಟಿಕೆಯಿಂದ ತುಂಬಿ ತುಳುಕುತ್ತಿದ್ದ ಗೆಳೆಯ ಶ್ರೀಕೃಷ್ಣ ಆಲನಹಳ್ಳಿ, ಯಾವತ್ತೂ ಯೌವ್ವನದ ಪ್ರತಿರೂಪವೆಂಬಂತೆ ತನ್ನೆಲ್ಲ ಕ್ಷಣಗಳನ್ನು ತೀವ್ರವಾಗಿ ಬದುಕಿದವನು. ಈತ ಮತ್ತು ನಾನು ೧೯೬೦ರ ಮಧ್ಯಭಾಗದಲ್ಲಿ ಬಿ.ಎ. ಅಧ್ಯಯನ ಮಾಡಲು ಮಹಾರಾಜಾ ಕಾಲೇಜಿನ ಮೆಟ್ಟಿಲುಗಳನ್ನು ಒಟ್ಟಿಗೆ ಹತ್ತಿದವರು. ನನಗಿಂತ ಎರಡು ವರ್ಷ ಹಿರಿಯನಾಗಿದ್ದ ಕೃಷ್ಣ ಆ ಕಾಲಕ್ಕೆ ಕನ್ನಡದಲ್ಲಿ ದೊರೆಯಲಿದ್ದ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನೆಲ್ಲ ಓದಿ, ಜೀರ್ಣಿಸಿಕೊಂಡು ಹೊಚ್ಚ-ಹೊಸತನದೊಡನೆ ಬರೆಯಲು ಇನ್ನಿಲ್ಲದಂತೆ ಹಾತೊರೆಯುತ್ತಿದ್ದ. ಅದರ ಪರಿಣಾಮವಾಗಿಯೇ ಅವನ ಹದಿಹರೆಯದ ಬೆಚ್ಚನೆಯ ಕನಸುಗಳ ನಿದಾರ್ಕ್ಷಿಣ್ಯದ ಹಿನ್ನೆಲೆಯ ಅನುಭವವಲಯವನ್ನು ಪರಿಚಯಿಸುವ "ಮಣ್ಣಿನ ಹಾಡು" ಕವನ ಸಂಕಲನ ಪ್ರಕಟವಾಯಿತು. ಆದೇ ಹೊತ್ತಲ್ಲಿ ತನ್ನ ಎಡೆಬಿಡದ ಚಟುವಟಿಕೆಗಳ ನಡುವೆಯೂ ಈತ ನಮ್ಮ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭದ ಅರ್ಥಪೂರ್ಣ ಚರ್ಚೆಗೆ ಅನುವಾಗುವ "ಸಮೀಕ್ಷಕ" ಎಂಬ ನಿಯತಕಾಲಿಕ ಪತ್ರಿಕೆಯನ್ನು ಹೊರತಂದು, ಕೆಲವು ಮೌಲಿಕ ಸಂಚಿಕೆಗಳನ್ನು ಕನ್ನಡಕ್ಕೆ ನೀಡಿದ. ಹೀಗೆ ತನ್ನ ಕಾಲದ ಹಿರಿಯ-ಕಿರಿಯ ಲೇಖಕರೆಲ್ಲರ ಜೊತೆಗಿನ ಒಡನಾಟ ಮತ್ತು ಚರ್ಚೆಯ ಮೂಲಕ ಸೃಜನಶೀಲ ಬರವಣಿಗೆಯ ಹದವನ್ನು ಅರಿತ ಆಲನಹಳ್ಳಿ, ಒಟ್ಟು ಸುಮಾರು ಕಾಲುಶತಮಾನ ಕಾಲ ನಿರಂತರವಾಗಿ—ಕತೆ, ಕವನ, ಲೇಖನ, ಕಾದಂಬರಿ, ಪ್ರವಾಸಕಥನ ಹಾಗೂ ಅನುವಾದದ ಪ್ರಕಾರಗಳಲ್ಲಿ ನಾವೆಲ್ಲ ಹೆಮ್ಮೆಪಟ್ಟುಕೊಳ್ಳುವಂತಹ ಬರಹಗಳನ್ನು ನೀಡುತ್ತಿದ್ದಂತೆಯೇ ಥಟ್ಟನೆ ಕಣ್ಮರೆಯಾದುದ್ದು ಅತ್ಯಂತ ಹೆಚ್ಚಿನ ನೋವಿನ ಸಂಗತಿಯಾಗಿದೆ.

ತನ್ನ ಕೆಲವು ವಿರೋಧಾಭಾಸಗಳು ಮತ್ತು ದೌರ್ಬಲ್ಯಗಳ ನಡುವೆಯೂ ಕೃಷ್ಣ ಹತ್ತಿರದಿಂದ ಬಲ್ಲ ಎಲ್ಲರ ನೆನಪಿನಲ್ಲಿ ನಿಲ್ಲುವ—ಹೃದಯ ನೈರ್ಮಲ್ಯದ ಹಳ್ಳಿಯ ಮುಗ್ಧ ತರುಣನ ಸತತ ಕುತೂಹಲ ಮತ್ತು ತೀವ್ರತೆಯಲ್ಲಿ ದಟ್ಟವಾಗಿ ಬಾಳಿದ ವ್ಯಕ್ತಿಯಾಗಿದ್ದಾನೆ. ತನ್ನೆಲ್ಲ ಪರಿಪಾಟಲು ಅಶಿಸ್ತು ಮತ್ತು ಅವ್ಯವಸ್ಥೆಯ ನಡುವೆ ಸಹ ಈತ ಆಶ್ಚರ್ಯಕರವಾದ ರೀತಿಯಲ್ಲಿ ಗಂಭೀರ ಸೃಜನಶೀಲ ಕೃತಿಗಳನ್ನು ರಚಿಸಿದ್ದಾನೆ. ನಮ್ಮ ಗ್ರಾಮೀಣ ಜನಸಮುದಾಯದ ಬದುಕಿನ ಮೇಲೆ ಆಗುತ್ತಿರುವ ನಾಗರೀಕತೆಯ ದಟ್ಟ ಪ್ರಭಾವದ ನರಕ ಸದೃಶ ಚಿತ್ರಣವನ್ನು ಕೃಷ್ಣ ಈ ಬರಹಗಳಲ್ಲಿ ಅತ್ಯಂತ ಪರಿಣಾಮಕಾರಿಯೂ ಆತ್ಮೀಯವೂ ಆದ ರೀತಿಯಲ್ಲಿ ನೀಡಿರುವುದನ್ನು ಕಾಣಬಹುದಾಗಿದೆ.

ನಮ್ಮೆಲ್ಲರ ಕಣ್ಣೆದುರಿಗೆ ಇಷ್ಟೊಂದು ಲವಲವಿಕೆಯಿಂದ ಬದುಕಿದ ಈ ಮಹತ್ವಾಕಾಂಕ್ಷಿ ಚೇತನಕ್ಕೆ—ಅವನ ಆತ್ಮೀಯರು ಅಭಿಮಾನಿಗಳು ಹಾಗೂ ಹಿತೈಷಿಗಳಾಗಿದ್ದವರೆಲ್ಲರೂ ಸೇರಿ ಎರಡು ರೀತಿಯಲ್ಲಿ ಅರ್ಥಪೂರ್ಣವಾಗಿ ಗೌರವಾದರಗಳನ್ನು ಅರ್ಪಿಸಬಹುದೆಂದು ನಾನು ಭಾವಿಸುತ್ತೇನೆ.

(i) ಪ್ರತಿವರ್ಷ ಅಥವಾ ಪ್ರತಿ ಐದು ವರ್ಷಕ್ಕೊಮ್ಮೆ—ಕನ್ನಡದಲ್ಲಿ ಇಪ್ಪತ್ತೈದರ ಹರೆಯದ ಒಳಗಿನ ತರುಣತರುಣಿಯರಿಂದ ಸೃಷ್ಟಿಸಲ್ಪಟ್ಟ ಶ್ರೇಷ್ಠ ಸೃಜನಶೀಲ ಬರಹಕ್ಕೆ ಹತ್ತು ಸಾವಿರ ರೂಪಾಯಿಗಳ ಮೊತ್ತಕ್ಕೆ ಕಡಿಮೆ ಇಲ್ಲದಂತೆ (ಆ ಅವಧಿಯಲ್ಲಿ ಒಂದು ವೇಳೆ ಶ್ರೇಷ್ಠ ಮೌಲಿಕ ಬರವಣಿಗೆ ಇಲ್ಲದಿದ್ದಲ್ಲಿ ಪ್ರಶಸ್ತಿ ನೀಡುವುದು ಬೇಡ) "ಶ್ರೀಕೃಷ್ಣ ಆಲನಹಳ್ಳಿ ಯುವಸಾಹಿತ್ಯ ಪ್ರಶಸ್ತಿ"ಯನ್ನು ನೀಡುವುದು.

(ii) ಕೃಷ್ಣ ರಚಿಸಿರುವ ಸಮಗ್ರ ಸಾಹಿತ್ಯ ಮತ್ತು ಆತನ ವ್ಯಕ್ತಿತ್ವವನ್ನು ಕುರಿತು "ಶ್ರೀಕೃಷ್ಣ ಆಲನಹಳ್ಳಿ : ವ್ಯಕ್ತಿ ಮತ್ತು ಸಾಹಿತ್ಯ" ಎಂಬ ಪಿ ಎಚ್.ಡಿ. ನಿಬಂಧವನ್ನು ಸಿದ್ಧಪಡಿಸುವುದು.

ಇವುಗಳಲ್ಲಿ ಎರಡನೆಯ ಯೋಜನೆಯನ್ನು ಕಾರ್ಯಗತಗೊಳಿಸಲು ಈಗಾಗಲೇ ನನ್ನ ಗೆಳೆಯರೊಬ್ಬರು ಸಿದ್ಧವಾಗಿದ್ದಾರೆ; ಮೊದಲನೆಯದನ್ನು ನಾವೆಲ್ಲ ಸೇರಿ ನಿರ್ವಹಿಸೋಣ.

ಕನ್ನಡದ ಈ ಅಪೂರ್ವ ಪ್ರತಿಭೆಯನ್ನು ಮರೆಯೋದು ಅಂದ್ರೆ....

ಡಾ|| ಬೆಸಗರಹಳ್ಳಿ ರಾಮಣ್ಣ

ಶ್ರೀಕೃಷ್ಣ ಆಲನಹಳ್ಳಿ ಸತ್ತು ಒಂದು ತಿಂಗಳ ಮೇಲಾಗಿದೆ. ಆದರೆ ನನ್ನಂಥ ಸ್ನೇಹಿತರಿಗೆ ಇದುವರೆಗೆ ಆದದ್ದನ್ನು ನಂಬೋದು ಅಂದ್ರೆ ತುಂಬ ಎಕ್ಕ್ಯಾಸದ ಕೆಲಸ. ಸುಮಾರು ಇಪ್ಪತ್ತನಾಲ್ಕು ವರ್ಷಗಳು ನಡೆದು ಬಂದ ಸಂಬಂಧ. ಅದೆಷ್ಟು ಸಲ ಜಗಳವಾಡಿ ಮುನಿಸಿಕೊಂಡಿದ್ದೇವೆ, 'ಟೂ' ಬಿಟ್ಟು ಒಂದಾಗಿದ್ದೇವೆ. ಒಂದಾದಾಗಲೆಲ್ಲ ಮಸಾಲೆದೋಸೆ, ಮೈಸೂರುಪಾಕು, ಒಮ್ಮೊಮ್ಮೆ ಪಲಾವು, ಕೋಳಿ ಚಾಪೀಸು, ಬೀರು ; ಮಧ್ಯಸ್ಥಿಕೆ ವಹಿಸಿ ತಮ್ಮ ಜನ್ಮ ಸಾರ್ಥಕಪಡಿಸಿಕೊಂಡಿವೆ. ಕೃಷ್ಣನ ಹಾಗೂ ನನ್ನ ಸಂಬಂಧದ ಬಗೆಗೆ ಆಗಲೇ ನಾನು 'ಸುದ್ದಿ ಸಂಗಾತಿ'ಯಲ್ಲಿ ಒಂದು ಲೇಖನ ಬರೆದಿದ್ದೇನೆ. ಇದು ಪ್ರಧಾನ ಲೇಖನವಾಗಿ ಅಚ್ಚೂ ಆಗಿದೆ. ಇದರಲ್ಲಿ ಹೇಳದೇ ಬಿಟ್ಟ ಕೆಲವು ವಿಷಯಗಳನ್ನು ಇಲ್ಲಿ ಸ್ವಲ್ಪದರಲ್ಲೇ ವಿವರಿಸಲೆತ್ನಿಸುತ್ತೇನೆ. ಕೃಷ್ಣ, ನಾನು, ಕ್ಯಾತನಹಳ್ಳಿ ರಾಮಣ್ಣ, ನಾಗವಾರ, ಶಿವತೀರ್ಥ, ವೀರಭದ್ರ, ಶಿವರಾಮು ಐತಾಳರು, ರಮಾಕಾಂತ ಜೋತೆಯಾಗಿ ರಾತ್ರಿ ಸರೊತ್ತಿನತನಕ ಮೈಸೂರಿನ ಪೇಟೆಗಳಲ್ಲಿ, ಪ್ರಭುದೇವ ಟಾಕೀಸಿನ ಬಳಿಯಲ್ಲಿ ವಡೆ ತಿನ್ನುತ್ತ, ಟೀ ಕುಡಿಯುತ್ತ ಕಳೆದವು ಅದೆಷ್ಟು ಚನ್ನಾಗಿ ನೆನಪಿದೆ ಅಂದ್ರೆ, ಈಗತಾನೆ ನಡೆದಂತೆ! ಮರೆಯಲಾಗದ ರಾತ್ರಿಗಳವು. ನಮ್ಮನ್ನು ಸಾಹಿತ್ಯ ಲೋಕಕ್ಕೆ ನಾವೇ ತೊಡಗಿಸಿಕೊಳ್ಳುತ್ತಿದ್ದ ಸುವರ್ಣ ರಾತ್ರಿಗಳು. ಇವಕ್ಕೆ ಸಾವಿಲ್ಲ. ಒಂದೊಂದು ದಿನ ಇನ್ನೇನು ಬೆಳಕೇ ಆಗಿಹೋಯ್ತು ಅನ್ನುವಾಗ ನಮ್ಮ ನಮ್ಮ ರೂಮುಗಳಿಗೆ ಹಿಂದಿರುಗುತ್ತಿದ್ದೆವು. ಕೃಷ್ಣ ಆಗ ಸಹಜವಾಗಿಯೇ ನವ್ಯ ಸಾಹಿತ್ಯ ಪರಂಪರೆ ಕಡೆಗೆ ವಾಲಿದ್ದ. ನವ್ಯದ ಬಗೆಗೆ ಅತ್ಯಂತ ತೀಕ್ಷ್ಣವಾದ ಒಲವನ್ನು ಬಹುಜನ

ಲೇಖಕರು ತೋರುತ್ತಿದ್ದ ಕಾಲ–ಅದು. ಅಂತೆಯೇ ತೀಕ್ಷ್ಣ ಚರ್ಚೆಗೂ ಅದು ಒಳಗಾಗಿತ್ತು. ನಮ್ಮ ಈ ರಾತ್ರಿಯ ಸಂಚಾರಗಳಲ್ಲಿ ನಮ್ಮ ಬಾಯಿಗೆ ಅದೆಷ್ಟು ಲೇಖಕರು ಸಿಕ್ಕಿ ನರಳಿದರೋ ಏನು ಕತೆಯೋ....!

ಕೃಷ್ಣನ ನೆನಪಿನೊಡನೆ ತಟ್ಟನೆ ನನ್ನೆದುರು ಬರುವುದೆಂದರೆ, ಈ ಪುಣ್ಯಾತ್ಮನಿಗೆ ಶಿವತೀರ್ಥನ್ ಮಹಾಕವಿಗಳು ನೀಡಿದ 'ಕಾವ್ಯ ದೀಕ್ಷಾ ಪ್ರಕರಣ'. ಆಗಿನಕಾಲಕ್ಕೆ ಶಿವತೀರ್ಥನ್,-ಕೃಷ್ಣನಿಗೆ ಅತ್ಯಂತ ಪ್ರಮುಖ ಕವಿ. ಕೃಷ್ಣ ಆಗಲೇ 'ಕಾವೇರಿತನಯ' ಎಂಬ ಹೆಸರಿನಡಿಯಲ್ಲಿ ಕವಿತೆಗಳನ್ನು ಪುಂಖಾನು ಪುಂಖವಾಗಿ ರಚಿಸಿ, 'ಗೋಕುಲ', 'ಕೈಲಾಸ' ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದ. ಆದರೂ ಶಿವತೀರ್ಥನ್ ಪರಿಚಯ ವಾದಾಗ ಡಿ. ಸುಬ್ಬಯ್ಯ ರಸ್ತೆಯಲ್ಲಿದ್ದ ತಮ್ಮಕೊಠಡಿಗೆ ಮರಿಕವಿ ಕಾವೇರಿತನಯನನ್ನು ಕರೆದೊಯ್ದು; ಕಾವ್ಯ ಸರಸ್ವತಿಯ ಆರಾಧನೆಮಾಡಿ, ಕಲ್ಲುಸಕ್ಕರೆ ಪ್ರಸಾದ ನೀಡಿ: "ಓಹೋ! ಇವೋ ನಿನ್ನ ಪದ್ಯಗಳು ಎಂದು ಶೀವಿಯಿಂದ ತೆಗೆದುಕೊಂಡು ಗಂಭೀರವಾಗಿ ಕಣ್ಣಾಡಿಸಿ; ನಂತರ ಕಾವ್ಯ ರಚನೆಯ ಹಿಂದೆ ಇರಬೇಕಾದ ಗಂಭೀರ ಚಿಂತನೆ, ಭಾಷೆಯ ಬಳಕೆಯ ಪ್ರಾಮುಖ್ಯತೆ, ಬ್ರಹ್ಮ ಎಂದರೇನು? ಬ್ರಹ್ಮಚರ್ಯವೆಂದರೇನು? ಇತ್ಯಾದಿ ಗಳ ಬಗ್ಗೆ ವ್ಯಾಖ್ಯಾನ ನೀಡಿದ್ದು—ಇವೆಲ್ಲವನ್ನೂ ಕೃಷ್ಣನ ಬಾಯಲ್ಲೇ ಅವನ ನಟನೆ ಯೊಡನೆ ನೀವು ಕೇಳಬೇಕಿತ್ತು. ನಕ್ಕೂ ನಕ್ಕೂ ನಮಗಂತೂ ಹೊಟ್ಟೆ ಹುಣ್ಣಾಗುತ್ತಿತ್ತು. ಶಿವತೀರ್ಥ ಕವಿಗಳ ಗೋಳು ಶತ್ರುಗಳಿಗೂ ಬ್ಯಾಡ ಸ್ವಾಮಿ, ಬ್ಯಾಡ! ಒಂದು ಸಲ ಕೃಷ್ಣನ ರೂಮಿಗೆ ಶಿವತೀರ್ಥ ಕವಿಗಳು ರೇಗಿ ಒಂದು ನವ್ಯ ಪದ್ಯ ರಚಿಸಿತಂದು ಓದಿದ ಘಟನೆ, ಪದ್ಯದ ಸಾಲುಗಳು ಇನ್ನೂ ನನ್ನ ಮನಸ್ಸಿನಲ್ಲಿ, ಕಿವಿಯಲ್ಲಿ ಚಿರಂಜೀವಿಗಳಾಗಿವೆ. ಇದನ್ನು ಕೃಷ್ಣ ಅನೇಕ ಸಲ ಜ್ಞಾಪಿಸಿ ಶಿವತೀರ್ಥ ಕವಿಗಳನ್ನು ನಮ್ಮೆದುರು ಗೋಳುಯ್ದು ಕೊಳ್ಳುತ್ತಿದ್ದ.

ಕೃಷ್ಣನ ಹಾಸ್ಯ, ಉಡಾಫೆ ನಡುವಳಿಕೆಗಳ ನಡುವೆಯೇ ಸ್ನೇಹಿತರ ಬಗ್ಗೆ ಅತ್ಯಂತ ಗಾಢವಾದ ಆತ್ಮೀಯತೆ ಮನೆ ಮಾಡಿತ್ತು. ಕಷ್ಟದಲ್ಲಿದ್ದವರಿಗೆ ಧೈರ್ಯ, ಆತ್ಮ ವಿಶ್ವಾಸ ನೀಡುತ್ತಿದ್ದ. ಯಾರಾದರೂ ಹಾಗಂದ್ರು, ಹೀಗಂದ್ರು ಅಂದೆ! "ಲೇ! ಬಿಸಾಡೋ ಆ ನನ್ನ ಪಿಂಜ್ರಾಪೋಲ್ ನನ್ನ ಮಕ್ಕಳ. ನಾನು ಉಚ್ಚೆ ಊಸ್ರೆ ಅವು ಕೊಚ್‌ಕಂಡ್ ಹೋಯ್ತವೆ! ಅವ್ಕೆ ಹೆದರ್ಕೊಂಡ್ರೆ ಆಯ್ತುದ. ಎಲ್ಲಿಯೋನೋ ಇವ್ನು. ನಿನಗಿಂತ ಅವ್ನು ಯಾವ್ನೋನಪ್ಪ ಈ ಧರೇಲಿ ಬುದ್ಧಿವಂತ, ಧೈರ್ಯವಂತ. ನಡೀ, ನಡೀ ಕಾಫೀ ಕುಡೀವ ನಡೀ" ಅಂತಿದ್ದ. ಆತ್ಮ ವಿಶ್ವಾಸದಗಣಿ. ಒಂದು ಸಲ ನಾನು ಕಷ್ಟದಲ್ಲಿದ್ದಾಗ ಅದೆಲ್ಲೋ ಮೈಸೂರಿನ ಬಂಡಿಕೇರಿಯ ತನ್ನ ಪರಿಚಯದವರ ಬಳಿ ದುಡ್ಡು ತಂದುಕೊಟ್ಟಿದ್ದ. ಆದರೆ ನನಗೆ ಅವನು ಕೊಡಬೇಕಾಗಿದ್ದ ಸಾಲದಲ್ಲಿ ಕೂಡಲೇ ಮುರಿಹಾಕಬಾರದೆಂದು ಷರತ್ತು ಹಾಕಿದ್ದ! ನನ್ನ ಅನೇಕ ಕಷ್ಟ ಸುಖಗಳನ್ನು ಹಂಚಿಕೊಂಡಿದ್ದ. ನನ್ನೂರಿನಲ್ಲಿ ನನ್ನ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿದೆ ಎಂದು ನಾನು ಚಿಂತಾಕ್ರಾಂತ ನಾಗಿದ್ದಾಗ: ಡಿವಿಜನಲ್ ಕಮೀಷನರ್ ಬಳಿ ಹೋಗಿ, ಕೇಸ್ ವಿವರಗಳನ್ನು ನೀಡಿ ಅದಕ್ಕೆ ದಿಗ್ಬಂಧನ ಹಾಕಿಸಿ, ಉಳಿಸಿಕೊಟ್ಟ. ಇದಕ್ಕೆ ನನ್ನ ಪೈಲಟ್ ಪೆನ್ನನ್ನು "ಫೀಸ್"

ಕಣೋ" ಎಂದು ಜೇಬಿಂದ ಎತ್ತುಕೊಂಡು ಮನೆಯಲ್ಲಿ ನನಗೆ ಸೊಗಸಾದ ಬಿರಿಯಾನಿ ಮಾಡಿಸಿ, ಉಣ್ಣಿಸಿ ಕಳಿಸಿದ.

ಖ್ಯಾತ ಲೇಖಕ ರಾವ್‌ಬಹದ್ದೂರರ ಜೊತೆಯಲ್ಲಿ ಮೈಸೂರು ಮತ್ತು ಬೆಂಗಳೂರಲ್ಲಿ ಇವನೊಡನೆ ಕಳೆದುದನ್ನು ನೆನೆಸಿಕೊಳ್ಳುವುದೆಂದರೆ ನನಗೆ ಹರ್ಷ, ದುಃಖಗಳು ಒಟ್ಟಿಗೇ ಆಗುತ್ತಿವೆ. ಅವರೂ ಇಲ್ಲ, ಇವನೂ ಇಲ್ಲ! ಆದರೆ ಅಂದು ಆಡಿದ ನುಡಿಗಳು, ನಡವಳಿಕೆಗಳು ಮರೆಯದಂಥವು. ಕೃಷ್ಣ ಆಗಲೇ ಗ್ರಾಮಾಯಣ ಕಾದಂಬರಿಯ ಬಗ್ಗೆ ಸಮೀಕ್ಷೆ ನಡೆಸಿ, ಹೊರತಂದಿದ್ದ. ರಾವ್‌ಬಹದ್ದೂರ್ ಖುಷಿ ಆಗಿದ್ದರು. ಅವರ ಬದುಕಿನ ಅನುಭವಗಳನ್ನು ನಮ್ಮೊಡನೆ ಹಂಚಿಕೊಂಡಿದ್ದರು. ಆ ಮಹಾನ್ ಲೇಖಕ ಮಗುವಿನಂತೆ ನಮ್ಮೊಡನೆ ನಡೆದುಕೊಂಡಿದ್ದರು. ಕೊನೆಯ ವರೆಗೂ ನಮ್ಮೊಡನೆ ಅವರು ಹೀಗೆಯೇ ಇದ್ದರು. ವಯಸ್ಸಿನ ಅಂತರವನ್ನು ಅವರು ಪರಿಗಣನೆಗೇ ತೆಗೆದುಕೊಂಡಿರಲಿಲ್ಲ. "ಅಂತೂ ಹುಲಿಯ ಮರಿಗಳೆರಡನ್ನು ಅವುಗಳ ಗವಿಯಲ್ಲೇ ಕಂಡಂತಾಯ್ತು" ಎಂದು ಖುಷಿಪಟ್ಟಿದ್ದರು. ಕೃಷ್ಣನ ಬೆನ್ನು ತಟ್ಟಿ "ನೀನು ಕರ್ನಾಟಕದ ಮನೆ ಮಾತಾಗ್ತಿ" ಎಂದಿದ್ದರು. ಈ ಭವಿಷ್ಯ ಸುಳ್ಳಾಗಲಿಲ್ಲ.

ನನಗೆ ಪ್ರಜಾವಾಣಿ ಕಥಾ ಸ್ಪರ್ಧೆಯ ಪ್ರಥಮ ಬಹುಮಾನದ ೩೫೦ ರೂ. ಚೆಕ್ ಬಂದಾಗ ಅದನ್ನು ತೆಗೆದುಕೊಂಡೋಗಿ ಅರ್ಜೆಂಟಾಗಿ, ಕಡಿಮೆ ಕಮೀಷನ್ನಿಗೆ ಮುರಿಸಿ ತಂದುಕೊಟ್ಟ. ಆ ದಿನದ ಅನುಭವಗಳೆಲ್ಲವನ್ನೂ ಬರೆದರೆ ಒಂದು ನವ್ಯ ಕತೆಯೇ ಆಗುತ್ತದೆ; ಬಾಡು, ಬೀರಿನ ಅಮಲಿನಲ್ಲಿ ಇಬ್ಬರೂ ತೇಲಾಡಿದ್ದೆವು. ಬೆಳಗ್ಗೆ ಎದ್ದು ಅದು ಬರೀಬೇಕು, ಇದು ಬರೀಬೇಕು ಎನ್ನುತ್ತಿದ್ದ ಅವನಿಗೆ ನಾನು ಕತೆ ಬರೆಯೋದು ಸುಲಭವಲ್ಲವೆಂದು ಚುಡಾಯಿಸಿ, ಕತೆ ಬರೆಯುವಂತೆ ಮಾಡಿದೆ— "ಎತ್ತಣ ಮಾಮರ, ಎತ್ತಣ ಕೋಗಿಲೆ" ಬರೆದು ಬಹುಮಾನ ಗಿಟ್ಟಿಸಿಯೇಬಿಟ್ಟ. ಅಪೂರ್ವ ಪ್ರತಿಭೆ ಹಾಗೂ ಛಲ ತನ್ನಲ್ಲಿದೆ ಎಂದು ತೋರಿಸಿಕೊಟ್ಟ.

ಒಂದು ದಿನ ರಾಮಸ್ವಾಮಿ ಸರ್ಕಲ್ ಬಳಿ ಇದ್ದ ತನ್ನ ಕ್ವಾಟರ್ಸ್‌ನಲ್ಲಿ "ಆಳು ಕೂಗಿನ ಹಕ್ಕಿ" ಪದ್ಯದ ಥೀಮನ್ನೂ ನನಗೆ ವಿವರವಾಗಿ ಹೇಳಿದ್ದ. ನಾನು ನಿಧಾನವಾಗಿ ಬರಿ. ಆತ್ರ ಬ್ಯಾಡ" ಅಂದಿದ್ದೆ. ಅಂತೂ ಬರೆದ. ಕೃಷ್ಣನ ಬರವಣಿಗೆಗಳಿಗೆ ಸಾವು ಬಹು ದೂರದ ಮಾತು. ಇಷ್ಟು ಚಿಕ್ಕವಯಸ್ಸಿನಲ್ಲೇ ಎಷ್ಟೊಂದು ಹೆಸರು ಮಾಡಿಬಿಟ್ಟ. ಅವನ ಆತ್ಮೀಯರೇ ಹೊಟ್ಟೆ ಉರಿದುಕೊಳ್ಳುವಷ್ಟು!

ಕೃಷ್ಣನ ಸಾವಿಂದ ತೆರವಾದ ಜಾಗವನ್ನು ಪ್ರದ್ಯುಮ್ನ ತುಂಬಬಲ್ಲನೆ? ಬಹಳ ಚುರುಕಾದ ಹುಡುಗ. ತುಂಬಿದರೂ ತುಂಬಾನು! ಇನ್ನೂ ಎತ್ತರಕ್ಕೆ ಏರಿದರೂ ಆಶ್ಚರ್ಯ ವಿಲ್ಲ. ಈ ಮಾತು ಫಕ್ಕನೆ ನನ್ನ ಲೇಖನಿಯಿಂದ ನಿರಾಯಾಸವಾಗಿ ಬಂದಿದೆ! ಯಾಕೆ ಬಂತೋ?....

ಶ್ರೀಕೃಷ್ಣ ಆಲನಹಳ್ಳಿ—ನಾನು ಕಂಡಂತೆ

ಸುಧಾಕರ

ಶ್ರೀಕೃಷ್ಣ ಆಲನಹಳ್ಳಿ ಕನ್ನಡದ ಒಬ್ಬ ಪ್ರತಿಭಾವಂತ ಸಾಹಿತಿ ಎನ್ನುವುದು ಅವರ ಕಥೆಗಳಿಂದ, ಕಾದಂಬರಿಗಳಿಂದ ಹಾಗೂ ಕಾವ್ಯದಿಂದ ಯಾರಿಗಾದರೂ ವೇದ್ಯವಾಗುವಂಥದು. ಗ್ರಾಮೀಣ ಬದುಕನ್ನು ಆ ಪರಿಸರದ ಹೊಕ್ಕುಳಬಳ್ಳಿ ಸಂಬಂಧವುಳ್ಳ ಭಾಷೆಯ ಮೂಲಕವೇ ಕಂಡರಿಸಿ ಕಲಾವಂತಿಕೆಯನ್ನು ಸ್ವೋಪಜ್ಞತೆಯನ್ನೂ ಸಾಬೀತುಪಡಿಸಿದರು ; ನಿಜವಾದ 'ಮಣ್ಣಿನವಾಸನೆ'ಯನ್ನು ಕೃತಿಗಳ ಮೂಲಕ ಹೊರಸೂಸುವಂತೆ ಮಾಡಿದವರು ; ಅನೇಕ ನವ್ಯರಂತೆ ಮಣ್ಣಿನವಾಸನೆಯನ್ನು ವೇದಿಕೆಯ ಭಾಷಣಗಳಲ್ಲಿ, ಸಿದ್ಧಾಂತದ ಘೋಷಣೆಗಳಲ್ಲಿ ಮಾತ್ರ ವಿರಮಿಸುವಂತೆ ಮಾಡದೆ, ಸೃಜನಕ್ರಿಯೆಯಲ್ಲಿ ವಿರಾಜಿಸುವಂತೆ ಮಾಡಿದವರು.

ನಾನು ಕಂಡ ಹಾಗೆ ಶ್ರೀಕೃಷ್ಣ ಆಲನಹಳ್ಳಿ ಅದಮ್ಯ ಉತ್ಸಾಹದ 'ಅಕ್ಷಯ ಪಾತ್ರೆ'. ಒಂದು ವಿಷಯ ಸೂಕ್ತವೆನ್ನಿಸಿ ತಲೆಹೊಕ್ಕರೆ ಹಿಂದೆಮುಂದೆ ನೋಡುವ, ಹಿಂದಲೇಟು ಹಾಕುವ ಜಾಯಮಾನ ಅವರದಲ್ಲ; ಮುನ್ನುಗ್ಗುವ, ಸಾಧಿಸುವ ಹುರುಪು ಹುಮ್ಮಸ್ಸು ಅವರದು. ಅಂಥ ಕೆಲಸದ ಸಾಧನೆಗೆ ಅನ್ಯರನ್ನು ಜೊತೆಗೆಳೆದುಕೊಳ್ಳುವ, ಸಮಯಬಿದ್ದರೆ ರೋಪು ಹಾಕುವ, ಮರುಗಳಿಗೆಯಲ್ಲೇ ಹೆಗಲ ಮೇಲೆ ಕೈ ಹಾಕಿ ಮುಗುಳುನಗುತ್ತಾ ಅವರ ಹೃದಯಗೆಲ್ಲುವ, ಅರಗಳಿಗೆಯಲ್ಲಿ ವಿರಸವನ್ನು ತೂರಿ ಸರಸವನ್ನು ರಾಶಿ ಮಾಡಿ "ರಾಶಿ ಪೂಜೆ"ಯ ಆನಂದದಲ್ಲಿ ಎಲ್ಲರೂ ಭಾಗಿಗಳಾಗುವಂತೆ ಮಾಡುವ ವಿಶಿಷ್ಟ ವ್ಯಕ್ತಿತ್ವ ಅವರದು.

ಸತ್ತ್ವವನ್ನು ಕಂಡಾಗ ಗುರುತಿಸುವ, ಸಂಬಂಧಪಟ್ಟವರನ್ನು ಕಂಡು ಸಂತೋಷ ಹಂಚಿಕೊಳ್ಳುವ, ಇತರರಿಗೂ ಅದರ ಮಹತ್ವವನ್ನು ಹೇಳಿ ಓದುವಂತೆ ಹುರಿದುಂಬಿಸುವ ಅವರ ಹೃದಯವಂತಿಕೆ ಅಪಾರವಾದದ್ದು; ಅನೇಕ ಲೇಖಕ ಹಾಗೂ ವಿಮರ್ಶಕರಲ್ಲಿ ದುರ್ಲಭವಾದದ್ದು. ನನ್ನ ಮತ್ತು ಅವರ ಮೊದಲನೆಯ ಭೇಟಿಯ ಘಟನೆ

ನೆನಪಾಗುತ್ತದೆ. ೧೯೬೩ ನೇ ಇಸವಿಯ ಫೆಬ್ರವರಿಯಲ್ಲಿ ಡಾ. ಬೆಸಗರಹಳ್ಳಿ ರಾಮಣ್ಣ ಹಾಗೂ ಶ್ರೀಕೃಷ್ಣ ಆಲನಹಳ್ಳಿಯವರು ನಾನು ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ ಮಂಡ್ಯ ಸರ್ಕಾರಿ ಕಾಲೇಜಿಗೆ ಬಂದರು. ಡಾ. ಬೆಸಗರಹಳ್ಳಿ ರಾಮಣ್ಣನವರು ಅವರನ್ನು ಪರಿಚಯ ಮಾಡಿಕೊಟ್ಟರು. "ಏನು ಬಂದದ್ದು ?" ಎಂದೆ—ಯಾವುದೋ ಕಾರ್ಯಾರ್ಥ ಬಂದಿದ್ದಾರೆ ಎಂದು ಡಾ. ಬೆಸಗರಹಳ್ಳಿ ರಾಮಣ್ಣನವರು ನಗುತ್ತಾ" ನಿಮಗೆ ಶುಭಾಶಯ ಹೇಳಿ ಸಂತೋಷ ಹಂಚಿಕೊಳ್ಳಲಿಕ್ಕೆ ಬಂದಿದ್ದಾರೆ" ಎಂದರು. ನನಗೆ ಅವರ ಮಾತಿನ ತಲೆಬಾಲ ಗೊತ್ತಾಗದೆ "ಯಾವುದಕ್ಕೆ?" ಎಂದೆ. "ಹೊರಲಾರದ ಹೊರೆ' ಹೊತ್ತು ತಂದು ಕನ್ನಡಿಗರಿಗೆ ಕೊಟ್ಟದ್ದಕ್ಕೆ" ಎಂದು ಇಬ್ಬರೂ ನಕ್ಕರು. ನಾನೂ ನಕ್ಕೆ—ಓ ಅದಕ್ಕಾ ಎಂದು. ೧೯೬೨ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ನನ್ನ 'ಹೊರಲಾರದ ಹೊರೆ' ಕಥೆಯನ್ನು ಓದಿ, ಖುಷಿ ಪಟ್ಟು, ಬರೆದ ನನ್ನನ್ನು ನೋಡಲು, ಸಂತೋಷ ಹಂಚಿಕೊಳ್ಳಲು ರಾಮಣ್ಣನವರೊಂದಿಗೆ ಬಂದಿದ್ದರು. "ಕನ್ನಡದ ಅಥವಾ ಪ್ರಪಂಚದ ಯಾವುದೇ ಭಾಷೆಯ ಅತ್ಯುತ್ತಮ ಕಥೆಗಳಲ್ಲಿ ಇದು ಒಂದು. ವಸ್ತು, ತಂತ್ರ, ಭಾಷೆ—ಕಿತ್ತರೂ ಬರದಂತೆ ಒಂದರೊಳಗೊಂದು ಕಲಾತ್ಮಕವಾಗಿ ಬೆಸೆದುಕೊಂಡಿರುವ ಮೋಡಿ ಮಹತ್ವದ ಸಿದ್ಧಿಗಳಲ್ಲೊಂದು" ಎಂದು ಹೇಳಿ ಅಷ್ಟಕ್ಕೇ ತೃಪ್ತಿಪಡದೆ "ಸುಜನಾ ಅವರಿಗೆ 'ನೀವು ಮೊದಲು ಈ ಕಥೆ ಓದಿ, ಮಣ್ಣಿನ ವಾಸನೆ ಅಡಿಗರ ಬಾಯಲ್ಲಿದೆಯೋ ಅಥವಾ ಸುಧಾಕರ್ ಕಥೆಯಲ್ಲಿದೆಯೋ ಅನ್ನೋದು ಗೊತ್ತಾಗ್ತದೆ' ಅಂತ ದೀಪಾವಳಿ ಸಂಚಿಕೇನಾ ಕೊಟ್ಟು ಬಂದಿದ್ದೇನೆ" ಎಂದು ಹೇಳಿ, ತಮ್ಮ ತುಂಟತನಕ್ಕೆ ತಾವೇ ನಗತೊಡಗಿದರು. ಅದಕ್ಕೆ ಕುಮ್ಮಕ್ಕಾಗಿ ಬೆಸಗರಹಳ್ಳಿ ರಾಮಣ್ಣನವರು "ಕನ್ನಡದಲ್ಲಿ ಇಂಥ ಕಥೆಯನ್ನು ಯಾರೂ ಬರೆದಿಲ್ಲ. ಮುಂದೆ ಯಾರಿಂದಲೂ ಬರೆಯಲು ಸಾಧ್ಯವಿಲ್ಲ. ಅಷ್ಟು ಅನನ್ಯ ಅತ್ಯುತ್ತಮ ಕಥೆ" ಎಂದರು. ನನ್ನನ್ನು ಬಹಳವಾಗಿ ಆಳವಾಗಿ ಅಲುಗಾಡಿಸಿದ್ದು ಎಂದರೆ ಮೈಸೂರಿನಿಂದ ಖರ್ಚುಟ್ಟು ಕೊಂಡು ನನ್ನ ಪರಿಚಯ ಮಾಡಿಕೊಳ್ಳಲು ಬಂದದ್ದು ; ಕಥೆಯ ಅದ್ಭುತ ಸಿದ್ಧಿಯ ಬಗ್ಗೆ ತನಗಾದ ಆನಂದವನ್ನು ಕತೆಗಾರನೊಡನೆ ಹಂಚಿಕೊಳ್ಳಲು ಬಂದದ್ದು. ಇದು ಶ್ರೀಕೃಷ್ಣ ಆಲನಹಳ್ಳಿಯವರ ಹೃದಯ ಶ್ರೀಮಂತಿಕೆಯ ಹೆಗ್ಗುರುತು. ಏಕೆಂದರೆ ಒಬ್ಬರ ಹೆಸರನ್ನು ಮುಂದು ಮಾಡಿದರೆ ನನ್ನ ಹೆಸರು ಮೂಲೆಗುಂಪಾಗುತ್ತದೆ ಎಂಬ ಸ್ವಾರ್ಥಪರಕ ದೃಷ್ಟಿಯಿಂದ 'ಶ್ರೀಮನ್ಮೌನ' ಆಚರಿಸುವ ಅನೇಕ ಲೇಖಕರನ್ನು ಕಂಡಾಗ ಆಲನಹಳ್ಳಿಯವರ ಮುಕ್ತಮನಸ್ಸಿನ ಬಗ್ಗೆ ಹೆಮ್ಮೆ ಮೂಡುತ್ತದೆ. ತಮ್ಮ ಗಾಡ್‌ಫಾದರ್ ಒಬ್ಬ ಲೇಖಕನ ಬಗ್ಗೆ ಒಂದು ಕೃತಿಯ ಬಗ್ಗೆ ಏನು ಹೇಳಿದ್ದಾರೋ ಅದನ್ನೇ ತಮ್ಮ ವಿಮರ್ಶೆಯಲ್ಲೂ ಗಿಳಿಪಾಠ ಒಪ್ಪಿಸುವ, ತಮ್ಮ ಗಾಡ್‌ಫಾದರ್ ಯಾರನ್ನು ಹೆಸರಿಸಿರುವುದಿಲ್ಲವೋ ಅವರ ಕೃತಿಗಳ ಬಗ್ಗೆ ಚಕಾರವೆತ್ತದ ವಿಮರ್ಶಕರ ಸ್ವೋಪಜ್ಞರಹಿತ ಧೋರಣೆಯನ್ನು ತುಪ್ಪಟಕ್ಕೆ ಸಮಾನವೆಂದು ಪರಿಗಣಿಸಿ ತನಗನ್ನಿಸಿದ್ದನ್ನು ಮುಕ್ತಕಂಠದಿಂದ ಹೇಳುತ್ತಿದ್ದ ಶ್ರೀಕೃಷ್ಣ ವಿರಳರಲ್ಲಿ ವಿರಳರು ಎಂದೇ ನನ್ನ ಭಾವನೆ. ಕೆಲವಾರು ತಿಂಗಳುಗಳ ಹಿಂದೆ ಹಿರಿಯ ಸಾಹಿತಿ ಚದುರಂಗರ ಮನೆಯಲ್ಲಿ ನಾವು ಸಂಧಿಸಿದ್ದಾಗ ಸು. ರಂ. ಎಕ್ಕುಂಡಿ ಅವರ ಕಾವ್ಯದ ಬಗ್ಗೆಯೂ ಮುಕ್ತಕಂಠದಿಂದ ಮೆಚ್ಚಿಕೆಯ ಮಾತಾಡುವಾಗ

ಸ್ವೋಪಜ್ಞತೆ ಎದ್ದು ಕಾಣುತ್ತಿತ್ತೇ ಹೊರತು, ಬೇರೆಯವರು ಹೀಗೆ ಹೇಳಿಲ್ಲ ನಾನು ಹೇಳುವುದು ಹೇಗೆ ಎಂದು ಕಣ್ಣು ಪಿಳಿಪಿಳಿಗುಟ್ಟಿಸುವ ವಿಮರ್ಶಕರಂತೆ ಒದ್ದಾಡಿದ್ದನ್ನು ಕಾಣಲಿಲ್ಲ.

ಶ್ರೀಕೃಷ್ಣ ಆಲನಹಳ್ಳಿ ಅವರಲ್ಲಿ ವಯೋಮಾನಕ್ಕೆ ಅನುಗುಣವಾದ ದುಡುಕುತನವೂ ಕೆಲವು ಸಾರಿ ಇಣುಕುತ್ತಿತ್ತು. ಆದರೆ ತಪ್ಪೆಂದು ತಿಳಿದ ಕೂಡಲೇ ತಪ್ಪನ್ನು ಒಪ್ಪಿಕೊಂಡು ಸ್ನೇಹವನ್ನು ಮೆರೆಯುತ್ತಿದ್ದರು. ಇದು ಅವರ ವಿಶಿಷ್ಟಗುಣ. ಏಕೆಂದರೆ ಅತ್ಯುತ್ಸಾಹದ ಭರದಲ್ಲಿ ಆದದ್ದಕ್ಕೆ ಮೊಂಡುಪಟ್ಟು ಹಿಡಿಯದೆ ತಿದ್ದಿಕೊಳ್ಳುತ್ತಿದ್ದುದ್ದು ನನ್ನ ಗಮನಕ್ಕೆ ಅನೇಕ ಬಾರಿ ಬಂದಿದೆ.

ಆದರೆ ಇತ್ತೀಚೆಗೆ ಮೊದಲಿನ ಹುಮ್ಮಸ್ಸು ಉತ್ಸಾಹ ಸ್ವಲ್ಪ ಇಳಿಮುಖವಾಯಿತೇನೋ ಎಂಬ ಭಾವ ಕಾಡಿದ್ದುಂಟು. ಬಹುಶಃ ಆಸೆ ಆಕಾಂಕ್ಷೆಗಳು ಈಡೇರುವ ಮಟ್ಟದಲ್ಲಿ ಈಡೇರದಿದ್ದಾಗ ಆಗುವ ನಿರಾಶೆಯ ಛಾಯೆಯನ್ನು ಅವರ ಮುಖದ ಮೇಲೆ ಕಂಡು ಆ ಬಗ್ಗೆ ಪ್ರಶ್ನಿಸಿದಾಗ ಆಗಲೂ "ಹೇ ಬಿಡಿ ಸರ್,....ಗುರುತಿಸೋರು ಹುಟ್ತಾರೆ, ಗುರುತಿಸ್ತಾರೆ....ಈ ಪಿಂಜ್ರಾಪೋಲುಗಳು (ಇದು ಅವರಿಗೆ ತುಂಬ ಪ್ರಿಯವಾದ ಶಬ್ದ) ಗುರುತಿಸಿದರೆಷ್ಟು ಬಿಟ್ಟರೆಷ್ಟು" ಎಂದು ಹಗುರವಾಗಿ ತೆಗೆದುಕೊಳ್ಳುತ್ತಿದ್ದರೇ ವಿನಾ ತಲೆ ಬಿಸಿ ಮಾಡಿಕೊಳ್ಳುತ್ತಿರಲಿಲ್ಲ. ಅಂದರೆ ಆತ್ಮವಿಶ್ವಾಸ ಅವರ ಉಸಿರಾಗಿತ್ತು.

ಅವರು ತೀರಿಕೊಳ್ಳುವುದಕ್ಕಿಂತ ಒಂದು ವಾರ ಮುಂಚಿತವಾಗಿ ಅಂದರೆ ಡಿಸೆಂಬರ್ ೨೯ರಂದು ಪುಸ್ತಕ ಪ್ರಪಂಚದ ಯಾವುದೋ ಲೇಖನಕ್ಕಾಗಿ ಕನ್ನಡ ಅಧ್ಯಯನ ಸಂಸ್ಥೆಗೆ ಬಂದವರು, ವಿಚಾರಿಸಿಕೊಂಡು ಹೊರಬರುತ್ತಿದ್ದರು. ನಾನು ಮನೆಗೆ ಊಟಕ್ಕೆ ಹೋಗಿದ್ದವನು ಅದೇ ವೇಳೆಗೆ ಬರುತ್ತಿದ್ದೆ ಅಧ್ಯಯನ ಸಂಸ್ಥೆಗೆ. ಆಗ ಅವರು ಮಾಮೂಲಿ ಗತ್ತಿನಲ್ಲಿ "ನಾವು ಸಂತೆ ವ್ಯಾಪಾರ ಮುಗಿಸಿ ಹೋಗ್ತಿದ್ದರೆ ನೀವು ಈಗ ಬರ್ತಾ ಇದ್ದೀರಿ" ಎಂದು ನಗೆಯಾಡಿದರು. ಹಿಂದಿನ ದಿನ ಪ್ರಜಾವಾಣಿಯಲ್ಲಿ ಬಂದ ನನ್ನ "ಸಂತೆ ಹಾದಿ" ಎಂಬ ಕಥೆಯನ್ನು ಓದಿ ಅದೇ ಪರಿಭಾಷೆಯಲ್ಲಿ ಹಾಸ್ಯ ಮಾಡುತ್ತಿದ್ದಾರೆ ಎಂದು ಭಾವಿಸಿದೆ ಆಗ. ಆದರೆ ಅನಿರೀಕ್ಷಿತವಾಗಿ ಅವರು ತೀರಿಕೊಂಡ ಸುದ್ದಿ ಕಿವಿಗೆ ಬಿದ್ದ ತಕ್ಷಣ ನನಗೆ ತಟ್ಟನೆ ನೆನಪಾದದ್ದು ಆಲನಹಳ್ಳಿ ಕೃಷ್ಣ ಅವರ ಕೊನೆಯ ಭೇಟಿಯ ಕೊನೆಯ ಮಾತು—"ನಾವು ಸಂತೆ ವ್ಯಾಪಾರ ಮುಗಿಸಿ ಹೋಗ್ತಿದ್ರೆ ನೀವು ಈಗ ಬರ್ತಾ ಇದ್ದೀರಿ" ಅಪ್ರಜ್ಞಾಪೂರ್ವಕವಾಗಿ (ಆಕಸ್ಮಿಕ ಅನ್ನಬಹುದು ಬುದ್ಧಿಜೀವಿಗಳು) ಆ ಮಾತು ಬಂದದ್ದನ್ನು ಮೆಲುಕು ಹಾಕಿದಂತೆಲ್ಲ, ನನ್ನ ಮೆಲುಕುಗಳು ಗಟ್ಟಿಕಾಯಿಸಿಕೊಳ್ಳುತ್ತವೆ—ಅಪೂರ್ವ ಸೃಜನಶೀಲ ಪ್ರತಿಭೆಯೊಂದು ಅಕಾಲದಲ್ಲಿ ಮರೆಯಾಗಿ ಕನ್ನಡಕ್ಕೆ ತುಂಬಲಾರದ ಕೊರತೆ ಉಂಟುಮಾಡಿತಲ್ಲ ಎಂದು.

ಶ್ರೀಕೃಷ್ಣ ಆಲನಹಳ್ಳಿ : ಮರೆಯಲಾಗದ ಕಲಾವಿದ

ಶಿವರಾಮು ಕಾಡನಕುಪ್ಪೆ

ಆಲನಹಳ್ಳಿ ಕೃಷ್ಣ ಸತ್ತುಹೋದ !

ಜನವರಿ ನಾಲ್ಕನೆ ತಾರೀಖು ಸಂಜೆ ಸೂರ್ಯಾಸ್ತವಾಗುವ ಸಮಯ. ಕೃಷ್ಣ ಎಂದಿನಂತೆ ಸ್ನೇಹಿತರ ಜೊತೆ ತಿರುಗಾಡಿ, ಸ್ನೇಹಿತರ ಮನೆ ಬಾಗಿಲಲ್ಲೇ ತೀರಿಕೊಂಡ. ಅವನಿಗೆ ರನ್ನನ ದುರ್ಯೋಧನ ತುಂಬ ಇಷ್ಟವಾದ ಪಾತ್ರ. ದುರ್ಯೋಧನ ಕೂಡ ಸೂರ್ಯಾಸ್ತ ಸಮಯ ದಲ್ಲೇ ಅಸ್ತಂಗತನಾದ. ಕೃಷ್ಣ ದುರ್ಯೋಧನನ ರೀತಿ ಸ್ನೇಹಜೀವಿ. ಸ್ನೇಹಿತರ ಜೊತೆ ಅವನಿಗೆ ಕಾವ್ಯಕನ್ನಿಕೆಯ ಸಂಗವಿದ್ದಂತೆ.

ಆದರೆ ಇಷ್ಟೆ : ದುರ್ಯೋಧನನ ಜೊತೆಗೆ ಕೃಷ್ಣನ ಹೋಲಿಕೆ! ಕೃಷ್ಣ ಆತನಂತೆ ಹಠಜೀವಿಯಲ್ಲ ; ಛಲಜೀವಿಯಲ್ಲ. ಜಗಳವಾಡು ತ್ತಿರುವಂತೆ ಕಂಡುಬಂದರೂ ದ್ವೇಷ ಅವನ ಬಳಿ ಸುಳಿಯುತ್ತಿರ ಲಿಲ್ಲ. ತನ್ನ ಸುತ್ತಲ ನೂರು ಜನರನ್ನು ಸದಾ ತನ್ನ ಮಾತಿನ ಮೋಡಿಯಲ್ಲಿ ಸೆಳೆದು ಮಾತಿನ ಗಸುಕಿ ಹೊಡೆಯುತ್ತಿದ್ದ. ಅವನು ಮಾತನಾಡುತ್ತಿದ್ದರೆ, ಬೇರೆಯವರು ಮಾತನಾಡುವಂತಿರ ಲಿಲ್ಲ. ಅವರ ದರ್ಬಾರಿನಲ್ಲಿ ಅವನೇ ರಾಜ, ಮಂತ್ರಿ, ವಿದೂಷಕ —ಎಲ್ಲಾ ಆಗಿಬಿಡುತ್ತಿದ್ದ. ಗೇಲಿ ಮಾಡುತ್ತಿದ್ದ, ನಗುತ್ತಿದ್ದ ; ಹಾಸ್ಯ ಮಾಡುತ್ತಿದ್ದ—ಬೇರೆಯವರನ್ನು ಅಳಿಸುತ್ತಿದ್ದ. ಆದರೆ ಗೇಲಿ ಮಾಡಿದವರನ್ನು, ಹಾಸ್ಯ ಮಾಡಿದವರನ್ನು ಮತ್ತೆ ಕ್ಷಣದಲ್ಲಿ ತಬ್ಬಿಕೊಳ್ಳುತ್ತಿದ್ದ.

೧೯೮೩ರ ಹೊಸತು. ಆಗತಾನೆ ಜನತಾ ಪಕ್ಷ ಅಧಿಕಾರಕ್ಕೆ ಬಂದಿತ್ತು. ತನ್ನ ಮನೆಗೆ ೧೦–೧೫ ಜನ ಸ್ನೇಹಿತರನ್ನು ಊಟಕ್ಕೆ ಕರೆದಿದ್ದ. ಅವನ ಸಗೆಯಂತೆಯೇ ತೀಕ್ಷ್ಣವಾದ ಸರಿಯಾದ ಸಸ್ಯಾ ಹಾರ. ಎಂ. ಪಿ. ಪ್ರಕಾಶ್ ಇದ್ದರು. ಕೃಷ್ಣ ಮಾತನಾಡಲು ಪ್ರಾರಂಭಿಸಿದ. ವಿಷಯಕ್ಕೆ ಹುಡುಕುತ್ತಿರಲಿಲ್ಲ. ತನ್ನ ಎದುರಿದ್ದ ಶಿವತೀರ್ಥನೇ ವಸ್ತು. ಶಿವತೀರ್ಥನ ಕಾವ್ಯಕ್ರಿಯೆಯ ಇತಿಹಾಸ ವನ್ನು ಅತ್ಯಂತ ವರ್ಣಮಯವಾಗಿ ಬಣ್ಣಿಸಿದ. ಗೇಲಿ ಮಾಡಿದ–

ಸ್ವಲ್ಪ ಅತಿಯಾಗುವ ಗೇಲಿ ಮಾಡಿದ. ಶಿವತೀರ್ಥ ಮುದುಡಿಹೋದ. ಸಪ್ಪಗಾದ. ಮಾತಿನ ವರಸೆಯಲ್ಲಿ ಶಿವತೀರ್ಥನ ಕಾವ್ಯಗುರು ಶ್ರೀರಾಮ, ವಿವೇಕಾನಂದ ಎಲ್ಲಾ ಬಂದರು, ಗೇಲಿಗೊಂಡರು. ರಾತ್ರಿ ೧೧ ಆದರೂ ಮಾತಿನ ಮಳೆ ನಿಲ್ಲುವ ಸೂಚನೆ ಕಂಡು ಬರಲಿಲ್ಲ. ಕೃಷ್ಣನ ಮನೆಯಲ್ಲಿ ಉಂಡವರು ನಕ್ಕರು, ನಕ್ಕರು.

ಎಲ್ಲರೂ ಹೊರಟು ನಿಂತಾಗ ಶಿವತೀರ್ಥ "ಏನಯ್ಯಾ ಮಿತ್ರ, ನನ್ನ ಮಾನ ಹಿಂಗೆ ತೆಗೆಯೋದೆ" ಅಂತ ಕೇಳಿದ. ಕೃಷ್ಣ ಜೋರಾಗಿ ನಕ್ಕ. ಶಿವತೀರ್ಥನನ್ನು ತಬ್ಬಿಕೊಂಡ. ಶಿವತೀರ್ಥ ಕರಗಿಹೋದ. ಈಗ ಶಿವತೀರ್ಥ ನೊಂದು ಹೋಗಿದ್ದಾನೆ, ಗೇಲಿಮಾಡುವ ಗೆಳೆಯರಿಲ್ಲವೆಂದು ಕಣ್ಣೀರು ಸುರಿಸುತ್ತಾನೆ.

ಗೇಲಿ ಮಾಡುವುದು ಕೃಷ್ಣನ ಹುಟ್ಟುಗುಣವೆಂದು ತೋರುತ್ತದೆ. ಅಂಥವರು, ಇಂಥವರು ಎನ್ನದೆ, ಅವನ ಗೇಲಿಗೆ ಎಲ್ಲರೂ ಗ್ರಾಸವಾಗುತ್ತಿದ್ದರು. ನಮ್ಮನ್ನು 'ಬಂಡಾಯನಂತೆ ಬಂಡಾಯ, ಏನ್ ಬಂಡಾಯ' ಎಂದೂ ಸಿದ್ಧಲಿಂಗಯ್ಯನ 'ಗುಡಿಸಲು ಗಳು ಗುಡುಗುತ್ತಿವೆ, ಮಹಲುಗಳು ನಡುಗುತ್ತಿವೆ'—ಜೋರಾಗಿ ಪದ್ಯವನ್ನು ಹೇಳಿ, 'ಎಲ್ಲಿ ತೋರ್ಸಿ ಮಹಲುಗಳು ಇದ್ದ ಹಾಗೆ ಇವೆ—ಆದರೆ ಗುಡಿಸಲುಗಳು ಮಾತ್ರ ಗಾಳಿಗೆ ತೂರಿ ಹೋಗ್ತಿವೆ' ಎನ್ನುತ್ತಿದ್ದ. ಆದರೆ ಅವನು ಮಾತ್ರ ಎಂದೂ ಪ್ರತಿಗಾಮಿಯಾಗಿರ ಲಿಲ್ಲ. ಅವನ ರಾಜಕೀಯ ವ್ಯಕ್ತಿತ್ವಕ್ಕೂ ಅವನ ಆಂತರ್ಯಕ್ಕೂ ಯಾವತ್ತೂ ಸಂಬಂಧವಿರಲಿಲ್ಲ.

ಆಶ್ಚರ್ಯವಾಗುತ್ತದೆ! ಕೃಷ್ಣನಂಥ ಲೇಖಕ ಕಾಂಗ್ರೆಸ್ಸಿನಲ್ಲಿದ್ದ ಎಂದರೆ. ಆದರೆ ಅದು ಸತ್ಯವಾಗಿತ್ತು. ಅದರಿಂದ ಅವನಿಗೆ ವೈಯಕ್ತಿಕವಾಗಿ ಎಷ್ಟು ಲಾಭವಾಯಿತು ಎಂಬುದು ನನಗೆ ಗೊತ್ತಿಲ್ಲ. ಆದರೆ ನಾವು ಗಮನಿಸಬೇಕಾದ್ದು ಅಂದರೆ, ಅವನು ತನ್ನಲ್ಲಿರುವ ಕಲಾವಿದನನ್ನು ಎಂದೂ ಸಾಯಿಸಕೊಡಲಿಲ್ಲ. ಅವನು ಕಾಂಗ್ರೆಸ್ಸಿಗನೆಂದು ಗೊತ್ತಿದ್ದರೂ ಎಲ್ಲಾ ಪಕ್ಷದವರು ಅವನನ್ನು ಪ್ರೀತಿಸುತ್ತಿದ್ದರು ; ಎಲ್ಲ ಪಕ್ಷದವರನ್ನು ಮಾತನಾಡಿಸುತ್ತಿದ್ದ. ಅಷ್ಟೇ ಅಲ್ಲ ಅವನಿಗೆ—ಅವನ ಮಾತಿನ ಮೋಡಿಗೆ—ಮರಗಿಡ ಕಲ್ಲುಗಳನ್ನು ಮಾತನಾಡಿಸುವ ಶಕ್ತಿಯಿತ್ತು.

ಅವನು ಮಾತನಾಡಿದ. ಎಷ್ಟು ಮಾತನಾಡಿರಬಹುದು? ಬಹುಶಃ ಅವನು ಎಂಬತ್ತು ವರ್ಷಗಳು ಬದುಕಿದ್ದರೆ ಎಷ್ಟು ಮಾತನಾಡಬಹುದಾಗಿತ್ತೋ ಅಷ್ಟನ್ನು ಕೇವಲ ೪೦–೪೪ ವರ್ಷಗಳಲ್ಲೇ ಮಾತನಾಡಿಬಿಟ್ಟ, ತನ್ನ ಶಕ್ತಿಯನ್ನು ಮಾತಿನಲ್ಲಿ ತೋರಿಸಿ ಬಿಟ್ಟ. ಅವನ ಶಬ್ದ ಸಂಪತ್ತು ಮೈಸೂರಿನ ಗ್ರಾಮ್ಯವೆ. ಅವನು ಶಿಷ್ಟತೆಯನ್ನು ಎಂದೂ ಎಳೆತಂದವನಲ್ಲ.

ಬದ್ಧತೆಯ ಮಾತು ಬಂದರೆ, ಅವನಿಗೆ ಬದ್ಧತೆಯಿರಲಿಲ್ಲ. ಆ ಕಾರಣದಿಂದಲೇ ಅವನು ಎಲ್ಲ ಕಡೆ ಇರಲು ಸಾಧ್ಯವಿತ್ತು. ಅವರು ರಾಜಕಾರಣಿಗಳಾಗಲಿ, ಸಿನಿಮಾದವ ರಾಗಲಿ, ಸಾಹಿತಿಗಳಾಗಲಿ—ಎಲ್ಲರೂ ಅವನ ಸ್ನೇಹಿತರಾಗುತ್ತಿದ್ದರು. ಅವನ ಬರವಣಿಗೆಯ ಪ್ರಾರಂಭದ ದಿನಗಳಲ್ಲಿ ಸಮಾಜವಾದಿಗಳ ಒಡನಾಡ ಅವನಿಗಿದ್ದರೂ, ಅವನು ಸಮಾಜವಾದದ ಬಗ್ಗೆ ಒಲವನ್ನು ಬೆಳೆಸಿಕೊಳ್ಳಲಿಲ್ಲ. ಯಾವುದೇ ಸಂಘಟನೆ ಯಲ್ಲೂ ಅವನು ಇರಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಅವನ ಮುಖದ ನೇರಕ್ಕೆ ಮಾತನಾಡುವ ಧೋರಣೆ.

ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಪ್ರಾರಂಭವಾದಾಗ ಅದು ಲಿಂಗಾಯ್ತರ ಸಂಘಟನೆ ಎಂದು ಸಭೆಯಲ್ಲೇ ಗೇಲಿ ಮಾಡಿ ಹೊರ ಬಂದ. ಅವನ ಟೀಕೆ ಸರಿ ಇರಲಿಲ್ಲ. ಆ ಸಂಘಟನೆಯಲ್ಲಿದ್ದವರು ಯಾರೂ ಜಾತಿವಾದಿಗಳಾಗಿರಲಿಲ್ಲ. ಇಂದಿಗೂ ಅವರು ಜಾತಿವಾದಿಗಳಾಗಿ ಮಾರ್ಪಟ್ಟಿಲ್ಲ. ಆದರೆ ಕೃಷ್ಣನಿಗೆ ಅನ್ನಿಸಿದ್ದನ್ನು ಹೇಳುವ ಆತುರ. ಆ ಸಂಘಟನೆಯಲ್ಲಿ ಇದ್ದವರೆಲ್ಲರೂ ಅವನ ಕೊನೆಯವರೆಗೂ ಸ್ನೇಹಿತರಾಗೇ ಇದ್ದರು.

ಕೃಷ್ಣ ಎಲ್ಲ ಕಡೆ ಇದ್ದರೂ ಅವನು ಮೈಸೂರಿನ ಯಾವುದೇ ಪ್ರಗತಿಪರ ಸಂಘಟನೆ ಜೊತೆ ತನ್ನನ್ನು ಗುರುತಿಸಿಕೊಂಡಿರಲಿಲ್ಲ. ಕಾರ್ಯಕ್ರಮಗಳಲ್ಲಿ ಅಪರೂಪಕ್ಕೊಮ್ಮೆ ಬರುತ್ತಿದ್ದ. ಆದರೆ ಅವನಿಗೆ ಸಂಘಟನೆಗಳನ್ನು ಕಟ್ಟುವ ಶಕ್ತಿಯಿತ್ತು; ಕಾರ್ಯಕ್ರಮಗಳನ್ನು ರೂಪಿಸುವ ಛಾತಿಯಿತ್ತು. ಅವನು ವಿಶ್ವಕನ್ನಡ ಮೇಳ, ದಸರಾ ಕವಿ ಸಮ್ಮೇಳನ ಅಥವಾ ಚಲನ ಚಿತ್ರೋತ್ಸವಗಳನ್ನು ಸಂತೆಗಳಂತೆ ರೂಪಿಸಿ ತನ್ನ ಶಕ್ತಿಯನ್ನು ವ್ಯಯಮಾಡುತ್ತಿದ್ದ. ಆದರೆ ಪತ್ರಕರ್ತ ಲಂಕೇಶ್ ತನ್ನ ಇಡೀ ಬದುಕಿನಲ್ಲಿ ನೆನಪಿಟ್ಟುಕೊಳ್ಳುವಂಥ 'ಪಾಂಚಾಲಿ'ಯನ್ನು ಸಂಪಾದನೆ ಮಾಡಿಕೊಟ್ಟ ಕೀರ್ತಿ ಕೃಷ್ಣನದು. ರಾಮರಾಯರಪ್ರೆಸ್ಸಿನಲ್ಲಿ ಕುಳಿತು ಹಗಲು–ರಾತ್ರಿ ಅವನು ದುಡಿದ ಚಿತ್ರ ಇನ್ನೂ ನನ್ನ ಕಣ್ಣು ಮುಂದೆ ಇದೆ. 'ಪಾಂಚಾಲಿ' ಅತ್ಯುತ್ತಮ ಸಾಹಿತ್ಯ ಸಂಚಿಕೆಯಾಗಬೇಕೆಂದು ಕನಸು ಕಂಡಿದ್ದ; ಅದು ಹಾಗೇ ಆಯ್ತು.

ಕೃಷ್ಣನ ಮಾತುಗಳಲ್ಲಿ ಅಹಂಕಾರ ಎದ್ದು ಕಾಣುತ್ತಿತ್ತೆ? ಕೃಷ್ಣ ಬದುಕಿದ್ದಾಗ ಈ ವಿಷಯ ಕುರಿತು ಯೋಚನೆ ಮಾಡುವ 'ದೂರ' ಸಾಧ್ಯವಾಗದೆ ಹೋಗುತ್ತಿತ್ತು. ಅವನು ಸಾಹಿತ್ಯ ವಿದ್ಯಾರ್ಥಿಯಾಗಿ ಯಾರನ್ನೂ ಅಷ್ಟಾಗಿ ಗೌರವಿಸುತ್ತಿರಲಿಲ್ಲ. ಎಲ್ಲರನ್ನೂ ಅತ್ಯಂತ ತಾತ್ಸಾರದಿಂದ ಕಾಣುತ್ತಿದ್ದ. 'ಕನ್ನಡ ಸಾಹಿತ್ಯದಲ್ಲಿ ಪಂಪನಿಂದ ಕುವೆಂಪುವರೆಗೆ'—ಎಂಬುದು ಮೊದಮೊದಲು ಅವನಿಗೆ ಪ್ರಿಯವಾದ ಮಾತಾಗಿತ್ತು. ತರಗತಿಗಳಲ್ಲಿ ಸಾಹಿತ್ಯ ಚರಿತ್ರೆ ಪಾಠ ಮಾಡುವಾಗ ಹೀಗೆ ಹೇಳುತ್ತಿದ್ದನಂತೆ. ಕೃಷ್ಣನ 'ಕಾಡು' ಚಲನಚಿತ್ರವಾಗಿ ಜನಪ್ರಿಯವಾದ ಮೇಲೆ, 'ಭುಜಂಗಯ್ಯ....' ಪ್ರಕಟವಾದ ಮೇಲೆ 'ಕನ್ನಡ ಸಾಹಿತ್ಯದಲ್ಲಿ ಪಂಪನಿಂದ ಕುವೆಂಪುವರೆಗೆ' ಎಂಬ ವಾಕ್ಯವನ್ನು ಸ್ವಲ್ಪ ಬದಲಿಸಿದ್ದ. 'ಕನ್ನಡ ಸಾಹಿತ್ಯದಲ್ಲಿ ಪಂಪನಿಂದ ಕೃಷ್ಣ ಆಲನಹಳ್ಳಿವರೆಗೆ' ಎಂದು ಜೋರಾಗಿ ನಗುತ್ತಿದ್ದ. ನಾವೂ ನಗುತ್ತಿದ್ದೆವು.

ಅವನು ಜಿಪುಣನೆಂದು ಲಂಕೇಶ್ ಕರೆಯುತ್ತಾರೆ. ಆದರೆ ಅವನು ಜಿಪುಣನಲ್ಲ. ಸ್ನೇಹಿತರಿಗೆ, ಅರ್ಹರಿಗೆ ಸಹಾಯ ಮಾಡುತ್ತಿದ್ದ. ಅನೇಕ ವಿದ್ಯಾರ್ಥಿಗಳಿಗೆ ತಿಂಡಿ ಕಾಫಿ ಕೊಡಿಸಿ ಗಂಟೆಗಟ್ಟಲೆ ಸಾಹಿತ್ಯದ ಬಗ್ಗೆ ಸಾಹಿತಿಗಳ ಬಗ್ಗೆ ಹೇಳುತ್ತಿದ್ದ, ಮೈಸೂರಿಗೆ ಬರುವ ಸಾಹಿತಿಗಳನ್ನು ಮನೆಗೆ ಕರೆದು ಔತಣ ಕೊಡುತ್ತಿದ್ದ; ಬಾರಿಗೆ ಕರೆದುಕೊಂಡು ಹೋಗಿ ಬೀರು ಕುಡಿಸುತ್ತಿದ್ದ. ಅವನಲ್ಲಿ ಜಿಪುಣತನವಿದ್ದಲ್ಲಿ ಅವನಲ್ಲಿ ಹಾಸ್ಯಪ್ರಜ್ಞೆಯೇ ಇರುತ್ತಿರಲಿಲ್ಲ. ಸುತ್ತಲ ಪರಿಸರವನ್ನು ನಗೆಯ ಹಸಿರಲ್ಲಿ ವಿಹಾಯಿಸುತ್ತಿದ್ದ ಕೃಷ್ಣ, ಕೆಲವರ ಬಳಿ ಹಣ ಈಸಿಕೊಂಡು ಕೊಡುತ್ತಿರಲಿಲ್ಲ ಎಂಬ ಮಾತಿದೆ. ಆದರೆ ಬಡವರ ಬಳಿ ಎಂದೂ ಹೀಗೆ ಮಾಡಿದವನಲ್ಲ. ಉಳ್ಳವರ ಬಳಿ ಹೀಗೆ ನಡೆದುಕೊಂಡಿದ್ದಾನೆ.

'ಆ ಕಳ್ಳನ ಮಗನಿಗೆ ಯಾಕೆ ಕೊಡ್ಬೇಕು' ಎಂದು ಹೇಳುತ್ತಿದ್ದ ಮಾತಿನಲ್ಲಿ ಒಂದು ಬಗೆಯ ಸಾಮಾಜಿಕ ನ್ಯಾಯ ಕೇಳುವ ಧೋರಣೆ ಇರುತ್ತಿತ್ತು.

ಕಾವ್ಯ ಅವನ ಪ್ರಿಯ ಕನ್ನಿಕೆ. ಗದ್ಯ ಅನಂತರದ್ದು. ಕಾವ್ಯ ಬರೆಯುವುದರ ಮೂಲಕ ಕವಿಯಾಗಿ ಅರಳಿದ ಆಲನಹಳ್ಳಿಯ ಮುಗ್ಧ ಹುಡುಗ, ಕಾದಂಬರಿಕಾರನಾಗಿ ಬೆಳೆದ. ಅವನು ಬದುಕಿದ್ದರೆ ಇನ್ನೂ ಒಳ್ಳೆಯ ಕಾದಂಬರಿಗಳನ್ನು ಬರೆಯುತ್ತಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ ಅವನ ಲೇಖನಿಯಿಂದ ಒಳ್ಳೆಯ ಗದ್ಯ ಬಂದಿತ್ತು. ಮುಂದೆ ಅವನು ಬರೆದಿದ್ದರೆ ಬಹುಶಃ ಅವರ ಮುಂದುವರಿದ ಮಜಲೇ ಆಗುತ್ತಿತ್ತು. ಕೃಷ್ಣ ಖುಷಿ ಕೊಡುವ ಕವನ ಬರೆಯುತ್ತಿದ್ದನೇ ಹೊರತು, ಶ್ರೇಷ್ಠ ಕವನಗಳನಲ್ಲ. ಈ ಕಾರಣದಿಂದಲೇ ಬೇಂದ್ರೆ ಅವನ ಆದರ್ಶದ ಕವಿ. ಆದರೆ ಅವನ ಆದರ್ಶದ ಕಾದಂಬರಿ ಕಾರ ಕುವೆಂಪು ಅವನನ್ನು ಹೆಚ್ಚು ಕಾಡಿರಬೇಕು. ಮಲೆನಾಡ ಬದುಕನ್ನು ಅತ್ಯಂತ ವಿಸ್ಮಯದಿಂದ ಮುಗ್ಧತನದಿಂದ ಕೃಷ್ಣ ಅಲ್ಲಿ ಕಂಡಿದ್ದಾನೆ. ಕೃಷ್ಣನ ಗದ್ಯದಲ್ಲಿ ಅದು ದಟ್ಟವಾಗಿ ಕಾಡುತ್ತದೆ. ಕೃಷ್ಣ ಪಿ. ಎಚ್‌ಡಿ., ಮಾಡಲು ಕುವೆಂಪು ಕಾದಂಬರಿಗಳನ್ನೇ ಆರಿಸಿಕೊಂಡ. ಆದರೆ ಕನಿಷ್ಠ ಶಿಸ್ತನ್ನು ಕೂಡ ಒಪ್ಪಿಕೊಳ್ಳಲು ತಯಾರಿಲ್ಲದ ಕೃಷ್ಣನಿಂದ ಆ ಕೆಲಸ ಆಗಲೇ ಇಲ್ಲ.

ಕಿಟ್ಟುವಾಗಲಿ, ಗೆಂಡೆತಿಮ್ಮನಾಗಲಿ ಅಥವಾ ಭುಜಂಗಯ್ಯನಾಗಲಿ ಕೃಷ್ಣ ಪ್ರೀತಿಸಿದ ಮುಗ್ಧ ವ್ಯಕ್ತಿಗಳು. ಅವನ ಕಾದಂಬರಿಗಳಲ್ಲಿ ಕೆಟ್ಟವರು ಅಂದರೆ ಪರಿಸರವೆ. 'ಕಾಡು'ವಿನ ಕಲಾವಿದ ಕೃಷ್ಣನಿಗೂ ಮುಂದಿನ ಕಾದಂಬರಿಗಳ ಲೇಖಕ ಕೃಷ್ಣನಿಗೂ ಸ್ವಲ್ಪ ವ್ಯತ್ಯಾಸವಿದೆ. ಕಲಾವಿದ ವಿಚಾರವಾದಿಯಾದ ನಂತರ ಕಾದಂಬರಿಯ ಧ್ವನಿಯಲ್ಲಿ ದೊಡ್ಡ ಮಾರ್ಪಾಡನ್ನು ಗುರುತಿಸಬಹುದು. ಈ ದೃಷ್ಟಿಯಿಂದ ಕನ್ನಡ ಕಾದಂಬರಿ ಲೋಕದಲ್ಲಿ 'ಕಾಡು'ವಿಗೆ ಬಹುದೊಡ್ಡ ಸ್ಥಾನವಿದೆ. 'ಭುಜಂಗಯ್ಯ'ನಲ್ಲಿ ಲೇಖಕ ಸಂತನಾಗ ಹೊರಟಿರುವುದನ್ನು ಗುರುತಿಸಬಹುದು. ಹರಿಹರನ ರಗಳೆಯ ಶರಣರಂತೆ ಶೀರಾ ಉದಾತ್ತ ವ್ಯಕ್ತಿತ್ವವನ್ನು ಭುಜಂಗಯ್ಯನಲ್ಲಿ ಗುರುತಿಸಬಹುದು. ಕಲಾವಿದ ಕೃಷ್ಣನಲ್ಲಾದ ಬದಲಾವಣೆಯಿದು. ಆದರೆ ಕೃಷ್ಣನ ಮೂಲ ದೃಷ್ಟಿಯಾದ ಮುಗ್ಧತೆ ಮತ್ತು ವಿಸ್ಮಯತೆಗಳು ಮಾತ್ರ ಏಕನಾದನಂತೆ ಅವನ ಗದ್ಯದ ಅಂತರ್ ಮಿಡಿತವಾಗಿ ಹರಿದಿವೆ. ಕೃಷ್ಣನ ಕಾದಂಬರಿಗಳ ಜನಪ್ರಿಯತೆಗೆ ಮತ್ತೊಂದು ಮಾಂತ್ರಿಕತೆ ಅವನ ಮೋಹಕ ಶೈಲಿ. ಶೈಲಿಗೂ ದೃಷ್ಟಿಗೂ ಅಂತರವನ್ನು ಗುರುತಿಸಲಾಗದ ಹಾಗೆ ಬೆಸೆದು ಕೃತಿ ನಿರ್ಮಾಣ ಮಾಡಿದ್ದಾನೆ, ಕಲಾವಿದ ಕೃಷ್ಣ. ಈ ಅಂಶವೇ ಅವನ ಗದ್ಯಕ್ಕೆ ಪದ್ಯದ ಲಯವನ್ನು ತಂದುಕೊಟ್ಟಿತ್ತು. ಅವನು ಒಳ್ಳೆಯ ಕವಿಯಾಗುವುದರ ಬದಲು ಒಳ್ಳೆಯ ಗದ್ಯಕವಿಯನ್ನಾಗಿಸಿತ್ತು. ಅವನ ಬರವಣಿಗೆಗೆ ಕವನದಂಥ ಶೀರಾ ವ್ಯಕ್ತಿನಿಷ್ಠ ಮಾಧ್ಯಮಕ್ಕಿಂತ, ವಿಸ್ತಾರವೂ ಹೆಚ್ಚು ಸ್ವತಂತ್ರವೂ ಆದ ಗದ್ಯ ಬೇಕಾಯಿತು. ಇಲ್ಲೇ ನಮಗೆ ಕೃಷ್ಣ ಸ್ಪಷ್ಟ ಎದ್ದು ನಿಂತು, ಆಧುನಿಕ ಕನ್ನಡ ಸಾಹಿತ್ಯದಲ್ಲಿ ತನ್ನ ವ್ಯಕ್ತಿತ್ವ ವನ್ನು ಛಾಪಿಸಿರುವುದು.

ಕೃಷ್ಣ ತನ್ನ ಬಗ್ಗೆ, ತನ್ನ ಕಷ್ಟಕಾರ್ಪಣ್ಯಗಳ ಬಗ್ಗೆ ಎಂದೂ ಹೇಳಿಕೊಂಡವನಲ್ಲ. ಅಥವಾ ಅದಕ್ಕೆ ತಕ್ಕ ಪರಿಸರ ಅವನಿರುವ ತಾಣ ಸೃಷ್ಟಿಮಾಡುತ್ತಿರಲಿಲ್ಲವೇನೋ. ೧೯೮೬ರ ಪ್ರಾರಂಭದಲ್ಲಿ ನಾನು ಕಾಸರಗೋಡಿಗೆ ಹೋಗಿ, ಮಂಗಳೂರಿನಿಂದ ಬಸ್ಸಿನಲ್ಲಿ

ಹಿಂತಿರುಗುತ್ತಿದ್ದೆ. ಬಸ್ಸಿನಲ್ಲಿ ಕೃಷ್ಣ ಸಿಕ್ಕಿದ. ನಾನು ಕಂಡ ತಕ್ಷಣ ನಿಧಿ ಸಿಕ್ಕಿದಂತೆ ಕರೆದು ಪಕ್ಕ ಜಾಗ ಮಾಡಿ ಕೂರಿಸಿಕೊಂಡ. ರಾತ್ರಿಯ ಕತ್ತಲನ್ನು ಸೀಳಿ ನುಗ್ಗುವ ಬಸ್ಸಿನಲ್ಲಿ ಕೃಷ್ಣನ ಮಾತೇ ಮೌನಭಂಗ. ಪ್ರತಿ ಊರಿನಲ್ಲಿ ಬಸ್ಸು ನಿಂತಾಗ ಕೆಳಗಿಳಿದು, ಟೀ ಅನ್ನೋ ಎಳನೀರನ್ನೋ ಕುಡಿಯುತ್ತಿದ್ದೆವು. ಕೃಷ್ಣ ಇಡೀ ರಾತ್ರಿ ಮಾತನಾಡಿದ.... ತನ್ನ ಬಗ್ಗೆ, ಊರಿನ ಬಗ್ಗೆ, ಅವ್ವನ ಬಗ್ಗೆ, ಗೆಳೆಯರ ಬಗ್ಗೆ, ತನ್ನ ಮಕ್ಕಳ ಬಗ್ಗೆ, ಅದರಲ್ಲೂ ತನ್ನ ಮಗ ಪ್ರದ್ಯುಮ್ನನ ಬಗ್ಗೆ. ಮಗಳು ಆಗ ಇನ್ನೂ ಮಗು. ಮಗನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಮೋಹ.

ಅವನು ಸತ್ತಾಗ ಯಾರೂ ನಂಬಲಿಲ್ಲ. ಏಕೆಂದರೆ ಅದು ಸಾಯುವ ವಯಸ್ಸಲ್ಲ. ೪೪ ಎಂಥವರೂ ಸಾಯಬಾರದ ವಯಸ್ಸು. ಆದರೆ ಅವನು ಸತ್ತ. ಅವನ ಶವದ ಬಳಿ ಅವನ ಮಗನ ಆಕ್ರಂದನ, ಅವರ ತಾಯಿಯ ರೋದನ ಮನಕರಗಿಸುತ್ತಿತ್ತು ಅನ್ನುವ ಮಾತು ಬರೀ ಮಾತು. ಅವನ ತಾಯಿ 'ತಾನಾದರೂ ಸತ್ತು ತನ್ನ ಮಗನಾದರೂ ಉಳಿದಿರಬೇಕಿತ್ತು' ಎಂದು ಗೋಳಾಡಿದ ದೃಶ್ಯ ನಾನಂತು ಮರೆಯಲಾರೆ.

ಸಾವು ಬಂದಾಗ ಯಾರೂ ತಡೆಯಲಾರರು ಎಂಬ ಮಾತನ್ನು ನಾನು ಒಪ್ಪಲಾರೆ. ಕೆಲವೇಳೆ ಸಾವನ್ನು ನಮಗರಿಯದೆಯೇ ನಾವೇ ಸ್ವಾಗತಿಸುತ್ತೇವೆ. ಕೃಷ್ಣ ತನಗರಿಯದೆಯೇ ಸಾವನ್ನು ಸ್ವಾಗತಿಸಿದ್ದ. ಅವನಿಗೆ ಜಗತ್ತಿನ ಬಗೆಗಿದ್ದ ತಾತ್ಸಾರ ಮನೋಧರ್ಮ ಅವನಿಗರಿವಿಲ್ಲದಂತೆ ಅವನನ್ನೂ ಆಕ್ರಮಿಸಿಕೊಂಡಿತ್ತು. ತನ್ನ ಬಗ್ಗೆ ತನ್ನ ಆರೋಗ್ಯದ ಬಗ್ಗೆ ಎಂದೂ ಶಿಸ್ತಿನಿಂದ ಅವನು ನಡೆದುಕೊಂಡವನಲ್ಲ. ಈ ತಾತ್ಸಾರ ಮತ್ತು ಅಶಿಸ್ತು. ಅವನನ್ನೇ ಬಲಿ ತೆಗೆದುಕೊಂಡವು. ವೈದ್ಯರು ಹೇಳಿದಂತೆ ಶಿಸ್ತಿನಿಂದ ನಡೆದಿದ್ದರೆ ಅವನು ಇನ್ನೂ ಹತ್ತಾರು ವರ್ಷ ಬದುಕಬಹುದಿತ್ತು.

ಅವನು ಸಾಯುವ ಮುನ್ನ, ಡಿಸೆಂಬರ್ ೩೦ ರಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ವಜ್ರಮಹೋತ್ಸವ ಸಂದರ್ಭದಲ್ಲಿ ಜರುಗಿದ ಕವಿ ಸಮ್ಮೇಳನ ಸಂದರ್ಭದಲ್ಲಿ ಸಿಕ್ಕಿದ್ದ. ಕವಿ ಸಮ್ಮೇಳನ ಇನ್ನೂ ಆರಂಭವಾಗಿರಲಿಲ್ಲ. ಮಾನವಿಕ ಸಭಾಂಗಣದ ಹೊರಗೆ ನಾವು ನಾಲ್ಕೈದು ಜನ ಗೆಳೆಯರು ಮಾತನಾಡುತ್ತ ನಿಂತಿದ್ದೆವು. ಕೃಷ್ಣ ಬಳಲಿದ್ದ. ನಿದ್ದೆ ಮಾಡಿ ಎದ್ದು ಬಂದವನಂತೆ ಕಂಡ. ನಾನು ಒಳ್ಳೆಯ ಪದ್ಯವನ್ನು ಓದುವಂತೆ ಹೇಳಿದೆ. "ಒಳ್ಳೇ ಪದ್ಯ ಅರ್ಥಮಾಡಿಕೊಳ್ಳುವ ಆಡಿಯನ್ಸ್ ಎಲ್ಲಿದ್ದಾರೋ" ಎಂದು ನನ್ನನ್ನೇ ಕೇಳಿದ. ಪ್ರೇಕ್ಷಕರ ಅಭಿರುಚಿಯನ್ನು ಬದಲಿಸಬೇಕು ಎಂದು ನಾನು ಒತ್ತಾಯಿಸಿದೆ: "ಆಯ್ತು, ಒಂದು ಸೀರಿಯಸ್ ಪದ್ಯ, ಒಂದೆರಡು ಪೋಲಿ ಪದ್ಯ ಓದುತ್ತೇನೆ" ಎಂದ. ಕವಿಗೋಷ್ಠಿಯಲ್ಲಿ 'ಅಜ್ಜ ಮಾಸ್ತಿ' ಪದ್ಯ ಓದಿದ. ಅದು ಮಾಸ್ತಿ ಅವರು ತೀರಿಕೊಂಡಾಗ ಬರೆದದ್ದು.

ಜನವರಿ ನಾಲ್ಕರ ಸಂಜೆ ಕೃಷ್ಣ ತೀರಿಹೋದ. ಇಂದಿಗೂ ಕೂಡ ಕೃಷ್ಣನನ್ನು ಭೂತಕಾಲದಲ್ಲಿಟ್ಟು ಮಾತನಾಡುವುದು ಅಥವಾ ಕಲ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಅವನ ಗೇಲಿ-ಮಾತು, ತುಂಟತನಗಳ ಹಿಂದಿದ್ದ ಮುಗ್ಧತೆ, ಹಳ್ಳಿ ಹುಡುಗನ ಮಣ್ಣಿನ ಗುಣ ನಮ್ಮ ಜೊತೆ ಸದಾ ಇರುತ್ತವೆ. ಅವನು ಬರೆದ ಮಣ್ಣಿನ ಹಾಡು ಹಳ್ಳಿಯಿಂದ ಬಂದ ಎಲ್ಲ ಹಳ್ಳಿ ಹೈಕಳ ಮಣ್ಣಿನ ಗುಣವನ್ನು ಹೇಳುತ್ತಿರುತ್ತದೆ.

ಶ್ರೀಕೃಷ್ಣ ಆಲನಹಳ್ಳಿಯ ನೆನಪು

ಪ್ರೊ|| ಕೆ. ಎಸ್. ಭಗವಾನ್

ಶ್ರೀಕೃಷ್ಣ ಆಲನಹಳ್ಳಿಯ ನಿಧನದಿಂದ ಕನ್ನಡ ಸಾಹಿತ್ಯಕ್ಕೆ ತುಂಬಲಾಗದ ನಷ್ಟವಾಗಿದೆ. "ತುಂಬಲಾಗದ ನಷ್ಟ" ಅನೇಕ ಸಂದರ್ಭಗಳಲ್ಲಿ ಸವಕಲು ಮಾತಾದರೂ ಕೃಷ್ಣನ ವಿಷಯದಲ್ಲಿ ಅದು ಸತ್ಯಕ್ಕಿಂತ ಹೆಚ್ಚಿನ ಸತ್ಯವಾಗಿದೆ.

ಕೃಷ್ಣ ಎಲ್ಲವನ್ನೂ ತೀವ್ರವಾಗಿ ಅನುಭವಿಸಬೇಕೆಂಬ ಜ್ವಲಂತ ಭಾವನೆಯಿದ್ದವನು. ಹಾಗೆಯೇ ಅವನು ಬಹುವಾಗಿ ಬರೆದ, ಸ್ವಲ್ಪವಾದರೂ ಬದುಕಿದ, ಕೊನೆಗೆ ಜ್ವಲಿಸಿ ಹೋದ.

ನನಗೂ ಕೃಷ್ಣನಿಗೂ ಇದ್ದ ಸ್ನೇಹ ಸರಸ–ವಿರಸಗಳ ಮಟ್ಟಿನದು. ಅದು ಸರಸಕ್ಕಿಂತ ಹೆಚ್ಚಾಗಿ ವಿರಸ ರೀತಿಯದು.

ನಾವು ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದಾಗ ಕೃಷ್ಣ ನನಗಿಂತ ಒಂದು ವರ್ಷ ಹಿಂದಿನ ತರಗತಿಯಲ್ಲಿ ಇದ್ದ. ಅವನು ವಿದ್ಯಾರ್ಥಿಯಾಗಿದ್ದಾಗಲೇ ಜನರ ಗಮನ ಸೆಳೆಯುವ ಶಕ್ತಿಯುಳ್ಳವನಾಗಿದ್ದನು.

ಹಳ್ಳಿಗಾಡಿನಿಂದ ಬಡತನದ ಕುಟುಂಬದಿಂದ ಬಂದ ಕೃಷ್ಣನ ಬಗ್ಗೆ ನನಗೆ ಆದರವಿತ್ತು, ಅಭಿಮಾನವಿತ್ತು. ನನ್ನ ಓರಗೆಯವರಲ್ಲಿ ಅನೇಕರಿಗೆ ಕವನ ಬರೆಯುವ ಗೀಳಿತ್ತು. ಆ ಗೀಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವ ಸಾಮರ್ಥ್ಯವಿದ್ದವನು ಕೃಷ್ಣ.

ನಾವು ಬರೆಯುತ್ತಿದ್ದ ಕವಿತೆಗಳನ್ನು ಲೇಖನಗಳನ್ನು ಓದಿ ತಿದ್ದಿ ಮಾರ್ಗದರ್ಶನ ಮಾಡುತ್ತಿದ್ದುದಲ್ಲದೆ ಸುಜನಾ ಅವರು ನಮಗೆ ಸಂಜೆ ಹೊತ್ತು ತಿಂಡಿ ಕಾಫಿ ಕೊಡಿಸುತ್ತಿದ್ದರು. ದುಡ್ಡು ಬೇಕೆಂದರೆ ತಮ್ಮ ಜುಬ್ಬದ ಜೇಬಿಗೆ ಕೈ ಹಾಕಿ ಕೈಗೆ ಬಂದಷ್ಟನ್ನು ಎಣಿಸದೆ ಕೊಟ್ಟುಬಿಡುತ್ತಿದ್ದರು. ಇಷ್ಟೇ ಅಲ್ಲೋ ರಾಜಾ ಎನ್ನುತ್ತಿದ್ದರು. ಕೃಷ್ಣನ ಬಗ್ಗೆ ಅವರಿಗಿದ್ದ ಪ್ರೀತಿ ವಾತ್ಸಲ್ಯ ಅಪೂರ್ವವಾದವು.

ಚರ್ಚಾಸ್ಪರ್ಧೆಗಳಲ್ಲಿ ಅವನು ನಿರ್ಭೀತನಾಗಿ ಮಾತನಾಡುತ್ತಿದ್ದ. ಅವನ ಸ್ಥೈರ್ಯ, ಮಾತುಗಾರಿಕೆ ಎಂಥವರನ್ನೂ ಮುಗ್ಧರನ್ನಾಗಿ ಮಾಡಿಸುತ್ತಿತ್ತು.

ಅವನು ವಿದ್ಯಾರ್ಥಿಯಾಗಿದ್ದಾಗಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಅವನ "ಮಣ್ಣಿನ ಹಾಡು" ಕವನ ಸಂಕಲನಕ್ಕೆ ಬಂತು. ಆಗ ನಮಗೆಲ್ಲ ತುಂಬ ಸಂತೋಷವಾಯಿತು. ಕೃಷ್ಣ ಅಖಿಲ ಕರ್ನಾಟಕ ಖ್ಯಾತಿಯ ಕವಿಯಾದನೆಂದು ಹಿಗ್ಗಿದೆವು.

ಹೀಗೆ ವಿದ್ಯಾರ್ಥಿಯಾಗಿದ್ದಾಗಲೇ ಅಪಾರ ಮನ್ನಣೆ ಮತ್ತು ಪ್ರಖ್ಯಾತಿಯನ್ನು ಗಳಿಸಿದ ಇನ್ನೊಬ್ಬ ಸಾಹಿತಿಯೆಂದರೆ ಕುವೆಂಪು. ಕನ್ನಡ ಇಲಾಖೆಯಲ್ಲಿ ಕುವೆಂಪು ನಂತರ ಬಂದ ದೊಡ್ಡ ಪ್ರತಿಭಾವಂತ ಕೃಷ್ಣನೆಂದು ನನಗನ್ನಿಸುತ್ತದೆ. ಈ ಮಾತುಗಳನ್ನು ನಾನು ಕೃಷ್ಣನಿಗೆ ಹೇಳಿದ್ದೆ. ಕೃಷ್ಣ ವಾಸ್ತವವಾಗಿ ಸಂತೋಷಪಟ್ಟ. ಆದರೆ ಆ ಪ್ರಶಸ್ತಿ ಪ್ರಖ್ಯಾತಿಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿ, ಕುವೆಂಪು ಅವರಿಗಿದ್ದಂತೆ, ಕೃಷ್ಣನಿಗೆ ಇಲ್ಲದೆ ಹೋದುದರಿಂದ ಅವನ ಬದುಕು ಬಹುಬೇಗ ಮಣ್ಣಾಯಿತೆಂದು ವಿಷಾದವಾಗುತ್ತದೆ.

ಎಂ. ಎ. ಮುಗಿಸಿದ ಮೇಲೆ ನಾವಿಬ್ಬರೂ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದೆವು. ನಾನು ಖಾಸಗಿ ಕಾಲೇಜಿನಲ್ಲಿದ್ದೆ, ಅವನು ಮಹಾರಾಜಾ ಕಾಲೇಜಿನಲ್ಲಿ ಇದ್ದ. ನಾವು ಆಗಾಗ ಸೇರುತ್ತಿದ್ದೆವು. ಸಿಕ್ಕಿದ ಕಡೆ ಕೃಷ್ಣ ತನ್ನ ಹೊಸ ಕವಿತೆಯನ್ನು ತನ್ನೆಲ್ಲ ಹಾವಭಾವಗಳಿಂದ, ಕವಿತೆಯೆ ಜೀವಂತರೂಪ ಪಡೆದಂತೆ, ಓದುತ್ತಿದ್ದ. ಒಮ್ಮೊಮ್ಮೆ ಇವನ ಕೈಗೆ ಯಾಕಾದರೂ ಸಿಕ್ಕಿದೆನಪ್ಪ ಅನ್ನುವಂತಾಗುತ್ತಿತ್ತು. ಯಾಕೆಂದರೆ ಬೇರೆ ಕೆಲಸವಿದೆ ಎಂದರೂ ಬಿಡದೆ ಕೇಳೋ ಎಂದು ಹಿಡಿದು ನಿಲ್ಲಿಸುತ್ತಿದ್ದ. ಕಾವ್ಯಪ್ರೇಮ ದಿನವೆಲ್ಲ ಇರುವಂಥದಲ್ಲವಲ್ಲ!

ಕೃಷ್ಣನನ್ನು ಕುರಿತು ಬರೆಯುವಾಗ ಪ್ರತಿಕ್ರಿಯಾ ರೂಪದ ಬರವಣಿಗೆ ಎಷ್ಟೇ ಬೇಡವೆಂದರೂ, ನನ್ನ ಮಟ್ಟಿಗೆ, ಅನಿವಾರ್ಯವಾಗುತ್ತದೆ.

ಕೃಷ್ಣನಿಗೆ ತುಂಬ ಖ್ಯಾತಿಯನ್ನು ತಂದುಕೊಟ್ಟ 'ಕಾಡು' ಕಾದಂಬರಿ ಪ್ರಕಟವಾಗುತ್ತಿತ್ತು. ಅದರ ಮುದ್ರಣ, ಮುಖಚಿತ್ರ ಎಲ್ಲದರ ಬಗ್ಗೆ ಕೃಷ್ಣ ಎಷ್ಟೊಂದು ಕಾಳಜಿ ವಹಿಸಿದ್ದನೆಂದರೆ, ಪುಸ್ತಕ ಬರೆಯುವುದೆಷ್ಟು ಕಲಾತ್ಮಕ ವಿಚಾರವೋ, ಅದನ್ನು ಸುಂದರವಾಗಿ ಅಚ್ಚುಮಾಡಿಸುವುದೂ ಅಷ್ಟೇ ಕಲಾತ್ಮಕ ವಿಚಾರ ಎಂದು ಆತ ಭಾವಿಸಿದ್ದ. ಅವನು ತನ್ನೆಲ್ಲ ಕೃತಿಗಳ ಬಗ್ಗೆ ಇದೇ ಧೋರಣೆ ಉಳ್ಳವನಾಗಿದ್ದ.

ಸಾಮಾನ್ಯವಾಗಿ ಕೃಷ್ಣ ತಾನು ಬರೆದ ಎಲ್ಲ ಪುಸ್ತಕಗಳನ್ನು ತನ್ನ ಹಸ್ತಾಕ್ಷರಗಳುಳ್ಳ ಹಾರ್ದಿಕತೆಯಿಂದ ನನಗೆ ಕೊಟ್ಟಿದ್ದಾನೆ. 'ಕಾಡು' ಕೃತಿಯನ್ನು ನನಗೆ ಕೊಟ್ಟ ಒಂದೆರಡು ದಿನಗಳಲ್ಲಿ ನಾವಿದ್ದ ಮನೆ 'ಬ್ಯಾಚಲರ್ಸ್ ಪ್ಯಾರಡೈಸ್' ಜಯನಗರಕ್ಕೆ ಬಂದ. ಬಂದವನೇ ತನ್ನ ತರಗಿನ ಗಾಡಿಯನ್ನು ಬಿಡಲು ಪ್ರಾರಂಭಿಸಿದ. ಇದು ಕೃಷ್ಣನ ಸ್ವಭಾವ. "ಕುವೆಂಪು ಅವರು 'ಕಾಡು' ಓದಿದೆ. ಕಾಡಿನ್ಹಾಗೇ ಇದೆ ಎಂದರು" ಅಂತ ಹೇಳತೊಡಗಿದ. ನಾನು ಸಾಮಾನ್ಯವಾಗಿ ಕೃಷ್ಣನ ಭ್ರಮೆಯನ್ನು ಬಲ್ಲವನಾದ್ದರಿಂದ ಸುಮ್ಮನಾಗುತ್ತಿದ್ದೆ, ಅವನು ಮಾತನಾಡುವಾಗ. ಆದರೆ ಅಂದೇಕೋ ಸುಮ್ಮನಿರದೆ, "ಲೋ, ಕೃಷ್ಣ, ಏನೋ ಸೀ ಹೇಳೋದು. ಕಾನೂರು ಹೆಗ್ಗಡತಿ ಬರೆದ ಲೇಖಕ ಅಷ್ಟು ಸುಲಭವಾಗಿ ನಿನ್ನ ಕಾಡು ಮೆಚ್ಚುತ್ತಾರೆಂದು ನನಗೆ ಅನ್ನಿಸೋಲ್ಲ" ಅಂದು ತೀರ ಸಹಜವಾಗಿ ಹೇಳಿಬಿಟ್ಟೆ. ಕೃಷ್ಣ ಸಿಟ್ಟುಗೊಂಡ. ನನ್ನ ಮಾತಿಗೆ ತಿವಿಯುವವನಂತೆ

ತನ್ನ ಬಲಗೈಯನ್ನು ಚಾಚಿ, "ನಿನಗೇನು ಗೊತ್ತೊ, ನಿನಗ್ಗೊತ್ತೇಳು ಗಾಂಪನಿಗೆ" ಎಂದು ಚಕ್ಕನೆ ಕುರ್ಚಿಯಿಂದ ಎದ್ದು ಹೊರಟವನು ಮತ್ತೆ ನಮ್ಮ ಮನೆಗೆ ಬರಲಿಲ್ಲ. ಅಷ್ಟೇ ಅಲ್ಲ, ನನ್ನನ್ನು ಕಂಡರೆ ಮಾತನಾಡಿಸುವುದನ್ನು ಕಡಿಮೆ ಮಾಡಿದ. ನಾನು ಮಾತ ನಾಡಿಸಿದರೆ ಆಗ ಅವನು ನನಗೆ ಏನೋ ಕೃಪೆ ತೋರುವವನಂತೆ, ಎತ್ತರದ ಪೀಠದಿಂದ ಇಳಿದು ಬಂದವನಂತೆ ಮಾತನಾಡಲು ತೊಡಗುತ್ತಿದ್ದ. ಕೂಡಲೇ ಅವನು ಮೊದಲಿನ ಕೃಷ್ಣನೇ ಆಗಿಬಿಡುತ್ತಿದ್ದ. 'ಕಾಡು' ಅನೇಕ ಭಾಷೆಗಳಿಗೆ ಅನುವಾದವಾಗಿದ್ದುದನ್ನು ಗಳಪುತ್ತಿದ್ದ. ಈ ಗಳಪುವಿಕೆಯಲ್ಲಿ ಅವನು ಔಚಿತ್ಯ ಅನೌಚಿತ್ಯದ ಎಲ್ಲೆಗಳನ್ನು ದಾಟಿ ತನ್ನದೇ ಬೃಂದಾವನದಲ್ಲಿ ವಿಹರಿಸುತ್ತಿದ್ದುದನ್ನು ಕಾಣಬಹುದಿತ್ತು.

ಅವನ 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯ ಬಗ್ಗೆ ನಾನು ಬರೆದ ಒಂದೆರಡು ಮಾತುಗಳು ಅವನಿಗೆ ಬೇಸರವನ್ನುಂಟುಮಾಡಿದ್ದವು. ಅದು ನಾಗರಿಕತೆಯನ್ನು ಹೀಗಳೆವ ಪ್ರತಿಗಾಮಿ ಧೋರಣೆಯನ್ನು ತಾಳಿದೆ, ಎಂದಿದ್ದೆ. ಕೃಷ್ಣನಿಗೆ ವಿಮರ್ಶೆಯನ್ನು ತಾಳಿಕೊಳ್ಳುವ ಮನಸ್ಸಿರಲಿಲ್ಲ ಎನ್ನಿಸುತ್ತೆ.

ನಾಲ್ಕೈದು ವರ್ಷಗಳ ಹಿಂದಿನ ಸಂಗತಿ. ಕುವೆಂಪು ಹುಟ್ಟುಹಬ್ಬದ ಸಂದರ್ಭ. ಮಹಾರಾಜಾ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಭೆ. ಮಹಾನಟ ಡಾ॥ ರಾಜ್ ಕುಮಾರ್ ಮುಖ್ಯ ಅತಿಥಿ. ಸಭಾಭವನದ ಮೇಲೆ ಕೆಳಗೆ ಹೊರಗೆ ಎಲ್ಲೆಡೆ ಜನ ತುಂಬಿ ತುಳುಕುತ್ತಿತ್ತು. ಕೃಷ್ಣ ಭಾಷಣಕಾರ. ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಅಧ್ಯಕ್ಷರಾದ ಡಾ॥ ದೇಜಗೌ ತಮ್ಮ ಶಿಷ್ಯನ ಬಗ್ಗೆ ತುಂಬ ಅಭಿಮಾನದ ಮಾತುಗಳ ಮೂಲಕ ಕೃಷ್ಣ ನನ್ನು ಸಭೆಗೆ ಪರಿಚಯಿಸಿದರು. ಅದಕ್ಕಿಂತ ಉತ್ತಮ ಪರಿಚಯ ಮಾಡಲು ಸಾಧ್ಯವಿರ ಲಿಲ್ಲ. ಕೃಷ್ಣ ಮಾತಾಡಲು ನಿಂತವನೇ ತನ್ನ ಬಗ್ಗೆ ತಾನೇ ಹೇಳಿಕೊಳ್ಳಲು ಶುರು ಮಾಡಿದ. ಕೃಷ್ಣ ಹಳಿ ತಪ್ಪಿದ ಎಂದು ಪಕ್ಕದಲ್ಲಿದ್ದ ತಿಪ್ಪೇಸ್ವಾಮಿ ಅವರಿಗೆ ಹೇಳಿದೆ. ಎನ್ನಿಸಿತು. ಸಭೆಯಲ್ಲಿದ್ದ ಹುಡುಗರು ಕುವೆಂಪು ಬಗ್ಗೆ ಮಾತಾಡಿ ಎಂದರು. ದೇಜಗೌ ಎದ್ದು ಸುಮ್ಮನಿರುವಂತೆ ಸಭೆಗೆ ಕೈ ಮುಗಿದರು. ಕೃಷ್ಣ, ಕುವೆಂಪು ಸಾಹಿತ್ಯ ಹಳ್ಳಿಗಾಡಿನ ಹುಡುಗನಾದ ತನ್ನ ಮೇಲೆ ಹೇಗೆ ಪ್ರಭಾವ ಬೀರಿತು, ತಾನು ಹೇಗೆ ಬರೆಯಲು ತೊಡಗಿದೆ ಎಂದು ಚೆನ್ನಾಗಿ ಪ್ರಾರಂಭಿಸಿದ. ಆಮೇಲೆ ತಾನು ಮತ್ತು ಕುವೆಂಪು ಸಮ ಎನ್ನುವಂತೆ ಹೇಳಿದ. ಹುಡುಗರು ನಾನತ್ವವನ್ನು ಬಿಟ್ಟು ಮಾತಾಡೆಂದು ಬೊಬ್ಬೆ ಇಟ್ಟರು. ಕೃಷ್ಣ ರಾಜ್‌ಕುಮಾರ್‌ಗೆ ಕೈಮುಗಿದು ಸಭೆಯನ್ನು ಶಾಂತವಾಗಿಸು ವಂತೆ ಕೇಳಿಕೊಂಡ. ರಾಜ್‌ಕುಮಾರ್ ಎದ್ದು ಎಲ್ಲರಿಗೂ ತಲೆಬಾಗಿ ಕೈ ಜೋಡಿಸಿದರು. ಕೃಷ್ಣ ಮುಂದುವರಿದ. ತಾನು ಕುವೆಂಪು ಅವರಿಗಿಂತ ದೊಡ್ಡ ಸಾಹಿತಿ ಎಂಬರ್ಥದ ಮಾತುಗಳನ್ನಾಡಿದ. ಕುವೆಂಪು ಬಗ್ಗೆ ಮಾತಾಡೋದಿದ್ರೆ ಮಾತಾಡು ಇಲ್ಲದಿದ್ದರೆ ಕೂತುಕೊ ಎಂದು ಸಭಿಕರು ಬೊಬ್ಬೆಯಿಟ್ಟರು. ಕೃಷ್ಣ ಹತಾಶನಾಗಿ ರಾಜ್‌ಕುಮಾರ್ ನೋಡಿದ. ರಾಜಕುಮಾರ್ ಗಮನಿಸಲಿಲ್ಲ. ದೇಜಗೌ ಕಡೆ ದೈನ್ಯದಿಂದ ಮುಖ ತಿರುಗಿಸಿದ. ಅವರು ಕುಳಿತುಕೊ ಎಂದು ಕೈಸನ್ನೆ ಮಾಡಿದರು.

ಕೃಷ್ಣ ದೊಡ್ಡ ಲೇಖಕನಾದರೆ ಕನ್ನಡದ ಶ್ರೀಮಂತಿಕೆ ಹೆಚ್ಚುತ್ತದಲ್ಲವೆ? ಆದರೆ ಅವನೇ ತುತ್ತೂರಿ ಊದುತ್ತಿದ್ದುದು ಅವನಿಗೆ ಮುಳುವಾಗುತ್ತದೆಂದು ಅವನು ಭಾವಿಸಿರ ಲಿಲ್ಲ ಎನಿಸುತ್ತದೆ.

ಇಂಥ ಪ್ರಸಂಗಗಳ ಮೂಲಕ ಕೃಷ್ಣನ ಸೋಲು ಗೆಲುವುಗಳನ್ನು ತಿಳಿಯಬಹುದು.

ಅವನ ದೀರ್ಘ ಕಾದಂಬರಿ 'ಭುಜಂಗಯ್ಯನ ದಶಾವತಾರಗಳು' ಪ್ರಕಟವಾಗಿತ್ತು. ಅದನ್ನು ಓದಿದ ಹೊಸತರಲ್ಲಿ ಗೆಳೆಯ ಕೆ. ಆರ್. ನಾರಾಯಣಶೆಟ್ಟಿಯ ಬಳಿ ಬಹಳವಾಗಿ ಕೊರೆದಿದ್ದೆ, ಸಂಜೆಯ ವೇಳೆ. ನಾರಾಯಣಶೆಟ್ಟಿ ಕೃಷ್ಣನನ್ನು ಕಂಡಾಗ "ನಿನ್ನ ಕಾದಂಬರಿ ಬಗ್ಗೆ ಭಗವಾನ್ ಬಹಳ ಮಾತನಾಡಿದ. ಏನೇನೋ ಹೇಳಿದ ಕಣೋ. ನನಗೆ ಬಹಳಷ್ಟು ಮರೆತು ಹೋಗಿದೆ" ಎಂದನಂತೆ.

ನಡೆದುಕೊಂಡು ಹೋಗುತ್ತಿದ್ದ ನನ್ನ ಹಿಂದೆ ಗಕ್ಕನೆ ಒಂದು ಮೋಟಾರ್ ಸೈಕಲ್ ನಿಂತಿತು. ಹಿಂದಿರುಗಿದರೆ ಕೃಷ್ಣ. ಪ್ರೀತಿ ವಿಶ್ವಾಸದ ಮಾತುಗಳು.

"ನನ್ನ 'ಭುಜಂಗಯ್ಯ'ನ ಓದ್ದೇನೋ?

"ನನಗೆ ಪುಸ್ತಕಾನೇ ಕೊಟ್ಟಿಲ್ಲವಲ್ಲೋ. ಹೇಗಯ್ಯ ಓದಲಿ."

"ಏಯ್, ನೀನು ಓದಿದ್ದೀಯ ಕಣ್ ಹೇಳೋ."

"ಪುಸ್ತಕ ಕೊಡಯ್ಯ. ಆಮೇಲೆ ಹೇಳ್ತೀನಿ."

"ಇಲ್ಲಿ ಕಣ್ಣೇಳೋ. ನಿನಗೆ ಇಷ್ಟವಾಯಿತೋ ಇಲ್ಲವೋ?"

"ನೀನೇ ಹೇಳ್ತಾ ಇದ್ದೀಯಲ್ಲಪ್ಪ. ಅದರಲ್ಲಿ ಒಂದನ್ನು ತಕೋ."

"ಸುಮ್ಮನೆ, ಹೇಳೋ."

"ಅಷ್ಟು ದೀರ್ಘ ಕಾದಂಬರಿಯನ್ನು ಹೇಗಯ್ಯ, ಒಂದೆರಡು ಮಾತಲ್ಲಿ ಹೇಳೋದು. ಬಾ ಕೂತುಕೊಂಡು ಮಾತಾಡೋಣ."

"ಇರಲಿ. ನಿನಗೆ ಇಷ್ಟವಾಯಿತೋ ಇಲ್ಲವೋ. ಹೇಳು. ನನಗೆ ಬೇರೆ ಕೆಲ್ಸದೆ."

"ಆಯ್ತು. ನೀನೇ ಹೇಳ್ತಾಯಿದ್ದೀಯಲ್ಲ. ನನಗೆ ಇಷ್ಟವಾಯಿತು."

ಕೃಷ್ಣ ಕೂಡಲೇ ಮೋಟಾರ್ ಸೈಕಲ್ ಚಾಲುಗೊಳಿಸಿ ಬರ್ತೀನಿ ಕಣೋ ಎಂದು ಹೊರಟೇ ಬಿಟ್ಟ. ಅವನ ಜೊತೆಯಲ್ಲಿ ಗೆಳೆಯ ಸಿ. ಡಿ. ರಾಜು ಇದ್ದರು.

ಎಷ್ಟೋ ದಿನಗಳು ಕಳೆದು ಹೋದವು. ಈ ವರ್ಷದ ದಸರಾ ಉತ್ಸವದ ಮ್ಯಾಗಜಿನ್ ತರುವ ಸಮಿತಿ ಸೇರಿತ್ತು. ಕೃಷ್ಣ ಸಂಪಾದಕ. ಅವನನ್ನು ಬಹಳ ದಿನಗಳಿಂದ ನಾನು ನೋಡಿರಲಿಲ್ಲ. ಸಾಕಷ್ಟು ಸಣ್ಣವಾಗಿದ್ದ. ಹಿಂದಿನ ಮಾತುಗಾರಿಕೆಯಿತ್ತು. ಎಲ್ಲರ ಮಾತನ್ನೂ ಮುಳುಗಿಸಿ ಅವನ ಮಾತು ಮೊಳಗುತಿತ್ತು. "ಹಣವಿಲ್ಲದೆ ನೀವೇನೂ ಮಾಡಲಿಕ್ಕೆ ಸಾಧ್ಯವಿಲ್ಲ, ಇದಾಗೋದಿಲ್ಲ" ಎಂದು ಕಠಿಣವಾಗಿ ಹೇಳಿದ.

ಸಭೆ ಮುಗಿದ ನಂತರ ಹೊರಬರುತ್ತಿದ್ದಾಗ ಕೃಷ್ಣ ನನ್ನ ಬಲಗೈ ಹಿಡಿದುಕೊಂಡು ತನ್ನ ಎಡಗೈಗೆ ನುಲಿದುಕೊಂಡ. ಬಲವಾಗಿ ಒತ್ತಿ ತನ್ನ ಸ್ನೇಹದ ಆಪ್ತತೆಯನ್ನು ಮುಟ್ಟಿಸಿದ. ನಾನು ಪ್ರತಿಸ್ಪಂದಿಸಿದೆ. ಅದೇ ಕೃಷ್ಣ ಮತ್ತು ನನ್ನ ಕೊನೆಯ ಭೇಟಿಯಾಗುತ್ತದೆಂದು ನನಗೆ ಅನ್ನಿಸಿರಲಿಲ್ಲ.

ಕಾಡು ಕಾದಂಬರಿಯಲ್ಲಿ 'ಸಾವು'

ಡಾ. ಆರ್. ರಾಮಚಂದ್ರ

ಕಾಡು ಕಾದಂಬರಿಯ ಕತೆ ನೇರವಾಗಿದ್ದರೂ ಅದರಿಂದ ಹೊಮ್ಮುವ ಅರ್ಥ ಗಹನವಾದದ್ದು. ಕಾಡು ಸಾಮಾಜಿಕ, ಮನೋವೈಜ್ಞಾನಿಕ ಆಯಾಮಗಳಿಗೆ ಸೀಮಿತವಾಗದೆ ಒಂದು ಬಗೆಯ ದಾರ್ಶನಿಕ ಸತ್ಯಕ್ಕೆ ತವಕಿಸುತ್ತದೆ; ಸಾವು ಬಗೆಗಿನ ಚಿಂತನೆಯನ್ನು ಹೊಸ ರೀತಿಯಲ್ಲಿ ಎನ್ನುವಂತೆ ಮಂಡಿಸುತ್ತದೆ. ಕಾದಂಬರಿಯ ಶುರುವಿನಲ್ಲೇ ಕೇಂದ್ರಪ್ರಜ್ಞೆಯಾದ ಕಿಟ್ಟಿ 'ಸಾವು ಎಂದರೇನು' ಎನ್ನುವ ಪ್ರಶ್ನೆ ಎತ್ತುತ್ತಾನೆ:

> "ಸಿಳ್ಳ, ಸಾಯದು ಅಂದ್ರೇನು ಗೊತ್ತದಾ ?" ಎಂದು ಪ್ರಶ್ನಿಸಿದ. ಸಿಳ್ಳನಿಗೆ ಏನು ಹೇಳಬೇಕೊ ತಿಳಿಯದೆ, "ನಂಗೊತ್ತಿಲ್ಲ, ನೀವೇ ಯೇಳ್ರಪ್ಪ" ಎಂದ. ಕಿಟ್ಟಿಗೂ ಗೊತ್ತಿರಲಿಲ್ಲ. ಸ್ವಲ್ಪ ಹೊತ್ತು ಸುಮ್ಮನಿದ್ದು, "ಅಮ್ಯಾಕೆ ಯೇಳ್ತೀನಿ ಇರು" ಎಂದ. (ಪು. ೩)

ಕಾಡುವಿನಲ್ಲಿ 'ಸಾವು' ಬಗೆಗಿನ ಚಿಂತನೆ ಮಂಡಿತವಾಗುವುದು 'ವೈಚಾರಿಕ' ಮಟ್ಟದಲ್ಲಲ್ಲ. ಅದು ಮಂಡಿತವಾಗುವುದು ಕಾದಂಬರಿಯ ಶಿಲ್ಪದ ಮೂಲಕ, ಶಿಲ್ಪವನ್ನು ನಿರ್ದೇಶಿಸುವ ಲಯದ ಮೂಲಕ.

ಸಾವು ನಮಗ್ಯಾರಿಗೂ "ಸ್ವಂತ" ಅನುಭವವಲ್ಲ. ಅನೇಕ ವೇಳೆ ಬೇರೆಯವರ ಸಾವು ನಮಗೆ ಕೇವಲ ನೋಟವೊ ವಿವರಣೆಯೊ ಆಗಿಬಿಡುತ್ತದೆ. ಆದರೆ ಈ ವಿವರಣೆ ನಮ್ಮ ಸ್ವಂತ ಅನುಭವದ ಉತ್ಕಟತೆಯನ್ನು ಸಮೀಪಿಸುವುದಕ್ಕೂ, ನಾವು ಬಾಹ್ಯಪ್ರಪಂಚವನ್ನು ಹೊಸದಾಗಿ ಎನ್ನುವಂತೆ ಗ್ರಹಿಸತೊಡಗುವುದಕ್ಕೂ ನೇರ ಸಂಬಂಧವಿದೆ. ಅತ್ತೆ, ಮಾವರ ಜೊತೆ ಕೊಪ್ಪಲಿನಲ್ಲಿ ವಾಸಿಸಲು ಬಂದಾಗ ಕಿಟ್ಟಿ ಕೇವಲ ಐದು ವರ್ಷದ ಮಗು. ಕಾದಂಬರಿ

ಶುರುವಾಗುವಾಗ ಅವನಿಗೆ ಎಂಟು ವರ್ಷ. ಬಾಲಿಶಾವಸ್ಥೆಗೆ ಬೆಳೆಯತೊಡಗಿದ್ದಾನೆ; ಬಾಹ್ಯಪ್ರಪಂಚದೊಂದಿಗೆ ಸ್ವತಂತ್ರವಾಗಿ ಸಂಧಾನ ನಡೆಸಲು ಶುರುಮಾಡಿದ್ದಾನೆ. ಮೊದಲಾದರೆ ಅವನ ಮಾವ "ಸ್ಕೂಲಿಗೆ ಕರೆದುಕೊಂಡು ಹೋಗಿ ಬಿಟ್ಟು, ಬರುವಾಗಲೂ ಜೊತೆಗೇ ಬರುತ್ತಿದ್ದರು. ಕಿಟ್ಟಿಗೀಗ ಯಾರೂ ಬೇಡ. ನಾಗಿಯ ಜೊತೆ ಹೋಗಿ ಬರುತ್ತಿದ್ದ" (ಪು. ೩). ಬಾಲ್ಯದಿಂದ ಬಾಲಿಶಾವಸ್ಥೆಗೆ ಸಾಗುವ ಈ ಘಟ್ಟದಲ್ಲಿ ಕಿಟ್ಟಿ ಬಾಹ್ಯಜಗತ್ತಿನಿಂದ ಬೇರೆಯೆ ಆದ ಒಂದು ಅಂತರಂಗ ಪ್ರಪಂಚವನ್ನು ರೂಪಿಸಿಕೊಳ್ಳುತ್ತಾ, ಆ ಎರಡು ಪ್ರಪಂಚಗಳ ನಡುವಿನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಲೇ ಅವುಗಳ ನಡುವೆ ಸಂಪರ್ಕವನ್ನೇರ್ಪಡಿಸುವಂಥ ಸೂಕ್ಷ್ಮ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ಇದು ಸೂಚಿತವಾಗುವುದು ಕಾದಂಬರಿಯಲ್ಲಿರುವ ಕಿಟ್ಟಿಯ ಜಾಗೃತಾವಸ್ಥೆ, ನಿದ್ರಾವಸ್ಥೆಗಳ ನಡುವಿನ "ಸಂಧಿಕಾಲದ" ಉಲ್ಲೇಖಗಳಿಂದ. ಕಿಟ್ಟಿ ನಿದ್ದೆಹೋಗುವುದು, ಎಚ್ಚರಗೊಳ್ಳುವುದು—ಇವು ನಾಡಿ ಮಿಡಿಯುವಷ್ಟು ಕ್ರಮಬದ್ಧವಾಗಿ ಕಾದಂಬರಿಯುದ್ದಕ್ಕೂ ನಡೆಯುತ್ತವೆ. ಗಮನಿಸಿ :

ಅಧ್ಯಾಯ ೧ರ ಅಂತ್ಯ : "....ಬೆಚ್ಚಗೆ ತೊಡೆಯ ಸಂದಿಗೆ ಕೈತುರುಕಿ ನಿದ್ದೆಹೋದ."
ಅಧ್ಯಾಯ ೨ರ ಆದಿ : "ಚುಮು ಚುಮು ನಸುಕಿನಲ್ಲೆ ಎಬ್ಬಿಸಿದ ಅತ್ತೆ ಹಬ್ಬದ ನೆನಪು ಮಾಡಿದಾಗ ದಡಬಡ ಎದ್ದು ನಿಂತ ಕಿಟ್ಟಿ...."
,, ೩ರ ಆದಿ : "ಹಬ್ಬ ಮುಗಿದ ಹೊತ್ತಾರೆ ಎದ್ದು ಕೂತ ಕಿಟ್ಟಿಗಿನ್ನೂ ಹಬ್ಬದ ಸಂಭ್ರಮ...."
,, ೪ರ ಅಂತ್ಯ : "ನಿದ್ದೆ ತಡೆಯಲಾಗದೆ ಕಿಟ್ಟಿ...."
,, ೫ರ ಆದಿ : "ಕಿಟ್ಟಿ ಎದ್ದು ಕಣ್ಣುಜ್ಜುತ್ತಾ...."
,, ೬ : "....ಕಿಟ್ಟಿ ತೆಪ್ಪಗೆ ಮಲಗಿಬಿಟ್ಟ." (ಪು. ೩೯)
,, ೬ : "ಬೆಳಗೆ ಎದ್ದ ಕೂಡಲೆ...." (ಪು. ೩೯).

ಹೀಗೆ ಕಿಟ್ಟಿ ಮಲಗುವುದು, ಎಚ್ಚರಗೊಳ್ಳುವುದು—ಈ ಕ್ರಿಯೆಗಳಿಗೆ ಒಂದರ ನಂತರ ಒಂದರಂತೆ ಕಾದಂಬರಿಯುದ್ದಕ್ಕೂ ಪ್ರಸ್ತಾಪವಿರುತ್ತದೆ. ತನ್ನ ಅಂತರಂಗಪ್ರಪಂಚವನ್ನು ರೂಪಿಸಲು ಬೇಕಾಗುವ ಸರಕನ್ನು ಕಿಟ್ಟಿ ಬಾಹ್ಯಪ್ರಪಂಚದಿಂದಲೇ ತೆಗೆದುಕೊಂಡು ಹೋಗಬೇಕು. ಕಾದಂಬರಿ ಶುರುವಾಗುವ ವೇಳೆಗೆ ಅವನ ಒಳಪ್ರಪಂಚದ ಏರ್ಪಾಟಿಗೆ ಬೇಕಾಗುವ ಕನಿಷ್ಠ ಸರಕನ್ನು ಅವನು ಪಡೆದಿರುತ್ತಾನೆ: ಅದು ಅವನ ಅಜ್ಜಿ ಅವನಿಗೆ ಹೇಳಿರುವ ರಾಕ್ಷಸ ಹಾಗೂ ರಾಜಕುಮಾರನ ಕತೆ. ಈಗ ಅವನು ಬಾಹ್ಯದೊಂದಿಗೆ ವ್ಯವಹರಿಸಿ ತನ್ನ ಅಂತರಂಗದ ವ್ಯಾಪ್ತಿಯನ್ನು ವಿಸ್ತರಿಸಬೇಕು. ಬಾಹ್ಯಜಗತ್ತಿನಿಂದ ಕಿಟ್ಟಿಯ ಅಂತರಂಗಕ್ಕೆ ಸಾಗುವ ಸರಕುಗಳಲ್ಲಿ ಅತಿ ಮುಖ್ಯವಾದದ್ದು ಸಾವಿನ ಚಿತ್ರ. ಅವನು ಪ್ರತಿ ಸರ್ತಿ ಮಲಗಲು ಹೋಗುವಾಗ ಸಾವಿನ ಚಿತ್ರ ಅವನನ್ನು ಜರ್ಜ

ಗೋಳಿಸುತ್ತದೆ—ಗೌರಿ ಕಡಸಿನ ಸಾವು, ಮೊಣ್ಣನ ಸಾವು, ಸಾವಿತ್ರಮ್ಮನ ಸಾವು, ನಾಗಿಯ ಅಜ್ಜಿಯ ಸಾವು, ಅತ್ತೆಯ ಸಾವು, ಸಂತೆಯಲ್ಲಿ "ಬೊಂಬಾಯಿ ಕಲಕತ್ತ ದವನು" ತೋರಿಸಿದ ಯುಮಧರ್ಮರಾಯನ ಪಟ್ಟಣ, ಕೋಳಿಯ ಬಲಿ, ಇತ್ಯಾದಿ. ಅಲ್ಲದೆ ಕಿಟ್ಟಿಯ ಮಟ್ಟಿಗೆ ಸಾವು ಮತ್ತು ರಕ್ತ ಇವುಗಳ ಸಮೀಕರಣವಾಗುತ್ತದೆ: ಕೋಳಿ ಬಲಿ-ರಕ್ತ; ಗೌರಿಕಡಸು-ರಕ್ತ; ಅಜ್ಜಿಯ ಸಾವು-ರಕ್ತ, ಕೀವು; ಅತ್ತೆಯ ಸಾವು-ರಕ್ತ; ಮಾವ ಕಡಿಯುವ ಕುರಿಯ ಕತ್ತು-ರಕ್ತ. ಸಾವಿನ ಚಿತ್ರ ಕಿಟ್ಟಿಯ ಅಂತರಂಗಕ್ಕೆ ಅನುಭವವಾಗಿ ಇಳಿಯುವುದು ರಕ್ತದ ಬಣ್ಣದಿಂದ. ಕಿಟ್ಟಿಯು ಮಂತ್ರ ವಾದಿಯ ಪೂಜೆಯನ್ನು ವೀಕ್ಷಿಸುವ ಸಂದರ್ಭವನ್ನು ಜ್ಞಾಪಿಸಿಕೊಳ್ಳೋಣ:

> ....ಕಿಟ್ಟಿಯ ಜೀವ ಪುಕಪುಕ ಅನ್ನತೊಡಗಿತು. ದೊಡ್ಡ ಮಣ್ಣಿನ ಹಣತೆ ಬೆಳಕಿನಲ್ಲಿ ಭಯಂಕರವಾಗಿ ನಾಲಿಗೆ ಚಾಚಿ ರಕ್ತಕಾರುವಂತಿರುವ ಮಣ್ಣಿನ ಗೊಂಬೆ. ಸಣ್ಣ ಹಸಿರು ಸೊಪ್ಪಿನ ಚಪ್ಪರ. ಮುಂದೆ ಕೆಂಪು ಅನ್ನದ ರಾಶಿ. ಕುಂಕುಮ ಬಳೆದಿಟ್ಟ ತೆಂಗಿನಕಾಯಿ....ಅಂಗಿ ಬಿಚ್ಚಿ ಕಪ್ಪಗೆ ಹಣೆಗೆಲ್ಲ ಕುಂಕುಮ ಬಳಿದುಕೊಂಡಿದ್ದವನನ್ನು ನೋಡಿ ಕಿಟ್ಟಿ ಕಣ್ಣುಮುಚ್ಚಿಕೊಂಡ. ಮಂತ್ರದವನು....ಜೋರ ಜೋರ ಕೋಳಿ ಕತ್ತು ಕುಯ್ದು ಅದರ ರಕ್ತವನ್ನೆಲ್ಲ ಗೊಂಬೆ ನಾಲಿಗೆಗೆ ಹಿಡಿದ.... (ಪು. ೪)

ಹಾಗೆಯೆ, ಕಿಟ್ಟಿ ಚಾವಡಿ ನ್ಯಾಯವನ್ನು ವೀಕ್ಷಿಸುವ ಸಂದರ್ಭವನ್ನೂ ಜ್ಞಾಪಿಸಿ ಕೊಳ್ಳೋಣ. ಹುಣಿಸೆ ಸೆಬ್ಬೆಯ ಏಟು ತಿಂದು ಕೆಂಚನ ಮೈಯೆಲ್ಲ ರಕ್ತವಾಗಿದೆ. ಈ ಪ್ರಸಂಗ ಕೊನೆಗೊಳ್ಳುವುದು ಹೀಗೆ:

> ಶಿವಗಂಗ....ಅರಳಿಕಟ್ಟೆಯೊರಗಿ ಕೂತಿದ್ದ ಕೆಂಚನ ಕಡೆ ತಿರುಗಿ "ಎದ್ದು ಬಲ ಕೆಂಚ" ಎಂದನು. ಕೆಂಚ ಕೂತಲ್ಲಿಂದ ಅಲುಗಾಡಲಿಲ್ಲ. "ಸಾಯಿ ಸೂಳೆಮಗನೆ" ಎಂದು ಹೊರಟುಬಿಟ್ಟರು. (ಪು. ೨೭)

ದೊಡ್ಡವರು ಶಿವಗಂಗನ ಬೈಗುಳಕ್ಕೆ ಹೆಚ್ಚು ಗಮನ ಕೊಡದಿರಬಹುದು. ಆದರೆ ಕಿಟ್ಟಿಯ ಎಳೆ ಮನಸ್ಸಿನ ಮೇಲೆ "ಸಾಯಿ ಸೂಳೆಮಗನೆ" ಎನ್ನುವ ಮಾತು ಅತ್ಯಂತ ಭಯಂಕರ ವಾಗಿ ಕೇಳಿಸಿರಲಿಕ್ಕೆ ಸಾಕು; ಸಾವು-ರಕ್ತಗಳ ಸಮೀಕರಣ ನಡೆಸಿರಲಿಕ್ಕೆ ಸಾಕು. ಬಾಹ್ಯ ಜಗತ್ತಿನ ಈ ಸರಕುಗಳು ಕಿಟ್ಟಿಯ ಮುಗ್ಧ ಮನಸ್ಸಿನ ಆಳತೆಗೆ ಮೀರಿದುದಾಗಿ ಬಿಡುತ್ತವೆ. ಹೊರಗಿನ ಜಗತ್ತು ಕಿಟ್ಟಿ ಮಲಗಲು ಹೋದಾಗೆಲ್ಲ ಅವನ ಅಂತರಂಗಕ್ಕೆ ಧಾಳಿಯೋ ನಡೆಸುವಂತೆ ನುಗ್ಗತೊಡಗುತ್ತದೆ; ಅವನ ಅಂತರಂಗ ಪ್ರಪಂಚ ರೂಪು ಗೊಳ್ಳುವುದಕ್ಕೆ ಅಡ್ಡಿಯಾಗುತ್ತದೆ. ಕಿಟ್ಟಿ ಮಲಗುವ ಕೆಲವು ಸಂದರ್ಭಗಳನ್ನು ನೆನೆಯ ಬಹುದು:

> ಮಲಗಿದಾಗ ಮತ್ತೆ ಮತ್ತೆ ಎಲ್ಲ ನೆನಪಾದವು. ಕಿಚಗಿಟ್ಟುವ ಬಾವಲಿ, ಗುಡಿಯ ಹತ್ತಿರವೇ ನರಳುತ್ತಿದ್ದ ಸೇಲಗುಮ್ಮ. ಕರಿಕಲ್ಲ ಜಿಟ್ಟದ ಕಡೆ

ಊಳಿಡುವ ಸರಿ. ಭಯವಾಗಿ ನಡುಗುತ್ತ....ಅತ್ತೆಯ ಎದೆಯಲ್ಲಿ ಮುಖ ವಿಟ್ಟು ಬೆಚ್ಚಗೆ ತೊಡೆ ಸಂದಿಗೆ ಕೈ ತುರುಕಿ ನಿದ್ದೆ ಹೋದ. (೫)

ರಾತ್ರಿ ಮಲಗುವಾಗ ಕಿಟ್ಟಗೆ ಆವತ್ತು ಬೆಳಿಗ್ಗೆ ಸತ್ತ ಗೌರಿ ನೆನಪಿಗೆ ಬಂತು. ಎಷ್ಟೇ ಮರೆಯಬೇಕೆಂದರೂ ಅದೇ ಅರ್ಧಭಾಗ ಕಳಚಿ ಮಾಂಸದ ಮುದ್ದೆಯಾಗಿ ಜೋತುಬಿದ್ದ ಬಾಯಿ....ಭಯಂಕರ ರಣಹದ್ದು ಕಾಗೆ ಗಳ ಹಾರಾಟ, ಸಂತೆಯಲ್ಲಿ ಬೊಂಬಾಯಿ ಕಲ್ಕತ್ತದವನು ತೋರಿಸಿದ ಯಮಧರ್ಮರಾಯನ ಪಟ್ಟಣ....ಕಣ್ಣು ಮುಚ್ಚಿದರೆ ಸಾಕು, ಒತ್ತ ತೊಡಗಿದವು. ಮಲಗಿದ್ದ ಅತ್ತೆ ಎದ್ದು ಹಾಸಿಗೆ ಅತ್ತ ಕಡೆ ಎಳೆದು "ಸರೀಗೆ ತೊಲೆ ಕೆಳಗೆ ಮಲಗಿದ್ರೆ ರಾತ್ರೆಲ್ಲ ಆಳು ಸ್ವಪನ" ಎಂದರು. (೪೪)

ರಾತ್ರಿಯೆಲ್ಲ ನೋವು. ನಿದ್ದೆಯೇ ಬಾರದು....ಮುದಿ ಅಜ್ಜಿ ನೆನಪಿಗೆ ಬಂತು. ದರಿದ್ರ ಇದೆಲ್ಲ ಆಗಲು ಅದೇ ಕಾರಣ. ಇರಬೇಕು. ಅದು ನಿಜ ವಾಗಿಯೂ ರಾಕ್ಷಸಿಯೇ ಇರಬೇಕು. ಅದರ ಉದ್ದನೆ ಕೊಳೆ ತುಂಬಿದ ಉಗುರುಗಳು. ಆಳಕ್ಕಿಳಿದ ಪಿಳಿಪಿಳಿ ಜಬರೆ ಕಣ್ಣುಗಳು. ಬೊಚ್ಚು ಕಟಬಾಯಿಯ ಎರಡೂ ಕಡೆ ಸೇರುವ ತಂಬಲ. ಸುಕ್ಕು ಹಿಡಿದ ಮುಖ, ಕೈ, ಕಾಲು ಒಂದೊಂದಾಗಿ ನೆನಪಾದವು. ತುಂಬ ಹೊತ್ತಿನ ಮೇಲೆ ಮಂಪರು ಮಂಪರು ನಿದ್ದೆ (೫೯)

ಕಿರುಬ ಕಿತ್ತು ಕಿತ್ತು ತಿಂದಿದ್ದ ಮೊಣ್ಣನ ಹಸಿ ಹಸಿ ಎಲವುಗಳು. ಬಾವು ಒಡೆದು, ತೀವ್ರ ರಕ್ತ ಸೋರುತ್ತಿದ್ದು ಸತ್ತುಹೋದ ನಾಗಿಯ ಅಜ್ಜಿ ಚಟ ಚಟ ಬೆಂಕಿಯಲ್ಲಿ ಬೇಯುತ್ತಿದ್ದುದ್ದು....ತುಂಬ ಭಯವಾಯಿತು. ದೀಪ ಎತ್ತರಿಸಬೇಕು ಎಂದುಕೊಂಡ. ಮೇಲೇಳಲು ಇನ್ನೂ ಭಯವಾಗಿ ಹಾಗೇ ಮಲಗಿದ. (೬೩—೬೪)

ಕಾದಂಬರಿ ಮುಂದುವರಿದಂತೆಲ್ಲ ಕಿಟ್ಟಿಯ ಅಂತರಂಗವನ್ನು ತುಂಬಲು ನುಗ್ಗುವ ಬಾಹ್ಯದ ರಭಸ ಹೆಚ್ಚಾಗುತ್ತಾ ಹೋಗುತ್ತದೆ. ಇದು ವ್ಯಕ್ತವಾಗುವುದು ಎರಡು ರೀತಿಯಲ್ಲಿ. ಮೊದಲನೆಯದಾಗಿ ಎಲ್ಲ ಬಣ್ಣಗಳು ರಕ್ತವರ್ಣಕ್ಕೆ ಎಡೆಮಾಡಿಕೊಡುವುದ ರಲ್ಲಿ ಹೊರ ಪ್ರಪಂಚದ ರಭಸ ವ್ಯಕ್ತವಾಗುವುದು. ಕಾದಂಬರಿಯ ಮೊದಮೊದಲು ಕೆಂಪುಬಣ್ಣ ಮಾತ್ರವಲ್ಲದೆ, ಕಮಲತ್ತೆಯ ಹಸಿರು ಬಳೆ, ಹಸಿರು ಸೀರೆ, ಕಿಟ್ಟಿಯ ನೀಲಿ ಅಂಗಿ, ಖಾಕಿ ನಿಕ್ಕರ್, ಎತ್ತುಗಳ ಕೊಂಬಿನ ನೀಲಿ ಬಣ್ಣ, ಹಳದಿ, ಕೆಂಪು ಹೂಗಳು—ಇವಕ್ಕೆಲ್ಲ ಪ್ರಸ್ತಾಪವಿದೆ. ಆದರೆ ಕಿಟ್ಟಿಯ ಮೇಲೆ ಹೊರ ಪ್ರಪಂಚದ ಧಾಳಿ ಹೆಚ್ಚಾದಂತೆ ರಕ್ತದ ಬಣ್ಣ ಮಾತ್ರ ವಿಜೃಂಭಿಸುತ್ತದೆ. ಎರಡನೆಯದಾಗಿ, ಕಿಟ್ಟಿಯ ನಿದ್ದೆಗೆ ಹೆಚ್ಚು ಹೆಚ್ಚು ಭಂಗ ಬರಲಾರಂಭಿಸುತ್ತದೆ. ನಿದ್ದೆಯಿಂದ—ಅಂದರೆ ಅವನ ಅಂತರಂಗದಿಂದ—

ಅನಾಮತ್ತಾಗಿ ಹೊರ ಬರಬೇಕಾದ ಸನ್ನಿವೇಶಗಳೂ ಇವೆ. ಕೆಲವು ಪ್ರಸಂಗಗಳನ್ನು ನಾವು ಗಮನಿಸಬಹುದು.

೧) ಚಾವಡಿ ನ್ಯಾಯ ನೋಡಿ ಬಂದ ನಂತರ ಕಮಲತ್ತೆ ಭಯಪಟ್ಟ ಕಿಟ್ಟಿಯನ್ನು "ಎದೆಗಪ್ಪಿಕೊಂಡು ಮಲಗಿದರು. ಕಿಟ್ಟಿಗೆ ಮಂಪರು ನಿದ್ದೆ. ಸ್ವಲ್ಪ ಹೊತ್ತಲ್ಲೆ ಮಾವ ಬಂದು ಕೂಗಿದ ಸದ್ದಿಗೆ ಧಡಕ್ಕನೆ ಎದ್ದು ಅತ್ತೆ ಸೆರಗನ್ನೆ ಹಿಡಿದು ನಡೆದ ಕಿಟ್ಟಿ."

೨) "ಕಂಬಳಿಯೆಳೆದು ಚೆನ್ನಾಗಿ ಹೊದೆಸಿಕೊಂಡಾಗ ಕಿಟ್ಟಿಗೆ ತಾನು ಇಷ್ಟು ಹೊತ್ತು ತಾನು ಚಳಿಗೆ ನಡುಗಿದ್ದು ನೆನಪಾಯಿತು. ಗಾಢ ನಿದ್ದೆ—

ಇದ್ದಕ್ಕಿದ್ದ ಹಾಗೆ ಮನೆಯ ಮಾಡೇ ಕಿತ್ತುಹೋಗುವಂತೆ ಬೊಗಳ ತೊಡಗಿದ ಮೊಣ್ಣ ಮಲಗಿದ್ದವರನ್ನೆಲ್ಲ ಬಡಿದೆಬ್ಬಿಸಿತು.....ಅತ್ತೆ ಜೊತೆ ಕಿಟ್ಟಿಯೂ ಎದ್ದು ಕೂತ." ಈ ಸಂದರ್ಭದಲ್ಲಿ ಮೆದೆಗೆ ಬಿದ್ದ ಬೆಂಕಿಯ ಮೂಲಕ ಕಿಟ್ಟಿಯನ್ನು ನಿದ್ದೆಯಿಂದ (ಅಂತರಂಗದಿಂದ) ಎಳೆದು ತರುತ್ತದೆ ಹೊರಪ್ರಪಂಚ.

೩) "ಇನ್ನೇನು ನಿದ್ದೆ ಹತ್ತಿತು ಅನ್ನುವಷ್ಟರಲ್ಲಿ ಲೋಂಪಿ ಕದ ತಟ್ಟಿದ." ಈ ಸರ್ತಿ ಸಾವಿತ್ರಮ್ಮನ ಸಾವಿನ ಸುದ್ದಿ ಕಿಟ್ಟಿಯನ್ನು ನಿದ್ದೆ ಹೋಗಲು ಬಿಡುವುದಿಲ್ಲ (೭೦–೭೧)

ಕಾದಂಬರಿಯ ಕಡೆಯಲ್ಲಂತೂ ಇಡೀ ಬಾಹ್ಯ ಜಗತ್ತು ಸಾರಾಸಗಟಾಗಿ, ಅವ್ಯವಸ್ಥಿತ ವಾಗಿ ಕಿಟ್ಟಿಯ ಅಂತರಂಗವನ್ನೆಲ್ಲ ವ್ಯಾಪಿಸಲು ಹವಣಿಸುತ್ತಿರುತ್ತದೆ. ಆದ್ದರಿಂದ ನಿದ್ದೆ ಹೋಗುವುದಕ್ಕೇ ಹೆದರಿ ಕಿಟ್ಟಿ ಅವ್ವ, ಚಿಕ್ಕಪ್ಪರನ್ನು ನೆನೆಯುತ್ತ ಕೂರುತ್ತಾನೆ :

ಬಾವು ಒಡೆದು ಕೀವು ಸೋರಿ ನಾಗಿಯ ಅಜ್ಜಿ ಸತ್ತುಹೋಗಿದ್ದು, ದೀಪಾವಳಿ ಹಬ್ಬದ ಹಿಂದಿನ ರಾತ್ರಿ ಹಾಳು ಗುಡಿ ಹಿಂದೆ ಪೂಜೆ ಹಾಕಿ ಸಿದ್ದು, ಗೌರಿ ಕಡಸು ಹಿಡಿಮುದ್ದು ಕಡಿದು ಅದರ ಅರ್ಧ ಬಾಯಿ ಕಳಚಿ ಮಾಂಸದ ಮುದ್ದೆಯಾಗಿ ನೇತಾಡುವುದು. ಪೋಲೀಸರು ಮಾವನನ್ನು ಕರೆದುಕೊಂಡು ಹೋಗುತ್ತಿರುವುದು. ಕಲ್ಯಾಣಿ ಹನುಮನ ಜೊತೆ ಓಡಿ ಹೋದದ್ದು, ಕೆಂಚನಿಗೆ ಮಾದ ಹುಣಿಸೆ ಸೆಬ್ಬೆಯಿಂದ ರಕ್ತ ಬರುವ ಹಾಗೆ ಹೊಡೆದದ್ದು, ಮೊಣ್ಣನನ್ನು ಕಿರುಬ ಬೇಲದ ಮರದಡಿ ತಿಂದು ಹಾಕಿದ್ದು, ಗುಡಿ ಐಯ್ನೋರು ಸಾವಿತ್ರಮ್ಮ ನೇಣು ಹಾಕಿಕೊಂಡು ಸತ್ತದ್ದನ್ನು ಬಿಕ್ಕುತ್ತ ಹೇಳಿದ್ದು. ಧಗ ಧಗ ಉರಿಯುವ ರಾಗಿ ಮೆದೆ ಗಳು, ಆಳು ಕೂಗಿನ ಹಕ್ಕಿಯ ಕತೆ, ರಕ್ತ ಚೆಲ್ಲಾಡಿದ ಹೊಸೂರಿನ

> ಓಕಳಿ, ಕಾಡಿನೊಳಗಿಂದ ನುಗ್ಗಿ ಬಂದ ರಾಕ್ಷಸರು, ಅತ್ತೆಯ ತೊಡೆಯ ರಕ್ತ....ಕುಂತಲ್ಲಿ ಗಡಗಡ ನಡುಗಿದ ಕಿಟ್ಟಿ.
> ಬೆಳಗಾದರೂ ಕಿಟ್ಟಿಯ ಕಣ್ಣಿಗಿಳಿದಿದ್ದ ರಾಕ್ಷಸಲೋಕ ಕರಗಲಿಲ್ಲ. ಇನ್ನೂ ನಡುಗುತ್ತಲೇ ಇದ್ದ....ಈ ರಾಕ್ಷಸಲೋಕದಿಂದ ಈ ಕ್ಷಣದಲ್ಲೆ ಪಾರಾಗಿ ಬಿಡುವ ಆಸೆಯಿಂದ ಅವರು ಬರುವ ದಾರಿಯತ್ತಲೆ ಕಣ್ಣು ನೆಟ್ಟು ಕೂತ. (೯೪-೯೫)

ಹೊರಪ್ರಪಂಚ ಒಳಪ್ರಪಂಚವನ್ನು ಸಂಪೂರ್ಣವಾಗಿ ಆಕ್ರಮಿಸಿದಾಗ ಹೊರಗಿನ ರಾಕ್ಷಸರು ಒಳಗಿನ ರಾಕ್ಷಸರು ಸೇರಿಬಿಡುತ್ತಾರೆ; "ರಾಕ್ಷಸಲೋಕ"ದ ನಿರ್ಮಾಣವಾಗುತ್ತದೆ. ಆ ಲೋಕದ ಬಣ್ಣ ರಕ್ತದ ಬಣ್ಣ. ಇಂತಹ ಲೋಕವನ್ನೆ ಕಾಡು ಕಾದಂಬರಿಯಲ್ಲಿ ಸಂಕೇತಿಸುವುದು. ಈ ಕಾಡಿಗೇ ಕಿಟ್ಟಿ ಭಯಪಡುವುದು, ಮೃಗಗಳಿರುವ ಕಾಡಿಗಲ್ಲ. ಮನೆ ಮೇಲೆ ಹಬ್ಬಿಸಿರುವ ಕುಂಬಳದ ಹಂಬಿಗೆ ಆನೆ ಬಂದರೆ "ಹಟ್ಟಿಯ ಕದ ಮುಚ್ಚಿ ಕಿಟಕಿ ಒಳಗಿನಿಂದ ನೋಡಬಹುದಲ್ಲ" ಎಂದು ಕೊಳ್ಳುತ್ತಾನೆ ಕಿಟ್ಟಿ. ಕೇವಲ ಮೃಗಗಳಿರುವ ಕಾಡಿನೊಳಕ್ಕೆ ನುಗ್ಗುವುದೆಂದರೆ ಅವನಿಗೆ ತುಂಬಾ ಇಷ್ಟ. "ಹಾವು, ಕಿರುಬ, ಒಂಟಿಗ ಏನೇನೊ ಇವೆ ಎಂಬ ಭಯವಿದ್ದರೂ ಲೆಕ್ಕಿಸದೆ....ಅಲೆದಾಡುವುದೆಂದರೆ ಅದಕ್ಕಿಂತ ಬೇರೆ ಇನ್ನ್ಯಾವುದೂ ಬೇಡ." (೫೬)

ಆದರೆ ಕಿಟ್ಟಿಯನ್ನು ಆವರಿಸುವ ಕಾಡು ಮಾನವೀಯ ವ್ಯಕ್ತಿತ್ವಕ್ಕೆ ಎಡೆ ಮಾಡಿಕೊಡದಂತಹದು. ಮಾನವೀಯ ವ್ಯಕ್ತಿತ್ವದ ಅಲ್ಲಗಳೆಯುವಿಕೆ—ಅಂದರೆ—'ಅಂತರಂಗ' 'ಬಹಿರಂಗ'ಕ್ಕೆ ಹರಿಯಲಾಗದಿರುವಿಕೆ—ಇದೇ 'ಸಾವು'. ಈ ದೃಷ್ಟಿಯಿಂದಲೇ ಆಳು ಕೂಗಿನ ಹಕ್ಕಿಯ ಕತೆ ಅರ್ಥಪೂರ್ಣವಾದದ್ದು :

> ಕಾಡೊಳಗೆ ಹೋದ ಮೇಲೆ ಯಾರೂ ಒಬ್ಬರು ಇನ್ನೊಬ್ಬರ ಹೆಸರು ಕರೆಯಬಾರದಂತೆ. ಹಾಗೆ ಕರೆದಾಗ ಅಲ್ಲೆ ಎಲ್ಲಾದ್ರೂ 'ಆಳು ಕೂಗಿನ ಹಕ್ಕಿ' ಇದ್ರೆ ಕೇಳಿಸಿಕೊಂಡು ಮನುಷ್ಯರ ಹಾಗೆಯೆ ಹೆಸರು ಹಿಡಿದು ಕರೆದುಬಿಡುತ್ತದಂತೆ. ತಕ್ಷಣ ಯಾರೊ ಮನುಷ್ಯರು ಕರೆದ್ರೂ ಅಂತ 'ಓ' ಅಂದ್ರೆ ಸಾಕು ಇನ್ನು ಅವರ ಕತೆ ಮುಗಿದ ಹಾಗೆ. ರಕ್ತ ಕಕ್ಕಿ ಸತ್ತು ಬಿಡುತ್ತಾರಂತೆ. (೩೧)

ಅರ್ಥಾತ್, ಮಾನವೀಯ ಸಂಬಂಧಗಳ, ಮಾನವೀಯ ವ್ಯಕ್ತಿತ್ವದ ಅನನ್ಯತೆಯತ್ತ ಲಕ್ಷ್ಯ ಹರಿಸಲೇಬಾರದು.

ಕಿಟ್ಟಿಯ–ಯಾವುದೇ ಮಗುವಿನ–ವ್ಯಕ್ತಿತ್ವ ರೂಪಗೊಳ್ಳುತ್ತ ಹೋಗಬೇಕಾದರೆ ಅವನ ಅಂತರ್ಜಗತ್ತು ಹಾಗೂ ಬಾಹ್ಯ ಜಗತ್ತಿನ ನಡುವೆ ಸರಿಯಾದ ಸಂಧಾನವಿರಬೇಕು. ಆದರೆ ಕಿಟ್ಟಿಯ ಅಂತರಂಗ ಮತ್ತು ಹೊರಜಗತ್ತುಗಳು ಗೋಜಲಾಗಿ ಸಿಕ್ಕಿಕೊಂಡಾಗ ಅದನ್ನು ಬಗೆಹರಿಸಲು ಯಾವ ಪ್ರೌಢರ ಸಹಾಯವೂ ಒದಗಿಬರುವುದಿಲ್ಲ.

'ಅವನಿನ್ನೂ ಚಿಕ್ಕವನು" ಎನ್ನುವ ಮೂಲಕವೇ ಅವರು ರಾಕ್ಷಸಲೋಕದವರಾಗಿಬಿಡುತ್ತಾರೆ; 'ಆಳುಕೂಗಿನ ಹಕ್ಕಿ' ಇರುವ ಕಾಡಿಗೆ ಸೇರಿದವರಾಗಿಬಿಡುತ್ತಾರೆ. ರಾತ್ರಿಯ ಹೊತ್ತು ಮಾವ ಎಲ್ಲಿಗೆ ಹೋಗುತ್ತಾರೆ ಎಂದು ಕೇಳಿದರೆ ಲೋಂಪಿ, "ಚಿಕ್ಕವರಿಗ್ಯಾಕ್ರಯ್ಯ ಅದೆಲ್ಲ ನೀವು ಕೇಳಬ್ಯಾಡ್ದು" ಎನ್ನುತ್ತಾನೆ. ರಾತ್ರಿ ಹಾಳು ಹನುಮಂತರಾಯನ ಗುಡಿಗೆ ತಾನು ಹೋಗಿದ್ದು, ಅಲ್ಲಿ ದೆವ್ವ ಇದೆ ಎಂದಿದ್ದೆಲ್ಲಾ ಸುಳ್ಳು ಎಂದು ಬೆಳ್ಳನಿಗೆ ತಿಳಿಸುವ ತವಕ ಕಿಟ್ಟಿಗೆ. ಈ ಮೂಲಕ ಒಳಗಿನ ಹಾಗೂ ಹೊರಗಿನ ಪ್ರಪಂಚಗಳ ನಡುವೆ ಸಂಧಾನ ನಡೆಸುವ ಯತ್ನ ಅವನದು. ಆದರೆ ಅತ್ತೆ ಹಿಂದಿನ ದಿನ ನಡೆದದ್ದನ್ನು ಅಂತರಂಗದಲ್ಲೇ ಇಡಬೇಕು, ಬಹಿರಂಗಪಡಿಸಬಾರದು ಎನ್ನುತ್ತಾಳೆ. ಯಾಕೆ ಯಾರಿಗೂ ಹೇಳಬಾರದು ಎಂದು ಕೇಳಿದರೆ, "ಅದೆಲ್ಲ ನಿಂಗೊತ್ತಾಗೊಲ್ಲ ಕಿಟ್ಟಿ, ಯಾರತ್ರಾದ್ರೂ ನೀನು ಯೇಳಿದ್ರೆ ನಾನೆ ಸತ್ಹೋಯ್ತಿನಿ ನೋಡು" ಎಂದು ಹೆದರಿಸುತ್ತಾಳೆ. ಬಹಿರಂಗವಾಗಿ ಗುಡಿ ಅಯ್ನೋರು ಮತ್ತು ಕಾಳಿ ಜೊತೆಯಲ್ಲಿ ಮಲಗಿದ್ದ ವಿಷಯವನ್ನು ಅಂತರಂಗದಲ್ಲೇ ಇಟ್ಟುಕೊಳ್ಳದಿದ್ದರೆ ಮಾವ ಕಪಾಳಕ್ಕೇ ಹೊಡೆಯುತ್ತಾನೆ. ಯಾಕೆ ಯಾರ ಬಳಿಯೂ ಹೇಳಬಾರದು ಎಂದು ಕೇಳಿದರೆ "ಅದೆಲ್ಲ ಯಾರತ್ರಾನೂ ಯೇಳಬ್ಯಾಡದು ಕಿಟ್ಟಿ. ಪೋಲಿ ಅಂತಾರೆ" ಎನ್ನುತ್ತಾಳೆ ಅತ್ತೆ. ಹೀಗೆ ಕಿಟ್ಟಿಯ ಅಂತರಂಗಕ್ಕೆ ಬಾಹ್ಯಜಗತ್ತಿಗೆ ಹರಿಯುವ ದಾರಿಯೆ ಇಲ್ಲದೆ ಕೇವಲ ಬಾಹ್ಯಜಗತ್ತು ಮಾತ್ರ ಅವನ ಅಂತರಂಗಕ್ಕೆ ನುಗ್ಗುತ್ತಿರುತ್ತದೆ.

ಒಳಗಿನ ಮತ್ತು ಹೊರಗಿನ ಪ್ರಪಂಚಗಳ ನಡುವೆ ಸಮತೋಲವೇರ್ಪಡಿಸಿ ಮಾನವ ವ್ಯಕ್ತಿತ್ವವನ್ನು ಸಂರಕ್ಷಿಸುವಂಥ ಗುಣ 'ಆಟ'ಕ್ಕಿದೆ. ಸ್ಕೂಲು ಕಂಡರೆ ಕಿಟ್ಟಿಗಾಗದು. ಕಾರಣ ಇಷ್ಟೆ : ದೊಡ್ಡವರೆಲ್ಲರೂ ಅದರ ಮೂಲಕ ಅವನನ್ನು ಬಾಹ್ಯಕ್ಕೆ ಎಳೆಯುತ್ತಿರುತ್ತಾರೆ. 'ಆಟ' ಹಾಗಲ್ಲ. ಮನುಷ್ಯನ ರಾಕ್ಷಸಗುಣ, ಹಿಂಸಾಪ್ರವೃತ್ತಿಯನ್ನು 'ಆಟ' ನಿಯಂತ್ರಿಸಬಲ್ಲದ್ದು; ಒಳ–ಹೊರ ಪ್ರಪಂಚಗಳ ನಡುವೆ ಸಮಸ್ಥಿತಿ ಏರ್ಪಡಿಸಲು ಸಹಾಯಕಾರಿಯಾಗಬಲ್ಲದು. ಆದರೆ ಕಾಡುವಿನಲ್ಲಿ 'ಆಟ' ಕೂಡ ಆಟವಾಗದೆ ಹೋಗುತ್ತದೆ. ಉದಾಹರಣೆಗೆ ಓಕಳಿಯಾಟ. ಇಲ್ಲಿ ಜನರ ಬಡಿದಾಟ ಓಕಳಿ ಅಂಗಳಕ್ಕೆ ಸೀಮಿತವಾಗುವಂಥದ್ದಲ್ಲ. ಅಥವಾ ಕೊಪ್ಪಲಿನವರು ಆಡಬೇಕೆಂದಿದ್ದ ನಾಟಕ ನಡೆಯುವುದೇ ಇಲ್ಲ. ರುದ್ರ ರಾವಳನ 'ಪಾರ್ಟು' ಮಾಡಬೇಕಿಲ್ಲ.ಚನ್ನೂರನನ್ನು ಜಜ್ಜುವಾಗ ಅವನು ನಿಜವಾದ ರಾಕ್ಷಸನೇ ಆಗುತ್ತಾನೆ. ಕಿಟ್ಟಿ ಆಡುವ ಮರಕೋತಿ ಆಟ ಕೂಡ 'ನ್ಯಾಯ'ವಾದ ಆಟವಾಗುಳಿಯದು. ಮರಕೋತಿ ಆಡುವವರಲ್ಲಿ ಕಿಟ್ಟಿ ಎಲ್ಲರಿಗಿಂತ ಚಿಕ್ಕವನು. "ಶಿವ ಬೇಕೆಂದೇ ತನ್ನನ್ನು ಹಿಡಿಯಲು ಬಂದಾಗ ಕಿಟ್ಟಿ ಇನ್ನೂ ಮೇಲೆ ತವೆಯುತ್ತ ರಾಜ ಮತ್ತು ಅವರ ಕಡೆ ನೋಡಿದ. ಅವರು ಕೆಳಗೆ ಧುಮುಕಿ ಕೋಲನ್ನು ಎತ್ತಿ ದೂರ ಎಸೆಯದೆ ಹಾಗೆ ಕೂತಿದ್ದು ಕಂಡು ಕಿಟ್ಟಿಗೆ ತುಂಬಾ ಕೋಪ ಬಂತು. ಶಿವ ಇನ್ನೇನು ಹಿಡಿದೇಬಿಟ್ಟ ಎನ್ನುವಾಗ ಕಿಟ್ಟಿ ತುಂಬ ಗಾಬರಿಯಾಗಿ ಕವಟಲೊಳಗಿಂದ ಕಾಲು ತೆಗೆದು ಬಳಕುವ ಕೊಂಬೆಗೆ ಜಿಗಿಯುತ್ತಿದ್ದಂತೆ ಮೇಲೆ ಹಿಡಿದಿದ್ದ ಸಣ್ಣ ಕೊಂಬೆ ಲಟ್ಟನೆ ಮುರಿದು ಕೆಳಗೆ ಬಿದ್ದ." ಕಮಲತ್ತೆ, ಮಾವ, ಕರಿಯ, ಲೋಂಪಿ ಮುಂತಾದವರಂತೆ ಆಟದ ಹುಡುಗರೂ ಕಿಟ್ಟಿ ಚಿಕ್ಕವನೆಂದು ತೋರಿಸುತ್ತಾರೆ. ಆಟದಲ್ಲೂ ಅವನು ಬಾಹ್ಯಜಗತ್ತಿ

ನೊಂದಿಗೆ ಸಮರ್ಪಕವಾಗಿ ಸಂಧಾನ ನಡೆಸದಂತೆ ಮಾಡುತ್ತಾರೆ. ಇದೇ ರೀತಿ ಆಟಕ್ಕೆ ಪಟಾಕಿಯಾಗಿ ಬರುವ ಮದ್ದು ಗೌರಿಯ ಪ್ರಾಣವನ್ನು ತೆಗೆಯುವ ಸಿಡಿಮದ್ದೂ ಆಗುತ್ತದೆ.

ಈ ಅಂಶಗಳನ್ನು ಕ್ರೋಢೀಕರಿಸಿದರೆ ಕಾಡು ಒಂದು ಸಂಕೀರ್ಣವಾದ, ಕಾವ್ಯ ಗುಣವುಳ್ಳ ಕೃತಿಯಾಗಿ ತೋರುತ್ತದೆ.

ಕಾಡು ಒಂದು ಮಗುವಿನ ಬೆಳವಣಿಗೆಗೆ ಸಂಬಂಧಪಟ್ಟಂತೆ ಮನಃಶಾಸ್ತ್ರಜ್ಞರನ್ನು ಕುತೂಹಲಗೊಳಿಸಬಲ್ಲದು; ಗಂಡು–ಹೆಣ್ಣು ಸಂಬಂಧ, ಗ್ರಾಮ್ಯಜೀವನಕ್ಕೆ ಸಂಬಂಧಪಟ್ಟಂತೆ ಸಮಾಜಶಾಸ್ತ್ರಜ್ಞರನ್ನು ಆಸಕ್ತಗೊಳಿಸಬಹುದು. ಆದರೆ ಇದೆಲ್ಲಕ್ಕಿಂತ ಮಿಗಿಲಾಗಿ, ತನ್ನ ವಿಶಿಷ್ಟಶಿಲ್ಪದಿಂದ, 'ಸಾವು' ಬಗ್ಗೆ ಮಗುವಿನ ಪ್ರಜ್ಞೆಯ ಮೂಲಕ ಚಿಂತನೆ ನಡೆಸುವ ಸಾಹಿತ್ಯಕ ಕೃತಿ.

ನಮ್ಮ ಅಸ್ತಿತ್ವದ ವಿಷಯದಲ್ಲಿ ನಾವು ಹೇಗೆ ವಾದ ವಿವಾದಮಾಡುವುದಿಲ್ಲವೋ ಹಾಗೆಯೇ ದೇವರ ಅಸ್ತಿತ್ವದ ವಿಷಯದಲ್ಲೂ ವಾದ ವಿವಾದ ಮಾಡಬೇಡಿರೆಂದು ನನ್ನ ಸೂಚನೆ.

ಕುರಿಯು ತೋಳವನ್ನು ನಂಬುವುದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವುದೇ ಲೇಸು.

ಗಾಂಧೀಜಿ

ಪರಸಂಗದ ಗೆಂಡೆತಿಮ್ಮ—ಒಂದು ಅನಿಸಿಕೆ

ಹೊರೆಯಾಲ ದೊರೆಸ್ವಾಮಿ

ಗದ್ಯ ಮತ್ತು ಪದ್ಯ ಈ ಎರಡು ಪ್ರಕಾರಗಳಲ್ಲೂ ಸಾಹಿತ್ಯ ಕೃಷಿಯನ್ನು ಮಾಡುವುದರ ಮೂಲಕ ತಮ್ಮ ಪರಿಸರವನ್ನು ಅದಮ್ಯವಾಗಿ ಹಿಡಿದಿಡಲು ಪ್ರಯತ್ನಿಸಿ, ಆ ಪ್ರಯತ್ನದಲ್ಲಿ ಸಾಕಷ್ಟು ಯಶಸ್ಸು ಗಳಿಸಿದ ಜೀವನೋತ್ಸಾಹದ ಲೇಖಕ ಶ್ರೀಕೃಷ್ಣ ಆಲನಹಳ್ಳಿ ಕಂಡುಂಡ ಬದುಕಿನನುಭವಗಳು ಹಲವಾರು. ಬದುಕಿನುದ್ದಕ್ಕೂ ಬೀಸು ನಡೆಯೊಂದಿಗೆ ನಡೆದ, ನಡೆದ ದಾರಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ಛಾಪಿಸುತ್ತ, ತಮಗೂ ತಮ್ಮ ಬರವಣಿಗೆಗೂ ಆ ಮೂಲಕ ಕನ್ನಡ ಸಾಹಿತ್ಯದ ಒಳಗೂ ತಮಗೊಂದು ದೃಢವಾದ ಸ್ಥಾನವನ್ನು ಗಿಟ್ಟಿಸಿಕೊಂಡ ಶ್ರೀಕೃಷ್ಣ ಆಲನಹಳ್ಳಿ ಬದುಕಿನ ಬಹುಮುಖಗಳನ್ನು ಸಂದರ್ಶಿಸಿದವರು. ಹಾಗೆ, ಅವರು ಸಂದರ್ಶಿಸಿದ ಒಂದು ಮುಖ 'ಪರಸಂಗದ ಗೆಂಡೆತಿಮ್ಮ'ನಾಗಿ ಮೂಡಿಬಂದು ಗ್ರಾಮೀಣ ಬದುಕಿನ ಒಂದು ಚಿತ್ರಣವನ್ನು ನಮಗೆ ತಂದುಕೊಡುತ್ತದೆ.

ಗೌವ್ವಳ್ಳಿಯ ಗೂಡೆ ವ್ಯಾಪಾರಿ, ಗ್ರಾಮೀಣ ಮುಗ್ಧ ಗೆಂಡೆತಿಮ್ಮ ಆಧುನಿಕ ನಾಗರಿಕತೆಯ ಪರಿಕರಗಳನ್ನು ಗೌವ್ವಳ್ಳಿ ಮತ್ತು ಅದರ ಸುತ್ತಮುತ್ತಲ ಗ್ರಾಮಗಳಲ್ಲಿ ಮಾರಾಟ ಮಾಡುವುದರ ಮೂಲಕ ಆಧುನಿಕತೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹುಟ್ಟುಹಾಕಿದವನು. ಅವನ ಹೆಂಡತಿ ಚೆಂದುಳ್ಳಿ ಮರಂಕಿ ಆಧುನಿಕತೆಯನ್ನು ಮತ್ತಷ್ಟು ತೀವ್ರವಾಗಿ ಹಬ್ಬಿಸುವುದರೊಂದಿಗೆ ತನ್ನಲ್ಲೂ ಅಳವಡಿಸಿಕೊಂಡ ಯೌವನದ ಕುದಿತವಿರುವ ಬುಸುಗುಡುವ ಹೆಣ್ಣು. ಈ ಎರಡು ಭಿನ್ನ ನಡೆಗಳನ್ನುಳ್ಳ ಗೆಂಡೆತಿಮ್ಮ ಮತ್ತು ಮರಂಕಿಯರ ಬದುಕಿನ ಚಿತ್ರಣವನ್ನು ಪ್ರಫುಲ್ಲವಾಗಿ ಒಳಗೊಂಡಿರುವ 'ಪರಸಂಗದ ಗೆಂಡೆತಿಮ್ಮ' ಸರಳ ರೇಖೆಯಲ್ಲಿ ಸಾಗುವ ಸರಳ ಕಾದಂಬರಿಯಾದರೂ ಅದು ನೀಡುವ ಗ್ರಾಮೀಣ ಬದುಕಿನ ಚಿತ್ರಣ ಮಾತ್ರ ಅನನ್ಯವಾದುದು. ಈ ಮಾತನ್ನೇ ಇನ್ನೂ ಕೊಂಚ ಮುಂದುವರಿಸಿ ಹೀಗೆ ಹೇಳಬಹುದೆಂದು ತೋರುತ್ತದೆ.

'ಪರಸಂಗದ ಗೆಂಡೆತಿಮ್ಮ' ಕಾದಂಬರಿಯುದ್ದಕ್ಕೂ ಎರಡು ಪ್ರಧಾನ ಅಂಶಗಳು ಎದ್ದು ಕಾಣುತ್ತವೆ. ಗ್ರಾಮೀಣ ಮುಗ್ಧತೆಯ ಮೂರ್ತರೂಪವಾಗಿ ಮೂಡಿಬಂದಿರುವ ಇನ್ನೊಬ್ಬರಿಗೆ ಕೇಡು ಬಗೆಯದ, ತಪ್ಪು ನೋಡಲು ಒಪ್ಪದ, ತಪ್ಪು ಮಾಡಲು ಆಗದ, ದ್ವಂದ್ವಾತ್ಮಕವಲ್ಲದ ಬದುಕನ್ನು ಬದುಕುತ್ತಿರುವ ಪರಸಂಗದ ಗೆಂಡೆತಿಮ್ಮನ ಜೀವನಗತಿ ಒಂದು ಬಗೆಯದಾದರೆ, ಸಹಜವಾದ ರೂಪಲಾವಣ್ಯದಿಂದ ವರ್ಧಿಸಿ, ಅದಕ್ಕೆ ಮತ್ತಷ್ಟು ಇಂಬುಕೊಡಲು ಹವಣಿಸುವ 'ಆರುವಗಿತ್ತಿ ಸುದ್ದ'ದ (ಗೆಂಡೆತಿಮ್ಮ, ಮರಂಕಿಯರು ಕೆಳಜಾತಿ ಎಂದು ಪರಿಗಣಿತವಾದ ಪರಿವಾರ ಅಥವಾ ನಾಯ್ಕರ ಸಂಗಡಕ್ಕೆ ಸೇರಿದವರು ಎಂಬುದು ಇಲ್ಲಿ ಮುಖ್ಯವಾಗುತ್ತದೆ) ಯೌವನದಿಂದ ಪುಟಿಯುತ್ತಿರುವ, ಮರಂಕಿಯ– ಜೀವನವನ್ನು ಗಾಢವಾಗಿ ಅನುಭವಿಸುವ ಅದಮ್ಯ ಹಂಬಲ–ಇನ್ನೊಂದು ಬಗೆಯಾಗಿ ಕಾದಂಬರಿಯಲ್ಲಿ ಮೂಡಿಬಂದಿದೆ. ಪರಸಂಗಗಳ ಭಾವಲೋಕವಲ್ಲಿ ಜನಪದ ಸಮಾಜದ ಪ್ರಾತಿನಿಧಿಕ ವ್ಯಕ್ತಿಯಾಗಿ ಗಮನದ ಎಣ್ಣೆ, ಬಾಡಿ, ಲಂಗ, ಟೇಪು ಮುಂತಾದವುಗಳ ಮೂಲಕ ನಾಗರಿಕತೆಯನ್ನು ಇತರರಲ್ಲಿ ಬಿತ್ತುತ್ತ ಪರಸಂಗದ ಗೆಂಡೆತಿಮ್ಮ ಬೆಳೆಯುತ್ತ ಹೋದರೆ, ಮರಂಕಿ ಆಧುನಿಕತೆಗಳನ್ನು ತನ್ನ ಬದುಕಿನಲ್ಲೇ ಅಳವಡಿಸಿಕೊಂಡು ಅನುಭವಿಸುವ ಹಂಬಲದ ಹೆಣ್ಣಾಗಿ ಕಾದಂಬರಿ ಉದ್ದಕ್ಕೂ ಕಂಡುಬರುತ್ತಾಳೆ. ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗುವ ಬದಲು ವಿರುದ್ಧ ದಿಕ್ಕಿನಲ್ಲಿ ಸಾಗಿ, ನೈತಿಕ ಪ್ರಶ್ನೆ ಬಂದಾಗ, ಅಂತಿಮವಾಗಿ ದುರಂತವನ್ನಪ್ಪುತ್ತವೆ.

ಇದರೊಂದಿಗೆ ಕೆಲವಾರು ಪ್ರಶ್ನೆಗಳು ನಮ್ಮನ್ನು ಕೆದಕದೆ ಇರಲಾರವು. ಗೆಂಡೆತಿಮ್ಮ ಮತ್ತು ಮರಂಕಿಯರ ದುರಂತಕ್ಕೆ ಅವರಷ್ಟೇ ಕಾರಣರೆ? ಅದರಲ್ಲಿ ಗೆಂಡೆತಿಮ್ಮನ ಪಾಲೆಷ್ಟು? ಮರಂಕಿಯ ಪಾಲೆಷ್ಟು? ಅವರಿಬ್ಬರು ಬದುಕಿದ್ದ ಸಮಾಜದ ಪಾಲೆಷ್ಟು? ಬದುಕಿನಲ್ಲಿ ನೈತಿಕ ನೆಲೆಗಟ್ಟು ಎನ್ನುವುದರ ಇತಿಮಿತಿಯೇನು? ಅದಕ್ಕೆ ನಾವೆಷ್ಟು ಬೆಲೆ ತೆರಬೇಕು? ಈ ಮುಂತಾದ ಪ್ರಶ್ನೆಗಳು ನಮ್ಮ ಮುಂದೆ ಸುಳಿದಾಡ ತೊಡಗುತ್ತವೆ

ಮೇಲು ನೋಟಕ್ಕೆ ಕಾಣುವಹಾಗೆ, ಗೆಂಡೆತಿಮ್ಮ ಹಾಗೂ ಮರಂಕಿಯರಿಬ್ಬರ ದಾರುಣ ಅಂತ್ಯಕ್ಕೆ ಮರಂಕಿಯೇ ಕಾರಣವೆಂದು ತೀರ್ಮಾನಿಸುವುದು ಸಮಸ್ಯೆಯನ್ನು ಅತ್ಯಂತ ಸರಳೀಕರಿಸಿದಂತಾಗುತ್ತದೆ. ಬದುಕಿನ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳಲಾಗದೆ ಸೋತಂತಾಗುತ್ತದೆಯೇ ಹೊರತು ಅದರ ಒಳ ಚಾಲನೆಗಳನ್ನು ಅರ್ಥಮಾಡಿಕೊಂಡಂತಾಗುವುದಿಲ್ಲ.

ಮೂಲಭೂತವಾಗಿ ಗೆಂಡೆತಿಮ್ಮ 'ಸುಳ್ಳು ತಟವಟ ಇಲ್ಲದ' ಸರಳ ವ್ಯಕ್ತಿ. ಅವನಾಯಿತು, ಅವನ ವ್ಯಾಪಾರವಾಯಿತು. ತನ್ನ ಗೂಡೆ ವ್ಯಾಪಾರದ ಮೂಲಕ ಹಳ್ಳಿಗಾಡಿನ ಸಮಾಜದಲ್ಲಿ ತನಗರಿವಿಲ್ಲದೆ ಆಧುನಿಕತೆಯನ್ನು ಬಿತ್ತಿದನು. ಅದು ತಪ್ಪೆಂದು ಗೌಡ್ರಳ್ಳಿಯ ಚಾವಡಿಯಲ್ಲಿ ಸೇರಿದವರು ಆರೋಪಿಸಿದಾಗ ಯಾವ ಹಿಂದುಮುಂದು ನೋಡದೆ, ತನ್ನ ಗೂಡೆ ವ್ಯಾಪಾರವನ್ನು ಸಮರ್ಥಿಸಿಕೊಳ್ಳುವ ಮಟ್ಟಕ್ಕೂ ಹೋಗದೆ 'ತಿಳೀದೆ ಮಾಡ್ಬುಟ್ಟೆ ಕಣ್ರಪ್ಪ. ನೀವು ತಿಳಿದವ್ರು ಈ ದಿಕ್ಕಿಲ್ಲದ ಪರದೇಸಿ ತಪ್ಪೆಲ್ಲ ವಟ್ಟಿಗಾಕಬುಡಿ. ಇನ್ನೊಂದು ಸರ್ತಿ ಈ ಪಾಪಕ್ಕೆ ಕೈಯಿಟ್ರೆ ನನ್ನ ಕೈಗೆ ನಾಗರಾವು

ಕಡೀಲಿ' ಎಂದು ತನ್ನ ತಪ್ಪನ್ನು ಸಲೀಸಾಗಿ ಒಪ್ಪಿಕೊಳ್ಳುವನು. ಪರಸಂಗಗಳ ಭಾವ ಕೋಶದಲ್ಲಿ ಸಾಲುಹುಂಡಿ, ಗೌವ್ವಳ್ಳಿ, ಮೈಸೂರು ಮತ್ತು ಅದರ ಸುತ್ತಮುತ್ತಲ ಹೊಲ, ತೋಟ, ಪ್ರಕೃತಿಯ ಒಡನಾಟದಲ್ಲಿ ಅಕಲುಷಿತ ಮನಸ್ಕನಾಗಿ ಬದುಕಲು ನಡೆಸಿದ ಅವನ ಪ್ರಯತ್ನಗಳು ಅವನಿಗೊಂದು ವ್ಯಕ್ತಿತ್ವ ರೂಪಿಸಲು ನೆರವಾದವು. ಗೌವ್ವಳ್ಳಿಯ ಹಿರಿಯರಾದ ಮಾಲೇಗೌಡ, ದೇವೀರವ್ವ ಮುಂತಾದವರೊಂದಿಗೆ ಬೆರೆಯುವಷ್ಟೇ ಸಲೀಸಾಗಿ ಚಿಕ್ಕವರಾದ ರತ್ನಿ ಮುದ್ದರೊಂದಿಗೂ ಬೆರೆಯಬಲ್ಲನು. ಆದರೆ, ತನ್ನ ಸ್ವಾಭಿಮಾನಕ್ಕೆ ಕುಂದುತರುವ ಪ್ರಸಂಗವೇನಾದರು ಬಂದರೆ, ತಿರುಗಿ ಬೀಳುವುದರಲ್ಲಿ ಹಿಂಜರಿಯದವನು. ತನ್ನ ಹೆಂಡತಿ ಮರಂಕಿ ಮತ್ತು ಮೇಷ್ಟ್ರು ಶಿವಣ್ಣ—ಈ ಇಬ್ಬರ ನಡುವಿನ ಸಂಬಂಧದ ಬಗ್ಗೆ ಕಾಳ ಕೀಳಾಗಿ ಮಾತನಾಡಿದನೆಂದು ತಿಳಿದುಬಂದಾಗ, ಗೆಂಡೆತಿಮ್ಮ ಬುಸುಗುಟ್ಟುತ್ತ 'ಆ ಮಗಂಗೆ ಉಟ್ನಿಲ್ಲ ಅನ್ನಸ್ದೆ ಬುಟ್ಟೇನ? ಏನೊ ವೋಗ್ಲಿ ಅಂದ್ರೆ ಅವನವ್ವನ್ನಾ....ಅಲ್ಲಿ ತನ್ಕ ಬಂದ್ನ ಮಗ' ಎಂದು ಮಾರಿಗುಡಿಗೆ ಬಂದು ಕಾಳನನ್ನು ಕುಕ್ಕಿದ್ದು, ತನ್ನ ಹೆಂಡತಿ ಸೋಪು ತರಲು ಹೇಳಿದಾಗ, ಶಾಮಿ ಚೇದಿಯಮ್ಮ ಕಟಕಿ ಆಡಿದಾಗ ಗೆಂಡೆತಿಮ್ಮನ ಪ್ರತ್ಯುತ್ತರ—ಇಂಥ ಕೆಲವಾರು ಸಂದರ್ಭ ಗಳಲ್ಲಿ ಅವನು ತನ್ನ ಸ್ವಾಭಿಮಾನವನ್ನು ಪ್ರಕಟಿಸಿದ್ದು—ಇವೆಲ್ಲ ಮೇಲಿನ ಮಾತಿಗೆ ಪೂರಕವಾಗಿ ನಿಲ್ಲುತ್ತವೆ.

ಹಾಗೆಯೆ ಒಂದೇ ಬಾರಿಗೆ ಇನ್ನೊಬ್ಬರನ್ನು ನಂಬುವ, ನಂಬಿದವರನ್ನು ಸಂಶಯಿಸಲಾರದ, ಸಾದಾ ಬದುಕಿನ ನಡೆಯುಳ್ಳವನಾದ್ದರಿಂದಲೇ ಗೆಂಡೆತಿಮ್ಮ ಸಾಲುಂಡಿಯ ಮೇಷ್ಟ್ರಾದ ಉಳಿಮಾವಿನ ಶಿವಣ್ಣನನ್ನು [ಮರಂಕಿಯ ಊರು ಉಳಿ ಮಾವು ಎಂಬುದು ಇಲ್ಲಿ ಗಮನಾರ್ಹ] ಅವನು ಸಂಶಯಿಸಲಾರ. ತನ್ನ ಹೆಂಡತಿ ಹಾಗೂ ಶಿವಣ್ಣನ ನಡುವಿನ ಸಂಬಂಧಗಳ ಬಗ್ಗೆ ಬೇರೆಯವರ ಮಾತಿನಿಂದ ಕೊಂಚ ವಿಚಲಿತನಾದಂತೆ ಕಂಡುಬಂದರೂ ['........ಗೆಂಡೆತಿಮ್ಮನ ಮನಸ್ಸಿನಲ್ಲಿ ಅವನ (ಕಾಳ) ಮಾತೇನಾದ್ರೂ ನಿಜವಾಗಿದ್ದರೆ ಅಂತ ಅನ್ನಿಸಿ ಒಳಗೇ ನಡುಗಿದ. ಇಲ್ಲ ಖಂಡಿತಾ ಮರಂಕಿ ತನಗೆ ದ್ರೋಹ ಮಾತಾಡುವವಳಲ್ಲ. ಶಿವಣ್ಣ ಕೂಡ ದೇವರಂಥ ಮನುಷ್ಯ'.] ಮನುಷ್ಯರ ಬಗ್ಗೆ ಅವನಿಗಿರುವ ದೃಢವಾದ ನಂಬಿಕೆ ಅದನ್ನು ಕಿತ್ತೆಸೆಯುತ್ತದೆ. ಹೆಂಡತಿಯಿದ್ದೂ ಏಕಾಕಿತನವನ್ನು ಆಗಾಗ್ಗೆ ಅನುಭವಿಸುವ ಗೆಂಡೆತಿಮ್ಮ ಮರಂಕಿ-ಶಿವಣ್ಣರ ನಡುವೆ ಇದ್ದ ಸಂಬಂಧ ಋಜುವಾತಾಗುತ್ತಿದ್ದ ಹಾಗೆ, ಮಾನಸ ನಂಬಿಕೆ ಛಿದ್ರಛಿದ್ರವಾಗಿ, ಅವನ ಸ್ವಾಭಿಮಾನಕ್ಕೆ ಹೊಡೆತ ಬಿದ್ದು, ಅವನ ಅಂತ್ಯ ತಾನೇ ತಾನಾಗುತ್ತದೆ.

ಹಾಗಾದರೆ, ಗೆಂಡೆತಿಮ್ಮನಿಗೆ ಮರಂಕಿ ಅನುಕೂಲಳಾದ ಹೆಂಡತಿ ಆಗಿರಲಿಲ್ಲವೆ? ಅವನ ಬದುಕಿನ ಜಾಡನ್ನು ಕಂಡುಹಿಡಿದು, ಆ ದಾರಿಯಲ್ಲಿ ಸಾಗುವ ಆಸೆ ಆಕೆಗಿರ ಲಿಲ್ಲವೆ? ಎಂಬಂಥ ಪ್ರಶ್ನೆಗಳೂ ಏಳಬಹುದು. 'ಊ ಆ ಕೆಂಚಿ ಕಣ್ಕೊಂಡು ನಾನು ಕಾಲ ಆಕ್ದಂಗೆ' ಎಂಬ ಗೆಂಡೆತಿಮ್ಮನ ಅನಿಸಿಕೆಯಲ್ಲಿ ಮರಂಕಿಯ ಬಗ್ಗೆ ಸಣ್ಣ ಅನುಮಾನವಿದ್ದರು 'ಇವಳ್ನೆ ಯಾಕಾಗಬ್ಯಾಡ್ದು' ಎಂಬ ಅನಿಸಿಕೆ ಒಳಗೊಳಗೆ ಬಲವತ್ತರವಾಗಿ ಮೊರೆಯುತ್ತದೆ. ಅದೆಲ್ಲಕ್ಕಿಂತ ಮಿಗಿಲಾಗಿ ಯೌವನದ ಸಹಜವಾದ

ಬಯಕೆಭಾವನೆಗಳು ಅವನೊಳಗೂ ಗರಿಗೆದರಿದ್ದರಿಂದಲೆ ಗೆಂಡೆತಿಮ್ಮ ಮದುವೆಗೆ ಒಳಗೊಳಗೆ ಹಾತೊರೆಯುವುದು. ಮರಂಕಿಯ ರೂಪಕ್ಕೆ ಮೋಹಗೊಳ್ಳುವುದು.

ಮರಂಕಿ ಹೆಂಡತಿಯಾಗಿ ಬಂದ ವೇಳೆ, ಮನೆಯಲ್ಲಿ ಎಷ್ಟೇ ಅಪವಾದಾಭಾಸಗಳು ಹೊಗೆಯಾಡತೊಡಗಿದರೂ ಅವನ ವ್ಯಾಪಾರೋತ್ಸಾಹ ಆ ಮೂಲಕ ಅವನ ಜೀವನೋತ್ಸಾಹ ಸಾಕಷ್ಟು ಕುದುರಿಕೊಳ್ಳುತ್ತಿರುವುದನ್ನು ಕಾದಂಬರಿಕಾರರು ಗುರುತಿಸಿದ್ದಾರೆ. ಅಷ್ಟೇ ಅಲ್ಲ, ಆ ಬಗ್ಗೆ ಗೆಂಡೆತಿಮ್ಮನಿಗೂ ಹೆಮ್ಮೆ ಇದೆ. ತನ್ನದಾದ ಸ್ವಂತ ಮನೆ ಮಾಡಿಕೊಳ್ಳಹೋಗುವಾಗ ಹೆಂಡತಿ, ಮಾವನ ಮಾತಿನಂತೆ ಪಾಲಾಗುವುದು, ಹೆಂಡತಿಗೆ ಬೇಕಾದ ವಸ್ತುಗಳನ್ನು ಮೈಸೂರಿನಿಂದ ತಂದುಕೊಡುವುದು—ಇಂಥ ಎಲ್ಲ ಕ್ರಿಯೆಗಳಲ್ಲಿ [ಖರ್ಚು ಹೆಚ್ಚಾದಾಗ ಕೊಂಚ ರೇಗುವುದನ್ನು ಬಿಟ್ಟರೆ] ಅವನು ಮರಂಕಿಯೊಂದಿಗೆ ಬೆಳೆಯುತ್ತ ಸಾಗುವನು. ಮರಂಕಿ ಬಸಿರಿಬಯಕೆಯನ್ನು ವ್ಯಕ್ತಪಡಿಸಿದಾಗ [ಗ್ರಾಮಫೋನ್ ಕೊಳ್ಳುವ ಪ್ರಸಂಗ. 'ಸರಿ ಬಿಮ್ಮನಸಿ ಏನೊ ಬಸ್ಕಂಡವಳೆ. ನಾನ್ಯಾಕೆ ಕ್ಯಾಸ ಮಾಡ್ಯಾಬೇಕು'.] ಹೆಂಡತಿಯ ಬಯಕೆಗೆ ಪೂರಕವಾಗಿ ನಿಲ್ಲುವ ಅವನು ಅವಳ ಬಸಿರಿಂದ ತನ್ನ ಬದುಕನ್ನು ಮತ್ತಷ್ಟು ತುಂಬಿಕೊಳ್ಳಲು ಹಾತೊರೆದನಾದರೂ ಅದು ಫಲ ನೀಡುವಲ್ಲಿ ಬೇರೊಂದು ಬಗೆಯಾಯಿತು.

ಹೀಗೆ ಗ್ರಾಮೀಣ ಮುಗ್ಧತೆ, ನಿಸಂಶಯ ಪ್ರವೃತ್ತಿ, ಸ್ವಾಭಿಮಾನ ಚೇತನವಾದ ಗೆಂಡೆತಿಮ್ಮನ ಜೀವನ ವಿಧಾನ ಒಂದರೊತನೊಂದು ಹೆಣೆದುಕೊಂಡು ಅವನ ವ್ಯಕ್ತಿತ್ವಕ್ಕೊಂದು ರೂಪ ಕೊಡುವ ಹಾದಿಯಲ್ಲೇ ದುರಂತವಾದುದನ್ನು ಸೂಕ್ಷ್ಮವಾಗಿ ಚಿತ್ರಿಸಿರುವ ಲೇಖಕರು ಅವುಗಳೊಳಗೇ ಅಡಗಿರುವ ಗೆಂಡೆತಿಮ್ಮನ ಇತಿಮಿತಿಗಳನ್ನೂ ಗುರುತಿಸಿದ್ದಾರೆ. ಹೆಸರೇ ಹೇಳುವಂತೆ 'ಗೆಂಡೆ' 'ತಿಮ್ಮ'ನಾದ ಗೆಂಡೆತಿಮ್ಮನಿಗೆ 'ಆರುವಗಿತ್ತಿ ಸುದ್ದಿ'ದ ಮರಂಕಿ ಅನುರೂಪಳಾಗುವಳೆ ಎಂಬ ಸಂಶಯವನ್ನು ಕಾದಂಬರಿಯೊಳಗೆ ಲೇಖಕರು ಅಡಗಿಸಿಟ್ಟಿರುವ ಹಾಗೆಯೂ ತೋರುತ್ತದೆ.

ಇನ್ನು ಈ ದುರಂತಕ್ಕೆ ಮರಂಕಿ ಎಷ್ಟರಮಟ್ಟಿಗೆ ಹೊಣೆಗಾರಳಾಗುವಳು ಎಂಬ ಪ್ರಶ್ನೆಯೂ ಎದುರು ನಿಲ್ಲುತ್ತದೆ. ನಂಜನಗೂಡಿನ ಮೂಲಕ ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದ ಉಳಿಸೂರಿನ ಮರಂಕಿ ಗೆಂಡೆತಿಮ್ಮನೊಡನೆ ಒಗೆತನ ಮಾಡಲು ಸಾಲುಂಡಿಗೆ ಬಂದವಳು. ಹುಟ್ಟಿನಿಂದ ಸಹಜಸುಂದರಿಯಾಗಿದ್ದ ಅವಳು ಅದನ್ನಿನ್ನಷ್ಟು ವರ್ಧಿಸಿಕೊಳ್ಳಲು ಯಾವಾಗಲೂ ತವಕಗೊಂಡವಳೇ. ತನ್ನ ಸಂಸಾರವನ್ನು ಹಸನು ಮಾಡಿಕೊಳ್ಳಬೇಕೆಂಬ ಸದಾ ತುಡಿವ ಮನಸ್ಸಿನ ಅವಳು ಸಾಲುಂಡಿಯಲ್ಲಿ ಮುಂದುವರೆಸಿದ್ದೂ ಅದನ್ನೇ. ಮನೆ ಸಾರಿಸುವುದು, ಆಗಿಂದಾಗ್ಗೆ ಸೋಪುಹಾಕಿ ಬಟ್ಟೆ ಒಗೆಯುವುದು, ಎರಡು ದಿನಗಳಿಗೊಮ್ಮೆ ಸ್ನಾನ ಮಾಡುವುದು, ಲಂಗ ಕಾಣುವ ಹಾಗೆ ತೆಳ್ಳನೆಯ ಸೀರೆ ಉಡುವುದು, ತಲೆಗೆ ಗಮಗಮ ಎಣ್ಣೆ ಹಾಕಿಕೊಳ್ಳುವುದು, ಹಾಗೂ ತನ್ನ ಗಂಡನು ತನ್ನಹಾಗೆ ಶುದ್ಧವಾಗಿ, ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದು—ಈ ಎಲ್ಲ ಕ್ರಿಯೆಗಳು ಒಂದಲ್ಲ ಒಂದು ರೀತಿಯಲ್ಲಿ ಮೇಲಿನ ಅಂಶವನ್ನೇ ಒತ್ತಿ ಹೇಳುತ್ತವೆ. ಅವಕ್ಕೆಲ್ಲ ಮೂಗು ಮುರಿಯುವ ಅತ್ತೆ ಬೇದಿಯಮ್ಮನ ಮಾತಿಗಾಗಲಿ ಅಥವಾ ಭಾವ ಗೂಳನಾಯ್ಕನ ಮಾತಿಗಾಗಲಿ ಅವಳು ಎಂದೂ ಸೊಪ್ಪು ಹಾಕಿದವಳಲ್ಲ. ತನ್ನ ಜೀವನ ದೃಷ್ಟಿಕೋನ ಏನಿದೆಯೊ ಅದನ್ನೇ ನಡೆಸಿ ಸಾಗಿದಳು.

ಸಾಲುಂಡಿಯು ಯೌವನಸ್ಥರನ್ನು ಮಾತ್ರವಲ್ಲದೆ ವಯಸ್ಸಾದವರ ಮನಗಳನ್ನೂ ತನ್ನ ಬಿಂಕಬಿನ್ನಾಣಗಳಿಂದ ಬುಗುರಿಯಾಡಿಸುವ ಮರಂಕಿ ತನ್ನತನಕ್ಕಾಗಿ ಹೆಮ್ಮೆಪಟ್ಟುಕೊಂಡವಳು. ಅದು ಬೇರೆ ನೋಡುಗರಿಗೆ ದುರಹಂಕಾರವಾಗಿ ಕಂಡರೂ ಅವಳಿಗೆ ಮಾತ್ರ ತನ್ನತನದ ವಿಕಾಸವಷ್ಟೇ. ಆ ವಿಕಾಸಕ್ಕೆ ಯಾರೇ ಅಡ್ಡಿ ಬಂದರೂ ಅವಳು ಕೇರು ಮಾಡುವವಳಲ್ಲ. ತನಗೆ ಅನಿಸಿದ್ದನ್ನು ನೇರವಾಗಿ ಪಡೆಯುವ, ತನ್ನ ಸುಖ ಸಂತೋಷವನ್ನು ಸದಾ ಹೆಚ್ಚಿಸಿಕೊಳ್ಳುವ ಮನಸ್ಥಿತಿಯ ಮರಂಕಿ ಗಾಢ 'ಭೌತಿಕವಾದಿ' ಎಂದು ಕರೆದರೆ ತಪ್ಪಾಗದು. ಈ ಹಂತದಲ್ಲಿಯೆ ಗೆಂಡೆತಿಮ್ಮನಿಗೂ ಮರಂಕಿಗೂ ತಿಳಿಯದಹಾಗೆ ಬಿರುಕೊಂದು ಕಾಣಿಸಿಕೊಳ್ಳುವುದು; ರಹಸ್ಯವೊಂದು ಅಡಗಿರುವುದು; ಅವರಿಬ್ಬರ ಬದುಕಿನ ದಾರುಣ ದುರಂತದ ಮೊಳಕೆಯಿರುವುದು.

ತನ್ನ ಸೋದರ ಮಾವನ ಮಗ ಮಹದೇವನಾಯಕ, ಮೇಷ್ಟ್ರು ಶಿವಣ್ಣನೊಂದಿಗೆ ಕೂಡುವಾಗಲು ಅವಳದು 'ಭೌತಿಕವಾದಿ' ಮನಸ್ಸು. ಈ ಸಂದರ್ಭದಲ್ಲಿ ಅವಳಿಗೆ ಶೀಲ-ಅಶ್ಲೀಲ, ನೈತಿಕತೆ ಇಂಥವುಗಳು ಸಣ್ಣದಾಗಿ ಕಾಡಿದರೂ ಅವುಗಳನ್ನು ಒಂದೇ ಏಟಿಗೆ ಒತ್ತರಿಸಿಹಾಕಿ ತನ್ನ ಸುಖ ಸಂತೋಷವನ್ನು ಎಣೆಯಿಲ್ಲದೆ ಪಡೆಯುವಳು. ಅದು ತಪ್ಪಾಯಿತೆಂದು ತಿಳಿದಾಗ ಪಶ್ಚಾತ್ತಾಪ ಪಡುವ ಮರಂಕಿಯ ವ್ಯಕ್ತಿತ್ವವನ್ನು ಬೇರೊಂದು ರೀತಿಯಲ್ಲಿ ನೋಡಬೇಕಾಗುತ್ತದೆ. ಇದು ಲೇಖಕರ ಸಮ್ಮತಿ ಕೂಡ. ["ಹಿಂದೆ ಎಷ್ಟೋ ಸಲ 'ಯಾರು ಮಾಡಬಾರದ್ದೇನೂ ಮಾಡಿಲ್ಲ'ವೆಂದು ತನಗೆ ತಾನೆ ಸಂತೈಸಿಕೊಂಡಿದ್ದ ಅವಳಿಗೆ ತನ್ನ ಗಂಡ ಇಷ್ಟಕ್ಕಾಗಿ ಪ್ರಾಣ ಕಳೆದುಕೊಂಡು ಬಿಡುತ್ತಾನೆಂದು ಒಂದಿಷ್ಟಾದರೂ ಅನ್ನಿಸಿದ್ದರೆ ಅವಳು ಖಂಡಿತ ಈ ಸುಖವನ್ನು ಬಯಸುತ್ತಿರಲಿಲ್ಲ. ಶಿವಣ್ಣನಂಥವರನ್ನು ಇಟ್ಟುಕೊಳ್ಳುವುದು ಕೂಡ ಒಂದು ಸಾಮಾಜಿಕ ಪ್ರತಿಷ್ಠೆಯೆಂದೆ ತಿಳಿದಿದ್ದ ಅವಳ ಮುಗ್ಧ ಮನಸ್ಸನ್ನು ಯಾವ ನೈತಿಕ ಮೌಲ್ಯಗಳೂ ಗಾಢವಾಗಿ ಕಾಡಿರಲಿಲ್ಲ."] ಹೀಗೆ, ದೇಹದ ಬಯಕೆ ಸಾಮಾಜಿಕ ಪ್ರತಿಷ್ಠೆ ಮತ್ತು ಆಧುನಿಕ ನಾಗರಿಕತೆಯ ಪ್ರತೀಕವಾದ ಶಿವಣ್ಣನ ಸಹವಾಸ ಮುಪ್ಪುರಿಗೊಂಡು ಅವಳ ವ್ಯಸನಗಳಲ್ಲಿ ಬಯಕೆಗಳು ಬಳುಕಾಡತೊಡಗಿ ಅವುಗಳಿಗೆ ಓತುಬಿದ್ದ ಮರಂಕಿ–ತನ್ನ ಪ್ರೀತಿಯ ಗಂಡನಿಗೆ ತನಗರಿವಿಲ್ಲದೆ ತಪ್ಪು ಮಾಡಿದಳೆ ಎಂಬ ಅನುಮಾನವು ಅಲ್ಲಲ್ಲಿ ಇಣಿಕಿ ಹಾಕುವುದುಂಟು.

ಮರಂಕಿಯ ಮತ್ತೊಂದು ಗಾಢ ವ್ಯಕ್ತಿತ್ವವೆಂದರೆ ಅವಳಲ್ಲಿ ಮನೆ ಮಾಡಿರುವ ಗಟ್ಟಿತನ. ಯಾವುದಕ್ಕೂ ಬಗ್ಗದ, ಮೇಲುಜಾತಿಗೆ ಬಾಗದ ಸ್ವಾಭಿಮಾನ. ಗೌನ್ಹಳ್ಳಿಯ ಗೌಡರ ಮನೆಗೆ ಗಂಡ ಗೆಂಡೆತಿಮ್ಮ ಕರೆದಾಗ ಅಲ್ಲಿಗೆ ಹೋಗಲೊಪ್ಪದ ಮನಸ್ಸು. ಅಲ್ಲಿ ಹೋಗಿ ಅವರಿಗಿಂತ ಕೀಳಾಗಿ ಒಂದು ದಿವಸದ ಮಟ್ಟಿಗೂ ಬದುಕಲು ಒಪ್ಪದ ಅವಳ ದೃಢ ಚಿತ್ತ. ಈ ಸ್ವಾಭಿಮಾನವನ್ನು ಗುರುತಿಸುತ್ತಲೇ ಲೇಖಕರು ಅವಳ 'ಪ್ರಭಾವ'ದ ಒಂದು ಮುಖವನ್ನೂ ಪರಿಚಯ ಮಾಡಿಕೊಡುವರು.

ಮರಂಕಿ ಹೊಸತನವನ್ನು (ತನ್ನ ಪ್ರಭಾವವನ್ನು) ಬಿತ್ತತೊಡಗಿದ್ದು ಕೇವಲ ತನ್ನ ಮನೆಯಲ್ಲಿ ಮಾತ್ರವಲ್ಲ. ಸಾಲುಂಡಿಯನ್ನು ಬಿಟ್ಟು ಎಂದೂ ಗೌನ್ಹಳ್ಳಿಗೇ ಕಾಲಿಕ್ಕದ ಅವಳು ತಾನು ಇದ್ದಲ್ಲಿಂದಲೇ ಹೊಸದನ್ನು ಪಸರಿಸುವ ಪರಿಯನ್ನು

ಕಾದಂಬರಿಕಾರ ಎಚ್ಚರಿಕೆಯಿಂದ ಹಿಡಿದಿಟ್ಟಿದ್ದಾರೆ. '....ಗೆಂಡೆತಿಮ್ಮ ಪ್ರತಿಸಲ ವ್ಯಾಪಾರಕ್ಕೆ ಹೊರಟಾಗಲೂ ಅವನ ಜೊತೆ ಮೈಸೂರಿಗೆ ಬಂದು ತಾನೇ ಗೌವ್ವಳ್ಳಿಯ ಹೆಣ್ಣು ಮಕ್ಕಳ ಗೂಢ ಬಯಕೆಗಳನ್ನು ತೃಪ್ತಿಗೊಳಿಸುವ ಷೋಕಿ ವಸ್ತುಗಳನ್ನು ಖರೀದಿಸಿ ಗಂಡನ ಮೂಲಕ ಗೌವ್ವಳ್ಳಿಗೆ ಕಳಿಸುತ್ತಿದ್ದಳು. ಒಂದೊಂದು ಸಲ ಅವಳು ಮೈಸೂರಿಗೆ ಬಂದಾಗಲೂ ಏನಾದರೊಂದು ಅಪೂರ್ವ ವಸ್ತುವೊಂದನ್ನು ಕುಡುಹಿಡಿಯು ತ್ತಿದ್ದಳು. ಉಜ್ವಲವಾದ ನಾಗರಿಕತೆಯಿಂದ ಜಗಜಗಿಸುವ ಮೈಸೂರು ನಗರಕ್ಕೆ ಇಷ್ಟು ಸಮೀಪದಲ್ಲಿದ್ದರೂ ಗೌವ್ವಳ್ಳಿ ತನ್ನ ಸಹಸ್ರಾರು ವರ್ಷಗಳ ಜೀವನ ಪದ್ಧತಿಯಿಂದ ಕಿಂಚಿತ್ತೂ ಬದಲಾಗಿರಲಿಲ್ಲ. ಯಾವುದೇ ನಾಗರಿಕ ಬಯಕೆಯೂ ಆ ಊರಿನ ಪಾಲಿಗೆ ಅಸ್ಪೃಷ್ಟ. ತಮ್ಮ ಜಗತ್ತು ಬೇರೆ. ಆ ಪ್ಯಾಟೆಯುವರ ಜಗತ್ತು ಬೇರೆ. ತಮ್ಮ ಅವರ ರೀತಿ ನೀತಿಗಳೂ ಬೇರೆಬೇರೆ. ಇಂಥ ಸ್ಥಿತಿಯಲ್ಲಿದ್ದ ಗೌವ್ವಳ್ಳಿಯ ಜೀವನಕ್ಕೊಂದು ಹೊಸಬಣ್ಣ ಬಂದಿತ್ತು ಮರಂಕಿಯ ಮೂಲಕ. ಅವಳ ಬಯಕೆಗಳೇ ಗೌವ್ವಳ್ಳಿಯ ಹೆಣ್ಣುಮಕ್ಕಳ ಬಯಕೆಗಳಾಗಿ ರೂಪಾಂತರಗೊಂಡಿದ್ದವು.'

ಇಂಥ ಸೂಕ್ಷ್ಮ ಮನಸ್ಸಿನ ಮರಂಕಿ ತನ್ನ ವೈಯಕ್ತಿಕ ಬದುಕಿನಲ್ಲಿ ಎಲ್ಲೋ ಎಚ್ಚರ ತಪ್ಪಿದವಳಂತೆ ಕಂಡುಬಂದು ತನ್ನ ಮತ್ತು ತನ್ನ ಗಂಡನ ಅಂತ್ಯಕ್ಕೆ ನಾಂದಿ ಹಾಡಿದಳೆ ಎಂಬ ಪ್ರಶ್ನೆಯೂ ಉದ್ಭವಿಸುವುದು. ಇದೇ ಮುಂತಾದ ಪ್ರಶ್ನೆಗಳಿಗೆ ಇಂಥದೇ ಕಾರಣವೆಂದು ಬೊಟ್ಟು ತೋರಿಸಿ ನಿರಾಯಾಸವಾಗಿ ಕುಳಿತುಕೊಳ್ಳುವುದಕ್ಕೆ ಬದಲಾಗಿ ಕಾದಂಬರಿಯೊಳಗಿಂದಲೇ ಮೂಡಿಬಂದಿರುವ ಸನ್ನಿವೇಶಗಳು ಮತ್ತು ಗೆಂಡೆತಿಮ್ಮ ಮರಂಕಿಯರ ವ್ಯಕ್ತಿತ್ವಗಳು ಹೇಗೆ ಒಟ್ಟಾಗಿ ಅವರಿಬ್ಬರ ದುರಂತಕ್ಕೆ ದಾರಿಮಾಡಿ ಕೊಟ್ಟವು ಎಂದು ತಿಳಿಯಲು ಪ್ರಯತ್ನಿಸಿರುವುದೇ ಈ ಕಿರು ವಿಮರ್ಶೆಯ ಪ್ರಯತ್ನ. ಇದಕ್ಕೂ ಮಿಗಿಲಾದುದನ್ನು ಅರಸುವವರು ಮತ್ತೊಮ್ಮೆ ಕಾದಂಬರಿಯತ್ತಲೇ ಮನ ಮಾಡಬೇಕೆಂಬುದು ನನ್ನ ಅರಿಕೆ ಕೂಡ.

ಉಪವಾಸಗಳಿರುವುದು, ವಿವೇಕವನ್ನು ಜಾಗ್ರತಗೊಳಿಸಿ ಮನಸ್ಸಿನ ಮಾಲಿನ್ಯವನ್ನು ಅಳಿಸುವುದಕ್ಕಾಗಿ.

ಗಾಂಧೀಜಿ

ಶ್ರೀಕೃಷ್ಣ ಆಲನಹಳ್ಳಿಯವರ ಕಥೆಗಳು

ಡಾ|| ಕೃಷ್ಣ ಹಾಸನ

ಶ್ರೀಕೃಷ್ಣ ಆಲನಹಳ್ಳಿಯವರು ಕಥೆ ಬರೆಯತೊಡಗಿದ್ದು ೧೯೬೬–೬೭ರ ಸುಮಾರಿಗೆ. ಸುಮಾರು ಎರಡು ದಶಕಗಳ ಅವಧಿಯಲ್ಲಿ ಅವರು ಹದಿನೈದು ಸಣ್ಣಕಥೆಗಳನ್ನು ಬರೆದಿದ್ದಾರೆ. ಇದುವರೆಗೆ 'ತಪ್ತ' (೧೯೭೦), 'ಫೀನಿಕ್ಸ್' (೧೯೭೪) ಎಂಬ ಅವರ ಎರಡು ಕಥಾಸಂಗ್ರಹಗಳು ಪ್ರಕಟವಾಗಿವೆ. ತಪ್ತ, ತೊರೆ, ಸೀಮಂತ, ಶ್ರಾವಣ, ಸಂಬಂಧ, ಹುತ್ತ, ಆಗಂತುಕ, ನೆಲಗುಮ್ಮ–ಇವು 'ತಪ್ತ' ಕಥಾಸಂಕಲನದ ಕಥೆಗಳು. ಫೀನಿಕ್ಸ್, ಗೀಜಗನಗೂಡು, ಅಂಟಿದನಂಟಿನ ಕೊನೆಯ ಬಲ್ಲವರಾರು, ಇನ್ನೊಂದು ಪ್ರಣಯ ಪ್ರಸಂಗ–ಇವು 'ಫೀನಿಕ್ಸ್' ಕಥಾಸಂಕಲನದ ಕಥೆಗಳು. ಕುರುಬರ ಲಕ್ಕನೂ ಎಲಿಜಬೆತ್ ರಾಣಿಯೂ, ಸುಟ್ಟತಿಕದ ದೇವರು, ಮಾಮರವೂ ಮಾಪಿಳ್ಳೆಯೂ–ಮೇಲಿನ ಕಥಾ ಸಂಕಲನಗಳಲ್ಲಿ ಸೇರಿರದ ಇತ್ತೀಚಿನ ಕಥೆಗಳು.

ಆಲನಹಳ್ಳಿಯವರ ಮೊದಲ ಕಥೆ 'ಎತ್ತಣ ಮಾಮರ ಎತ್ತಣ ಕೋಗಿಲೆ'. ಇದು ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಬರೆದ, ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಕಥೆ. ಅನಂತರ ಈ ಕಥೆ 'ತಪ್ತ' ಕಥಾಸಂಕಲನದಲ್ಲಿ 'ಸಂಬಂಧ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. 'ಮಾಮರವೂ ಮಾಪಿಳ್ಳೆಯೂ' ಆಲನಹಳ್ಳಿಯವರ ಕೊನೆಯಕಥೆ. ಇದೊಂದು ಅಪೂರ್ಣಕಥೆ; ಅವರ ನಿಧನಾನಂತರ ಪ್ರಕಟವಾಗಿದೆ (೧೯೮೯). ಮೊದಲ ಮತ್ತು ಕೊನೆಯ ಕಥೆಯ ನಡುವೆ ಆಶ್ಚರ್ಯಗೊಳಿಸುವಷ್ಟುಗೆ ಕಥೆಯ ಶೀರ್ಷಿಕೆ ಹಾಗೂ ಜೀವನ ಧೋರಣೆಯಲ್ಲಿ ಸಾಮ್ಯತೆಯಿದೆ. ಇವೆರಡೂ ಕಥೆಗಳ ಜೀವಾಳ 'ವಿಷಾದ'. ಈ ವಿಷಾದ ಭಾವದ ಎಳೆಯನ್ನು ಆಲನಹಳ್ಳಿಯವರ ಒಟ್ಟು ಸಾಹಿತ್ಯದಲ್ಲಿ ಗಾಢವಾಗಿಯೇ ನಾವು ಗುರುತಿಸಬಹುದಾಗಿದೆ. 'ಸಂಬಂಧ' ಕಥೆಯಲ್ಲಿ ಶೂದ್ರನಾಯಕ ತನ್ನ ಬಾಲ್ಯದ ಸಂಗಾತಿಯಾಗಿದ್ದ ಬ್ರಾಹ್ಮಣ ತರುಣಿ ಲಲಿತಳ ಬದುಕಿನ ದುರಂತವನ್ನು ಅಸಹಾಯಕ

ನಾಗಿ ನಿಂತು ನೋಡುತ್ತ ಮಾನಸಿಕ ಯಾತನೆಗೆ ಗುರಿಯಾಗುತ್ತಾನೆ. ಲಲಿತಳ ಬಾಡಿದ ಬದುಕನ್ನು ಕಂಡು ವಿಷಾದಭಾವ ಅವನನ್ನು ಆವರಿಸುತ್ತದೆ. "ಮಾನವೀಯತೆ ಇಲ್ಲದ ಜ್ಞಾನ, ವಿದ್ಯೆ, ಸಂಪತ್ತು ಎಷ್ಟಿದ್ದರೂ ನಿರರ್ಥಕವೆಂದು ಈಗ ಅರಿವಾಗುತ್ತಿದೆ" ಎಂಬ ತಾತ್ವಿಕ ನಿಲುವಿಗೆ ಆತ ಬಂದು ನಿಲ್ಲುತ್ತಾನೆ. 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಕೂಡ ಈ ವಿಷಾದ ಭಾವವೇ ಸ್ಥಾಯಿಯಾಗಿಬಿಡುತ್ತದೆ. ಇಲ್ಲಿನ ಕಥಾನಾಯಕ ತನ್ನ ಕಣ್ಣ ಮುಂದೆ ಮರಗಳ, ಅದರಲ್ಲಿಯೂ ಹಲಸು ಮಾವಿನಂತ ಹಣ್ಣು ಕೊಡುವ ಮರಗಳ ಕಗ್ಗೊಲೆಯನ್ನೂ, ಆ ಮೂಲಕ ಪ್ರಕೃತಿಯ ಮೇಲೆ ಮಾನವ ನಡೆಸುತ್ತಿರುವ ಕ್ರೌರ್ಯವನ್ನೂ, ಪರಿಸರ ನಾಶದೊಡನೆ ಬದುಕಿನ ನೈತಿಕತೆಯೂ ನಾಶವಾಗುತ್ತಿರುವುದನ್ನೂ, ಅಸಹಾಯಕನಾಗಿ ನಿಂತು ನೋಡುತ್ತ ವಿಷಾದಭಾವದಲ್ಲಿ ಉಳಿದುಬಿಡುತ್ತಾನೆ. 'ಸಂಬಂಧ' ಕಥೆಯಲ್ಲಿ ಮಾನವೀಯ ಸಂಬಂಧಗಳು ತಪಬಹುದಾದ ನೋವಿನ ಚಿತ್ರಣವಿದ್ದರೆ, 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಪರಿಸರ ನಾಶದೊಡನೆ ಬದುಕಿನ ಅಸ್ತಿತ್ವವೇ ನಾಶವಾಗುತ್ತಿರುವ ದುರಂತದ ಚಿತ್ರಣವಿದೆ. 'ಮಾಮರವೂ ಮಾಪಿಳ್ಳೆಯೂ' ಶ್ರೇಷ್ಠ ಕಥೆಯಾಗಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನೂ ಪಡೆದುಕೊಂಡಿದೆ. ಆದರೆ ಇದು ಅಪೂರ್ಣವಾಗಿ ಉಳಿದದ್ದು ಮಾತ್ರ ವಿಷಾದನೀಯ ಸಂಗತಿ. ಈಗ ಇರುವಷ್ಟೇ ಕಥೆ ಕೂಡ ಬೆರಗುಮೂಡಿಸುವಷ್ಟು ಅನನ್ಯವಾಗಿದೆ.

ಕಥೆ ಹೇಳುವ ಕಲೆಗಾರಿಕೆಯಲ್ಲಿ ಆಲನಹಳ್ಳಿ ಸಿದ್ಧಹಸ್ತರು. ಹೂ ಅರಳುವಂತೆ ಅವರ ಕಥೆಗಳು ಸಹಜವಾಗಿ ಅರಳುತ್ತ ಹೋಗುತ್ತವೆ. ಅವುಗಳನ್ನು ಸುಮ್ಮನೆ ಓದುವುದೇ ಒಂದು ಖುಷಿ. ಅನಾಯಾಸವಾಗಿ, ಉಲ್ಲಾಸಭರಿತವಾಗಿ, ಉತ್ಕಟತೆಯೊಂದಿಗೆ ಅವರ ಕಥೆಗಳ ಕ್ರಿಯೆ ಸಾಗುತ್ತದೆ. ಸಿದ್ಧಾಂತ, ತರ್ಕಗಳನ್ನು ಮೀರಿ ಬದುಕು ಇರುವಂತೆ, ಆಲನಹಳ್ಳಿಯವರ ಕಥೆಗಳಲ್ಲಿ ಅನುಭವಗಳು 'ಭಾವಶಿಲ್ಪ'ಗಳಾಗಿ ಭಾಷೆಯಲ್ಲಿ ಆಕಾರ ಪಡೆದುಕೊಂಡುಬಿಡುತ್ತವೆ. ಲವಲವಿಕೆ, ಜೀವಂತಿಕೆ ಅವರ ಪ್ರತಿಯೊಂದು ಕಥೆಯಲ್ಲೂ ಪುಟಿಯುತ್ತದೆ. ಒಂದು ಸಂದರ್ಭವನ್ನು ಜೀವಂತವಾಗಿ ಕಟ್ಟಿಕೊಡುವ, ಹೀಗೆ ಕಟ್ಟಿಕೊಡುವಲ್ಲಿ ಭಾಷೆಯ ಎಲ್ಲ ಕಸುವನ್ನೂ ಹೀರಿ ಆಯಸ್ಕಾಂತದಂತೆ ಓದುಗನನ್ನು ಕಥೆಯೊಳಗೆ ಸೆಳೆದುಕೊಳ್ಳುವ ಗುಣಗಳು ಆಲನಹಳ್ಳಿಯವರ ಕಥೆಗಳಲ್ಲಿ ಕಂಡು ಬರುತ್ತವೆ. ಇದೆಲ್ಲ ನಿಜ. ಮುಖ್ಯವಾದ ಮಾತೆಂದರೆ ಆಲನಹಳ್ಳಿಯವರ ಬಹುಪಾಲು ಕಥೆಗಳು ಖುಷಿಕೊಟ್ಟಂತೆ, ಅವು ನಮ್ಮನ್ನು ಗಾಢವಾಗಿ ಕಲಕುವುದಿಲ್ಲ, ಚಿಂತನೆಗೀಡು ಮಾಡುವುದಿಲ್ಲ. ಆದರೆ ಸಂಬಂಧ, ಆಗಂತುಕ, ಸುಟ್ಟಿತಿಕನ ದೇವರು, ಮಾಮರವೂ ಮಾಪಿಳ್ಳೆಯೂ–ಇವು ಈ ಮಾತಿಗೆ ಅಪವಾದವಾದ ಕಥೆಗಳು.

ಆಲನಹಳ್ಳಿಯವರು ನವ್ಯ, ಬಂಡಾಯ, ದಲಿತ ಸಾಹಿತ್ಯ ಪಂಥಗಳು ಹುಟ್ಟಿಕೊಂಡ, ಪ್ರಬಲವಾಗಿದ್ದ ಕಾಲದಲ್ಲಿ ಬರೆಯುತ್ತ ಬೆಳೆದವರು. ಆದರೂ ಯಾವುದೇ ಒಂದು 'ಪಂಥ'ಕ್ಕೂ ಅಂಟಿಕೊಳ್ಳದೆ, ಯಾವುದೇ ಸಿದ್ಧಾಂತದ ಚೌಕಟ್ಟಿಗೂ ತನ್ನ ಅನುಭವಗಳನ್ನು ತುರುಕದೆ ಸಾಹಿತ್ಯವನ್ನು ಸೃಷ್ಟಿಸಿದವರು. ಅವರದು ಪ್ರಥಮ ದರ್ಜೆಯ ಪ್ರತಿಭೆಯಾದುದರಿಂದ ಇಂಥ ಪ್ರಭಾವಗಳಿಂದ ಅವರ ಸಾಹಿತ್ಯಸೃಷ್ಟಿ ದಿಕ್ಕು ತಪ್ಪಲಿಲ್ಲ. ಅವರ ಆರಂಭದ ಕಥೆಗಳಲ್ಲಿ ಮಾತ್ರ ಕೊಂಚಮಟ್ಟಿಗೆ ನವ್ಯ ಸಾಹಿತ್ಯದ ಪ್ರಭಾವವನ್ನು ಗುರುತಿಸಬಹುದಾಗಿದೆ.

ಸಂಬಂಧ, ಆಗಂತುಕ, ಸುಟ್ಟಿತಿಳದ ದೇವರು, ಮಾಮರವೂ ಮಾಟಿಳ್ಳಿಯೂ— ಈ ಕಥೆಗಳನ್ನು ಬಿಟ್ಟರೆ ಉಳಿದ ಕಥೆಗಳಲ್ಲಿ ಭಾವುಕತೆ, ಮಾತಿನ ದುಂದುಗಾರಿಕೆ ಅತಿಯಾಗಿದೆ. ಇದ್ದುದರಲ್ಲಿ 'ಗೀಜಗನ ಗೂಡು', 'ಇನ್ನೊಂದು ಪ್ರಣಯ ಪ್ರಸಂಗ'—ಈ ಕಥೆಗಳಲ್ಲಿ ಸಂಯಮದ ಬರವಣಿಗೆ ಕಂಡುಬರುತ್ತದೆ. ತಪ್ತ, ಸೀಮಂತ, ತೊರೆ, ಶ್ರಾವಣ, ಹುತ್ತ, ಫೀನಿಕ್ಸ್, ಅಂಟೆದನಂಟಿನ ಕೊನೆಯ ಬಲ್ಲವರಾರು—ಈ ಕಥೆಗಳು ಎಷ್ಟೇ ಆತ್ಮೀಯ ಧಾಟಿಯಲ್ಲಿದ್ದರೂ, ವಿವರಗಳಿಂದ ತುಂಬಿಕೊಂಡಿದ್ದರೂ, ಖುಷಿಕೊಟ್ಟರೂ ಮಹತ್ವದ ಕಥೆಗಳೆನಿಸುವುದಿಲ್ಲ. 'ಸೀಮಂತ' ಕಥೆಯಲ್ಲಿ ಪದ್ಮಳು ತನ್ನ ಗಂಡನ ಶಿಷ್ಯನಿಂದ ಗರ್ಭಧರಿಸಿ ಸೀಮಂತ ಮಾಡಿಸಿಕೊಳ್ಳುವ ಕ್ರೂರ ವ್ಯಂಗ್ಯ ಚಿತ್ರಿತವಾಗಿದೆ. 'ತೊರೆ'ಯಲ್ಲಿ ಲಕ್ಷ್ಮಿ–ಪ್ರಭು ಇವರ ತಪ್ಪಿದ ಸಂಬಂಧವ ತಣ್ಣಗಿನ ವಿಷಾದದ ಚಿತ್ರಣವಿದೆ. ಆದರೆ ಈ ಚಿತ್ರಣದಲ್ಲಿ ತೀವ್ರತೆಯಿಲ್ಲ. ಕಥೆಯ ಕಡೆಯಲ್ಲಿ ಪ್ರಭು 'ಪಾಪ' ಎಂದು ಉದ್ದವಾಗಿ ಅಸಹಾಯಕ ನಿಟ್ಟುಸಿರು ಬಿಟ್ಟು ಲಕ್ಷ್ಮಿಯ ಬಗ್ಗೆ ಅನುಕಂಪೆ ತೋರುವುದು ಕಥೆಯ ತೀವ್ರತೆಯನ್ನೂ, ಕಥೆ ಮೂಡಿಸಬಹುದಾಗಿದ್ದ ವಿಷಾದದ ಪರಿಣಾಮವನ್ನೂ ಶಿಥಿಲಗೊಳಿಸಿಬಿಡುತ್ತದೆ. 'ತಪ್ತ' ಕಥೆಯಲ್ಲಿ ಹೊಸತು–ಹಳತರ ಸಂಘರ್ಷವನ್ನು ಚಿತ್ರಿಸುವ ಪ್ರಯತ್ನವಿದೆ. 'ಪರಕೀಯ ಪ್ರಜ್ಞೆ'ಯನ್ನು ವಸ್ತುವಾಗುಳ್ಳ ಕಥೆಯಿದು. ಆಪ್ತವಾದ ಧಾಟಿಯಲ್ಲಿ ಕಥೆ ಸಾಗುತ್ತದೆ. ಓದಲು ಪೇಟೆಗೆ ಬಂದ ಈ ಕಥೆಯ ನಾಯಕನು ಪ್ರಭಾ ಎಂಬ ಹುಡುಗಿಯನ್ನು ಪ್ರೀತಿಸಿ, ಆಕೆಯನ್ನು ಮದುವೆಯಾಗುವುದಾಗಿ ಮಾತುಕೊಟ್ಟಿರುತ್ತಾನೆ. ಆದರೆ ಹಳ್ಳಿಯಲ್ಲಿ ತನಗಾಗಿ ತನ್ನ ಅಕ್ಕನ ಮಗಳು ಕಾಯುತ್ತಿರುವ, ಅಕ್ಕ ಈ ವ್ಯಥೆಯಲ್ಲೇ ಸತ್ತಿರುವ, ಅಕ್ಕನ ಮಗಳನ್ನೇ ತಂದುಕೊಳ್ಳಬೇಕೆಂದು ಅವ್ವ ನಿರ್ಧರಿಸಿಕೊಂಡಿರುವ ಅರಿವು ಆತನಿಗಿದೆ. ಪ್ರಭಾ–ಗೌರಿ ಇವರಿಬ್ಬರಲ್ಲಿ ತನಗೆ ಪ್ರಭಾ ಹೆಚ್ಚು ಆಪ್ತಳೆಂದು ಕೊಳ್ಳುತ್ತಾನೆ ಆದರೆ ನಿಜವಾದ ಅವನ ಸಂಬಂಧಗಳ ಬೇರು ಇರುವುದು ಹಳ್ಳಿಯಲ್ಲಿ. ಆತ ಆ ಬೇರುಗಳನ್ನು ಕಡಿದುಕೊಳ್ಳಲಾರ. ಆದರೆ ಪ್ರಭಾಳನ್ನು ಬಿಟ್ಟುಕೊಡಲಾರ. ಹೀಗೆ 'ಅತ್ತ' ಮತ್ತು 'ಇತ್ತ'ಗಳ ಇಬ್ಬಂದಿತನದಲ್ಲಿ 'ತಪ್ತ'ನಾಗಿ ಆತ ಉಳಿದುಬಿಡುತ್ತಾನೆ. ಒಂದು ಮಟ್ಟದಲ್ಲಿ ಕಥೆ ಇಷ್ಟವಾದರೂ ನಿರೀಕ್ಷಿತ ಪರಿಣಾಮವುಂಟುಮಾಡುವುದರಲ್ಲಿ ಕಥೆ ಸೋತುಬಿಡುತ್ತದೆ.

'ಶ್ರಾವಣ' ಕಥೆಯಲ್ಲಿ ಬದುಕಿನ ವೈಫಲ್ಯದಿಂದ ಮತ್ತೆ ಹೊಸ ಬದುಕಿನ ಕಡೆ ಹೊರಳುವ ಸಾಧ್ಯತೆಯನ್ನು ಸೂಚಿಸುವ ಚಿತ್ರಣವಿದೆ. ಶಕುಂತಳೆ–ಸವಿತಾ ಗುರು–ಶಿಷ್ಯೆಯರು. ಶಕುಂತಳೆ ಈಗಾಗಲೇ ಒಂದು ಪ್ರಣಯ ವೈಫಲ್ಯದಲ್ಲಿ ಬೆಂದು ಬೂದಿಯಾಗಿರುವವಳು. ಆದರೆ ಸವಿತಾ ಈಗತಾನೇ ಪ್ರೀತಿಯ ಅನುಭವವನ್ನು ಪಡೆಯುತ್ತಿರುವವಳು; ಪ್ರೀತಿಯ ಸುಖ, ಆತಂಕ ಎರಡನ್ನೂ ಅನುಭವಿಸುತ್ತಿರುವವಳು. ಶಕುಂತಳೆಗೆ 'ಭೂತ'ವಾದದ್ದು ಇಲ್ಲಿ ಸವಿತಾಳಿಗೆ 'ವರ್ತಮಾನ'ವಾಗಿದೆ. ಈ ವರ್ತಮಾನ 'ಭೂತ'ವಾಗಬಹುದಾದ ಸೂಚನೆ ಕೂಡ ಕಥೆಯಲ್ಲಿದೆ. ಸುಖ–ನೋವು ಎರಡೂ ಭಾವನೆಯನ್ನು ಏಕಕಾಲಕ್ಕೆ ಉಂಟುಮಾಡುವ ತನ್ನ 'ಭೂತ'ದ ಬದುಕಿನಿಂದ ಪಾರಾಗುವ ಬಯಕೆ ಶಕುಂತಳೆಯದು. ತನ್ನನ್ನು ಮದುವೆಯಾಗಲು ಒಪ್ಪಿರುವ ಬ್ರಾಹ್ಮಣ ತರುಣ

ನಾಗಿ ನಿಂತು ನೋಡುತ್ತ ಮಾನಸಿಕ ಯಾತನೆಗೆ ಗುರಿಯಾಗುತ್ತಾನೆ. ಲಲಿತಳ ಬಾಡಿದ ಬದುಕನ್ನು ಕಂಡು ವಿಷಾದಭಾವ ಅವನನ್ನು ಆವರಿಸುತ್ತದೆ. "ಮಾನವೀಯತೆ ಇಲ್ಲದ ಜ್ಞಾನ, ವಿದ್ಯೆ, ಸಂಪತ್ತು ಎಷ್ಟಿದ್ದರೂ ನಿರರ್ಥಕವೆಂದು ಈಗ ಅರಿವಾಗುತ್ತಿದೆ" ಎಂಬ ತಾತ್ವಿಕ ನಿಲುವಿಗೆ ಆತ ಬಂದು ನಿಲ್ಲುತ್ತಾನೆ. 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಕೂಡ ಈ ವಿಷಾದ ಭಾವವೇ ಸ್ಥಾಯಿಯಾಗಿಬಿಡುತ್ತದೆ. ಇಲ್ಲಿನ ಕಥಾನಾಯಕ ತನ್ನ ಕಣ್ಣ ಮುಂದೆ ಮರಗಳ, ಅದರಲ್ಲಿಯೂ ಹಲಸು ಮಾವಿನಂತ ಹಣ್ಣು ಕೊಡುವ ಮರಗಳ ಕಗ್ಗೊಲೆಯನ್ನೂ, ಆ ಮೂಲಕ ಪ್ರಕೃತಿಯ ಮೇಲೆ ಮಾನವ ನಡೆಸುತ್ತಿರುವ ಕ್ರೌರ್ಯವನ್ನೂ, ಪರಿಸರ ನಾಶದೊಡನೆ ಬದುಕಿನ ನೈತಿಕತೆಯೂ ನಾಶವಾಗುತ್ತಿರುವುದನ್ನೂ, ಅಸಹಾಯಕನಾಗಿ ನಿಂತು ನೋಡುತ್ತ ವಿಷಾದಭಾವದಲ್ಲಿ ಉಳಿದುಬಿಡುತ್ತಾನೆ. 'ಸಂಬಂಧ' ಕಥೆಯಲ್ಲಿ ಮಾನವೀಯ ಸಂಬಂಧಗಳು ತರಬಹುದಾದ ನೋವಿನ ಚಿತ್ರಣವಿದ್ದರೆ, 'ಮಾಮರವೂ ಮಾಪಿಳ್ಳೆಯೂ' ಕಥೆಯಲ್ಲಿ ಪರಿಸರ ನಾಶದೊಡನೆ ಬದುಕಿನ ಅಸ್ತಿತ್ವವೇ ನಾಶವಾಗುತ್ತಿರುವ ದುರಂತದ ಚಿತ್ರಣವಿದೆ. 'ಮಾಮರವೂ ಮಾಪಿಳ್ಳೆಯೂ' ಶ್ರೇಷ್ಠ ಕಥೆಯಾಗಬಹುದಾಗಿದ್ದ ಎಲ್ಲ ಸಾಧ್ಯತೆಗಳನ್ನೂ ಪಡೆದುಕೊಂಡಿದೆ. ಆದರೆ ಇದು ಅಪೂರ್ಣವಾಗಿ ಉಳಿದದ್ದು ಮಾತ್ರ ವಿಷಾದನೀಯ ಸಂಗತಿ. ಈಗ ಇರುವಷ್ಟೇ ಕಥೆ ಕೂಡ ಬೆರಗುಮೂಡಿಸುವಷ್ಟು ಅನನ್ಯವಾಗಿದೆ.

ಕಥೆ ಹೇಳುವ ಕಲೆಗಾರಿಕೆಯಲ್ಲಿ ಆಲನಹಳ್ಳಿ ಸಿದ್ಧಹಸ್ತರು. ಹೂ ಅರಳುವಂತೆ ಅವರ ಕಥೆಗಳು ಸಹಜವಾಗಿ ಅರಳುತ್ತ ಹೋಗುತ್ತವೆ. ಅವುಗಳನ್ನು ಸುಮ್ಮನೆ ಓದುವುದೇ ಒಂದು ಖುಸಿ. ಅನಾಯಾಸವಾಗಿ, ಉಲ್ಲಾಸಭರಿತವಾಗಿ, ಉತ್ಕಟತೆಯೊಂದಿಗೆ ಅವರ ಕಥೆಗಳ ಕ್ರಿಯೆ ಸಾಗುತ್ತದೆ. ಸಿದ್ಧಾಂತ, ತರ್ಕಗಳನ್ನು ಮೀರಿ ಬದುಕು ಇರುವಂತೆ, ಆಲನಹಳ್ಳಿಯವರ ಕಥೆಗಳಲ್ಲಿ ಅನುಭವಗಳು 'ಭಾವಶಿಲ್ಪ'ಗಳಾಗಿ ಭಾಷೆಯಲ್ಲಿ ಆಕಾರ ಪಡೆದುಕೊಂಡುಬಿಡುತ್ತವೆ. ಲವಲವಿಕೆ, ಜೀವಂತಿಕೆ ಅವರ ಪ್ರತಿಯೊಂದು ಕಥೆಯಲ್ಲೂ ಪುಟಿಯುತ್ತದೆ. ಒಂದು ಸಂದರ್ಭವನ್ನು ಜೀವಂತವಾಗಿ ಕಟ್ಟಿಕೊಡುವ, ಹೀಗೆ ಕಟ್ಟಿಕೊಡುವಲ್ಲಿ ಭಾಷೆಯ ಎಲ್ಲ ಕಸುವನ್ನೂ ಹೀರಿ ಆಯಸ್ಕಾಂತದಂತೆ ಓದುಗನನ್ನು ಕಥೆಯೊಳಗೆ ಸೆಳೆದುಕೊಳ್ಳುವ ಗುಣಗಳು ಆಲನಹಳ್ಳಿಯವರ ಕಥೆಗಳಲ್ಲಿ ಕಂಡು ಬರುತ್ತವೆ. ಇದೆಲ್ಲ ನಿಜ. ಮುಖ್ಯವಾದ ಮಾತೆಂದರೆ ಆಲನಹಳ್ಳಿಯವರ ಬಹುಪಾಲು ಕಥೆಗಳು ಖುಸಿಕೊಟ್ಟಂತೆ, ಅವು ನಮ್ಮನ್ನು ಗಾಢವಾಗಿ ಕಲಕುವುದಿಲ್ಲ, ಚಿಂತನೆಗೀಡು ಮಾಡುವುದಿಲ್ಲ. ಆದರೆ ಸಂಬಂಧ, ಆಗಂತುಕ, ಸುಸ್ಥಿತಿಕವ ದೇವರು, ಮಾಮರವೂ ಮಾಪಿಳ್ಳೆಯೂ–ಇವು ಈ ಮಾತಿಗೆ ಅಪವಾದವಾದ ಕಥೆಗಳು.

ಆಲನಹಳ್ಳಿಯವರು ನವ್ಯ, ಬಂಡಾಯ, ದಲಿತ ಸಾಹಿತ್ಯ ಪಂಥಗಳು ಹುಟ್ಟಿಕೊಂಡ, ಪ್ರಬಲವಾಗಿದ್ದ ಕಾಲದಲ್ಲಿ ಬರೆಯುತ್ತ ಬೆಳೆದವರು. ಆದರೂ ಯಾವುದೇ ಒಂದು 'ಪಂಥ'ಕ್ಕೂ ಅಂಟಿಕೊಳ್ಳದೆ, ಯಾವುದೇ ಸಿದ್ಧಾಂತದ ಚೌಕಟ್ಟಿಗೂ ತನ್ನ ಅನುಭವಗಳನ್ನು ತುರುಕದೆ ಸಾಹಿತ್ಯವನ್ನು ಸೃಷ್ಟಿಸಿದವರು. ಅವರದು ಪ್ರಥಮ ದರ್ಜೆಯ ಪ್ರತಿಭೆಯಾದುದರಿಂದ ಇಂಥ ಪ್ರಭಾವಗಳಿಂದ ಅವರ ಸಾಹಿತ್ಯಸೃಷ್ಟಿ ದಿಕ್ಕು ತಪ್ಪಲಿಲ್ಲ. ಅವರ ಆರಂಭದ ಕಥೆಗಳಲ್ಲಿ ಮಾತ್ರ ಕೊಂಚಮಟ್ಟಿಗೆ ನವ್ಯ ಸಾಹಿತ್ಯದ ಪ್ರಭಾವವನ್ನು ಗುರುತಿಸಬಹುದಾಗಿದೆ.

ಸಂಬಂಧ, ಆಗಂತುಕ, ಸುಟ್ಟಿತಿಳದ ದೇವರು, ಮಾಮರವೂ ಮಾಟಿಕ್ಕೆಯೂ— ಈ ಕಥೆಗಳನ್ನು ಬಿಟ್ಟರೆ ಉಳಿದ ಕಥೆಗಳಲ್ಲಿ ಭಾವುಕತೆ, ಮಾತಿನ ದುಂದುಗಾರಿಕೆ ಅತಿಯಾಗಿದೆ. ಇದ್ದುದರಲ್ಲಿ 'ಗೀಜಗನ ಗೂಡು', 'ಇನ್ನೊಂದು ಪ್ರಣಯ ಪ್ರಸಂಗ'—ಈ ಕಥೆಗಳಲ್ಲಿ ಸಂಯಮದ ಬರವಣಿಗೆ ಕಂಡುಬರುತ್ತದೆ. ತಪ್ತ, ಸೀಮಂತ, ತೊರೆ, ಶ್ರಾವಣ, ಹುತ್ತ, ಫೀನಿಕ್ಸ್, ಅಂಟಿದನಂಟಿನ ಕೊನೆಯ ಬಲ್ಲವರಾರು—ಈ ಕಥೆಗಳು ಎಷ್ಟೇ ಆತ್ಮೀಯ ಧಾಟಿಯಲ್ಲಿದ್ದರೂ, ವಿವರಗಳಿಂದ ತುಂಬಿಕೊಂಡಿದ್ದರೂ, ಖುಷಿ ಕೊಟ್ಟರೂ ಮಹತ್ವದ ಕಥೆಗಳೆನಿಸುವುದಿಲ್ಲ. 'ಸೀಮಂತ' ಕಥೆಯಲ್ಲಿ ಪದ್ಮಳು ತನ್ನ ಗಂಡನ ಶಿಷ್ಯನಿಂದ ಗರ್ಭಧರಿಸಿ ಸೀಮಂತ ಮಾಡಿಸಿಕೊಳ್ಳುವ ಕ್ರೂರ ವ್ಯಂಗ್ಯ ಚಿತ್ರಿತವಾಗಿದೆ. 'ತೊರೆ'ಯಲ್ಲಿ ಲಕ್ಷ್ಮಿ–ಪ್ರಭು ಇವರ ತಪ್ಪಿದ ಸಂಬಂಧವ ತಣ್ಣಗಿನ ವಿಷಾದದ ಚಿತ್ರಣವಿದೆ. ಆದರೆ ಈ ಚಿತ್ರಣದಲ್ಲಿ ತೀವ್ರತೆಯಿಲ್ಲ. ಕಥೆಯ ಕಡೆಯಲ್ಲಿ ಪ್ರಭು 'ಪಾಪ' ಎಂದು ಉದ್ಗವಾಗಿ ಅಸಹಾಯಕ ನಿಟ್ಟುಸಿರು ಬಿಟ್ಟು ಲಕ್ಷ್ಮಿಯ ಬಗ್ಗೆ ಅನುಕಂಪ ತೋರುವುದು ಕಥೆಯ ತೀವ್ರತೆಯನ್ನೂ, ಕಥೆ ಮೂಡಿಸಬಹುದಾಗಿದ್ದ ವಿಷಾದದ ಪರಿಣಾಮವನ್ನೂ ಶಿಥಿಲಗೊಳಿಸಿಬಿಡುತ್ತದೆ. 'ತಪ್ತ' ಕಥೆಯಲ್ಲಿ ಹೊಸತು–ಹಳತರ ಸಂಘರ್ಷವನ್ನು ಚಿತ್ರಿಸುವ ಪ್ರಯತ್ನವಿದೆ. 'ಪರಕೀಯ ಪ್ರಜ್ಞೆ'ಯನ್ನು ವಸ್ತುವಾಗುಳ್ಳ ಕಥೆಯಿದು. ಆಪ್ತವಾದ ಧಾಟಿಯಲ್ಲಿ ಕಥೆ ಸಾಗುತ್ತದೆ. ಓದಲು ಪೇಟೆಗೆ ಬಂದ ಈ ಕಥೆಯ ನಾಯಕನು ಪ್ರಭಾ ಎಂಬ ಹುಡುಗಿಯನ್ನು ಪ್ರೀತಿಸಿ, ಆಕೆಯನ್ನು ಮದುವೆಯಾಗುವುದಾಗಿ ಮಾತುಕೊಟ್ಟಿರುತ್ತಾನೆ. ಆದರೆ ಹಳ್ಳಿಯಲ್ಲಿ ತನಗಾಗಿ ತನ್ನ ಅಕ್ಕನ ಮಗಳು ಕಾಯುತ್ತಿರುವ, ಅಕ್ಕ ಈ ವ್ಯಥೆಯಲ್ಲೇ ಸತ್ತಿರುವ, ಅಕ್ಕನ ಮಗಳನ್ನೇ ತಂದುಕೊಳ್ಳಬೇಕೆಂದು ಅವ್ವ ನಿರ್ಧರಿಸಿಕೊಂಡಿರುವ ಅರಿವು ಆತನಿಗಿದೆ. ಪ್ರಭಾ–ಗೌರಿ ಇವರಿಬ್ಬರಲ್ಲಿ ತನಗೆ ಪ್ರಭಾ ಹೆಚ್ಚು ಆಪ್ತಳೆಂದು ಕೊಳ್ಳುತ್ತಾನೆ ಆದರೆ ನಿಜವಾದ ಅವನ ಸಂಬಂಧಗಳ ಬೇರು ಇರುವುದು ಹಳ್ಳಿಯಲ್ಲಿ. ಆತ ಆ ಬೇರುಗಳನ್ನು ಕಡಿದುಕೊಳ್ಳಲಾರ. ಆದರೆ ಪ್ರಭಾಳನ್ನು ಬಿಟ್ಟುಕೊಡಲಾರ. ಹೀಗೆ 'ಅತ್ತ' ಮತ್ತು 'ಇತ್ತ'ಗಳ ಇಬ್ಬಂದಿತನದಲ್ಲಿ 'ತಪ್ತ'ನಾಗಿ ಆತ ಉಳಿದುಬಿಡುತ್ತಾನೆ. ಒಂದು ಮಟ್ಟದಲ್ಲಿ ಕಥೆ ಇಷ್ಟವಾದರೂ ನಿರೀಕ್ಷಿತ ಪರಿಣಾಮವುಂಟುಮಾಡುವುದರಲ್ಲಿ ಕಥೆ ಸೋತುಬಿಡುತ್ತದೆ.

'ಶ್ರಾವಣ' ಕಥೆಯಲ್ಲಿ ಬದುಕಿನ ವೈಫಲ್ಯದಿಂದ ಮತ್ತೆ ಹೊಸ ಬದುಕಿನ ಕಡೆ ಹೊರಳುವ ಸಾಧ್ಯತೆಯನ್ನು ಸೂಚಿಸುವ ಚಿತ್ರಣವಿದೆ. ಶಕುಂತಳೆ–ಸವಿತಾ ಗುರು–ಶಿಷ್ಯೆಯರು. ಶಕುಂತಳೆ ಈಗಾಗಲೇ ಒಂದು ಪ್ರಣಯ ವೈಫಲ್ಯದಲ್ಲಿ ಬೆಂದು ಬೂದಿಯಾಗಿರುವವಳು. ಆದರೆ ಸವಿತಾ ಈಗತಾನೇ ಪ್ರೀತಿಯ ಅನುಭವವನ್ನು ಪಡೆಯುತ್ತಿರುವವಳು ; ಪ್ರೀತಿಯ ಸುಖ, ಆತಂಕ ಎರಡನ್ನೂ ಅನುಭವಿಸುತ್ತಿರುವವಳು. ಶಕುಂತಳೆಗೆ 'ಭೂತ' ವಾದದ್ದು ಇಲ್ಲಿ ಸವಿತಾಳಿಗೆ 'ವರ್ತಮಾನ'ವಾಗಿದೆ. ಈ ವರ್ತಮಾನ 'ಭೂತ'ವಾಗಬಹುದಾದ ಸೂಚನೆ ಕೂಡ ಕಥೆಯಲ್ಲಿದೆ. ಸುಖ–ನೋವು ಎರಡೂ ಭಾವನೆಯನ್ನು ಏಕಕಾಲಕ್ಕೆ ಉಂಟುಮಾಡುವ ತನ್ನ 'ಭೂತ'ದ ಬದುಕಿನಿಂದ ಪಾರಾಗುವ ಬಯಕೆ ಶಕುಂತಳೆಯದು. ತನ್ನನ್ನು ಮದುವೆಯಾಗಲು ಒಪ್ಪಿರುವ ಬ್ರಾಹ್ಮಣ ತರುಣ

ಜನಾರ್ಧನನ್ನು ಮದುವೆಯಾಗಲು ಒಪ್ಪಿಗೆ ಸೂಚಿಸಿ ಪತ್ರ ಬರೆಯುವ ಮೂಲಕ ತನ್ನ 'ಭೂತ'ದ ಬದುಕಿನ ನೋವಿನಿಂದ ಶಕುಂತಳೆ ಪಾರಾಗುತ್ತಾಳೆ. ಆದರೆ ಶಕುಂತಳೆಯ ಪ್ರಣಯ ವೈಫಲ್ಯ 'ನಿಜ' ಅನ್ನಿಸುವಂತೆ ಅವಳ ಹೊಸ ಬದುಕಿನ ಸಾಧ್ಯತೆಯ ಚಿತ್ರಣ ಕಥೆಯಲ್ಲಿ 'ನಿಜ' ಅನ್ನಿಸುವುದಿಲ್ಲ. ಹಾಗಾಗಿ ಕಥೆ ತೀವ್ರ ಪರಿಣಾಮ ಬೀರುವುದಿಲ್ಲ.

'ಹತ್ತು' ತೀರ ಸಾಧಾರಣವಾದ ಕಥೆ. ಯುವಕನೊಬ್ಬ ತನ್ನ ತಾಯಿಯ ವಯಸ್ಸಿನ ಹೆಣ್ಣೊಬ್ಬಳ ಲೈಂಗಿಕ ಆಕ್ರಮಣಕ್ಕೆ ಈಡಾಗಿ, ಆಘಾತ ಮನಸ್ಕನಾಗಿ ತತ್ತರಿಸುವ, ವಿಹ್ವಲಗೊಳ್ಳುವ ಚಿತ್ರಣವಿದೆ. ಆದರೆ ಕಥೆ ಯಾವುದೇ ಹಂತದಲ್ಲಿ ನನ್ನನ್ನು 'ತಾಗು'ವುದಿಲ್ಲ. 'ಫೀನಿಕ್ಸ್' ಎರಡು ಹೆಣ್ಣು, ಒಂದು ಗಂಡಿನ ಸಂಕೀರ್ಣವಾದ ಸಂಬಂಧವನ್ನು, ಅಂದರೆ ತ್ರಿಕೋನ ಪ್ರೇಮವನ್ನು ವಸ್ತುವಾಗುಳ್ಳ ಕಥೆ. ಇವಳನ್ನು ಕಟ್ಟಿಕೊಳ್ಳಲಾಗದ, ಅವಳನ್ನು ಬಿಡಲಾಗದ ಇಬ್ಬಂದಿತನದ ತೀವ್ರತೆಯನ್ನು ಕಥೆಯಲ್ಲಿ ತರಲು ಪ್ರಯತ್ನಿಸಲಾಗಿದೆ. 'ತಪ್ತ' ಕಥೆಯ ಬರವಣಿಗೆಯ ಧಾಟಿಯೇ ಇಲ್ಲೂ ಕಂಡುಬರುತ್ತದೆ. ಇಲ್ಲಿನ ಕಥೆಯ ನಾಯಕ ಪ್ರೀತಿಗಾಗಿ ಎಷ್ಟೇ ಚಡಪಡಿಸಿದರೂ ಆತ ಇಂದ್ರಿಯಗಳ ಮಟ್ಟದಲ್ಲೇ ಹಂಬಲಿಸುವುದು ಕಥೆಯ ವಿವರಗಳಲ್ಲಿ ಸುವ್ಯಕ್ತವಾಗುತ್ತದೆ. ನಗರದ ನವಜನಾಂಗದ ಬದುಕಿನ ಇಬ್ಬಂದಿತನವನ್ನೂ, ಪರಕೀಯ ಪ್ರಜ್ಞೆಯನ್ನೂ ಈ ಕಥೆಯಲ್ಲಿ ಚಿತ್ರಿಸುವ ಹಂಬಲ ಲೇಖಕರಿಗಿರುವಂತೆ ತೋರುತ್ತದೆ. ಆದರೆ ಆಲನಹಳ್ಳಿಯವರು ಬಾಲ್ಯದ, ಹಳ್ಳಿಯ ಅನುಭವಗಳನ್ನು ಚಿತ್ರಿಸುವಾಗ ಸಫಲರಾಗುವಂತೆ ನಗರ ಜೀವನದ ಅನುಭವಗಳನ್ನು ಕಲೆಯಾಗಿಸುವಲ್ಲಿ ಸಫಲವಾಗುವುದಿಲ್ಲ.

'ಅಂಟಿದನಂಟಿನ ಕೊನೆಯ ಬಲ್ಲವರಾರು' ಶೂದ್ರನಾಯಕ ಮತ್ತು ಬ್ರಾಹ್ಮಣ ತರುಣಿ ಶಾಲಿನಿ—ಇವರ ಪ್ರಣಯ ಸಂಬಂಧವನ್ನು ಚಿತ್ರಿಸುವ ಕಥೆ. ಶೂದ್ರ—ಬ್ರಾಹ್ಮಣ ಜಾತಿ ಪ್ರಜ್ಞೆಯನ್ನು ವೈಚಾರಿಕತೆಯ ನೆಲೆಯಲ್ಲಿ ನೋಡಬೇಕೆಂಬ ಹಂಬಲ ಕಥೆಯಲ್ಲಿದೆ. ಬ್ರಾಹ್ಮಣ ದ್ವೇಷಿಯಾದ ನಾಯಕ ಬ್ರಾಹ್ಮಣ ತರುಣಿಯರನ್ನು ಪ್ರಣಯ ನಟಿಸಿ ಮರುಳುಮಾಡಿ ಅವರ ಶೀಲವನ್ನು ಅಪಹರಿಸುವ ಮೂಲಕ, ಅವರ ಕನ್ಯತ್ವವನ್ನು ಹಾಳುಮಾಡುವ ಮೂಲಕ ಬ್ರಾಹ್ಮಣಜಾತಿಯ ಮೇಲೆ ಸೇಡು ತೀರಿಸಿಕೊಳ್ಳುತ್ತಿರುತ್ತಾನೆ. ಅವನಿಗೆ ಪರಿಚಯವಾಗುವ ಶಾಲಿನಿಯನ್ನು ಮಾತ್ರ ಆತ ಹಾಗೆ ನೋಡಲಾರ. ಶಾಲಿನಿ ಅವನ ಎಲ್ಲ ದೌರ್ಬಲ್ಯಗಳನ್ನು ಮನ್ನಿಸಿ, ಅವನ ಅಹಂಕಾರಕ್ಕೆ ಸವಾಲಾಗುತ್ತಾಳೆ. ಆತನೊಡನೆ ಕೂಡುತ್ತಾಳೆ, ಚಿಕನ್ ತಿನ್ನುತ್ತಾಳೆ. ಅವನ ಎಲ್ಲ ವಿಚಾರಗಳನ್ನು ಒಪ್ಪಿಕೊಳ್ಳುತ್ತಾಳೆ, 'ವ್ಯವಹಾರ' ಬುದ್ಧಿಯ ಆತ ತನ್ನನ್ನು ಮದುವೆಯಾಗಲಾರ ಎಂದು ಗೊತ್ತಿದ್ದೂ ಇಷ್ಟಪಡುತ್ತಾಳೆ. ಯಾವುದೇ ಸಂಘರ್ಷಕ್ಕೆ ಒಳಗಾಗದೆ ಸುಖಪಡುತ್ತಾಳೆ. ಬದುಕು ಕೊಡಬಹುದಾದುದನ್ನೆಲ್ಲ ಅನಾಮತ್ತು ಸ್ವೀಕರಿಸುತ್ತಾಳೆ, ಅರಗಿಸಿಕೊಳ್ಳುತ್ತಾಳೆ. ಅವಳಿಗೆ ಬದುಕಿನ ಬಗ್ಗೆ ಧನ್ಯತೆಯಿದೆ. ಆದರೆ ಮೇಲುನೋಟಕ್ಕೆ ಕ್ರಾಂತಿಕಾರಿಯ ಹಾಗೆ ಪೋಸು ಕೊಡುವ ನಾಯಕ ವಿಚಾರಗಳಲ್ಲಿ ಶಾಲಿನಿಯಷ್ಟು ಒಳಗೆ ಗಟ್ಟಿಯಾದವನಲ್ಲ. ಯಾವುದಕ್ಕೂ ಕೇರುಮಾಡದೆ ಬದುಕುವೆನೆಂದುಕೊಳ್ಳುವ ಆತ "ಮೈಸೂರಿನಲ್ಲಿ ಒಂದು ಕೆಲಸ ಕೊಡಿಸು, ಮದುವೆಬೇಡ, ನಿನ್ನೊಡನೆ ಸುಮ್ಮನೆ ಇದ್ದುಬಿಡುತ್ತೇನೆ' ಎನ್ನುವ ಶಾಲಿನಿಯ ಆಹ್ವಾನವನ್ನು ಸ್ವೀಕರಿಸದ ಹೇಡಿಯಾಗುತ್ತಾನೆ. ಆದರೆ ಅವಳು

ಮದುವೆಯಾಗುವಾಗ ಚಡಪಡಿಸುತ್ತಾನೆ. ಅವನಿಗೆ ಪ್ರೀತಿಗಿಂತ ದೈಹಿಕ ಬಯಕೆಯೇ ಹೆಚ್ಚಾಗಿ ಕಾಡಿದಂತೆ ಅನಿಸುತ್ತದೆ. ಪ್ರೀತಿಯ ಸಂಬಂಧಗಳ ಅನಂತತೆ ಯಾವುದೇ ಸಾಮಾಜಿಕ ಕಟ್ಟು ಕಟ್ಟಳೆಗಳನ್ನು ಮೀರಿದ್ದು, ಶಾಶ್ವತವಾದದ್ದು ಎಂಬ ಸಂಗತಿಯನ್ನು ಚಿತ್ರಿಸುವುದು ಕಥೆಯ ಉದ್ದೇಶ. ಆದರೆ ತೀರ ವಾಚಾಳಿತನದಿಂದಾಗಿ, ಭಾವನೆಗಳನ್ನು ತೀರ ಸರಳೀಕರಣಗೊಳಿಸುವುದರಿಂದಾಗಿ ಕಥೆಯ ಈ ಉದ್ದೇಶ ಸಾರ್ಥಕವಾಗುವುದಿಲ್ಲ.

'ಗೀಜಗನಗೂಡು', 'ಇನ್ನೊಂದು ಪ್ರಣಯ ಪ್ರಸಂಗ'—ಇವು ನಮಗೆ ಆಪ್ತವಾಗುವ ಕೊಂಚ ಗಂಭೀರ ಕಥೆಗಳು. ಈ ಕಥೆಗಳಲ್ಲಿ ಯಾವುದೇ ತರ್ಕ, ಸಿದ್ಧಾಂತಗಳಿಲ್ಲ. ಬದುಕನ್ನು ಅದು ಇರುವ ಹಾಗೆ ನೋಡುವ, ಬದುಕಿನ ಅನುಭವಗಳನ್ನು ಅವು ದಕ್ಕಿದ ಹಾಗೆ ಸ್ವೀಕರಿಸುವ ಜೀವನ ರೀತಿ, ಜೀವನ ಪ್ರೀತಿ ನಮಗೆ ಇಷ್ಟವಾಗುತ್ತದೆ. ಮದುಮಲೈ ಅರಣ್ಯದಲ್ಲಿ ರಜಾದಿನಗಳನ್ನು ಕಳೆಯಲೆಂದು ಬಂದ ಕಥಾನಾಯಕನು ತನಗೆ ಆಕಸ್ಮಿಕ ಪರಿಚಯವಾದ ರಷ್ಯನ್ ತರುಣಿ(?)ಯೊಡನೆ ಅನನ್ಯವಾದ ಪ್ರಣಯಾನುಭವವನ್ನು ಪಡೆಯುವುದು, ಅದು ಅಷ್ಟೇ ಆಗಿ ಉಳಿಯದೆ ಒಂದು ಜೀವಂತ ಸಂಬಂಧವಾಗಿ ರೂಪುಗೊಳ್ಳುವುದು—ಇವುಗಳ ಚಿತ್ರಣ 'ಗೀಜಗನಗೂಡು' ಕಥೆಯಲ್ಲಿ ಅತ್ಯಂತ ವಾಸ್ತವ ರೀತಿಯಲ್ಲಿ ನಿರೂಪಣೆಗೊಂಡಿದೆ. ಮದುಮಲೈ ಅರಣ್ಯ ಪರಿಸರ ಕಥೆಗೊಂದು ಅಸಾಧಾರಣವಾದ ಆವರಣವನ್ನು ರೂಪಿಸಿದೆ. 'ಗೀಜಗನಗೂಡು' ಮಾನವೀಯ ಸಂಬಂಧಗಳ ಸಂಕೀರ್ಣ ಸಾಧ್ಯತೆಗೊಂದು ಸಂಕೇತವೂ ಆಗಿಬಿಡುತ್ತದೆ. ಈ ಕಥೆಯ ಭಾಷೆ, ವರ್ಣನೆ, ಅಭಿವ್ಯಕ್ತಿಗಳು ಅನನ್ಯವಾಗಿವೆ.

'ಇನ್ನೊಂದು ಪ್ರಣಯ ಪ್ರಸಂಗ' ಗುರು-ಶಿಷ್ಯರಿಬ್ಬರ ಪ್ರಣಯ ಸಂಬಂಧವನ್ನೂ ಅದರ ಕಡೆಗಾಣದ ಸೆಳೆತವನ್ನೂ ನಿರೂಪಿಸುವ ಕಥೆ. ಮದುವೆಯಾಗಿ, ತನ್ನ ಹಿಂದಿನ ಸಂಬಂಧವನ್ನು ಮರೆತು ಹಾಯಾಗಿರುವ ಕಥಾನಾಯಕನ ಮನಸ್ಸನ್ನು ಎಂಟು ವರ್ಷಗಳ ದೀರ್ಘ ಅಗಲಿಕೆಯ ನಂತರ ಇಂಗ್ಲೆಂಡಿನಿಂದ ಬರುವ ಪಲ್ಲವಿಯ ಪತ್ರವೊಂದು ಗಾಢವಾಗಿ ಕಲಕಿಬಿಡುತ್ತದೆ. ವರ್ತಮಾನ—ಭೂತದ ಘಟನೆಗಳ ನಡುವೆ ಲಾಳಿಯಾಡುತ್ತ ಕಥೆ ಹುರಿಗಟ್ಟಿಕೊಳ್ಳುತ್ತದೆ. ಹೆಣ್ಣು-ಗಂಡಿನ ಸಂಬಂಧದಲ್ಲಿ ಪ್ರೀತಿ-ಲೈಂಗಿಕ ಬಯಕೆ-ಇವೆರಡರ ಸೆಳೆತವನ್ನೂ ಮತ್ತು ಇವರೆಡರ ನಡುವಿನ ಸೂಕ್ಷ್ಮತೆಯನ್ನೂ ಕಥೆಯಲ್ಲಿ ಜೀವಂತವಾಗಿ ನಿರೂಪಿಸುವ ಪ್ರಯತ್ನವಿದೆ. ಈ ಕಥೆಯ ಅಂತ್ಯ ಮಾತ್ರ ಸಿನೀಮಿಯವೆನ್ನಿಸುತ್ತದೆ.

ಆಲನಹಳ್ಳಿಯವರ ನೈಜಪ್ರತಿಭೆ ಸತ್ವಶಾಲಿ ಅಭಿವ್ಯಕ್ತಿ ಪಡೆದುಕೊಂಡಿರುವುದು 'ಆಗಂತುಕ' ಕಥೆಯಲ್ಲಿ. ಇದು ಆಲನಹಳ್ಳಿಯವರ ಶ್ರೇಷ್ಠ ಕಥೆಗಳಲ್ಲೊಂದು. "ಒಬ್ಬ ಮುಗ್ಧ ಬಾಲಕನ ಸಾಕ್ಷಿ ಪ್ರಜ್ಞೆಯಲ್ಲಿ ಇಡೀ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮೊದಲನೆಯ ವಾಕ್ಯದಿಂದಲೇ ನಾವು ಕಿಟ್ಟಿಯ ಮನಸ್ಸಿನ ಲೋಕವನ್ನು ಪ್ರವೇಶಿಸುತ್ತೇವೆ. ಕಿಟ್ಟಿಯ ಮನಸ್ಸಿನಲ್ಲಿ ಹುಟ್ಟುವ ಸಾವಿನ ಮುನ್ನಳುಕು ಗಾಢವಾಗಿ ಬೆಳೆದು ಮುಂದೆ ಮೃತ್ಯುಪ್ರಜ್ಞೆಯಾಗಿ ಕಾಡಬಹುದಾದ ಸೂಚನೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಕಥೆಯ ಕ್ಷುಬ್ಧ ವಾತಾವರಣದ ದಟ್ಟತೆಗೆ ನಿಸರ್ಗ ಎಷ್ಟು ಕಾರಣವೋ ಅಷ್ಟೇ ಮನುಷ್ಯ ಲೋಕದ ವ್ಯಗ್ರತೆಗಳೂ ಕಾರಣಗಳಾಗಿವೆ. ಕಿಟ್ಟಿ ಪ್ರೀತಿಸುವ ತಾಯಿ

ಅಜ್ಜಿಯರು ಪರಸ್ಪರ ಬಡಿದಾಡುತ್ತಾರೆ; ತಂದೆತಾಯಿಯನ್ನು ಹೊಡೆಯುತ್ತಾನೆ. ತಾಯಿ ದುಗುಡದಲ್ಲಿ ಸಾವಿನ ಬಗ್ಗೆ ಮಾತನಾಡುತ್ತಾಳೆ; ತುಂಬಿದ ಅನುಭವಗಳ ಅಜ್ಜ ವಿಷಾದದಿಂದ ಸಾವಿನ ಅನಿವಾರ್ಯತೆಯನ್ನು ಕುರಿತು ಹೇಳುತ್ತಾನೆ. ಕಿಟ್ಟಿಗೆ ಪ್ರಿಯವಾದ ಮಾವಯ್ಯ ಸಾಯುತ್ತ ಮಲಗಿದ್ದಾರೆ; ಅವರು ಒಳ್ಳೆಯವರಿದ್ದರೂ ಅವರ ಹೆಂಡತಿ 'ಬೇವಿನಹಟ್ಟಿ ಕಾಳವ್ವ'ನಂಥವಳು; ಅವರು ಮುದ್ದಿನಿಂದ ಸಾಕಿದ ಒಬ್ಬಳೇ ಮಗಳು ದಾರಿತಪ್ಪಿದವಳು. ತಂದೆ ಸಾಯುತ್ತಿದ್ದರೂ ಬಂದು ಅವರ ಮುಖ ನೋಡದವಳು. ಪ್ರೇಮ, ಕ್ರೌರ್ಯ, ಹಿಂಸೆ, ಭಯ, ರೋಗ, ಯಾತನೆ–ಹೀಗೆ ಎಲ್ಲವೂ ಈ ಕಥೆಯ ಲೋಕದ ಸಂಕೀರ್ಣ ಅಂಶಗಳು; ಮಗುವಿನ ಮುಗ್ಧ ಮನಸ್ಸಿನ ಮೇಲೆ ಮೌನವಾಗಿ ಪರಿಣಾಮ ಮಾಡುತ್ತಿರುವ ಸಂಗತಿಗಳು. ಕಿಟ್ಟಿ ಎಲ್ಲದಕ್ಕೂ ಸಾಕ್ಷಿಯಾಗಿ ಮಗುವಿಗೆ ಸಹಜವಾದ ನಿರ್ಲಿಪ್ತತೆ ಆಸಕ್ತಿಗಳಿಂದ ಇವುಗಳನ್ನೆಲ್ಲ ನೋಡುತ್ತಾನೆ. ಈ ಕಥೆಯ ತುಂಬ ದಟ್ಟ ವಿವರಗಳು ಬರುತ್ತವೆ. ಮೃತ್ಯು ಪ್ರಜ್ಞೆಯನ್ನು ಗಾಢವಾಗಿಸುತ್ತ ಹೋಗುವ ವಿವರಗಳ ಜೊತೆಗೇ ಕಿಟ್ಟಿ ಸ್ಕೂಲಿನಲ್ಲಿ ಕೂತು ಕಾಲುಗಳಿಗೆ ಅಂಟಿಕೊಂಡಿದ್ದ ಕೆಸರು ಚಕ್ಕೆಗಳನ್ನು ಬಿಡಿಸುವುದರಲ್ಲಿ ಮಗ್ನವಾದ ವಿವರಕ್ಕೂ ಈ ಕಥೆಯಲ್ಲಿ ಎಡೆಯಿದೆ. ಸಾಯುತ್ತ ಮಲಗಿರುವ ಮಾವಯ್ಯನ ಪಾದಗಳು ಮೀನಿನ ಹೊಟ್ಟೆಯಂತೆ ಬಿಳಿಚಿಕೊಂಡಿರುವ ವಿವರ, ಸಂಜೆಗತ್ತಲಲ್ಲಿ ಗುಳವನ್ನು ಕೆಂಪಗೆ ಕಾಯಿಸುತ್ತಿರುವ ಆಚಾರಿಯ ಕುಲುಮೆ, ಗಾಢವಾದ ರೀತಿಯಲ್ಲಿ ಸಾವಿನ ಅಳುಕನ್ನು ಬೆಳೆಸುವ ಮಳೆ, ಬೊಬ್ಬರಿಸಿ ಮಾಡುವ ಯಮುನ ವರ್ಣನೆ, ಕಜ್ಜಿ ಕೆರೆಯುತ್ತ ಬೆಂಕಿಯ ಎದುರು ಕೂತ ಈ ಅನಾಥ ಪ್ರಜ್ಞೆಯ ಬೇವರ್ಸಿಯ ಚಿತ್ರ—ಈ ಎಲ್ಲವೂ ಕೂಡಿ ಸಾಂಕೇತಿಕವೂ ಸ್ನಿಗ್ಧವೂ ಆದ ಒಂದು ಪ್ರಪಂಚವನ್ನು ಸೃಷ್ಟಿಸುತ್ತವೆ............ಕಥೆಯ ಉದ್ದಕ್ಕೂ ಬೆಳೆಯುತ್ತ ಬರುವ ಸಾವಿನ ಮುನ್ಸೂಚನೆಗಳು ಕಿಟ್ಟಿಯ ಮನಸ್ಸಿನಲ್ಲಿ ಒಂದು ಪರ್ಯಾಪ್ತ ಸ್ಥಿತಿಯನ್ನು ಮುಟ್ಟಿದಾಗ ಮಳೆಯಲ್ಲಿ ಅಜ್ಜನ ಹೆಣವನ್ನು ಒಳಗೆ ತರುತ್ತಾರೆ. ಆಗ ಮನೆಯಲ್ಲೆಲ್ಲ ಏಳುವ ರೋದನ ಅತ್ಯಂತ ನಿರ್ಲಿಪ್ತವಾಗಿ ಪರಿಣಾಮಕಾರಿಯಾಗಿ ವರ್ಣಿತವಾಗಿದೆ. ಕಥೆಯ ಕೊನೆಯಲ್ಲಿ ಕಿಟ್ಟಿ ಪ್ರಜ್ಞೆ ತಪ್ಪಿ ಬೀಳುವುದು ಮಾತ್ರ ಅನಾವಶ್ಯಕವೆನಿಸುತ್ತದೆ" ಎಂಬ ಯು. ಆರ್. ಅನಂತಮೂರ್ತಿಯವರ ಮಾತುಗಳು ಕಥೆಯ ಶ್ರೇಷ್ಠ ಅಂಶಗಳನ್ನೆಲ್ಲ ವ್ಯಕ್ತಪಡಿಸುತ್ತವೆ.* ಆದರೆ ಕಿಟ್ಟಿಯು ಎರಡು ಮೂರು ಬಾರಿ ತನ್ನ ಅಪ್ಪನನ್ನು 'ಅಪ್ಪ, ಅವನು ಬಾವನ' ಎಂದು ಕೇಳುವುದು, ಮುದುಕಮ್ಮನರನ್ನು ಕರೆದುಕೊಂಡು ಬರಲು ಕಿಟ್ಟಿಯ ಅಪ್ಪ ಆಳುಗಳೊಂದಿಗೆ, ತೋಟದ ಕಡೆಗೆ ಇದ್ದಕ್ಕಿದ್ದಂತೆ ಹೊರಡುವುದು—ಇವು ಕಥೆಯ ಪರಿಣಾಮವನ್ನು ತೀವ್ರಗೊಳಿಸಲು ಕಥೆಗಾರ ತೀರ ಉದ್ದೇಶಪೂರ್ವಕವಾಗಿ ಕಥೆಯಲ್ಲಿ ತರುತ್ತಿರುವ ಅಂಶಗಳೆನಿಸುತ್ತದೆ. ಮಳೆಯನ್ನು ವರ್ಣಿಸುವಾಗ ಬರುವ "ದೊಡ್ಡ ದೊಡ್ಡ ಬಕೆಟ್ಟುಗಳಿಂದ ಎತ್ತಿ ಬಗ್ಗಿಸಿದ ಹಾಗೆ" ಎಂಬ ಮಾತುಗಳಲ್ಲಿ ಬರುವ 'ಬಕೆಟ್ಟು' ಎಂಬ ಮಾತು ಕಥೆಯ ವಾತಾವರಣದೊಳಗೆ ಸಹಜವೆನಿಸುವುದಿಲ್ಲ. ಇಂಥ ಒಂದೆರಡು

* 'ತಪ್ತ' ಸಂಕಲನದ ಮುನ್ನುಡಿ.

ಸಣ್ಣಪುಟ್ಟ ಲೋಪದೋಷಗಳನ್ನುಳಿದರೆ ಇದು ಕನ್ನಡದ ಶ್ರೇಷ್ಠ ಕಥೆಗಳಲ್ಲೊಂದು ಎಂಬುದರಲ್ಲಿ ಎರಡು ಮಾತಿಲ್ಲ.

ಆಲನಹಳ್ಳಿಯವರ ಕಥೆಗಳ ಮೇಲೆ ಯಾವುದೇ ಸಾಹಿತ್ಯ ಪಂಥದ ಅಥವಾ ಲೇಖಕರ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟದಮಾತು. ಯಾವನೇ ಒಬ್ಬ ಲೇಖಕ ಅನ್ಯ ಪ್ರಭಾವಕ್ಕೊಳಗಾದರೂ ಆ ಪ್ರಭಾವವನ್ನು ಸ್ವಂತ ಪ್ರತಿಭೆಯೊಡನೆ ಅರಗಿಸಿಕೊಂಡರೆ ಆತ ಶ್ರೇಷ್ಠ ಲೇಖಕನಾಗುತ್ತಾನೆ. ಆಲನಹಳ್ಳಿಯವರು ಕೆಲವೊಮ್ಮೆ ವಸ್ತುವಿನ ಆಯ್ಕೆಯಲ್ಲಿ, ಚಿಂತನೆಯಲ್ಲಿ ಪರೋಕ್ಷವಾಗಿ ಪ್ರಭಾವಿತರಾಗಿರುವುದುಂಟು. ಉದಾಹರಣೆಗೆ ಹೇಳುವುದಾದರೆ 'ಗೀಜಗನಗೂಡು' ಕಥೆಯನ್ನು ಬರೆಯುವಲ್ಲಿ ಅವರು ಹಿಂದಿಯ ಶ್ರೇಷ್ಠ ಕಥೆಗಾರರಾದ ನಿರ್ಮಲ್ ವರ್ಮಾ ಅವರ 'ವೇದಿನ್'* (Days of Longing) ಕಾದಂಬರಿಗೆ ಋಣಿಯಾಗಿದ್ದಾರೆ. ಎರಡೂ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಸಂಗತಿ ಅರಿವಿಗೆ ಬರುತ್ತದೆ. 'ವೇದಿನ್' ಕಾದಂಬರಿಯಲ್ಲಿ ಕಥಾನಾಯಕನು ಹೊರದೇಶದಿಂದ ಪ್ರವಾಸಿಯಾಗಿ ಬಂದ ತರುಣಿಯೊಬ್ಬಳಿಗೆ ಪ್ರಾಗ್‌ನಗರವನ್ನು ತೋರಿಸುವ 'ಗೈಡ್' ಆಗುತ್ತಾನೆ. ಕೆಲವೇ ದಿನಗಳ ಪರಿಚಯ, ಸ್ನೇಹ ಗಾಢವಾದ ಪ್ರೀತಿಯಾಗಿ ಅವರನ್ನು ಬೆಸೆಯುತ್ತದೆ. ಕಡೆಗೆ ಅವರಿಬ್ಬರೂ ಅನಿವಾರ್ಯವಾಗಿ ಅಗಲಬೇಕಾಗುತ್ತದೆ. ಈ ಅಗಲಿಕೆಯ ನೋವು ಉಳಿದರೂ ಅವರಿಬ್ಬರೂ ಉತ್ಕಟವಾಗಿ ಕಳೆದ, ಅನುಭವಿಸಿದ ಕ್ಷಣಗಳು ಇಬ್ಬರ ಮನಸ್ಸನ್ನೂ ತುಂಬಿಕೊಳ್ಳುತ್ತವೆ. ಅದೊಂದು ಅನಪೇಕ್ಷಿತ, ಅನಿರೀಕ್ಷಿತ, ಆಪ್ತ ಅನುಭವವಾಗಿ ನಾಯಕನ ಮನಸ್ಸಿನಲ್ಲಿ ಉಳಿದುಬಿಡುತ್ತದೆ. 'ಗೀಜಗನಗೂಡು' ಕಥೆಯಲ್ಲಿನ ಕಥಾನಾಯಕನಿಗೆ ಆಗುವ ಅನುಭವ ಕೂಡ ಇದೇ ಬಗೆಯದು. ಇಲ್ಲಿ ರಷ್ಯನ್ ಪ್ರವಾಸಿ ತರುಣಿಯೊಡನೆ ಅನಪೇಕ್ಷಿತ, ಆಕಸ್ಮಿಕ ಪರಿಚಯವನ್ನೂ ಲೈಂಗಿಕ ಸಂಬಂಧವನ್ನೂ ಹೊಂದುವ ಕಥಾನಾಯಕ ಉತ್ಕಟವಾಗಿ ಆಕೆಯೊಡನೆ ಒಂದೆರಡು ದಿನಗಳನ್ನು ಕಳೆಯುತ್ತಾನೆ. ಈ ಸಂಬಂಧ ಕೂಡ ಕಡೆಗೆ ತೀವ್ರ ಪ್ರೀತಿಯಾಗಿಬಿಡುತ್ತದೆ. 'ಗೀಜಗನಗೂಡು' ಕಥೆಗಿಂತ 'ವೇದಿನ್'ನ ಸಂಬಂಧದ ಚಿತ್ರ ಹೆಚ್ಚು ಸೂಕ್ಷ್ಮವೂ ಹೃದಯಸ್ಪರ್ಶಿಯೂ ಆಗಿದೆ. 'ವೇದಿನ್' ಒಂದು ಅತ್ಯುತ್ತಮ ಕಾದಂಬರಿಯಾಗಿಯೂ ಸಫಲವಾಗಿದೆ. 'ಗೀಜಗನಗೂಡು' ಕನ್ನಡದ್ದೇ ಕಥೆಯಾಗಿದೆ. ಅನ್ಯ ಪ್ರಭಾವದ ಯಾವ ಸುಳಿವೂ ಇಲ್ಲಿಲ್ಲ. ಯಾಕೆಂದರೆ ಆಲನಹಳ್ಳಿಯವರ ಸಹಜ ಪ್ರತಿಭೆ ಇಂಥ ಸಣ್ಣ ಪುಟ್ಟ ಪ್ರಭಾವಗಳನ್ನು ಪತ್ತೆಹಚ್ಚದಂತೆ ಅರಗಿಸಿಕೊಂಡುಬಿಟ್ಟಿದೆ!

---

* ಶ್ರೀ ತಿಪ್ಪೇಸ್ವಾಮಿಯವರು ಈ ಕಾದಂಬರಿಯನ್ನು 'ಆ ದಿನಗಳು' ಎಂಬ ಹೆಸರಿನಲ್ಲಿ ಇತ್ತೀಚಿಗೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕನ್ನಡ ಕಾವ್ಯದ ಬೆಳಗು: ಶ್ರೀಕೃಷ್ಣ ಆಲನಹಳ್ಳಿ

ಪೋಲಂಕಿ ರಾಮಮೂರ್ತಿ

"ಕನ್ನಡ ಕಾವ್ಯದ ಬೆಳಗ"ನ್ನು ಗುರುತಿಸುತ್ತಾ, ನಾನು, ಪ್ರಜಾಸತ್ತೆಯ ಪ್ರಜೆಯಾಗಿ, ಜಾತೀಯ ಮತ್ತು ವರ್ಗೀಯ ಕಾರಣಕ್ಕಾಗಿ ಏಕ ಮತ್ತು ಬಹುವಚನಗಳನ್ನು ಪಲ್ಲವಿಗೊಳಿಸದೆ, ನಾವು ಯಾವತ್ತಿನಿಂದಲೂ ಜನಸಾಮಾನ್ಯರ ಆಡುಮಾತಿನಲ್ಲೂ, ಜಾನಪದದಲ್ಲೂ ಉಪಯೋಗಿಸುತ್ತಿರುವಂತೆ, ಹಾಗೂ ಪ್ರಜಾಸತ್ತಾತ್ಮಕ ಭಾಷೆಗಳಲ್ಲೊಂದಾದ ಇಂಗ್ಲೀಷಿನಲ್ಲೂ ಉಪಯೋಗಿಸುತ್ತಿರುವಂತೆ, ಪ್ರಧಾನಿಗೂ ಅಂಚೆ ಜವಾನನಿಗೂ "ಅವನು", "he" ಅಂತಲೇ ಸಂಬೋಧಿಸುತ್ತಾ, ಈಗಾಗಲೇ ನಾಲ್ಕು ದಶಕಗಳ ಮೇಲಿಂದಲೂ ನಡೆಯಲ್ಲಿ ಜಾರಿಯಿರುವ ನಮ್ಮ ಪ್ರಜಾಸತ್ತೆಯನ್ನು ನುಡಿಯಲ್ಲೂ ಸಾಬೀತುಗೊಳಿಸಲು, ಈ ಮೊದಲ ಹೆಜ್ಜೆಯನ್ನು ಹಾಕುತ್ತಿದ್ದೇನೆ, ಹಾಗೂ ನನ್ನ ಕನ್ನಡ ಬಾಂಧವರೆಲ್ಲರೂ ಈ ಜಾತ್ಯತೀತ ವರ್ಗಾತೀತವಾದ ಸಮತೆಯ, ಪ್ರಜಾಸತ್ತೆಯ ಹಾದಿಯನ್ನು ತಮ್ಮ ಪವಿತ್ರ ಕರ್ತವ್ಯವೆಂತಲೇ ತುಳಿಯಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ತನ್ನ ಬೋಧನೆ ಜನಸಾಮಾನ್ಯರ ಆಡುಮಾತಿನ ಪಾಳಿಯಲ್ಲೇ ಇರಬೇಕು, ಎಂದಿಗೂ ಸಂಸ್ಕೃತದಲ್ಲಿರಬಾರದೆಂದು ಹೇಳಿದ ಬುದ್ಧನ ಮಾತಿನ ಎಚ್ಚರವನ್ನೇ ೧೨ನೇ ಶತಮಾನದ ಬಸವಾದಿ ವಚನಕಾರರೂ ಪಾಲಿಸಿ, ತಮ್ಮ ಬೋಧೆಯನ್ನು ಜನಸಾಮಾನ್ಯರ ಆಡುಮಾತಿನ ವಚನಗಳಲ್ಲೇ ಇಟ್ಟರು, ಹಾಗೂ ಬುದ್ಧನು ಮಾಡಿದ ಕ್ರಾಂತಿಯನ್ನೂ ಅವರೂ ಮಾಡಿ, ಅವನ ಸ್ಥಾಪಿಸಿದ ಬೌದ್ಧಮತದಂತೆ, ತಮ್ಮ ವೀರಶೈವ ಮತವನ್ನೂ ಸ್ಥಾಪನೆ ಮಾಡಿದರು. ಇದರಿಂದಾದರೂ ನಾವು ಚರಿತ್ರೆಯ ಈ ಮಹಾಮುಖ್ಯವಾದ ಪಾಠವನ್ನು ಕಲಿತು, ಬುದ್ಧ ಬಸವಾದಿಗಳ ಎಚ್ಚರದಲ್ಲಿ ನಾವೂ ನಮ್ಮ ನಾಲ್ಕು ದಶಕಗಳ ಪ್ರಜಾಸತ್ತೆಯ ಸಮತೆಯನ್ನು ನಮ್ಮ ಜನಜೀವನದಲ್ಲಿ ವಾಸ್ತವಗೊಳಿಸಬೇಕು, ನಮ್ಮ ನುಡಿಯಲ್ಲಿ, ನಮ್ಮ ಆಡುಮಾತಿನಲ್ಲಿ ಈ ಸಮತೆಯನ್ನು ಕಾರ್ಯಗತಗೊಳಿಸಬೇಕು.

ಬುದ್ಧನ ಕಾಲದ ಜನಸಾಮಾನ್ಯರ ಆಡುಭಾಷೆಯಾದ ಪಾಳಿಯಲ್ಲಿ ಸಮತೆಯಿದೆ, ಬಸವನ ಕಾಲದ ಜನಸಾಮಾನ್ಯರ ಆಡುಮಾತಾದ ವಚನದಲ್ಲಿ ಸಮತೆಯಿದೆ: ಹಾಗೇನೇ ಯಾವ ಕಾಲದ ಜನಸಾಮಾನ್ಯರ ಆಡುಮಾತಿನಲ್ಲೂ ಸಮತೆ ಸಹಜವಾಗಿಯೇ ಇದೆ, ಯಾಕೆಂದರೆ ಜನಸಾಮಾನ್ಯರು, ಮೇಲ್ಜಾತಿಯ, ಮೇಲ್ವರ್ಗದ ಜನರಂತೆ ಮೇಲು ಕೀಳೆನ್ನುವ ತಾರತಮ್ಯ ಮಾಡದೆ, ತಾವೆಲ್ಲರೂ ಹೆಚ್ಚುಕಡಿಮೆ ಒಂದೇ ಮಟ್ಟದ ಒಂದೇ ರೀತಿಯ ಜೀವನವನ್ನು ನಡೆಸುವುದರಿಂದ ಅವರ ಬಾಳಿಗೆ ಸಹಜವಾಗಿರುವ ಸಮತೆಯಲ್ಲೇ ಬಾಳುತ್ತಾರೆ. ಉದಾಹರಣೆಗೆ, ಜನಸಾಮಾನ್ಯರು ತಮ್ಮ ಗಂಡ ಹೆಂಡಿರನ್ನು ತಂದೆ ತಾಯಿಗಳನ್ನು, ಗುರುಹಿರಿಯರನ್ನು ದೇವರುದಿಂಡರನ್ನು "ನೀನು" ಅಂತಲೇ ಸಂಬೋಧಿಸುತ್ತಾರೆ: "ನನ್ನ ಗಂಡ ಹೊಲಕ್ಕೆ ಹೋಗಿದ್ದಾನೆ"; "ಅಪ್ಪಾ, ನಿನ್ನ ಜೇಬಿನಲ್ಲಿ ದುಡ್ಡು ಅಮ್ಮ ತಗೊಂಡಳು"; "ಅಣ್ಣಾ, ಬೆಣ್ಣೆಯೆಲ್ಲಾ ನೀನೇ ತಿಂದುಬಿಟ್ಟೆ"; "ಗುರುವೇ, ನಿನಗೆ ಶರಣು"; "ದೇವಿ ಎಲ್ಲಮ್ಮ, ನೀನೇ ನಮ್ಮನ್ನು ಕಾಪಾಡಬೇಕು." ಆದರೆ ಈ ಉಪಯೋಗಗಳೆಲ್ಲಾ ಮೇಲ್ವರ್ಗದ, ಮೇಲ್ಜಾತಿಯ ಜನರಲ್ಲಿ ಬಹುವಚನಗಳಾಗಿಬಿಡುತ್ತವೆ.

ಈ ಏಕ ಬಹುವಚನಗಳ ತಾರತಮ್ಯ ಬೇರೆ ಜನಾಂಗಗಳಲ್ಲಿ, ಅದರಲ್ಲೂ ಪ್ರಜಾಸತ್ತೆಯ ಜನಾಂಗಗಳಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಇಲ್ಲ. ಉದಾಹರಣೆಗೆ ಇಂಗ್ಲೀಷ್‌ನಲ್ಲಿ ಪ್ರಧಾನಿಯನ್ನೂ ಅಂಚೆ ಜವಾನನನ್ನೂ "you" ಅಂದರೆ "ನೀನು" ಅಂತಲೇ, "he" ಅಂದರೆ "ಅವನು" ಅಂತಲೇ ಏಕವಚನದಲ್ಲಿ ಸಂಬೋಧಿಸುತ್ತಾರೆ. ನಮ್ಮ ನಾಡಿನ ಎಲ್ಲಾ ರಾಜ್ಯಗಳ ಇಂಗ್ಲೀಷ್ ಪತ್ರಿಕೆಗಳು ಪ್ರಧಾನಿಗೂ ಅಂಚೆ ಜವಾನನಿಗೂ "he" ಅಂತಲೇ, ಅವರಿಬ್ಬರೂ ಪರಸ್ಪರ ಮಾತಾಡುವಾಗ "you" ಅಂದರೆ "ನೀನು" ಅಂತಲೇ ಅಚ್ಚುಹಾಕುತ್ತಾರೆ. ಆದರೆ ನಮ್ಮ ನಾನಾ ರಾಜ್ಯದ ಭಾಷಾ ಪತ್ರಿಕೆಗಳಲ್ಲಿ ಶಬ್ದಕೋಶದ ಅರ್ಥವನ್ನು ಉಲ್ಲಂಘಿಸಿ ನಾವು ಪ್ರಧಾನಿಗೆ "ಅವರು" ಎಂತಲೂ, ಜವಾನನಿಗೆ "ಅವನು" ಎಂತಲೂ, ಪ್ರಧಾನಿಯನ್ನು ಸಂಬೋಧಿಸುವಾಗ "ತಾವು, ನೀವು" ಎಂತಲೂ, ಜವಾನನನ್ನು ಸಂಬೋಧಿಸುವಾಗ "ನೀನು" ಎಂತಲೂ ಅಚ್ಚು ಹಾಕಿ ಸಮತೆಗೆ ಕೊಡಲಿಪೆಟ್ಟು ಹಾಕುತ್ತಾ ಬಂದಿದ್ದೇವೆ.

ಈ ತಾರತಮ್ಯದ ಮೂಲವಿರುವುದು—ಮೊದಲು ಜಾತಿಯಲ್ಲಿ, ಆಮೇಲೆ ವರ್ಗದಲ್ಲಿ. "ಬ್ರಾಹ್ಮಣನು ೧೦ ವರ್ಷದ ವಯಸ್ಸಿನವನಿದ್ದರೂ ೧೦೦ ವರ್ಷದ ರಾಜನಿಗೆ ಪಿತೃ ಸಮಾನನು. ಇದು ಚಾತುರ್ವರ್ಣ್ಯದ ಜಾತಿಪದ್ಧತಿ ವ್ಯವಸ್ಥೆಯು. ಅವರಿಬ್ಬರಲ್ಲಿ ಬ್ರಾಹ್ಮಣನೇ ತಂದೆಯು" ಎನ್ನುತ್ತದೆ ಮನುಧರ್ಮಶಾಸ್ತ್ರ (೨. ೧೩೫). ಅದಕ್ಕೇ ಈಗಲೂ ಹಳ್ಳಿಯ ರೈತ ಶ್ಯಾನುಭೋಗನ ಆಡುವ ಮಗನಿಗೆ "ಪುಟ್ಟಬುದ್ಧೀ, ದೊಡ್ಡಬುದ್ಧಿ ಯೋರವ್ರಾ?" ಎನ್ನುತ್ತಾನೆ. ಅಷ್ಟೇಕೆ, ಕನ್ನಡ ಭಾರತಿಯಂಥಾ ಕನ್ನಡ ನಾಡಿನಾದ್ಯಂತದ ಕನ್ನಡ ಪಠ್ಯ ಪುಸ್ತಕವಲ್ಲಿ "ಗೋಪಾಲಭಟ್ಟರ ಹುಲಿ" ಎನ್ನುವ ೮ ನೇ ತರಗತಿಯ ಪುಸ್ತಕದಲ್ಲಿ, ಪಾಠದುದ್ದಕ್ಕೂ ಗೋಪಾಲಭಟ್ಟನನ್ನು ಬಹುವಚನದಲ್ಲೂ ಸರ್ಕಸ್ಸಿನ ಮ್ಯಾನೇಜರನ್ನು ಏಕವಚನದಲ್ಲೂ ಸಂಬೋಧಿಸಿ ಏಕಬಹುವಚನಗಳ ಜಾತೀಯ ತಾರತಮ್ಯವನ್ನು ಪಾಲಿಸುತ್ತಾ, ಎಳೆಯ ಮಕ್ಕಳ ಮನಸ್ಸಿನಲ್ಲೂ ಆ ಅಸಮತೆಯ ವಿಷಬೀಜವನ್ನು ಬಿತ್ತುತ್ತಾ, ಸಂವಿಧಾನದ ಸಮತೆಯನ್ನೇ ಉಲ್ಲಂಘಿಸಿದೆ.

ಆದ್ದರಿಂದ ಕನ್ನಡದ ಕಾವಲುಗಾರರೆಂದು ಕನ್ನಡವನ್ನು ಕಾಯುತ್ತಿರುವ ನಾವು ಮೊಟ್ಟಮೊದಲು ಕನ್ನಡವನ್ನು, ಅಂದರೆ ಜನಸಾಮಾನ್ಯರ ಜೀವಂತ ಆಡುಮಾತಿನ, ಎಲ್ಲಾ ಕಾಲದಲ್ಲೂ ಸಮತೆಯನ್ನು ಜೀವನದಲ್ಲಿ ಪಾಲಿಸುತ್ತಲೇ ಬಂದಿರುವ ಜಾನಪದವನ್ನು, ಸಂಸ್ಕೃತದ ಸುಸ್ಕೃತ ಜನರ ಜಾತೀಯ ವರ್ಗೀಯ ತಾರತಮ್ಯದ ವಿಷದಿಂದ ಮೊಟ್ಟಮೊದಲು ಕಾಪಾಡಬೇಕಾಗಿದೆ. ಪತ್ರಿಕೆಗಳಲ್ಲೂ, ಪಠ್ಯಪುಸ್ತಕಗಳಲ್ಲೂ, ಸರ್ಕಾರದ ವ್ಯವಹಾರಗಳೆಲ್ಲಾ ತೀವ್ರವಾದ ಆದ್ಯತೆಯಿಂದ ಈ ಅಸಮತೆಯ ಬೇರನ್ನು ಕಿತ್ತುಹಾಕಬೇಕಾಗಿದೆ.

ಪ್ರಜಾಸತ್ತೆಯೆನಿಸಿಕೊಂಡಿರುವ ನಾವು ಪ್ರಾಮಾಣಿಕವಾಗಿ ಪ್ರಜಾಸತ್ತೆಯ ಸಮತೆಯನ್ನು ನುಡಿಯಲ್ಲಿ ಸಾಬೀತುಗೊಳಿಸಿ, ನಮ್ಮ ಆತ್ಮಾಭಿಮಾನವನ್ನು ಉಳಿಸಿಕೊಳ್ಳಬೇಕಾದರೆ, ಈ ಕ್ಷಣದಿಂದ ನಾವು "ನಾನು–ನೀನು–ಅವನು–ಅವಳು"ಗಳ ವ್ಯಾಕರಣಬದ್ಧವಾದ, ಪ್ರಜಾಸತ್ತಾತ್ಮಕವಾದ ಏಕವಚನವನ್ನು ಯಾವ ಕಾರಣಕ್ಕೂ ಬಹುವಚನಕ್ಕಿಳಿಸಿ ನಮ್ಮ ಆತ್ಮಗೌರವಕ್ಕೆ ನಾವೇ ಅಪಚಾರ ಮಾಡದೆ ಹಾಗೂ ಸಂವಿಧಾನದ ಪವಿತ್ರ ಸಮತೆಯನ್ನು ಉಲ್ಲಂಘಿಸದೆ, ಏಕವಚನದಲ್ಲೇ ಪ್ರಯೋಗಿಸಿ ಪ್ರಜಾಸತ್ತೆಯನ್ನು ವಾಸ್ತವ ಮಾಡಬೇಕು. ಈ ದಿಶೆಯಲ್ಲಿ ನಾನೀಗ ಈ ಲೇಖನದಲ್ಲಿ ಏಕಬಹುವಚನಗಳನ್ನು ವ್ಯಾಕರಣಬದ್ಧವಾಗಿ, ಸಂವಿಧಾನಬದ್ಧವಾಗಿ, ಆತ್ಮಗೌರವದ ಸಮತೆಗನುಗುಣವಾಗಿ ಉಪಯೋಗಿಸುತ್ತಿದ್ದೇನೆ.

ಕನ್ನಡ ಕಾವ್ಯದ ಬೆಳಗಾಗಿದ್ದು ಶ್ರೀಕೃಷ್ಣ ಆಲನಹಳ್ಳಿಯ "ಬೆಳಗು" ಕವನದಿಂದ, ಬೇಂದ್ರೆಯ "ಬೆಳಗು" ಪದ್ಯದಿಂದಲ್ಲವೆನ್ನುವ ವಾಸ್ತವವನ್ನು ಕಂಡುಕೊಳ್ಳುವಲ್ಲಿ ನಮ್ಮ ವಿಮರ್ಶೆ ಎಷ್ಟರ ಮಟ್ಟಿಗೆ ಎಚ್ಚತ್ತಿದೆ, ಜೀವಂತವಾಗಿ ವಾಸ್ತವ ಜೀವಕ್ಕೆ ತುಡಿಯುತ್ತಿದೆ ಎನ್ನುವುದರ ಕಂಡುಕೊಳ್ಳುವಿಕೆ ಇದೆ. ಕೃಷ್ಣ "ಬೆಳಗು" ಕವನವನ್ನು ಆಗತಾನೇ ಶುರುವಾಗಿದ್ದ, ಈಗ ತನ್ನ ೨೫ ನೇ ವರ್ಷದ ಬೆಳ್ಳಿಹಬ್ಬವನ್ನು ಆಚರಿಸಲು ಅಣಿಯಾಗುತ್ತಿರುವ, ಕನ್ನಡ ನಾಡಿನ ಏಕೈಕ ಸಾಹಿತ್ಯ ಮತ್ತು ವಿಮರ್ಶಾ ಪತ್ರಿಕೆಯಾದ **ಸಂಕ್ರಮಣ**ಕ್ಕೆ ಕಳುಹಿಸಿಕೊಟ್ಟಾಗ ಅದರ ಮೂವರೂ ಸಂಪಾದಕರೂ, ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜು, ಸಿದ್ಧಲಿಂಗಪಟ್ಟಣಶೆಟ್ಟಿಯವರು, ಅವರಷ್ಟಿಗೆ ಅವರೇ, ಒಬ್ಬರು ಬರೆದದ್ದು ಇನ್ನೊಬ್ಬರಿಗೆ ಗೊತ್ತಿಲ್ಲದಂತೆ, ಪ್ರತ್ಯೇಕವಾಗಿ ಕೃಷ್ಣನಿಗೆ ಮೆಚ್ಚಿಗೆಯ ಪತ್ರವನ್ನು ಬರೆದು, ಆ ಕವನವನ್ನು ಅಚ್ಚುಹಾಕಿದ್ದರು. ಅಲ್ಲದೆ ಆಗಲೇ ನವ್ಯ ಕವಿಯೆಂದು ಹೆಸರಾಗಿದ್ದ ಗೋಪಾಲಕೃಷ್ಣ ಅಡಿಗ, ಕೃಷ್ಣನ ಮಣ್ಣಿನ ಹಾಡು ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಮಣ್ಣಿನ ಹಾಡು "ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಹೊಸ ಶಕೆಯನ್ನು ಆರಂಭ" ಮಾಡಿದೆಯೆಂತಲೂ, ''ನಮ್ಮ ದೇಶದಲ್ಲಿ ಕನವರಿಕೆಯ ಯುಗ ಮುಗಿದು, ನಿಜವಾದ ಕಸಬುಗಾರಿಕೆಯ ಯುಗ ಆರಂಭ'' ವಾಗುತ್ತಿದೆಯೆಂತಲೂ ಅದರ ಗುಣವನ್ನು ಪ್ರಾಮಾಣಿಕವಾಗಿ ಮೆಚ್ಚಿದ್ದರೂ, ಅದೇ ಉಸಿರಿನ ನಿಶ್ವಾಸದಲ್ಲಿ ''ಪ್ರತಿಯೊಂದು ಕವನವೂ ಅಂತರಂಗದ ಬೆಳವಣಿಗೆಯ ಒಂದೊಂದು ತಾತ್ಕಾಲಿಕ ಕಾವ್ಯವರದಿ ಎನ್ನಿಸಬಹುದೆ'' ಎಂತಲೂ, ''ಬಹುಶಃ ಈ ಎಲ್ಲ ಕವನಗಳೂ ಶ್ರೀಕೃಷ್ಣ ಇನ್ನು ಮುಂದೆ ಬರೆಯಬಹುದಾದ ಉತ್ತಮ ಕವನವೊಂದರ ಬೇರೆ ಬೇರೆ

ಕರಡೋ?'' ಎಂದು ಶಂಕಿಸುತ್ತಲೂ, ತನ್ನ ಮಾತ್ಸರ್ಯವನ್ನೂ ಕಾರಿ ಬಿಟ್ಟಿದ್ದಾನೆ. ಯಾವ ಕಾವ್ಯ ''ಒಂದು ಹೊಸ ಶಕೆಯನ್ನು ಆರಂಭಿಸು''ವಂಥಾದ್ದೋ, ಒಂದು "ನಿಜವಾದ....ಯುಗವನ್ನು ಆರಂಭಿ"ಸುವಂಥಾದ್ದೋ, ಅದು "ಪದಿ", "ಕಡು" ಆಗಿರಬೇಕಾದರೆ ಮಾತ್ಸರ್ಯದ ಜೈಗುಳ ಯಾವ ಮಟ್ಟಕ್ಕಿಳಿಯಬಹುದೆನ್ನುವುದರ ಅರಿವು ಯಾರಿಗೂ ಆಗದೇ ಇರಲಿಕ್ಕಿಲ್ಲ.

''ಶಕೆ'' ಮತ್ತು ''ಯುಗ'' ಎನ್ನುವ ಮಾತುಗಳನ್ನು ನಾವು ಡನ್‌ನಂಥಾ ಇಂಗ್ಲಿಷ್ ಕವಿಗೆ ವಿಟ್‌ಮನ್ನಿನಂಥಾ ಅಮೇರಿಕನ್ ಕವಿಗೆ ಮಾತ್ರ ಹೇಳುವಂಥಾದ್ದು, ಯಾಕೆಂದರೆ ಅವರ ಪ್ರಭಾವ ನಮ್ಮ ಶತಮಾನದ ಸಮಕಾಲೀನ ಕವಿಗಳ ಮೇಲೂ ಇದೆ. ಡನ್, ವಿಟ್‌ಮನ್ ಇಟ್ಟ ಹೆಜ್ಜೆ ಕ್ರಾಂತಿಕಾರೀ ಹೊಸದು, ದಿಟ್ಟತನದ್ದು, ಧೀಮಂತವಾದದ್ದು. ಅದಕ್ಕೇ ಎಲಿಯಟ್ ಮತ್ತು ಲೀವಿಸರು ಡನ್ನಿನ ಹೊಸ ಶಕೆಯ ಕಾವ್ಯವನ್ನು ಮೆಚ್ಚಿ ಬರೆದರು, ಡಿ. ಎಚ್. ಲಾರೆನ್ಸ್‌ನು ವಿಟ್‌ಮನ್ನಿನ ಹೊಸ ಯುಗದ ಕಾವ್ಯವನ್ನು ಕೊಂಡಾಡಿ ಬರೆದ.

ಡನ್ ಮತ್ತು ವಿಟ್‌ಮನ್ನರ ಕಾವ್ಯ ಎಷ್ಟು ಹೊಸತೆಂದು ತಿಳಿಯಬೇಕಾದರೆ, ಅದರ ಹಿಂದಿನ ಕಾವ್ಯದಿಂದ ಅದನ್ನು ಹೋಲಿಸಬೇಕಾಗುತ್ತದೆ. ಹಾಗೇನೇ ಕೃಷ್ಣನ ಕಾವ್ಯ ''ಹೊಸ ಶಕೆ'', ''ನಿಜ....ಯುಗ'' ಎಂದು ಕಂಡುಕೊಳ್ಳಬೇಕಾದರೆ ಅದನ್ನು ಆಗಿನ ಕಾವ್ಯದೊಂದಿಗೆ ತಾಳೆ ನೋಡಬೇಕಾಗುತ್ತದೆ.

ಕೃಷ್ಣನ "ಬೆಳಗು" ಪ್ರಕಟವಾದಾಗ, ಬೇಂದ್ರೆಯ "ಬೆಳಗು" ಎಲ್ಲಾ ಶಾಲಾ ಕಾಲೇಜುಗಳ ಸಮಾರಂಭಗಳಲ್ಲೂ, ರೇಡಿಯೋ ಗೀತಿಗಳಲ್ಲೂ ಹಾಡಲಾಗುತ್ತಿತ್ತು, ಈಗಲೂ ಹಾಡಲಾಗುತ್ತಿದೆ. ಹಾಗೇನೇ ಅಡಿಗನ ''ಮೋಹನ ಮುರಳಿ''ಯಂಥಾ ಕವನಗಳೂ, ಶಾಲಾ ಕಾಲೇಜುಗಳ ಸಮಾರಂಭಗಳಲ್ಲೂ ರೇಡಿಯೋ ಗೀತೆಗಳಲ್ಲೂ ಹಾಡಲಾಗುತ್ತಿದ್ದುವು, ಈಗಲೂ ಹಾಡಲಾಗುತ್ತಿವೆ. ಆದರೆ, ಕೃಷ್ಣನ ''ಬೆಳಗು'' ಹಾಗೆ ಹಾಡಿಸಿಕೊಳ್ಳುವ ಹಾಡು ಆಗಲೇ ಇಲ್ಲ, ಆಗಲು ಸಾಧ್ಯವೂ ಇಲ್ಲ: ಅದೀಗ ಕೃಷ್ಣನ ಕಾವ್ಯದ ''ಹೊಸ ಶಕೆ''ಯ ಕ್ರಾಂತಿಕಾರೀ ಹೊಸತನ, ''ನಿಜ ಯುಗ''ದ ಕ್ರಾಂತಿಕಾರೀ ನಿಜತನ.

ನಾವೇನು ಈಗ ಕಾವ್ಯವೆಂದು ತಿಳಿದಿದ್ದೇವೆಯೋ, ಆ ಕಾವ್ಯ ಹಾಡುವಂಥಾದ್ದಲ್ಲ; ಅದು ಓದುವಂಥಾದ್ದು. ಡನ್ ಮತ್ತು ವಿಟ್‌ಮನ್ನರ ಕಾಲದಿಂದಲಾದರೂ ಕಾವ್ಯ ಹಾಡುವ ಪರಿಶ್ರಮವಾಗಲಿಲ್ಲ, ಓದುವ ಕ್ರಿಯೆಯಾಯಿತು, ಹಾಗೆ ಓದುವುದರಿಂದಲೇ ಸಹಜವಾದ ಆಡುಮಾತಿನ, ಆತ್ಮೀಯತೆಯಾಯಿತು ಹಾಗೂ ಅನುಭವದ ಪ್ರಾಮಾಣಿಕತೆಯೂ, ಒಳನೋಟದ ಸೋಪಜ್ಞತೆಯೂ ಆಯಿತು.

ಚೆನ್ನಾಗಿ, ರಾಗವಾಗಿ ಹಾಡಿಸಿಕೊಳ್ಳುವ ಬೇಂದ್ರೆಯ ''ಬೆಳಗು'', ಕವಿಸಮಯಗಳಿಂದ, ಕ್ಲೀಷೆ (cliche) ಗಳಿಂದ ತುಂಬಿಹೋಗಿದೆ. ಬೆಳಗು ಬೇಂದ್ರೆಯ ''ಬೆಳಗು'' ನಲ್ಲಿ, ಬೆಳಗಿಲ್ಲ, ಕ್ರಿಯಾಪದವಾಗಿ ಬೆಳಗನ್ನು ಆಗಗೊಡಿಸಿಲ್ಲ—ಕೆಲವು ಸಂಕಲನಗಳಲ್ಲಿ ''ಬೆಳಗು'', ''ಬೆಳಕು'' ಎಂತಲೇ ಅಚ್ಚಾಗಿರುವುದೂ ಆಕಸ್ಮಿಕವಲ್ಲ ವೆನ್ನುವಂತೆ, ಬೆಳಗು ನಿಜಕ್ಕೂ ಬೆಳಕು, ಹೊರಗಿನ ವ್ಯಾಪಾರ, ನಮ್ಮಿಂದ ಹೊರತಾದ,

ನಮ್ಮೊಂದಿಗೆ ಬೆರೆಯದೆ, ನಮ್ಮನ್ನು ಬೆಳಗಿಸದೆ ಇರುವ, ವಸ್ತುವಿಶೇಷ: ಕವನದ ಮೊದಲ ಸಾಲುಗಳೇ ಸಾಬೀತುಗೊಳಿಸುವಂತೆ, ಅದು ''ಎರಕ'', ಹೊಯ್ದಂಥಾ ''ಎರಕ'' ''ಮುತ್ತಿನ ನೀರಿನ ಎರಕ''. ಇಲ್ಲಿಯು ಮುಖ್ಯ ಪದಗಳೆಲ್ಲವೂ ಕ್ಲೀಷೆಗಳೇ, ಕವಿಸಮಯಗಳೇ,—"ರಸದ ಕಾರಂಜಿ", "ಮಘಮಘಿಸುವಾ....ಮೊಗ್ಗೀ" "ಅಮೃತದ ಬಿಂದು" "ತುಂಬಿಯ ದಂಡು" "ಗಂಧಾ ಮೈಯೆಲ್ಲಾ ಸವರಿ", "ಹಕ್ಕಿಗಳ ಹಾಡು" "ಗಂಧರ್ವರ ಸೀಮೆ", "ಕೇಳಿತು ಕಿವಿ", "ಮೂಸಿತು ಮೂಗು", "ತನ್ನಯವೀಗೇಹಾ", "ದೇವರ . ಗೇಹಾ", "ಶಾಂತಿರಸವೇ....ಮೈದೋರಿತಣ್ಣಾ".

ಸಾಮಾನ್ಯವಾದ ಸಾಂಪ್ರದಾಯಿಕ ರೂಪಕ, ಪ್ರತಿಮೆಗಳುಳ್ಳ, ಕಿಕ್ಕಿರಿದ ಕ್ಲೀಷೆ ಪ್ರಯೋಗಗಳ, ಈ "ಬೆಳಗು" ಜೀವ ಪಡೆಕೊಂಡದ್ದೇ, ಹಾಡಿನಿಂದ, ಗೇಯದಿಂದ-ಹಾಡಿನ ಗುಂಗಿನಿಂದ. ಯಾವಾಗ ಕವನ "ರಸ", "ಅಮೃತ", "ಗಂಧರ್ವ", "ದೇವರು", "ಶಾಂತಿ" ಗಳೆನ್ನುವ ಅನಾದಿಕಾಲದಿಂದಲೂ ಉಪಯೋಗದಲ್ಲಿದ್ದು, ಅವುಗಳ ಭಾವಗಳನ್ನೇ ಕಳೆದುಕೊಂಡು ಕಳೇಬರವಾಗಿವೆಯೋ, ಅಂಥಾ ಪದಗಳಿಂದ ಜೋಡಿಸಿದ ಪದ್ಯ ಕಾವ್ಯವಾದರೂ ಆದೀತು ಹೇಗೆ? ಬೆಳಗು ಎನ್ನುವುದು ಮನೆಯ ಮುಂದೆ ನೀರೆರಚುವಂತೆ, "ಮೂಡಲ ಮನೆಯ ಮುತ್ತಿನ ನೀರಿನ ಎರಕ" ವಾಗಿ ಹೊಯ್ಯಿಸಿಕೊಂಡರೆ, ಜಗವನ್ನು ತೊಯ್ಯಿಸಿಕೊಂಡರೆ, ಅದು ಮನೆಬಾಗಿಲ ನೀರಿನಷ್ಟೇ ಹೊಯ್ಯುವ ತೊಯ್ಯುವ ದೈನಂದಿನ ಶಾಸ್ತ್ರವಾಗಿಯಷ್ಟೇ ಉಳಿದುಬಿಡುತ್ತದೆ.

ಇಡಿಯ "ಬೆಳಗು" ಪದ್ಯ ರಂಜನೀಯವಾದ ರೊಮ್ಯಾಂಟಿಕ್ ಪದಗಳಿಂದ ರಂಜಿತವಾಗಿದೆ: "ಮುತ್ತಿನ ನೀರು"—ನೀರಿನ ಹನಿ, ಹನಿಮುತ್ತೆಂದು ಎಷ್ಟು ಕ್ಲೀಷೆಯಾಗಿ ಬಿಟ್ಟಿದೆಯೆನ್ನುವುದನ್ನು ಗಮನಿಸಬೇಕು—"ರತ್ನದ ರಸದಾ ಕಾರಂಜಿ"—ಹಣ್ಣಿನ ರಸವಿದೆ, ಆದರೆ ರತ್ನದ ರಸ ಎಲ್ಲಿಯಾದರೂ ಇದ್ದೀತೇ?,—"ಅಮೃತದ ಬಿಂದು", "ಗಂಧರ್ವ ರಾಶೀಮೆ", "ಶಾಂತೀರಸ" ನಾವು "ರತ್ನದ ರಸ"ವೆಂದಾಗ, ನಮ್ಮಲ್ಲಿ ಮೂಡುವ ಭಾವವಾದರೂ ಏನು?, "ಅಮೃತದ ಬಿಂದು" ಎಂದಾಗ, ಮನಸ್ಸಿನಲ್ಲಿ ಎಂಥದಾದರೂ ಅನುಭವವೆನ್ನುವುದು ಆದೀತೇ, ಆಗಲು ಸಾಧ್ಯವೇ?, "ದೇವರ ದೀ ಮನಸಿನ ಗೇಹಾ" ಎಂದು ಸಾರಿಬಿಟ್ಟ ಕವಿ, ಮನಸಿನ ಗೇಹವನ್ನು ಧಿಡೀರನೆ ಯಾರು ಅರಿಯದ ದೇವರದನ್ನಾಗಿ ತರ್ಜುಮೆ ಮಾಡಿಕೊಂಡ ಮಂತ್ರಗಾರ ಹೇಗೆ ತಾನೆ "ಅರಿಯದು ಅಳವು, ತಿಳಿಯದು ಮನವು, ಕಾಣದೋ ಬಣ್ಣಾ" ಎಂದಾನು? ಇಲ್ಲ, ಅದೊಂದು ಮೋಡಿಯ ವರಸೆ ಮಾತ್ರ, ಯಾಕೆಂದರೆ ಮುಂದಿನ ಪವಾಡ ನೋಡಿ—"ಶಾಂತಿರಸವೇ ಪ್ರೀತಿಯಿಂದಾ ಮೈದೋರಿತಣ್ಣಾ". ಭಲೆ, ಕಣ್ಣಿಗೇನೋ ಬಣ್ಣವೆನ್ನುವುದು ಕಾಣಲಿಲ್ಲ, ಆದರೆ "ಶಾಂತಿರಸ"ವೆನ್ನುವುದು ಹೇಗೆ ಅನಾಯಾಸವಾಗಿ "ಮೈದೋರಿ" ಬಿಡುತ್ತದೆ, ಈ ಕಣ್‌ಕಟ್ ಕವಿಗೆ!

ಬೇಂದ್ರೆಯ ಈ "ಮೋಡಿ" (೬೯)ಯನ್ನು, "ಶಬ್ದಗಳ ಗುಂಗುಂಗಾನ" (೬೫) ವನ್ನು ಮೊಟ್ಟ ಮೊದಲಿಗೆ ತನ್ನ ವಾಸ್ತವದಲ್ಲಿ ಗುರುತಿಸಿದ ದಿಟ್ಟ ವಿಮರ್ಶಕ ಆರ್ಕೆ. ಬೇಂದ್ರೆಯ ಈ "ಮೋಡಿ"ಯ ಟೊಳ್ಳುತನ, "ಶಬ್ದಗಳ ಗುಂಗುಂಗಾನ"ದ ಅಗ್ಗದ ತಂತ್ರವನ್ನು ಹೊರಗೆಡಹುತ್ತಾ ಆರ್ಕೆ ಬೇಂದ್ರೆ ಮತ್ತು ಅನ್ನ (೬೪-೬೧)ದಲ್ಲಿ ಈ ವಿಮರ್ಶೆಯ

(ಪುಟ ೯೬ ನೋಡಿ)

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

'ನಿನ್ನ ಮನೆಯ ಕತೆ ಹೇಗೆ ನಡೆದಿದೆ ?' ಎಂದವಳ ತಾಯಿ ಕೇಳಿದಳು.

'ನಿಮಗೆ ನಿಮ್ಮ ಚಿಂತೆಗಳೇ ಹೊರಲಾರದಷ್ಟಿವೆ, ಅಮ್ಮ ಲಿವಿಗೆ ಹುಷಾರಿಲ್ಲ. ಕೆಂಜ್ವರವಿರಬೇಕೆಂಬ ಶಂಕೆಯಿದೆ. ಕಿಟ್ಟಿ ವಿಷಯ ತಿಳಿಯುವ ಸಲುವಾಗಿಯೇ ನಾನಿಲ್ಲಿಗೆ ಬಂದಿದ್ದೇನೆ. ಅದು ಕೆಂಜ್ವರವಾಗಿದ್ದಪಕ್ಷದಲ್ಲಿ ದೇವರ ದಯೆಯಿಂದ ಅದಿಲ್ಲವಾಗಲಿ. ನಾನು ಬಾಗಿಲು ಭದ್ರಪಡಿಸಿಕೊಂಡು ಮನೆಯಲ್ಲಿದ್ದುಬಿಡುತ್ತೇನೆ.'

ವೈದ್ಯರು ಹೊರಗೆ ಹೋದ ತರುವಾಯ ಹಿರಿಯ ರಾಜಕುಮಾರ ಅಧ್ಯಯನ ಮಂದಿರದಿಂದ ಬಂದು, ಡಾಲಿಯ ಮುತ್ತಿಗೆ ತನ್ನ ಕೆನ್ನೆಯನ್ನು ತೋರಿಸಿ, ಅವಳೊಡನೆ ಕೆಲವೇ ಕೆಲವು ಮಾತು ವಿನಿಮಯ ಮಾಡಿಕೊಂಡು, ಮಡದಿಯ ಕಡೆಗೆ ತಿರುಗಿ, ಹಾಗಾದರೆ ಹೋಗುವುದು ನಿಶ್ಚಯವಾದಂತೆಯೇ ಅಲ್ಲವೆ ? ನಾನೇನು ಮಾಡಬೇಕೆಂದಿದ್ದೀಯೆ' ಎಂದು ನುಡಿದನು.

'ನೀವಿಲ್ಲಿಯೇ ನಿಲ್ಲುವುದು ಮೇಲು, ಅಲೆಕ್ಸಾಂಡ್ರೆ' ಎಂದು ಮಡದಿ ಉಸುರಿದಳು.

'ನಿನ್ನಿಷ್ಟದಂತಾಗಲಿ.'

'ಅಮ್ಮ, ಅಪ್ಪ ನಮ್ಮೊಡನೆ ಬರಬಾರದೇಕೆ ?' ಎಂದು ಕಿಟ್ಟಿ ಕೇಳಿದಳು. 'ಅವರು ಬಂದರೆ, ಅವರಿಗೆ ಮಾತ್ರವಲ್ಲ, ನಮಗೂ ಹಿತ.'

ಹಿರಿಯ ರಾಜಕುಮಾರ ಮೇಲೆದ್ದು ಕಿಟ್ಟಿಯ ತಲೆಯನ್ನು ನೇವರಿಸಿದನು. ಅವಳು ತಲೆಯನ್ನು ಮೇಲೆತ್ತಿ, ಕಷ್ಟ ಬಲುಮೆಯ ಮುಗುಳುನಗೆ ಸೂಸಿದಳು. ಅವನು ತನ್ನೊಡನೆ ಹೆಚ್ಚು ಮಾತಾಡದಿದ್ದರು, ಕುಟುಂಬದಲ್ಲಿ ಎಲ್ಲರಿಗಿಂತ ಮಿಗಿಲಾಗಿ ತನ್ನನ್ನರ್ಥಮಾಡಿಕೊಂಡವರೆಂದರೆ ಅವನೊಬ್ಬನೇ ಎಂದವಳು ಯಾವಾಗಲೂ ಎಣಿಸುತ್ತಿದ್ದಳು. ಅತ್ಯಂತ ಕಿರಿಯವಳಾಗಿ, ಅವಳವನಿಗೆ ಅಚ್ಚುಮೆಚ್ಚಾಗಿದ್ದಳು; ಅವನ ಸೂಕ್ಷ್ಮ ಪರಿಜ್ಞಾನ ಶಕ್ತಿಗೆ ತನ್ನಲ್ಲಿರುವ ಅವನ ಪ್ರೇಮವೇ ಕಾರಣವೆಂದವಳು ಭಾವಿಸಿದ್ದಳು. ತನ್ನಲ್ಲಿಯೇ ಅರ್ಥಪೂರ್ಣವಾಗಿ ನಾಟಿಕೊಂಡಿದ್ದ ಅವನ ದಯಾಪೂರ್ಣ ನೀಲನೇತ್ರಗಳನ್ನವಳು ನೋಡಿದಾಗ, ತನ್ನೆದೆಯಲ್ಲಿ ನಡೆಯುತ್ತಿದ್ದ ಕೆಟ್ಟ ವಿಚಾರಗಳನ್ನೆಲ್ಲ ನೇರವಾಗಿ ಅವನು ತನ್ನ ಮೂಲಕ ನೋಡಿ, ಅರ್ಥಮಾಡಿಕೊಂಡಿರಬೇಕೆಂದವಳು ಖಾತ್ರಿ ಮಾಡಿಕೊಂಡಳು. ಮುಖ ಕೆಂಪೇರಲಾಗಿ, ತನ್ನನ್ನು ಚುಂಬಿಸಬಹುದೆಂದು ನಿರೀಕ್ಷಿಸಿಕೊಂಡು ಅವಳವನ ಬಳಿ ಸರಿದಳು; ಆದರವನು ಅವಳ ಕೂದಲನ್ನು ನೇವರಿಸುತ್ತ ನುಡಿದನು :

'ಈ ಕ್ಷುಲ್ಲಕ ತಲೆ ತುರುಬುಗಳು ! ನನ್ನ ಮಗಳೊಂದಿಗಿರುವಂತಿಲ್ಲ. ಶವ ಪ್ರಾಯದ ಕೂದಲುಗಳನ್ನು ನೇವರಿಸುವುದೊಂದೆ ನನ್ನ ಪಾಲಿಗೊದಗಿರುವ ಅದೃಷ್ಟ.' ತನ್ನ ಜ್ಯೇಷ್ಠ ಪುತ್ರಿಯ ಕಡೆಗವನು ತಿರುಗಿಕೊಂಡು 'ಡಾಲಿ, ನಿನ್ನ ಆ ಸೊಗಸುಗಾರ ಏನು ಮಾಡುತ್ತಿದ್ದಾನೆ ?' ಎಂದು ಕೇಳಿದನು.

'ಏನೂ ಇಲ್ಲಪ್ಪ' ಎಂದು ಡಾಲಿ ತನ್ನ ಗಂಡನನ್ನು ಕುರಿತು ಪ್ರಶ್ನೆ ಕೇಳಿದ್ದೆಂದು ತಿಳಿದು ನುಡಿದಳು. 'ಅವರು ಯಾವಾಗಲೂ ಹೊರಗಿರುತ್ತಾರೆ. ಅವರನ್ನು ನೋಡುವುದೆ ಕಷ್ಟ' ಎಂದವಳು ಹೇಳುವಾಗ ಅವಳ ತುಟಿಗಳೆಡೆಯಿಂದ ವ್ಯಂಗ್ಯ ಮಂದಹಾಸ ಹೊರಹೊಮ್ಮಿತು.

'ತೇಗದ ಮರ ಮಾರುವ ಸಲುವಾಗಿ ಅವನು ಹಳ್ಳಿಗೆ ಹೋಗಿಲ್ಲವೇನು ?'

'ಇಲ್ಲ, ಅವರು ಯಾವಾಗಲೂ ಪ್ರಯಾಣದ ವಿಷಯ ಕುರಿತು ಮಾತಾಡು ತ್ತಾರೆ.'

'ಬರಿಯ ಮಾತಷ್ಟೆ ತಾನೆ. ಪ್ರಾಯಶಃ ನಾನೇ ಹೋಗಬೇಕಾದೀತೇನೊ ? ಓ, ಸರಿ, ಸರಿ' ಎಂದವನು ತನ್ನ ಪತ್ನಿಯ ದೃಷ್ಟಿ ತನ್ನ ಕಡೆಗೆ ಹರಿಯುತ್ತಿದ್ದಂತೆ ತುಸು ಅವಾಕ್ಕಾದನು. 'ಆದರೆ ನಾನು ನಿನಗೆ ಹೇಳಬಹುದಾದ್ದಿಷ್ಟು, ಕಿಟ್ಟಿ' ಎಂದವನು ತನ್ನ ಕಿರಿಯ ಮಗಳ ಕಡೆಗೆ ತಿರುಗಿಕೊಂಡು ನುಡಿದನು. ಇಷ್ಟರಲ್ಲೇ ಒಂದು ದಿನ ನಿನ್ನ ಆರೋಗ್ಯ ಸುಧಾರಿಸುತ್ತದೆ. ಸುಧಾರಿಸಿದನಂತರ ನೀನೇ ನಿನ್ನಷ್ಟಕ್ಕೆ ಹೇಳಿಕೊಳ್ಳುತ್ತೀಯೆ : ನಾನು ಸಂಪೂರ್ಣವಾಗಿ ಗುಣಮುಖಳಾಗಿದ್ದೇನೆ, ಉಲ್ಲಾಸದಿಂದಿದ್ದೇನೆ, ಚಳಿಯಲ್ಲಿಯೇ ಅಪ್ಪನೊಡನೆ ಬೆಳಗಿನ ತಿರುಗಾಟಕ್ಕೆ ಹೋಗುತ್ತೇನೆ, ಎಂದು. ನಿಜತಾನೆ ?'

ಯಾರೇ ಆಗಲಿ ಅವಳ ತಂದೆಯ ಮಾತುಗಳಲ್ಲಿ ಎಣೆಯಿಲ್ಲದ ಮುಗ್ಧತೆಯನ್ನು ಗಮನಿಸಬಹುದಿತ್ತು. ಆದರೆ ಕಳ್ಳತನ ಮಾಡುವಾಗ ಸಿಕ್ಕಿಬಿದ್ದ ಕಳ್ಳನಂತೆ, ಆ ಮಾತು ಗಳನ್ನು ಕೇಳಿದಾಗ ಕಿಟ್ಟಿ ತುಂಬ ಪೇಚಾಟಕ್ಕೂ ಗೊಂದಲಕ್ಕೂ ಸಿಕ್ಕಿಕೊಂಡಳು. 'ಅವರಿಗೆಲ್ಲವೂ ಗೊತ್ತಿದೆ, ಎಲ್ಲವೂ ಅರ್ಥವಾಗುತ್ತಿದೆ; ನನಗವಮಾನವಾಗಿದ್ದರೂ, ಅದನ್ನು ನಿರ್ಲಕ್ಷಿಸಿ, ಧೈರ್ಯದಿಂದ ವರ್ತಿಸಬೇಕೆಂದು ಅವರು ಹೇಳುತ್ತಿದ್ದಾರೆ' ಎಂದವಳು ಮನದೊಳಗೆ ಎಣಿಸಿಕೊಂಡಳು. ಅವನಿಗೆ ಪ್ರತ್ಯುತ್ತರ ನೀಡುವಷ್ಟು ಧೈರ್ಯ ಅವಳಲ್ಲಿರಲಿಲ್ಲ. ಅದನ್ನೊಟ್ಟುಗೂಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ ಅವಳು ಸಗದ್ಗದ ಳಾಗಿ, ಕೋಣೆಯಿಂದ ಹೊರಗೆ ಓಡಿಹೋದಳು.

'ಇದೆಲ್ಲ ನಿಮ್ಮ ಹುಡುಗಾಟಿಕೆಯ ಫಲ' ಎಂದು ರಾಜಕುಮಾರಿ ತನ್ನ ಪತಿಯ ಮೇಲೆ ರೇಗಾಡಿದಳು. 'ನೀವು ಯಾವಾಗಲೂ....' ಸರಿ, ಅವಳ ಬಾಯಿಂದ ನಿಂದೆಯ ಮಾತುಗಳು ನಿರರ್ಗಳವಾಗಿ ಪ್ರವಹಿಸಿದುವು.

ತುಸು ಹೊತ್ತು ರಾಜಕುಮಾರ ನೀರವವಾಗಿ ಅವಳ ಮಾತುಗಳನ್ನಾಲಿಸಿದನು. ಅವನ ಮುಖ ಕಪ್ಪಾಯಿತು.

'ನನ್ನ ಆ ಬಡಪ್ರಾಣಿ, ನನ್ನ ಮುದ್ದುಮಗಳು ತುಂಬ ಸಂಕಟಕ್ಕೊಳಗಾಗಿದ್ದಾಳೆ, ದುಃಖಾರ್ತಳಾಗಿದ್ದಾಳೆ. ಅವಳ ಸಂಕಟದ ಕಾರಣವನ್ನು ಕುರಿತು ಪ್ರಸ್ತಾಪಿಸುವಾಗ ಅವಳಿಗೆಷ್ಟು ಯಾತನೆಯಾಗುತ್ತಿತ್ತೆಂಬುದನ್ನು ನೀವು ಊಹಿಸಿಕೊಳ್ಳಲಾರಿರಿ. ಅಯ್ಯೋ ದೇವರೆ, ನಾವಂಥ ತಪ್ಪನ್ನೆಸಗಿದ್ದಾದರೂ ಹೇಗೆ?' ಅವಳು ವ್ರಾಂಸ್ಕಿಯ ಬಗ್ಗೆ ಮಾತಾಡುತ್ತಿರಬೇಕೆಂದು ಡಾಲಿ ರಾಜಕುಮಾರರಿಬ್ಬರೂ ಅವಳ ಮಾತಿನ ಧಾಟಿ ಯಿಂದರಿತುಕೊಂಡರು. 'ಅಂಥ ದುಷ್ಟ ವ್ಯಕ್ತಿಗಳಿಗೆ ಶಿಕ್ಷೆ ವಿಧಿಸುವಂಥ ಕಾನೂನು ಏಕಿಲ್ಲವೋ ಕಾಣೆ.'

'ನನ್ನ ಕಿವಿಗಳನ್ನು ಮುಚ್ಚಿಕೊಳ್ಳಬೇಕಾಗಿದೆ' ಎಂದು ರಾಜಕುಮಾರ ವಿಷಣ್ಣ ನಾಗಿ ನುಡಿದನು. ಅವನು ಮೇಲೆದ್ದು ಬಾಗಿಲು ಕಡೆಗೆ ನಡೆದನು. ಹೊಸ್ತಿಲ ಬಳಿ ಅವಳ ಕಡೆಗೆ ತಿರುಗಿಕೊಂಡು 'ಕಾನೂನಿವೆ, ನನ್ನ ಸಾಧ್ವೀ ಸತಿಯೆ. ನೀನು ಸವಾಲೆಸೆ ದಿರುವುದರಿಂದ ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಇಷ್ಟಕ್ಕೆಲ್ಲ ನೀನೇ ಕಾರಣ.

ನೀನು ಹೊರತು ಬೇರೆ ಯಾರೂ ಅಲ್ಲ. ಅಂಥ ನೀಚನನ್ನು ಶಿಕ್ಷಿಸಲಿಕ್ಕೆ ಅಗತ್ಯವಾದ ಕಾನೂನು ಇದ್ದೇ ಇವೆ. ಹೌದ್ಹೌದು, ವಾಸ್ತವವಾಗಿಯೂ ಇವೆ. ನಾನು ನಿಜ ಹೇಳುತ್ತೇನೆ, ಕೇಳು. ಮಾಡಬಾರದ್ದನ್ನು ಮಾಡಿದ್ದಾದರೆ, ನಾನು ಮುದುಕನಾಗಿದ್ದರೂ ಅವನನ್ನು, ಆ ಬೀದಿನಾಯಿಯನ್ನು ದ್ವಂದ್ವಕ್ಕೆ ಆಹ್ವಾನಿಸುತ್ತಿದ್ದೆ. ಅದಿರಲಿ, ಈಗ ನಿನ್ನ ಕೆಲಸ ಮುಂದುವರಿಯಲಿ; ಅವಳ ಆರೋಗ್ಯವನ್ನು ಕುದುರಿಸು; ಮನೆಗೆ ಎಲ್ಲ ಬಗೆಯ ಅಳಲೆಕಾಯಿಪಂಡಿತರು ಬರಲಿ!'

ರಾಜಕುಮಾರ ಇನ್ನೆಷ್ಟೋ ವಿಷಯಗಳನ್ನು ಹೊರಗೆಡಹಲು ಸಿದ್ಧನಾಗಿದ್ದಂತೆ ತೋರಿತು. ಆದರೆ ಅವನ ಮಾತಿನ ರಾಗವನ್ನು ಗ್ರಹಿಸಿದ ಕೂಡಲೇ ರಾಜಕುಮಾರಿ ಮೆತ್ತಗಾದಳು, ಪಶ್ಚಾತ್ತಾಪದ ಮುದ್ದೆಯಾದಳು. ಸಂಗತಿಗಳು ಪ್ರಕೋಪದ ಹಂತವನ್ನು ಮುಟ್ಟಿದಾಗ ಅವಳು ಯಾವಾಗಲೂ ಅಂತೆಯೇ ತಣ್ಣಗಾಗುತ್ತಿದ್ದಳು.

'ಅಲೆಕ್ಸಾಂಡ್ರೆ, ಅಲೆಕ್ಸಾಂಡ್ರೆ' ಎಂದವಳು ಕಣ್ಣೀರ್ಗರೆಯುತ್ತ ಅವನ ಬಳಿಗೆ ಸರಿದಳು.

ಅವಳು ಗೋಳ್ಗರೆಯಲಾರಂಭಿಸಿದ ಕೂಡಲೇ ರಾಜಕುಮಾರ ಸ್ತಬ್ಧನಾದನು. ತಾನೂ ಅವಳ ಕಡೆಗೆ ನಡೆದನು.

'ಬಾ, ಬಾ, ನಿನಗೂ ತುಂಬ ನೋವಾಗಿದೆಯೆಂಬುದನ್ನು ಬಲ್ಲೆ. ಏನು ಮಾಡುವುದಿದೆ? ಬೇರೆ ಮಾರ್ಗವೇ ಇಲ್ಲ. ಅಪಾಯ ಊಹಿಸಿಕೊಂಡಷ್ಟು ಕ್ರೂರವಾಗಿಲ್ಲ. ದೇವರು ದಯಾಮಯಿ....ನಿನಗೆ ಧನ್ಯವಾದ....' ಎಂದವನು ನುಡಿದನು. ಆದರೆ ತಾನು ಹೇಳುತ್ತಿದ್ದುದರ ಬಗ್ಗೆ ಅವನಿಗೆ ಅರಿವಿದ್ದಂತೆ ಕಾಣಲಿಲ್ಲ. ತನ್ನ ಕೈಮೇಲೆ ಮುದ್ರಿತವಾದ ಒದ್ದೆಮುತ್ತಿಗೆ ಪ್ರತಿಯಾಗಿ ಅವನು ಕೊನೆಯ ಮಾತುಗಳನ್ನು ಪೋಣಿಸಿದ್ದನು. ತರುವಾಯ ಅವನು ಹೊರಗೆ ಹೋದನು.

ಕಿಟ್ಟಿ ಗಳದಶ್ರುಲೋಚನೆಯಾಗಿ ಹೊರಗೆ ಹೋದ ಕೂಡಲೇ, ಅವಳಿಗೆ ಹೆಂಗಸಿನ ನೆರವು ಅಗತ್ಯವೆಂದು ತಾಯಿಯ ಸಹಜಪ್ರವೃತ್ತಿ ಮತ್ತು ಕೌಟುಂಬಿಕ ಶಿಕ್ಷಣ ಡಾಲಿಯನ್ನೆಚ್ಚರಿಸಿದುವು; ಅಂತೆಯೇ ನೆರವು ನೀಡಲು ಅವಳು ಸಿದ್ಧಳಾದಳು. ತನ್ನ ಟೋಪಿಯನ್ನು ತೆಗೆದು, ತೋಳಂಚುಗಳನ್ನು ಮೇಲೆತ್ತಿ, ಕಾರ್ಯಾಚರಣೆಗೆ ಸಿದ್ಧಳಾದಳು. ತಾಯಿ ತನ್ನ ತಂದೆಯ ಮೇಲೆ ರೇಗುತ್ತಿದ್ದಾಗ, ಪುತ್ರೀಯಶ್ರದ್ಧೆಗೆ ಬಾಧಕವೊದಗದ ರೀತಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅವಳನ್ನು ನಿಯಂತ್ರಿಸಲು ಮಗಳು ಪ್ರಯತ್ನಿಸಿದಳು. ತನ್ನ ತಂದೆ ಕೆರಳಿದಾಗ ಅವಳು ತೆಪ್ಪಗಾದಳು. ತನ್ನ ತಾಯಿಯಿಂದಾಗಿ ಅವಳಿಗೆ ಅವಮಾನವಾದಂತಾಯಿತು; ತನ್ನ ತಂದೆಯ ಔದಾರ್ಯ ಬಹು ಬೇಗನೆ ಮರುಕೊಳಿಸಲಾಗಿ ಅವನ ಬಗ್ಗೆ ಅವಳಿಗೆ ಕನಿಕರವುಂಟಾಯಿತು. ಆದರೆ ಅವನು ಕೋಣೆಯಿಂದ ಜಾರಿದಾಗ, ಆ ಕ್ಷಣದ ಪ್ರಮುಖ ಕರ್ತವ್ಯವನ್ನು, ಅಂದರೆ ಕಿಟ್ಟಿಯನ್ನು ಸಮಾಧಾನಪಡಿಸುವ ಕಾರ್ಯವನ್ನು ಕೈಗೆತ್ತಿಕೊಂಡಳು.

'ಕೆಲವು ದಿನಗಳಿಂದ ನಿಮಗೊಂದು ವಿಷಯ ತಿಳಿಸಬೇಕೆಂದಿದ್ದೆ, ಅಮ್ಮ. ಕಳೆದ ಸಲ ಇಲ್ಲಿದ್ದಾಗ ಲೆವಿನ್ ಕಿಟ್ಟಿಯನ್ನು ಮದುವೆಯಾಗುವ ಆಸೆಯನ್ನು ಹೊಂದಿದ್ದನು. ಅದು ನಿಮಗೆ ಗೊತ್ತೆ? ಅವನದನ್ನು ಸ್ಟೀವ್‌ನಿಗು ತಿಳಿಸಿದ್ದ.'

'ನಿಜವೆ? ಅದು ನನಗರ್ಥವಾಗದು....'

'ಪ್ರಾಯಶಃ ಕಿಟ್ಟಿ ಅವನ ಬೇಡಿಕೆಯನ್ನು ತಿರಸ್ಕರಿಸಿರಬೇಕೆಂದು ತೋರುತ್ತ ದಲ್ಲವೆ? ನಿಮ್ಮ ಮುಂದೇನಾದರೂ ಅವಳು ಆ ವಿಷಯ ಪ್ರಸ್ತಾಪಿಸಿದಳೆ?'

'ಇಲ್ಲ, ಅವಳು ಅದೋ ಇದೋ, ಯಾವ ವಿಷಯವನ್ನೂ ಎತ್ತಲಿಲ್ಲ. ಅವಳು ತುಂಬ ಸ್ವಾಭಿಮಾನಿ. ಆದ್ದರಿಂದಲೇ ಇಷ್ಟೆಲ್ಲ ರಾದ್ಧಾಂತವಾಯಿತೆಂಬುದನ್ನು ಬಲ್ಲೆ.'

'ಲೆವಿನ್‌ನ ಸೂಚನೆಯನ್ನವಳು ತಿರಸ್ಕರಿಸಿದ್ದಾಳೆಂದಿಟ್ಟುಕೊಳ್ಳೋಣ.... ಮತ್ತೊಬ್ಬ ವ್ಯಕ್ತಿ ಮಧ್ಯೆ ಬರದಿದ್ದರೆ, ಅವಳು ಲೆವಿನ್‌ನನ್ನು ತಿರಸ್ಕರಿಸುತ್ತಿರಲಿಲ್ಲ ವೆಂದುಕೊಂಡಿದ್ದೇನೆ....ಅವನೋ, ಅವನವಳನ್ನು ಭಯಂಕರ ರೀತಿಯಲ್ಲಿ ವಂಚಿಸಿ ದ್ದಾನೆ.'

ತನ್ನ ಮಗಳ ಸಂಕಟಕ್ಕೆ ತಾನೇ ಕಾರಣಳೆಂಬ, ಆ ವಿಷಯದಲ್ಲಿ ತಾನೇ ತಪ್ಪಿತಸ್ಥೆ ಯೆಂಬ ಸಂಗತಿಯನ್ನೊಪ್ಪಿಕೊಳ್ಳುವ ಧೈರ್ಯ ಅವಳಿಗಿರಲಿಲ್ಲ. ಆದ್ದರಿಂದ ಅವಳು ಕೋಪಾವಿಷ್ಟಳಾದಳು,

'ವಾಸ್ತವವಾಗಿ ನನಗೇನೊಂದೂ ಅರ್ಥವಾಗದು. ಈ ಕಾಲದಲ್ಲಿ ಪ್ರತಿಯೊಬ್ಬರೂ ತಮಗಿಷ್ಟ ಬಂದಂತೆ ವರ್ತಿಸುತ್ತಾರೆ. ತಮ್ಮ ತಾಯಂದಿರೊಡನೆಯೂ ತಮ್ಮ ಹೃದಯ ವನ್ನು ಬಿಚ್ಚಿ ಹೇಳುವುದಿಲ್ಲ. ಈಗಿನ ನಡಾವಳಿಯೇ ಇದು....'

'ಅಮ್ಮ, ನಾನವಳ ಬಳಿಗೆ ಹೋಗುತ್ತೇನೆ.'

'ನಿನಗಿಷ್ಟವಿದ್ದರೆ ಹೋಗು ನಾನು ಬೇಡವೆಂದೆನೆ?' ಎಂದು ತಾಯಿ ಸಿಡುಕಿದಳು.

೩

ಕಿಟ್ಟಿಯ ಸಣ್ಣ ಕೋಣೆಯನ್ನು ಪ್ರವೇಶಿಸಿದಾಗ, ತಾವಿಬ್ಬರೂ ಹಿಂದಿನ ವರ್ಷ ಆ ಕೋಣೆಯನ್ನಲಂಕರಿಸಿದ್ದ ಬಗೆ, ಆ ಅಲಂಕರಣ ಕಾರ್ಯದಲ್ಲಿ ತಾವು ತೋರಿಸಿದ್ದ ಪ್ರೀತಿ ಮತ್ತು ಅನುಭವಿಸಿದ್ದ ಆನಂದ ಅವಳಿಗೆ ನೆನಪಾದುವು. ಅವರಲ್ಲಿ ಜೋಡಿಸಿದ್ದ ಪಿಂಗಾಣಿ ವಿಗ್ರಹಗಳೂ ಚಿತ್ರಗಳೂ ಕೆಂಪು ಕೆಂಪಾಗಿ, ಸುಂದರವಾಗಿದ್ದುವು. ಎರಡು ತಿಂಗಳ ಹಿಂದಿನ ಕಿಟ್ಟಿ ಸಹ ಅವುಗಳಷ್ಟೇ ಪಾಟಲವರ್ಣರಂಜಿತವಾಗಿ, ಚೈತನ್ಯಯುಕ್ತ ಳಾಗಿ, ಯೌವನೋತ್ಸಾಹದಿಂದ ಶೋಭಿಸುತ್ತಿದ್ದಳು. ಜಮಖಾನದ ಮೂಲೆಯನ್ನೇ ದುರುಗುಟ್ಟಿಕೊಂಡು ನೋಡುತ್ತ, ಬಾಗಿಲ ಬಳಿಯ ತಗ್ಗು ಕುರ್ಚಿಯ ಮೇಲೆ ಕುಳಿತಿದ್ದ ಕಿಟ್ಟಿಯನ್ನು ಕಂಡಕೂಡಲೇ ಅವಳ ಹೃದಯ ಕುಸಿಯಿತು. ಕಿಟ್ಟಿ ತನ್ನಕ್ಕನ ಕಡೆಗೆ ಕಣ್ಣೆತ್ತಿ ನೋಡಿದಳು. ಔದಾಸೀನ್ಯದಿಂದ ಕೂಡಿದ ಅವಳ ಕಠೋರ ಮುಖಭಾವದಲ್ಲಿ ಏನೊಂದೂ ಬದಲಾವಣೆ ಕಾಣಲಿಲ್ಲ.

'ನಾನೀಗ ಇಲ್ಲಿಂದ ಹೋಗುತ್ತೇನೆ. ಮನೆಬಿಟ್ಟು ಹೊರಗೆ ಬರುವಂತಿಲ್ಲ. ನೀನು ಬಂದು ನನ್ನನ್ನು ನೋಡಲು ಸಾಧ್ಯವಾಗಲಾರದು' ಎಂದು ಡಾಲಿ ಅವಳ ಪಕ್ಕದಲ್ಲಿ ಕುಳಿತುಕೊಳ್ಳುತ್ತ ನುಡಿದಳು. 'ನಿನ್ನೊಡನೆ ಮಾತಾಡಬೇಕಾಗಿದೆ.'

'ಯಾವ ವಿಷಯ?' ಎಂದು ಕಿಟ್ಟಿ ಹೆದರಿಕೆಯಿಂದ ತನ್ನ ತಲೆಯನ್ನೆತ್ತಿ ಪ್ರಶ್ನಿಸಿ ದಳು.

'ಯಾವ ವಿಷಯುವೆಂದು ಕೇಳಿದೆಯಾ? ನಿನ್ನ ಸಮಸ್ಯೆಯಲ್ಲದೆ ಬೇರೇನಿದೆ?'

'ನನಗಾವ ತೊಂದರೆಯೂ ಇಲ್ಲ.'

'ನೀನೆಂಥ ಅವಿವೇಕಿಯೆ, ಕಿಟ್ಟಿ? ನನಗೇನೂ ಗೊತ್ತಿಲ್ಲವೆಂದು ತಿಳಿದೆಯಾ? ನನಗೆಲ್ಲವೂ ಗೊತ್ತಿದೆ. ಅದೆಲ್ಲ ಸಣ್ಣ ವಿಷಯ. ಅದನ್ನೆಲ್ಲ ನಾವು ಅನುಭವಿಸಿಯಾಗಿದೆ.'

ಕಿಟ್ಟಿ ತುಟಿಪಿಟಕ್ಕೆನ್ನಲಿಲ್ಲ; ಆದರೆ ಅವಳ ಮುಖ ಅಸಹ್ಯವಾಗಿ ಕಾಣುತ್ತಿತ್ತು.

'ನೀನವನಿಗಾಗಿ ಸಂಕಟಪಡಬೇಕಾಗಿಲ್ಲ. ಸಂಕಟಪಡಬೇಕಾದ ಅಗತ್ಯವಿಲ್ಲ' ಎಂದು ಡಾಲಿ ನೇರವಾಗಿ ಪ್ರಸಕ್ತ ವಿಷಯದ ಕಡೆಗೆ ಹೊರಳಿದಳು.

'ಇಲ್ಲ, ಅವರು ನನ್ನನ್ನು ತಾತ್ಸಾರದಿಂದ ಕಂಡಿದ್ದಾರಲ್ಲವೆ?' ಎಂದು ಕಿಟ್ಟಿ ನಡುಗುವ ದನಿಯಲ್ಲಿ ನುಡಿದಳು. 'ಆ ವಿಷಯವೆತ್ತಬೇಡ! ದಯೆಯಿಟ್ಟು ಆ ವಿಷಯ ವನ್ನೆತ್ತಬೇಡ!'

'ಆ ವಿಷಯ ಹೇಳಿದವರು ಯಾರು? ಯಾರೂ ಆ ವಿಷಯ ಕುರಿತು ಮಾತಾಡ ಲಿಲ್ಲ. ಅವನು ನಿನ್ನನ್ನು ಪ್ರೀತಿಸಿದ್ದು ನಿಜ; ಈಗಲೂ ಪ್ರೀತಿಸುತ್ತಾನೆಂಬ ಭರವಸೆ ನನಗಿದೆ. ಆದರೆ ...'

'ಇಂಥ ಸಮಾಧಾನದ ಮಾತುಗಳಿಗಿಂತ ಭಯಂಕರವಾದ ಸಂಗತಿ ಮತ್ತೊಂದಿಲ್ಲ' ಎಂದು ಕಿಟ್ಟಿ ರೋಷದಿಂದ ಕಿರಿಚಿಕೊಂಡಳು. ಅವಳು ಕುರ್ಚಿಯಲ್ಲಿಯೇ ಒಂದು ಸುತ್ತು ತಿರುಗಿದಳು.; ಅವಳ ಮುಖ ರಗರಗನೆ ಉರಿಯತೊಡಗಿತು; ಬಿರುಬಿರನೆ ಬೆರಳುಗಳನ್ನು ಚಲಿಸತೊಡಗಿದಳು; ಬೆಲ್ಟಿನ ಚಿಲುಕುಕಟ್ಟನ್ನು ಮೊದಲೊಂದು ಕೈಯಿಂದ ಹಿಸುಕಿದಳು; ಅನಂತರ ಮತ್ತೊಂದು ಕೈಯಿಂದ ಹೊಸಕಿದಳು. ಕೋಪ ಕಾವೇರಿದಾಗ ಬೆರಳುಗಳಲ್ಲಿ ಏನನ್ನಾದರೂ ಇರುಕಿಸಿಕೊಂಡು, ಅದರ ಮೇಲೆ ತನ್ನ ಶಕ್ತಿಯನ್ನು ಪ್ರದರ್ಶಿಸುವ ತನ್ನ ತಂಗಿಯ ಚಾಳಿ ಡಾಲಿಗೆ ಗೊತ್ತಿತ್ತು. ಕೋಪದ ಭರದಲ್ಲಿ ತನ್ನನ್ನು ತಾನೇ ಮರೆತು ಆಡಬಾರದ ಕೇಳಬಾರದ ಹಿತವಲ್ಲದ ಮಾತು ಗಳನ್ನು ಹರಿಸುವ ಕಿಟ್ಟಿಯ ನಡೆವಳಿಕೆಯೂ ಅವಳಿಗೆ ಸುಪರಿಚಿತವಾಗಿತ್ತು; ಅವಳನ್ನು ಸಮಾಧಾನಪಡಿಸಬೇಕೆಂದು ಡಾಲಿ ಅಪೇಕ್ಷಿಸಿದಳು; ಆದರೆ ಸಮಯ ಮೀರಿಹೋಗಿತ್ತು.

'ಏನದು? ನನಗೆ ಮನವರಿಕೆ ಮಾಡಿಕೊಡಬೇಕೆಂದಿರುವ ವಿಷಯುವಾದರೂ ಏನು?' ಎಂದು ಕಿಟ್ಟಿ ಬೇಗ ಬೇಗ ನುಡಿದಳು. 'ನನ್ನನ್ನು ತೃಣಕ್ಕೆ ಕಡೆಯಾಗಿ ಕಂಡ ಮನುಷ್ಯನನ್ನು ಪ್ರೀತಿಸಿದೆನೆಂದೆ? ಅವನಿಗಾಗಿ ಪ್ರೇಮವಿರಹದಿಂದ ಸಾಯುತ್ತಿದ್ದೇ ನೆಂದೆ? ಈ ರೀತಿ ಆಲೋಚನೆ ಮಾಡುವವಳು ನನ್ನಕ್ಕ! ನನ್ನ ಬಗ್ಗೆ ಸಹಾನುಭೂತಿ ತೋರಿಸುವ ನನ್ನಕ್ಕ....! ನನಗೆ ನಿನ್ನ ಸಹಾನುಭೂತಿಯೂ ಬೇಡ, ನಿನ್ನ ಸೋಗೂ ಬೇಡ!'

'ಹೀಗೆ ಹೇಳುವುದು ಸರಿಯಲ್ಲ, ಕಿಟ್ಟಿ'

'ನೀನೇಕೆ ನನ್ನನ್ನು ಕಾಡುತ್ತಿದ್ದೀಯೆ?'

'ಇಲ್ಲ, ಇಲ್ಲ....ಅದಕ್ಕೆ ಪ್ರತಿಯಾಗಿ, ನೀನು ತುಂಬ ಉದ್ರೇಕಗೊಂಡಿದ್ದೀಯೆ....'

ಆದರೆ ಕಿಟ್ಟಿಗೆ ಅವಳ ಮಾತನ್ನಾಲಿಸುವಷ್ಟು ತಾಳ್ಮೆ ಇರಲಿಲ್ಲ. 'ನನ್ನ ಬಗ್ಗೆ ಕನಿಕರಿಸಬೇಕಾದ ಮತ್ತು ನನ್ನನ್ನು ಸಮಾಧಾನಪಡಿಸಬೇಕಾದ ಅಗತ್ಯವಿಲ್ಲ. ನನ್ನನ್ನು

ಪ್ರೀತಿಸದ ವ್ಯಕ್ತಿಯನ್ನು ಪ್ರೀತಿಸುವ ಸ್ವಭಾವ ನನ್ನದೆಂದು ಹೇಳಿಕೊಳ್ಳುವ ಹೆಮ್ಮೆ ನನ್ನದಾಗಿದೆ.'

'ನೀನು ಅಂಥವಳಲ್ಲವೆಂದು ನಾನು ಹೇಳಲಿಲ್ಲ. ಆದರೆ ಒಂದೇ ಒಂದು ವಿಷಯ ನಾನು ತಿಳಿಯಬೇಕಾಗಿದೆ....ನಿಜ ಹೇಳು' ಎಂದು ಡಾಲಿ ಅವಳ ಕೈಹಿಡಿದುಕೊಂಡು ಒತ್ತಾಯಿಸಿದಳು. 'ಲೆವಿನ್ ನಿನ್ನೊಡನೆ ಮಾತಾಡಿದನೆ?'

ಲೆವಿನ್‌ನ ಪ್ರಸ್ತಾಪದಿಂದ ಕಿಟ್ಟಿಯ ಆತ್ಮಸಂಯಮದ ಕೊನೆಯ ಅವಶೇಷಗಳು ಸಹ ಕಳಚಿಹೋದಂತಾದುವು. ಅವಳು ಮೇಲೆ ನೆಗೆದಳು, ಚಿಲುಕುಕಟ್ಟನ್ನು ನೆಲದ ಮೇಲೆ ಬಿಸಾಡಿದಳು; ಉನ್ಮಾದ ಗ್ರಸ್ತೆಯಂತೆ ಕೈಗಳನ್ನು ಬೀಸುತ್ತ ವಾಗ್ಧಾರೆಯನ್ನು ಹರಿಸಿದಳು: 'ಅದಕ್ಕೂ ಲೆವಿನ್‌ಗೂ ಏನು ಸಂಬಂಧ? ನೀನು ನನಗೇಕೆ ಹಿಂಸೆ ಕೊಡುತ್ತಿದ್ದೀಯೆ, ನನಗರ್ಥವಾಗದು. ನಾನು ಮೊದಲೇ ಹೇಳಿದೆ, ಮತ್ತೆ ಹೇಳುತ್ತೇನೆ ಕೇಳು: ನೀನೇನು ಮಾಡಿದ್ದೀಯೋ ಅದನ್ನು ನಾನೆಂದೂ ಮಾಡಲಾರೆನೆಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ನನಗೆ ದ್ರೋಹವೆಸಗಿರುವ, ಮತ್ತೊಬ್ಬಳು ಸ್ತ್ರೀಯನ್ನು ಪ್ರೀತಿಸಿರುವ ಮನುಷ್ಯನ ಬಳಿಗೆ ಮತ್ತೆ ಹೋಗುವುದೆ? ಅಂಥ ಸಂಗತಿಯೇ ನನಗರ್ಥವಾಗದು; ನಿಜಕ್ಕೂ ನನಗರ್ಥವಾಗದು! ಅಂಥ ಕೆಲಸ ನಿನಗೆ ಸರಿಯೇ ಹೊರತು, ನನಗಲ್ಲ.'

ಅವಳು ತನ್ನಕ್ಕನ ಕಡೆಗೊಮ್ಮೆ ನೋಡಿದಳು. ಡಾಲಿ ಮಾತಿಲಿಯಾಗಿ, ದುಃಖದಿಂದ ತಲೆ ತಗ್ಗಿಸಿಕೊಂಡು ಕುಳಿತಿದ್ದಳು. ತಾನು ಮೊದಲೇ ಉದ್ದೇಶಿಸಿದ್ದಂತೆ ಪ್ರಕ್ಷುಬ್ಧ ಚಿತ್ತೆಯಾದ ಕಿಟ್ಟಿ ಕೋಣೆಯಿಂದ ಹೊರಗೆ ಓಡಿಹೋಗಲಿಲ್ಲ; ಕೈಚೌಕದಿಂದ ಮುಖ ಮುಚ್ಚಿಕೊಂಡು, ತಲೆ ಬಗ್ಗಿಸಿಕೊಂಡು, ಬಾಗಿಲ ಬಳಿ ಮತ್ತೆ ಕುಳಿತಳು.

ನಿಶ್ಶಬ್ದವಾಗಿ ಒಂದೆರಡು ನಿಮಿಷ ಕಳೆದುವು. ಡಾಲಿ ತನ್ನನ್ನು ಕುರಿತು ಚಿಂತಾಮಗ್ನಳಾಗಿದ್ದಳು. ಯಾವಾಗಲೂ ಅವಳ ಪ್ರಜ್ಞಾವಲಯದಲ್ಲಿರುತ್ತಿದ್ದ ಅವಮಾನವನ್ನು ತಂಗಿ ತನ್ನ ನೆನಪಿಗೆ ತಂದುಕೊಟ್ಟಾಗ, ಅವಳು ಅಪಾರ ಯಾತನೆಗೆ ಗುರಿಯಾದಳು. ಅಂಥ ಹೃದಯಶೂನ್ಯತೆಯನ್ನವಳು ಕಿಟ್ಟಿಯಿಂದ ನಿರೀಕ್ಷಿಸಿರಲಿಲ್ಲ. ಅವಳು ಕೋಪಾವಿಷ್ಟಳಾದಳು. ಆದರೆ ಹಠಾತ್ತನೆ ಮೇಲಂಗಿಯ ಮುರಮುರ ಶಬ್ದವೂ ದಮನಗೊಂಡ ಗದ್ಗದ ಧ್ವನಿಯೂ ಅವಳಿಗೆ ಕೇಳಿಸಿದುವು. ಯಾರವೋ ತೋಳು ಅವಳ ಕೊರಳನ್ನು ಸುತ್ತುಗಟ್ಟಿದುವು. ಕಿಟ್ಟಿ ಮಂಡಿಯೂರಿಕೊಂಡು ಅವಳ ಮುಂದೆ ಕುಳಿತಿದ್ದಳು.

'ನನ್ನ ಅತ್ಯಂತ ಪ್ರೀತಿಗೆ ಪಾತ್ರಳಾದ ಡಾಲಿ, ನನ್ನ ಸಂಕಟದ ಭೀಕರತೆ ಮಾತಿಗೆ ನಿಲುಕದು' ಎಂದವಳು ಪಶ್ಚಾತ್ತಾಪದ ಧ್ವನಿಯಲ್ಲಿ ಪಿಸುಗುಟ್ಟಿದಳು. ಅಶ್ರುಸಿಕ್ತವಾಗಿದ್ದ ತನ್ನ ಮುದ್ದುಮುಖವನ್ನವಳು ಡಾಲಿಯ ಮೇಲಂಗಿಯಲ್ಲಿ ತೂರಿದಳು.

ಅಕ್ಕತಂಗಿಯರ ನಡುವಣ ಪರಸ್ಪರ ಸಂಬಂಧದ ಯಂತ್ರ ಸಲೀಸಾಗಿ ಚಲಿಸಬೇಕಾದರೆ ಅಶ್ರುರೂಪದ ಕೀಲೆಣ್ಣೆ ಅನಿವಾರ್ಯವೆಂಬಂತೆ ತೋರಿತು. ಅವರ ಆಕ್ರಂದನ ನಿಂತ ತರುವಾಯ, ತಮ್ಮ ಮನಸ್ಸಿನ ಮೇಲ್ಪದರದಲ್ಲಿ ಎದ್ದು ಕಾಣುತ್ತಿದ್ದ ಸಂಗತಿಗಳನ್ನು ಮತ್ತೆ ಅವರು ಪ್ರಸ್ತಾಪಿಸಲಿಲ್ಲ; ಗೌಣವಿಷಯಗಳನ್ನು ಕುರಿತು ಮಾತಾಡು

ವಾಗಲೂ ಅವರು ಪರಸ್ಪರ ಅಂತರ್ಯವನ್ನರಿತುಕೊಂಡರು. ಭಾವೋದ್ರೇಕದ ಸ್ಥಿತಿಯಲ್ಲಿದ್ದಾಗ ತಾನು ಡಾಲಿಯ ಗಂಡನ ಪ್ರೇಮ ದ್ರೋಹದ ಬಗ್ಗೆ, ಅಂತೆಯೇ ಡಾಲಿಯ ಅವಮಾನದ ಬಗ್ಗೆ ತಾನಾಡಿದ ಮಾತುಗಳ ಬಾಣ ತನ್ನಕ್ಕನ ಹೃದಯದಲ್ಲಿ ನಾಟಿದ್ದವೆಂದೂ, ಆದರವಳು ತನ್ನನ್ನು ಕ್ಷಮಿಸಿದ್ದಳೆಂದೂ ಕಿಟ್ಟಿಗರಿವಾಯಿತು. ತನ್ನ ಮಟ್ಟಿಗೆ ಡಾಲಿ ತಿಳಿಯಬೇಕಾದದ್ದನ್ನೆಲ್ಲ ಅರಿತುಕೊಂಡಿದ್ದಳು. ಲೆವಿನ್‌ನ ವಿವಾಹ ಪ್ರಸ್ತಾಪವನ್ನು ನಿರಾಕರಿಸಿದ್ದರ ಪರಿಣಾಮವಾಗಿ, ವ್ರಾನ್ಸ್ಕಿ ತನ್ನನ್ನು ಮೋಸಗೊಳಿಸಿದ ತರುವಾಯ ಲೆವಿನ್‌ನನ್ನು ಪ್ರೀತಿಸಲು ಹಾಗೂ ವ್ರಾನ್ಸ್ಕಿಯನ್ನು ದ್ವೇಷಿಸಲು ತಾನು ಸಿದ್ಧಳಾಗಿದ್ದ ಕಾರಣದಿಂದಾಗಿ ಕಿಟ್ಟಿಯ ಶೋಕ, ಅವಳ ಅಪರಿಹಾರ್ಯ ದುಃಖ ಸಂಭವಿಸಿತ್ತೆಂಬ ತನ್ನ ಊಹೆ ಸರಿಯೆಂದು ಡಾಲಿಗೀಗ ಮನದಟ್ಟಾಯಿತು. ಕಿಟ್ಟಿ ಈ ಬಗ್ಗೆ ಒಂದು ಮಾತು ಸಹ ಎತ್ತಲಿಲ್ಲ; ತನ್ನ ಮನಸ್ಸಿನ ಸದ್ಯಃಸ್ಥಿತಿಯ ಬಗ್ಗೆ ಮಾತ್ರ ಮಾತಾಡಿದಳು.

'ನಾನು ಕೊರಗುತ್ತಿಲ್ಲ' ಎಂದವಳು ಮನಸ್ಸು ಶಾಂತಿಯಲ್ಲಿ ನೆಲೆಗೊಂಡ ನಂತರ ನುಡಿದಳು. 'ಆದರೆ ಎಲ್ಲವೂ ನನ್ನಪಾಲಿಗೆ ಸಂಸ್ಕೃತಿ ಶೂನ್ಯವಾಗಿದೆ, ಅಸಹ್ಯವಾಗಿದೆ, ವಿಕರ್ಷಕವಾಗಿದೆ; ಎಲ್ಲಕ್ಕಿಂತ ಮಿಗಿಲಾಗಿ ನಾನು ಸಹ ಎಂಬುದನ್ನು ನೀನು ನಂಬುವೆಯಾ ? ಎಂಥ ಭೀಕರಾಲೋಚನೆಗಳು ನನ್ನ ತಲೆಯಲ್ಲಿ ನುಗ್ಗಿಬರುತ್ತವೆಯೆಂಬುದನ್ನು ಪ್ರಾಯಶಃ ನೀನು ಊಹಿಸಿಕೊಳ್ಳಲಾರೆ.'

'ಎಂಥ ಭೀಕರಾಲೋಚನೆಗಳು ನಿನ್ನ ಮನಸ್ಸಿನಲ್ಲಿ ಮೊನೆದೋರಬಹುದು' ಎಂದು ಡಾಲಿ ಸುಸ್ಮಿತಳಾಗಿ ಕೇಳಿದಳು.

'ಊಹೆಗೂ ನಿಲುಕದ ಭಯಂಕರ ಅಸಭ್ಯ ಆಲೋಚನೆಗಳು. ನಿನಗವನ್ನು ವಿವರಿಸಲಾರೆ. ಅವು ಬೇಸರ ಅಥವಾ ಸಂಕಟದಿಂದ ಹೊರಹೊಮ್ಮಿದಂಥವಲ್ಲ; ಅವಕ್ಕಿಂತಲೂ ಕ್ರೂರವಾದ ಸಂಗತಿಗಳಿಂದ ಮೊನೆದೋರಿದುವಾಗಿವೆ. ಮೃಗೀಯವಾದ ಗುಣಗಳನ್ನು ಮಾತ್ರ ಉಳಿಸಿ, ಒಳ್ಳೆಯದೆಲ್ಲವೂ ನನ್ನಿಂದ ಮಾಯವಾದಂತೆ ತೋರುತ್ತಿದೆ. ಅದನ್ನೆಲ್ಲ ವಿವರಿಸುವುದಾದರೂ ಹೇಗೆ?' ಎಂದವಳು ತನ್ನಕ್ಕನ ಕಣ್ಣುಗಳಲ್ಲಿ ಕಳವಳವನ್ನೀಕ್ಷಿಸುತ್ತ ನುಡಿದಳು. 'ಪಾಪ ಇದೆ ತಾನೆ ನನ್ನೊಡನೆ ಮಾತಾಡಿದರು.... ನನ್ನ ಮದುವೆಯ ವಿಷಯ ಹೊರತಾಗಿ ಅವರು ಬೇರೇನನ್ನೂ ಯೋಚಿಸುತ್ತಿರುವಂತೆ ಕಾಣೆ. ನನಗೊಬ್ಬ ಗಂಡನನ್ನು ಕಟ್ಟಿ, ನನ್ನನ್ನು ಮನೆಯಿಂದ ತೊಲಗಿಸಲೆಂದೇ ಅಮ್ಮ ನನ್ನನ್ನು ನೃತ್ಯಗೋಷ್ಠಿಗೆ ಕರೆದೊಯ್ಯುವಂತೆ ನನಗೆ ಭಾಸವಾಗುತ್ತದೆ. ಈ ನನ್ನ ಊಹೆ ಸುಳ್ಳಾಗಿರಬಹುದು. ಆದರೆ ಅಂಥ ಆಲೋಚನೆಗಳನ್ನು ತಳ್ಳಿಹಾಕಲಾರೆ. ಅರ್ಹರೆಂದು ಕರೆಯಲಾದ ಯುವಕರ ಕಾಣ್ಕೆಯನ್ನು ನಾನು ಸಹಿಸಲಾರೆ. ಅವರೆಲ್ಲರೂ ನನ್ನನ್ನಳೆದು ನೋಡುವಂತೆ ಕಾಣುತ್ತಿದೆ. ಕೆಲವು ದಿನಗಳ ಹಿಂದೆ ಸಂಜೆ ಜುಬ್ಬವನ್ನು ಹಾಕಿಕೊಂಡು ಎಲ್ಲಿಗೆ ಬೇಕಾದರೂ ಹೋಗುತ್ತಿದ್ದೆ; ಆದರಿಂದ ನನಗೆ ಹರ್ಷಾನುಭವವಾಗುತ್ತಿತ್ತು; ಈಗಲಾದರೋ ಅದು ನನಗೆ ವಿಚಿತ್ರವಾಗಿ ಕಾಣುತ್ತದೆ; ಜತೆಗೆ ನಾಚಿಕೆಯಾಗುತ್ತದೆ. ಆಮೇಲೋ....ಡಾಕ್ಟರ್....ಅಥವಾ....'

ಕಿಟ್ಟಿಯ ಮಾತು ನಿಂತಿತು. ತನ್ನಲ್ಲಿ ಈ ಬದಲಾವಣೆ ಸಮನಿಸಿದನಂತರ, ಸ್ಟೀವ್ ಅಸಹನೀಯವಾಗಿ ಕಾಣುತ್ತಿದ್ದುದಾಗಿಯೂ, ಅವರು ಕಣ್ಣಿಗೆ ಬೀಳುತ್ತಿದ್ದಂತೆ

ಅತ್ಯಂತ ವಿಕಾರವೂ ಕರ್ಕಶವೂ ಆದ ಆಲೋಚನೆಗಳು ತನ್ನ ಮನಸ್ಸಿನಲ್ಲಿ ಉದಯಿಸು ತ್ತಿದ್ದುದಾಗಿಯೂ ಅವಳು ಹೇಳಿಬಿಡಬೇಕೆನಿಸಿತು.

'ಹೌದು, ನಾನೆಲ್ಲವನ್ನೂ ಅಸಭ್ಯ ಹಾಗೂ ಮೃಗೀಯ ದೃಷ್ಟಿಯಿಂದ ನೋಡು ತ್ತೇನೆ' ಎಂದವಳು ಮಾತು ಮುಂದುವರಿಸಿದಳು. 'ಅಷ್ಟಕ್ಕೆಲ್ಲ ನನ್ನ ಅಸ್ವಸ್ಥತೆಯೇ ಕಾರಣ. ಪ್ರಾಯಶಃ ಅದು ಜಾರಿಹೋದೀತು.'

'ಆ ವಿಷಯ ಯೋಚಿಸಬೇಡ....'

'ನನಗದು ಸಾಧ್ಯವಾಗದು. ನಿನ್ನ ಮನೆಯಲ್ಲಿ, ಮಕ್ಕಳೊಡನಿದ್ದಾಗ ಮಾತ್ರ ನಾನು ಆನಂದವನ್ನನುಭವಿಸುತ್ತೇನೆ.'

'ನೀನೀಗ ನಮ್ಮಲ್ಲಿಗೆ ಬರಲಾರದ್ದಕ್ಕಾಗಿ ನನಗೆ ದುಃಖವಾಗುತ್ತಿದೆ.'

'ಓ, ಬಂದೇ ಬರುತ್ತೇನೆ. ನನಗೆ ಕೆಂಜ್ವರವಿತ್ತು. ಅಮ್ಮನ ಒಪ್ಪಿಗೆಯನ್ನು ಪಡೆಯುತ್ತೇನೆ.'

ತನ್ನಿಷ್ಟವೇ ಗೆಲ್ಲಬೇಕೆಂದು ಕಿಟ್ಟಿ ಒತ್ತಾಯಿಸಿದಳು; ಅಕ್ಕನ ಮನೆಗೆ ಹೋದಳು; ಕೆಂಜ್ವರಾವಧಿಯನ್ನೆಲ್ಲ ಅಲ್ಲಿಯೆ ಕಳೆದಳು. ಕೆಂಜ್ವರ ಡಾಲಿಯ ಮನೆಯ ಮೇಲೂ ಧಾಳಿ ನಡಸಿತು; ಮಕ್ಕಳನ್ನಪ್ಪಿಕೊಂಡಿತು. ಇಬ್ಬರು ಸೋದರಿಯರೂ ಆರುಮಂದಿ ಯನ್ನು ಸುರಕ್ಷಿತವಾಗಿ ದಡ ಕಾಣಿಸಿದರು. ಆದರೆ ಕಿಟ್ಟಿಯ ಆರೋಗ್ಯ ಸುಧಾರಿಸಲಿಲ್ಲ. ಲೆಂಟ್ ಕಾಲದಲ್ಲಿ ಶರ್‌ಬತ್‌ಸ್ಕಿಯರು ವಿದೇಶಕ್ಕೆ ಹೋದರು.

೪

ಸೇಂಟ್‌ಪೀಟರ್ಸ್‌ಬರ್ಗ್ ಜಗತ್ತಿನ ಸಂಪ್ರದಾಯದಲ್ಲಿ ವಾಸ್ತವವಾಗಿದ್ದದ್ದು ಒಂದೇ ಒಂದು ಉಚ್ಚಶ್ರೇಣಿ: ಅದರ ಸದಸ್ಯರೆಲ್ಲರೂ ಪರಸ್ಪರವಾಗಿ ಗೊತ್ತಿದ್ದವರೇ. ಅವರೆಲ್ಲರೂ ಆಗಾಗ್ಗೆ ಭೇಟಿನೀಡುತ್ತಿದ್ದರು. ಆದರೆ ಈ ದೊಡ್ಡ ವೃತ್ತದಲ್ಲಿಯೂ ವಿಭಾಗ ಗಳಿದ್ದುವು. ಈ ಸಣ್ಣ ವೃತ್ತಗಳ ಪೈಕಿ ಮೂರರಲ್ಲಿ ಅನ್ನಾ ಅರ್ಕದಿಯೇವ್ನ ಕರೆನಿನ ಸ್ನೇಹಿತರನ್ನೂ ನಿಕಟ ಸಂಬಂಧಗಳನ್ನೂ ಹೊಂದಿದ್ದಳು. ತನ್ನ ಗಂಡನ ಸಹೋದ್ಯೋಗಿ ಗಳೂ ಅಧೀನಾಧಿಕಾರಿಗಳೂ ಇದ್ದ ವೃತ್ತ ಅವುಗಳಲ್ಲೊಂದು. ವಿವಿಧ ಸಾಮಾಜಿಕ ಸ್ತರಗಳಿಗೆ ಸೇರಿದ್ದ ಅವರು ವಿಚಿತ್ರರೀತಿಯಲ್ಲಿ ಆ ವೃತ್ತದ ಸದಸ್ಯರಾಗಿದ್ದರು. ಮೊದ ಮೊದಲು ಈ ವ್ಯಕ್ತಿಗಳ ಬಗ್ಗೆ ಅನ್ನಾಳಿಗೆ ಭಯಭಕ್ತಿ ಹುಟ್ಟಿಸುವ ಗೌರವವಿತ್ತು. ಆ ಗೌರವದ ಮೂಲದಲ್ಲಿದ್ದ ಕಾರಣಗಳು ಈಗವಳ ನೆನಪಿನಲ್ಲುಳಿದಿರಲಿಲ್ಲ. ಹಳ್ಳಿಯ ಜನರಲ್ಲಿ ಎಲ್ಲರಿಗೂ ಪರಸ್ಪರ ಪರಿಚಯವಿರುವಂತೆ, ಅವಳಿಗೆಲ್ಲರೂ ಗೊತ್ತಿತ್ತು; ಪ್ರತಿ ಯೊಬ್ಬರ ಅಭ್ಯಾಸ ದೌರ್ಬಲ್ಯಗಳು ಅವಳಿಗೆ ಗೊತ್ತಿತ್ತು; ಪ್ರತಿಯೊಬ್ಬರ ಕಷ್ಟಕ್ಲೇಶ ಗಳೂ ಅವಳಿಗೆ ತಿಳಿದಿದ್ದುವು; ಪರಸ್ಪರ ಸಂಲಿಗೆಯ ಕತೆಯೂ ಅವಳಿಗೆ ಗೊತ್ತಿತ್ತು; ಒಬ್ಬರು ಮತ್ತೊಬ್ಬರ ಬಗ್ಗೆ ಹೊಂದಿದ್ದ ನಿಲುವು ಮಾತ್ರವಲ್ಲ, ಅವರ ಆಂತರ್ಯವನ್ನು ಸಹ ಬಲ್ಲವಳಾಗಿದ್ದಳು; ಯಾರು ಯಾರಿಗಂಟಿಕೊಂಡಿದ್ದರು, ಹೇಗೆ ಯಾವಾಗ, ಯಾರು ಯಾರೊಡನೆ ಸಾಮರಸ್ಯ ಹೊಂದಿದ್ದರು ಅಥವಾ ವಿರೋಧವಾಗಿದ್ದರು ಎಂಬುದನ್ನೆಲ್ಲ ಅವಳು ಅರಿತಿದ್ದಳು. ಆದರೆ ಕೌಂಟೆಸ್ ಲಿಡಿಯಾ ಇವಾನೋವ್ನಳ ಸಾಧನೆ ಪ್ರಯತ್ನ

ಗಳ ಒತ್ತಡವಿದ್ದರೂ, ಪುರುಷಪ್ರಧಾನದ ರಾಜಕೀಯಾಸಕ್ತಿಗಳ ಈ ವೃತ್ತದ ಬಗ್ಗೆ ಅವಳಿಗೆ ನಿಜಕ್ಕೂ ಆಸಕ್ತಿಯಿರಲಿಲ್ಲ. ಅದರಿಂದಾಗಿ ಅವಳದರಿಂದ ದೂರವಿರುತ್ತಿದ್ದಳು.

ಕರೆನಿನ್‌ನ ಪುರೋಭಿವೃದ್ಧಿಯಲ್ಲಿ ನೆರವಾಗಿದ್ದ ಮತ್ತೊಂದು ವೃತ್ತದೊಡನೆಯೂ ಅನ್ನಾ ಸಂಬಂಧವಿಟ್ಟುಕೊಂಡಿದ್ದಳು. ಕೌಂಟೆಸ್ ಲಿಡಿಯಾ ಇವಾನೊವ್ನ ಅದರ ಕೇಂದ್ರ ವ್ಯಕ್ತಿಯಾಗಿದ್ದಳು. ಉಪಕಾರ ಬುದ್ಧಿಯ, ಧರ್ಮ ಶ್ರದ್ಧೆಯ ಕುರೂಪಿ ವೃದ್ಧೆಯರೂ, ಮಹತ್ವಾಕಾಂಕ್ಷೆಯ ಕುಶಾಗ್ರಮತಿಯ ವಿದ್ಯಾವಂತ ಪುರುಷರೂ ಅದರಲ್ಲಿದ್ದರು. ಈ ವೃತ್ತಕ್ಕೆ ಸೇರಿದ ಬುದ್ಧಿವಂತರಲ್ಲೊಬ್ಬ ಅದನ್ನು 'ಪೀಟರ್ಸ್‌ಬರ್ಗ್ ಸಮಾಜದ ಆತ್ಮಸಾಕ್ಷಿ' ಎಂದು ಕರೆದಿದ್ದನು. ಈ ಕೂಟದ ಬಗ್ಗೆ ಕರೆನಿನ್‌ಗೆ ತುಂಬ ಗೌರವವಿತ್ತು; ಯಾರ ಜತೆಯಲ್ಲಾದರೂ ಹೊಂದಿಕೊಳ್ಳಬಲ್ಲ ಅನ್ನಾ ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ಮೊದಲು ತನ್ನ ಜೀವನವನ್ನು ಪ್ರಾರಂಭಿಸಿದಾಗ ಇದರಲ್ಲಿ ಅನೇಕ ಗೆಳೆಯರನ್ನು ಸಂಪಾದಿಸಿಕೊಂಡಳು. ಆದರೆ ಮಾಸ್ಕೊ ಭೇಟಿಯಿಂದ ಮರಳಿದಾಗ ಈ ಕೂಟ ಅವಳಿಗೆ ದುಸ್ಸಹವಾಗಿ ಕಂಡಿತು. ಅವಳ ಅಭಿಪ್ರಾಯದಲ್ಲಿ ತಾನೂ ಸೇರಿಕೊಂಡು, ಎಲ್ಲರೂ ಅಪ್ರಾಮಾಣಿಕರಾಗಿದ್ದರು; ಅವರ ಸಹವಾಸದಲ್ಲಿ ತನಗೆಷ್ಟು ಬೇಸರ ಅಸಮಾಧಾನಗಳುಂಟಾಗಿದ್ದುವೆಂದರೆ, ಸಾಧ್ಯವಿದ್ದಾಗಲೆಲ್ಲ ಅವಳು ಕೌಂಟೆಸ್‌ಲಿಡಿಯಾ ಇವಾನೊವ್ನಳಿಂದ ದೂರವಿರುತ್ತಿದ್ದಳು.

ಅವಳು ಸಂಬಂಧ ಹೊಂದಿದ್ದ ಮೂರನೆಯ ವೃತ್ತ ನಿಜವಾಗಿ ನವನಾಗರಿಕತೆಯ ಪ್ರಪಂಚವನ್ನು ಪ್ರತಿನಿಧಿಸುತ್ತಿತ್ತು. ಅದು ನೃತ್ಯಗೋಷ್ಠಿಗಳ, ಭೋಜನ ಕೂಟಗಳ ಮತ್ತು ಯಥೇಚ್ಛವಾದ ಉಡುಪುಗಳ ಪ್ರಪಂಚವಾಗಿತ್ತು. ಸ್ವೈರಿಣಿಯರ ಮಟ್ಟಕ್ಕಿಳಿಯಬಾರದೆಂದು ಆ ಜಗತ್ತು ಒಂದು ಕಡೆ ಆ ಸ್ಥಾನಕ್ಕಂಟಿಕೊಂಡಿತ್ತು. ಆ ಸ್ವೈರಿಣಿಯರನ್ನು ದ್ವೇಷಿಸುತ್ತಿದ್ದುದಾಗಿ ಈ ವೃತ್ತ ತಿಳಿದುಕೊಂಡಿತ್ತು. ಆದರೆ ಅದರ ರುಚಿ ಅಭಿರುಚಿಗಳು ಅವರ ಅಭಿರುಚಿಗಳಂತಿದ್ದುವಲ್ಲದೆ, ತದ್ವತ್ತಾಗಿದ್ದುವು. ತನ್ನ ರಕ್ತಸಂಬಂಧಿ ರಾಜಕುಮಾರಿ ಬೇತ್ಸಿತ್ವೆರ್‌ಸ್ಕಯಳ ಮೂಲಕ ಅವಳು ಈ ವೃತ್ತವನ್ನು ಪ್ರವೇಶಿಸಿದ್ದಳು. ಬೇತ್‌ಸಿಯ ವಾರ್ಷಿಕ ವರಮಾನ ನೂರಿಪ್ಪತ್ತು ಸಾವಿರದಷ್ಟಿತ್ತು. ಅನ್ನಾ ಸಮಾಜವನ್ನು ಪ್ರವೇಶಿಸುತ್ತಿದ್ದಂತೆಯೇ ಬೇತ್‌ಸಿ ಅವಳಿಗೆ ಮಾರುಹೋದಳು, ಅವಳನ್ನು ಪ್ರೋತ್ಸಾಹಿಸಿದಳು, ಅವಳನ್ನು ತನ್ನ ವೃತ್ತಕ್ಕೆಳೆದುಕೊಂಡಳು, ಕೌಂಟೆಸ್ ಲಿಡಿಯಾ ಇವಾನೊವ್ನಳ ನಗೆಗೆ ಗುರಿಮಾಡಿದಳು.

ಮುದುಕಿಯಾಗಿ ವಿಕಾರಗೊಂಡಾಗ 'ನಾನೂ ಅವರಂತಾಗುತ್ತೇನೆ' ಎಂದು ಬೇತ್ಸಿ ನುಡಿದಳು. 'ಆದರೆ ನಿನ್ನಂಥ ಪ್ರಾಯದ ಸುಂದರಿ ಆ ಮುದುಕಿಯರ ಗೃಹವನ್ನು ಪ್ರವೇಶಿಸಬೇಕಾದರೆ ಇನ್ನೂ ಹಲವು ದಿನ ಹಿಡಿಯುತ್ತವೆ.'

ತನ್ನ ಚೈತನ್ಯಕ್ಕೆ ಮೀರಿದ ಹಣ ಬೇಕಾಗಿದ್ದುದರಿಂದ, ಮೊದಲನೆಯ ವೃತ್ತ ತನಗೆ ಹಿತಕರವಾಗಿ ಕಂಡದ್ದರಿಂದ ಮೊದಮೊದಲು ಅನ್ನಾ ಬೇತ್ಸಿಯಿಂದ ದೂರವಿರುತ್ತಿದ್ದಳು. ಆದರೆ ಮಾಸ್ಕೋದಿಂದ ಹಿಂದಿರುಗಿದನಂತರ ಎಲ್ಲವೂ ಬದಲಾಯಿಸಿತು. ಅವಳೀಗ ನೀತಿವಂತ ಗೆಳೆಯರ ಗುಂಪನ್ನು ತೊರೆದು, ನಾಗರಿಕತೆಯ ಜಗತ್ತನ್ನು ಪ್ರವೇಶಿಸಿದಳು. ಅವಳಲ್ಲಿ ವ್ರಾನ್ಸ್ಕಿಯನ್ನು ಭೇಟಿಮಾಡಿದಳು. ಅವನನ್ನು ಮೇಲಿಂದ ಮೇಲೆ

ಭೇಟಿ ಮಾಡಿದಂತೆಲ್ಲ ಅವಳ ಹರ್ಷೋದ್ರೇಕ ಅಧಿಕವಾಗುತ್ತಿತ್ತು. ಅವಳು ಮೊದಲವನನ್ನು ವಿಶೇಷವಾಗಿ ಬೇತ್ಸಿಯ ಮನೆಯಲ್ಲಿ ಸಂಧಿಸುತ್ತಿದ್ದಳು. ಅವಳು ಅವನ ರಕ್ತ ಸಂಬಂಧಿ. ಅವಳ ಕನ್ಯಾನಾಮ ವ್ರಾಂಸ್ಕಿಯ. ಅನ್ನಾಳನ್ನು ಸಾಧಿಸಬಹುದಾದ ಕಡೆಗಳಿಗೆಲ್ಲ ಹೋಗಲು, ಮತ್ತು ಅವಕಾಶ ಸಿಕ್ಕಿದಾಗಲೆಲ್ಲ ಅವಳನ್ನು ತಾನು ಪ್ರೀತಿಸುತ್ತಿದ್ದೇನೆಂದು ಹೇಳಲು ಅವನು ಸಂಕಲ್ಪಿಸಿಕೊಂಡಿದ್ದನು. ಅವಳವನಿಗೆ ಪ್ರೋತ್ಸಾಹ ನೀಡುತ್ತಿರಲಿಲ್ಲವಾದರೂ ಮೊತ್ತಮೊದಲಿಗೆ ತಾನವನನ್ನು ರೈಲಿನಲ್ಲಿ ಸಂಧಿಸಿದಾಗ ಅನುಭವಿಸಿದ್ದ ತೀವ್ರ ಭಾವೋನ್ಮಾದವನ್ನವಳು ಅನುಭವಿಸಿದ್ದಳು. ಅವನ ಈಕ್ಷಣಮಾತ್ರದಿಂದ ತನ್ನ ನೇತ್ರಗಳು ಸಂತೋಷದಿಂದ ಹೊಳೆಯುತ್ತಿದ್ದ, ಹಾಗೂ ಮಂದಹಾಸ ಅವಳ ಕೊಂಕು ದುಟಿಯ ಮೇಲೆ ಮಿಂಚುತ್ತಿದ್ದ ಸಂಗತಿಯ ಬಗ್ಗೆ ಅವಳಿಗರಿವಿತ್ತು; ಈ ಹರ್ಷಾಭಿವ್ಯಕ್ತಿಯನ್ನಡುಮುವ ಶಕ್ತಿ ಅವಳಿಗಿರಲಿಲ್ಲ.

ಸುಪ್ರಸಿದ್ಧ ಪ್ರಧಾನ ಗಾಯಕಿ ಎರಡನೆಯ ಸಲ ರಂಗದ ಮೇಲೆ ಪ್ರತ್ಯಕ್ಷವಾಗಿದ್ದಳು; ಇಡೀ ನಾಗರಿಕ ಜಗತ್ತೆಲ್ಲ ರಂಗಮಂದಿರದಲ್ಲಿತ್ತು. ಅಗ್ರಪಂಕ್ತಿಯಲ್ಲಿ ಕುಳಿತಿದ್ದ ವ್ರಾಂಸ್ಕಿ ಪೇಟಿಕಾಸನದಲ್ಲಿದ್ದ ತನ್ನ ರಕ್ತಸಂಬಂಧಿಯನ್ನು ಗುರುತಿಸಿ, ವಿರಾಮದ ವೇಳೆಯ ತನಕ ಕಾಯದೆ ಅವಳ ಬಳಿಗೆ ಹೋದನು.

'ನೀನೇಕೆ ನಮ್ಮ ಜತೆ ಊಟಕ್ಕೆ ಬರಲಿಲ್ಲ?' ಎಂದು ಬೇತ್ಸಿ ಅವನನ್ನು ಕೇಳಿದಳು. ಸಾಮಾನ್ಯವಾಗಿ ಪ್ರೇಮಿಯ ಅತೀಂದ್ರಿಯ ಗ್ರಹಣಶಕ್ತಿಗೆ ನಾನು ವಿಸ್ಮಯಗೊಂಡಿದ್ದೇನೆ' ಎಂದವಳು ಮುಗುಳುನಗೆ ಸೂಸುತ್ತ, ಅವನೊಬ್ಬನಿಗೆ ಮಾತ್ರ ಕೇಳಿಸುವಂತೆ ತನ್ನ ದನಿಯನ್ನು ತಗ್ಗಿಸಿ ನುಡಿದಳು. 'ಅವಳಲ್ಲಿರಲಿಲ್ಲ. ಗೀತನಾಟಕ ಮುಗಿದ ತರುವಾಯ ಬಾ'.

ವ್ರಾಂಸ್ಕಿ ಅವಳ ಕಡೆಗೆ ಪ್ರಶ್ನಾರ್ಥಕ ದೃಷ್ಟಿಯನ್ನು ಬೀರಿದನು. ಅವಳು ತಲೆಯನ್ನು ಕೆಳಗಿಸಿದಳು. ಸುಸ್ಮಿತನಾಗಿ ಅವಳನ್ನು ವಂದಿಸಿದನು. ಅವಳ ಬದಿಯಲ್ಲಿಯೆ ಕುಳಿತುಕೊಂಡನು.

'ನಿನ್ನ ಸಿನಿಕತನ ನನಗೆ ಚೆನ್ನಾಗಿ ನೆನಪಿದೆ' ಎಂದು ರಾಜಕುಮಾರಿ ಬೇತ್ಸಿ ಮಾತು ಮುಂದುವರಿಸಿದಳು. ಅವನ ಕಾಮುಸಾಹಸದ ಗತಿಯನ್ನವಳು ಉತ್ಕಟಾಕಾಂಕ್ಷೆಯಿಂದ ಗಮನಿಸುತ್ತಿದ್ದಳು. 'ಆ ವಿಷಯವೀಗ ಎಲ್ಲಿಯತನಕ ಬಂದಿದೆ? ನೀನು ಸಿಕ್ಕಿಬಿದ್ದೆ, ತಮ್ಮ!'

'ಸಿಕ್ಕಿಬೀಳಬೇಕೆಂಬುದೊಂದೇ ನನ್ನ ಬಯಕೆ' ಎಂದು ವ್ರಾಂಸ್ಕಿ ನಿರುದ್ವೇಗದ ಸತ್ಸ್ವಭಾವದ ಮಂದಹಾಸದಿಂದ ಉತ್ತರಿಸಿದನು. ನಿಜ ಹೇಳುವುದಾದರೆ, ನಾನು ಸರಿಯಾಗಿ ಸಿಕ್ಕಿಬಿದ್ದಿಲ್ಲವೆಂದೇ ನಾನು ಸಾರುತ್ತಿರುವ ದೂರು. ನಾನು ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದೇನೆ.'

'ನೀನು ಹಾರೈಸುವ ನಂಬಿಕೆ ಯಾವುದು?' ಎಂದು ಬೇತ್ಸಿ ಅದು ತನ್ನ ಗೆಳೆಯನಿಗಾದ ಅವಮಾನವೆಂದೊಪ್ಪಿಕೊಂಡು ನುಡಿದಳು. 'ನಮಗರ್ಥವಾಗುತ್ತದೆ ..' ಆದರೆ ಅವನು ಯಾವ ನಂಬಿಕೆಯನ್ನು ಯಾವ ರೀತಿಯಲ್ಲಿ ಬಯಸಿಕೊಂಡಿದ್ದನೋ ಅದೇ ರೀತಿಯಲ್ಲದನ್ನು ಅರ್ಥಮಾಡಿಕೊಂಡಿರುವುದನ್ನು ಸೂಚಿಸಲೆಂಬಂತೆ ಅವಳ ಕಣ್ಣು ಮಿಂಚಿದುವು.

'ಯಾವುದೂ ಇಲ್ಲ' ಎಂದು ವ್ರಾಂಸ್ಕಿ ಬಿಳಿಯ ಹಲ್ಲುಗಳ ಸಮಸಾಲನ್ನು ಗಿಂಜುತ್ತ, ಮುಗುಳುನಗೆ ಸೂಸಿದನು. 'ಕ್ಷಮಿಸಿ' ಎಂದವನು ಅವಳ ಕೈಯಿಂದ ದುರ್ಬೀನನ್ನು ತೆಗೆದುಕೊಂಡನು; ಅವಳ ಬೆತ್ತಲೆ ಭುಜದ ಮೇಲಿಂದ ಎದುರು ಸಾಲಿನ ಪೇಟಿಕಾಸನಗಳಮೇಲೆ ಅವನ್ನು ನಾಭಿಗೂಡಿಸಿದನು. 'ನಾನು ಅಣಕಕ್ಕೆ ಗುರಿಯಾಗಬಹುದೆಂಬ ಶಂಕೆಯಿದೆ.'

ಬೇತ್ಸಿಯ ಹಾಗೂ ನಾಗರಿಕ ಪ್ರಪಂಚದ ವ್ಯಕ್ತಿಗಳ ದೃಷ್ಟಿಯಲ್ಲಿ ತಾನು ಅಣಕಕ್ಕೆ ಗುರಿಯಾಗಬೇಕಾದ ಅಪಾಯವಿರಲಾರದೆಂದವನು ತಿಳಿದಿದ್ದನು. ಹರೆಯದ ಹುಡುಗಿಯ ಉಪೇಕ್ಷೆಗೊಳಗಾದ ಪ್ರೇಮಿಯ ಅಥವಾ ಮದುವೆಯಾಗುವ ಸ್ವಾತಂತ್ರ್ಯವುಳ್ಳ ಹೆಂಗಸಿನ ಪರಿಸ್ಥಿತಿ ನಿಜಕ್ಕೂ ಹಾಸ್ಯಾಸ್ಪದವಾದುದೆಂದನನು ಬಗೆದಿದ್ದನು; ಆದರೆ ವಿವಾಹಿತ ಸ್ತ್ರೀಯನ್ನು ಹಿಂಬಾಲಿಸುವ ಮತ್ತು ಅವಳನ್ನು ಹಾದರಕ್ಕೆಳೆಯುವಲ್ಲಿ ತನ್ನ ಬದುಕನ್ನೇ ಪಣವಾಗೊಡ್ಡುವ ವ್ಯಕ್ತಿಯ ಪಾತ್ರ ಮಹತ್ತರವಾದುದೆಂದು, ವೈಭವಪೂರ್ಣವಾದದ್ದೆಂದು, ಹಾಸ್ಯಾಸ್ಪದವಾಗುವುದಿಲ್ಲವೆಂದು ಅವನು ಭಾವಿಸಿದನು. ಆದ್ದರಿಂದವನು ದುರ್ಬೀನನ್ನು ಕೆಳಗಿಳಿಸಿ, ಮೀಸೆಯಡಿಯಲ್ಲಿ ಆಟವಾಡುತ್ತಿದ್ದ ಉಲ್ಲಾಸಾಭಿಮಾನಗಳ ಮಂದಹಾಸದೊಡನೆ ಅವನು ತನ್ನ ರಕ್ತ ಸಂಬಂಧಿಯ ಕಡೆಗೆ ನೋಡಿದನು.

'ಆದರೆ ನೀನೇಕೆ ಊಟಕ್ಕೆ ಬರಲಿಲ್ಲ?' ಎಂದವಳು ಮೆಚ್ಚುಗೆಯಿಂದವನನ್ನೆ ನೋಡುತ್ತ ಪ್ರಶ್ನಿಸಿದಳು.

'ಓ, ನಾನು ಆ ವಿಷಯ ಹೇಳಲೇಬೇಕು. ನನಗೆ ಬಿಡುವಿರಲಿಲ್ಲ. ಏಕೆ, ಗೊತ್ತೆ? ಅದೇನೆಂಬುದನ್ನು ನೀವು ಊಹಿಸಿಕೊಳ್ಳಲಾರಿರಿ. ಊಹಿಸಿಕೊಳ್ಳುವುದಾದರೆ, ನೂರಲ್ಲ, ಸಾವಿರ ರೂಬಲ್ ಬಾಜಿ ಕಟ್ಟುತ್ತೇನೆ. ಮಡದಿಯನ್ನು ಅವಮಾನಗೊಳಿಸಿದ ವ್ಯಕ್ತಿಯ ಮತ್ತು ಅವಳ ಗಂಡನ ನಡುವೆ ರಾಜಿಮಾಡುತ್ತಿದ್ದೆ. ನಿಜಕ್ಕೂ ನಿಜ.'

'ಅವರನ್ನು ಸರಿಪಡಿಸಿದೆಯಾ'

'ಹೆಚ್ಚು ಕಡಮೆ.'

'ನಾನು ಆ ಕತೆ ಕೇಳಲೇಬೇಕು' ಎಂದವಳು ಮೇಲೇಳುತ್ತ ನುಡಿದಳು. 'ಮುಂದಿನ ವಿರಾಮವೇಳೆಯಲ್ಲಿ ಬಾ'.

'ಸಾಧ್ಯವಿಲ್ಲ. ಫ್ರೆಂಚ್ ರಂಗಮಂದಿರಕ್ಕೆ ಹೋಗುತ್ತಿದ್ದೇನೆ.'

'ನಿಲ್ಸನ್‌ಳನ್ನು ಬಿಟ್ಟುಹೋಗುವೆಯೇನು?' ಎಂದು ಬೇತ್ಸಿ ಮೇಳದ ಹುಡುಗಿಯಿಂದ ನಿಲ್ಸನ್‌ಳನ್ನು ಪ್ರತ್ಯೇಕಿಸಲಾಗದಿದ್ದರೂ ಭಯದಿಂದ ಪ್ರಶ್ನಿಸಿದಳು.

'ಬೇರೆ ಮಾರ್ಗವಿಲ್ಲ. ಶಾಂತಿ ಸಂಧಾನದ ಸಂಬಂಧವಾಗಿ ನನಗೊಂದು ಕಾರ್ಯ ನಿಶ್ಚಯವಾಗಿದೆ.'

'ಶಾಂತಿ ಕರ್ತರೇ ಪುಣ್ಯಶಾಲಿಗಳು; ಏಕೆಂದರೆ ಅವರು ಭಗವದನುಗ್ರಹಕ್ಕೆ ಪಾತ್ರರಾಗುತ್ತಾರೆ' ಎಂದು ಬೇತ್ಸಿ ಯಾರೊ, ಯಾವ ಕಾಲದಲ್ಲಿಯೋ ಏನನ್ನೋ ಕುರಿತು ಆಡಿದ ಮಾತನ್ನು ನೆನೆಸಿಕೊಂಡು ನುಡಿದಳು. 'ಹಾಗಾದರೆ, ಕುಳಿತುಕೊ; ಈಗಲೇ ಅದನ್ನು ಹೇಳಿಬಿಡು ಏನಾಯ್ತು?'

ಅವಳು ತನ್ನ ಜಾಗದಲ್ಲಿ ಮತ್ತೆ ಕುಂಡಿಯೂರಿದಳು.

೫

'ಅದು ಸ್ವಲ್ಪ ಅಸಭ್ಯವಾಗಿ ತೋರಬಹುದು, ಆದರದು ವಿನೋದಾತ್ಮಕವಾಗಿದೆ. ನಾನದನ್ನು ಹೇಳಲೇಬೇಕು' ಎಂದು ಫ್ರಾಂಸ್ಕಿ ನಗೆಗಣ್ಣಾಗಿ ಅವಳನ್ನೆ ನೋಡುತ್ತ ನುಡಿದನು. 'ನಾನು ಹೆಸರು ಹೇಳುವುದಿಲ್ಲ.'

'ಆಗಲಿ, ನಾನೇ ಊಹಿಸಿಕೊಳ್ಳುತ್ತೇನೆ'

'ಈಗ ಕೇಳಿ: ಇಬ್ಬರು ಖುಷೀ ಮನುಷ್ಯರು ಸವಾರಿಸುತ್ತಿದ್ದಾರೆ....'

'ನಿಮ್ಮ ದಳದ ಅಧಿಕಾರಿಗಳು ತಾನೆ.'

'ಅವರು ಅಧಿಕಾರಿಗಳೆಂದು ನಾನು ಹೇಳುವುದಿಲ್ಲ. ಅದೆ ತಾನೆ ಊಟ ಮುಗಿಸಿದ ಇಬ್ಬರು ವ್ಯಕ್ತಿಗಳು.'

'ಬೇರೆ ಮಾತಿನಲ್ಲಿ ಹೇಳುವುದಾದರೆ, ಅವರು ಕುಡಿದಿದ್ದಿರಬೇಕು.'

'ಪ್ರಾಯಶಃ ಅವರು ತಮ್ಮ ಗೆಳೆಯನೊಡನೆ ಊಟಮಾಡುವ ಸಲುವಾಗಿ ಹೋಗುತ್ತಿದ್ದಾರೆ, ಒಳ್ಳೆಯ ಹುರುಪಿನಲ್ಲಿದ್ದಾರೆ. ಸುಂದರ ಯುವತಿಯೊಬ್ಬಳು ಬಾಡಿಗೆ ಬಂಡಿಯಲ್ಲಿ ತಮ್ಮನ್ನು ಹಿಂಬಾಲಿಸುತ್ತಿದ್ದ ಸಂಗತಿ ಒಡನೆಯೆ ಅವರ ಕಣ್ಣಿಗೆಬಿತ್ತು. ನೋಡುತ್ತಿದ್ದಂತೆ ಅವಳು ಅವರಿಗಿಂತ ಮುಂದಾದಳು. ಅವಳು ಹಿಂದಿರುಗಿ ನೋಡುತ್ತಾಳೆ, ತಲೆಯೊಲೆಯುತ್ತಾಳೆ, ನಗುತ್ತಾಳೆ ಅಥವಾ ಅವಳು ತಲೆಯೊಲೆಯುತ್ತಿರಬೇಕೆಂದು, ನಗುತ್ತಿರಬೇಕೆಂದು ಕಲ್ಪಿಸಿಕೊಳ್ಳುತ್ತಾರೆ. ಸಹಜವಾಗಿಯೇ ಅವರು ಅವಳನ್ನು ಹಿಂಬಾಲಿಸುತ್ತಾರೆ, ಬಹುವೇಗವಾಗಿ ನಾಗಾಲೋಟವೆತ್ತುತ್ತಾರೆ. ತಾವು ಹೋಗಬೇಕಾಗಿದ್ದ ಮನೆಯ ಮುಂದೆಯೇ ಆ ಚೆಲುವೆ ನಿಂತಾಗ ಅವರಿಗಚ್ಚರಿಯಾಗುತ್ತದೆ. ಅವಳು ತುದಿಯ ಮಹಡಿಗೆ ಓಡಿ ಹೋಗುತ್ತಾಳೆ. ತುಂಡು ಮುಸುಕಿನೊಳಗೆ ಚೆಂದುಟಿಗಳ ಹೊಳಪನ್ನೂ ಸುಂದರ ಸೂಕ್ಷ್ಮ ಪಾದಗಳ ಸುಳುಹನ್ನೂ ಅವರು ಕಾಣುತ್ತಾರೆ—ಬೇರೇನೂ ಗೋಚರಿಸುವುದಿಲ್ಲ.'

'ನೀನಿಷ್ಟು ಉತ್ಸುಕತೆಯಿಂದ ಹೇಳುತ್ತಿರುವುದನ್ನು ನೋಡಿದರೆ, ಆ ಇಬ್ಬರ ಪೈಕಿ ನೀನೊಬ್ಬನಿರಬೇಕೆಂದು ಕಾಣುತ್ತದೆ.'

'ನೀವೀಗ ಏನು ಹೇಳುತ್ತಿದ್ದೀರೋ ಅದನ್ನು ನಿಮ್ಮ ನೆನಪಿಗೆ ತಂದುಕೊಡಲು ನನಗನುವು ನೀಡಿ, ಪ್ರಿಯಬಂಧು. ಅನಂತರ ಬೀಳ್ಕೊಡಿಗೆ ಔತಣವನ್ನೇರ್ಪಡಿಸಿರುವ ತಮ್ಮ ಗೆಳೆಯನ ಮನೆಗೆ ಆ ಸಜ್ಜನರು ಹೋಗುತ್ತಾರೆ. ಈ ಸಲ ಅವರು ನಿಜಕ್ಕೂ ಕುಡಿಯುತ್ತಾರೆ; ಪ್ರಾಯಶಃ ಬೀಳ್ಕೊಡಿಗೆ ಔತಣಕೂಟಗಳ ವಾಡಿಕೆಯಂತೆ ತುಸು ಹೆಚ್ಚಾಗಿಯೇ ಕುಡಿಯುತ್ತಾರೆ. ಮನೆಯ ತುದಿಮಹಡಿಯಲ್ಲಿ ಯಾರು ವಾಸಿಸುತ್ತಾರೆಂದು ಊಟದ ಸಮಯದಲ್ಲವರು ಕೇಳುತ್ತಾರೆ. ಯಾರಿಗೂ ಗೊತ್ತಿಲ್ಲ. ಯಾರಾದರೂ ಯುವತಿಯರು ಮಹಡಿಯಲ್ಲಿ ವಾಸಿಸುತ್ತಿದ್ದಾರೆಯೇ ಎಂದು ತಮ್ಮ ಆತಿಥೇಯನ ಸೇವಕನನ್ನವರು ಪ್ರಶ್ನಿಸಿದಾಗ, ಕೆಲವರು ವಾಸಿಸುತ್ತಿದ್ದಾರೆಂದು ಅವನು ಉತ್ತರಿಸುತ್ತಾನೆ. ಭೋಜನದ ತರುವಾಯ ಚಿಕ್ಕಹುಡುಗರು ತಮ್ಮ ಆತಿಥೇಯನ ಅಧ್ಯಯನ ಮಂದಿರಕ್ಕೆ ಹೋಗುತ್ತಾರೆ; ಅಜ್ಞಾತಯುವತಿಗೊಂದು ರಾಗೋದ್ರೇಕಯುಕ್ತವಾದ ಪತ್ರವನ್ನು ಬರೆದು, ತಮ್ಮ ಪ್ರೇಮಾಶಯವನ್ನು ತೋಡಿಕೊಳ್ಳುತ್ತಾರೆ, ಸಂದೇಹಾಸ್ಪದ

ವಾದದ್ದನ್ನು ವಿವರಿಸುವ ಸಲುವಾಗಿ ಅವರೇ ಅದನ್ನು ಮಹಡಿಗೆ ಕೊಂಡೊಯ್ಯು ತ್ತಾರೆ.

'ಇಂಥ ಅಸಹ್ಯವಾದ ಕಥೆಯನ್ನೇಕೆ ನನಗೆ ಹೇಳುತ್ತೀಯೆ ? ಆ ಮೇಲೆ ?'

'ಅವರು ಗಂಟೆ ಬಾರಿಸುತ್ತಾರೆ. ಸೇವಕಿಯೊಬ್ಬಳು ಬಾಗಿಲು ತೆರೆಯುತ್ತಾಳೆ. ಅವರವಳಿಗೆ ಕಾಗದ ಕೊಡುತ್ತಾರೆ. ಪ್ರೇಮೋತ್ಕಂಠೆಯಿಂದ ತಾವು ಸಾಯುವುದರಲ್ಲಿದ್ದೇವೆಂದೂ, ವಾಸ್ತವವಾಗಿ ಬಾಗಿಲ ಮೆಟ್ಟಿಲಮೇಲೆ ತಾವು ಬೀಳುವುದರಲ್ಲಿದ್ದೇವೆಂದೂ ಅವರವಳಿಗೆ ಭರವಸೆ ನೀಡುತ್ತಾರೆ. ಕಕ್ಕಾವಿಕ್ಕಿಯಾದ ಸೇವಕಿ ಸಂಧಾನ ನಡೆಸುತ್ತಾಳೆ. ಕೂಡಲೇ ಸಮುದ್ರದ ಏಡಿಯಂತೆ ಕೆಂಪಾಗಿದ್ದ, ಮಾಂಸದಗಾರಿಗೆಯಂತೆ ಕೆನ್ನೆ ಗೂದಲುಳ್ಳ ವ್ಯಕ್ತಿಯೊಬ್ಬ ಪ್ರತ್ಯಕ್ಷನಾಗಿ, ತಾನು ಮತ್ತು ತನ್ನ ಹೆಂಡತಿ ಹೊರತಾಗಿ ಬೇರೆಯಾರೂ ಅಲ್ಲಿ ವಾಸಿಸುತ್ತಿಲ್ಲವೆಂದು ಹೇಳಿ, ಅವರನ್ನೋಡಿಸುತ್ತಾನೆ.'

'ಅವನ ಕೆನ್ನೆಗೂದಲು ಮಾಂಸದ ಗಾರಿಗೆಯಂತಿವೆಯೆಂದು ಹೇಗೆ ಹೇಳುತ್ತೀಯೆ?'

'ಮುಂದೆ ಕೇಳಿ. ಈ ದಿನ ಶಾಂತಿ ಕುದುರಿಸಲು ಹೋಗಿದ್ದೆ.'

'ಅದು ಸಾಧ್ಯವಾಯಿತೆ ?'

'ಸಫಲಗೊಂಡ ಕ್ಷಣ ಸನ್ನಿಹಿತವಾಗುತ್ತದೆ. ಆ ನೆಮ್ಮದಿಯ ಜೋಡಿ ಯಾರೆಂದರೆ ಹಕ್ಕುದಾರಿಕೆಯ ಸಲಹೆಗಾರ ಮತ್ತು ಅವನ ಮಡದಿ. ಹಕ್ಕುದಾರಿಕೆಯ ಸಲಹೆಗಾರ ಅಧಿಕೃತವಾಗಿ ದೂರು ಸಲ್ಲಿಸಿದ. ನನ್ನನ್ನು ಮಧ್ಯಸ್ಥಗಾರನನ್ನಾಗಿ ನೇಮಿಸಲಾಯಿತು. ಎಂಥ ಮಧ್ಯಸ್ಥಗಾರನೆಂದು ತಿಳಿದಿದ್ದೀರಿ. ಟೆಲಿರ್‍ಯಾಂಡ್ ಸಹ ನನ್ನೊಡನೆ ಹೋಲಿಕೆಗೆ ನಿಲ್ಲಲಾರನೆಂದು ದೃಢವಾಗಿ ಹೇಳಬಲ್ಲೆ.'

'ಅದಷ್ಟು ಕಠಿನವಾಗಿತ್ತೇನು ?'

'ಸುಮ್ಮನೆ ಕೇಳಿ. ನಾವು ಉಚಿತರೀತಿಯಲ್ಲಿ ಕ್ಷಮೆಯಾಚಿಸಿದೆವು : ನಾವು ತುಂಬ ಕಳವಳಕ್ಕೀಡಾದೆವು. ನಮ್ಮ ತಪ್ಪು ತಿಳಿವಳಿಕೆಗಾಗಿ ನಮ್ಮನ್ನು ಕ್ಷಮಿಸಬೇಕೆಂದು ದೈನ್ಯದಿಂದ ಕೇಳಿಕೊಳ್ಳುತ್ತೇವೆ.' ಮಾಂಸದಗಾರಿಗೆಯಂಥ ಕೆನ್ನೆಗೂದಲುಳ್ಳ ಹಕ್ಕುದಾರಿಕೆಯ ಸಲಹೆಗಾರ ಕರಗಿಹೋಗುತ್ತಾನೆ. ಆದರವನು ತನ್ನ ಭಾವಗಳಿಗೆ ದನಿಗೂಡಿಸಲೇಬೇಕು. ದನಿಗೂಡಿಸಿದ ಕೂಡಲೇ ಅವನು ತನ್ನ ಶಾಂತಿಯನ್ನು ಕಳೆದುಕೊಳ್ಳುತ್ತಾನೆ; ಅಸಹ್ಯವಾಗಿ ಮಾತಾಡುತ್ತಾನೆ, ಆಗ ನಾನು ನನ್ನ ಸಂಧಾನ ಕೌಶಲವನ್ನೆಲ್ಲ ಹುರಿಮಾಡಿಕೊಳ್ಳಬೇಕು. 'ಅವರ ನಡತೆ ಶೋಚನೀಯವಾಗಿತ್ತೆಂದು ಒಪ್ಪಿಕೊಳ್ಳುತ್ತೇನೆ. ಅವರು ಪ್ರಾಯದವರೆಂಬುದನ್ನೂ, ಅವರ ತಪ್ಪು ತಿಳಿವಳಿಕೆಯನ್ನು ಗಮನದಲ್ಲಿರಿಸಿಕೊಳ್ಳಬೇಕೆಂಬುದನ್ನೂ ನಾನು ವಿನಂತಿಸಿಕೊಳ್ಳುತ್ತೇನೆ; ಮೇಲಾಗಿ, ಅವರು ಆದೆ ತಾನೆ ಊಟ ಮುಗಿಸಿದ್ದರು. ಇದೇನೆಂಬುದು ನಿನರ್ಥವಾಗುತ್ತದೆ. ಅವರು ತುಂಬ ವಿಷಾದಿಸುತ್ತಾರೆ, ನಿಮ್ಮ ಕ್ಷಮೆ ಯಾಚಿಸುತ್ತಾರೆ.' ಮತ್ತೆ ಹಕ್ಕುದಾರಿಕೆಯ ಸಲಹೆಗಾರ ಮೆತ್ತಗಾಗುತ್ತಾನೆ. 'ನಿಮ್ಮ ಮಾತು ನಮಗೊಪ್ಪಿಗೆಯಾಗುತ್ತದೆ, ಕೌಂಟ್. ನಾನವರನ್ನು ಕ್ಷಮಿಸಲು ಸಿದ್ಧನಾಗಿದ್ದೇನೆ—ಆದರೆ ನನ್ನ ಹೆಂಡತಿ....ಶೀಲವಂತೆಯಾದ ನನ್ನ ಮಡದಿ ಆ ಕುನ್ನಿಗಳ, ಆ ನೀಚರ ಕಾಠಿನ್ಯಾವಮಾನ ಮತ್ತು ಕುಚೇಷ್ಟೆಗಳನ್ನು ಸಹಿಸಿಕೊಳ್ಳಬೇಕಾಗಿದೆ....' ಆ ಕುನ್ನಿಗಳು ನನ್ನ ಪಕ್ಕದಲ್ಲಿಯೇ ನಿಂತುಕೊಂಡಿದ್ದಾರೆ. ನಾನು ಸಂಧಾನ ಕುದುರಿಸ

ಬೇಕಾಗಿದೆ! ಮತ್ತೆ ನಾನು ನನ್ನ ಸಂಧಾನ ಕೌಶಲವನ್ನು ನನ್ನ ನೆರವಿಗೆ ಬಳಸಿಕೊಳ್ಳ ಬೇಕಾಗಿದೆ. ಮತ್ತೆ ನನ್ನ ವ್ಯವಹಾರವನ್ನು ಯಶಸ್ವಿಯಾಗಿ ಮುಗಿಸುತ್ತೇನೆಂಬುದನ್ನು ಕಂಡಕೂಡಲೇ ಹಕ್ಕುದಾರಿಕೆಯ ಸಲಹೆಗಾರ ತನ್ನ ಶಾಂತಿಯನ್ನು ಕಳೆದುಕೊಳ್ಳುತ್ತಾನೆ; ಅವನ ಮುಖ ಕೆಂಪೇರುತ್ತದೆ, ಅವನ ಕೆನ್ನೆಗೂದಲು ನೆಟ್ಟಗೆ ನಿಲ್ಲುತ್ತವೆ, ನಾನು ಮತ್ತೆ ಉನ್ನತ ಸಂಧಾನ ಕೌಶಲದ ಸೂಕ್ಷ್ಮಾತಿಸೂಕ್ಷ್ಮಗಳನ್ನೆಲ್ಲ ಬಳಸಿಕೊಳ್ಳಬೇಕಾಗುತ್ತದೆ.'

'ಓ, ನಾನಿದನ್ನು ನಿನಗೆ ಹೇಳಲೇಬೇಕು!' ಎಂದು ಬೇತ್ಸಿ ಅದೇತಾನೆ ಪೇಟಿಕಾಸನ ವನ್ನು ಪ್ರವೇಶಿಸಿದ ಹೆಂಗಸಿನ ಕಡೆಗೆ ತಿರುಗಿಕೊಂಡು ನಕ್ಕಳು. 'ಅಂಥ ತಮಾಷೆಯ ಕತೆ ಯನ್ನು ನಾನೆಂದೂ ಕೇಳಿರಲಿಲ್ಲ! ಶುಭವಾಗಲಿ' ಎಂದವಳು ತನ್ನ ಬೀಸಣಿಗೆಯನ್ನು ಹಿಡಿದಿದ್ದ ಕೈಯ ಬೆರಳನ್ನು ವ್ರಾಂಸ್ಕಿಯ ಕಡೆಗೆ ಚಾಚಿದಳು. ಅದೇ ಸಮಯದಲ್ಲವಳು ಭುಜವನ್ನೆಗರಿಸಿದಾಗ ಅವಳ ಮೇಲಂಗಿಯ ಕಂಚುಕ ಕೆಳಗೆ ಸರಿದು, ಸಂಪೂರ್ಣವಾಗಿ ಬೆತ್ತಲೆಯಾದಳು. ಅನಿಲದೀಪದ ಬೆಳಕಿನ ಕಡೆಗೆ ಸರಿದಾಗ, ಅವಳು ಅಲ್ಲಿದ್ದವರೆಲ್ಲರ ದೃಷ್ಟಿಕೇಂದ್ರವಾದಳು.

ವ್ರಾಂಸ್ಕಿ ತನ್ನ ದಳಪತಿ (ಫ್ರೆಂಚ್ ರಂಗಮಂದಿರದಲ್ಲಿ ನಡೆಯುತ್ತಿದ್ದ ಯಾವೊಂದು ಆಟವನ್ನೂ ಅವನು ತಪ್ಪಿಸಿಕೊಳ್ಳುತ್ತಿರಲಿಲ್ಲ)ಯನ್ನು ನೋಡಿ, ಮೂರು ದಿನಗಳಿಂದ ತನ್ನ ಮನ ವ್ಯಗಳನ್ನಾವರಿಸಿಕೊಂಡಿದ್ದ ಶಾಂತಿ ಸಂಧಾನದ ಬಗ್ಗೆ ವರದಿಸಲ್ಲಿಸುವ ಸಲುವಾಗಿ, ಫ್ರೆಂಚ್ ರಂಗಮಂದಿರಕ್ಕೆ ಸವಾರಿಸಿದನು. ಪೆತ್ರೀತ್ಸ್ಕಿ ತಪ್ಪಿತಸ್ಥರಲ್ಲೊಬ್ಬ, ಅವನೋ ವ್ರಾಂಸ್ಕಿಗೆ ಪಂಚಪ್ರಾಣ. ಮತ್ತೊಬ್ಬ ರಾಜಕುಮಾರ ಕೆದ್ರೊವ್. ಅವನೊಬ್ಬ ಒಳ್ಳೆಯ ಹುಡುಗ, ಶ್ರೇಷ್ಠ ಸಂಗಾತಿ, ಅವನು ಇತ್ತೀಚೆಗೆ ತಾನೆ ತನ್ನ ದಳವನ್ನು ಸೇರಿದ್ದ. ದಳದ ಆಸಕ್ತಿಗಳು ಅಪಾಯಕ್ಕೀಡಾಗಿದ್ದುದೇ ಮುಖ್ಯ ಸಂಗತಿಯಾಗಿತ್ತು.

ಈ ಇಬ್ಬರು ಯುವಕರೂ ವ್ರಾಂಸ್ಕಿಯ ತುಕಡಿಯಲ್ಲಿದ್ದರು. ಹಕ್ಕುದಾರಿಕೆಯ ಸಲಹೆಗಾರ ವೆಂಡೆನ್ ದಳಪತಿಯನ್ನು ಭೇಟಿಮಾಡಿ, ತನ್ನ ಮಡದಿಯನ್ನು ಅಪಮಾನ ಗೊಳಿಸಿದ್ದಕ್ಕಾಗಿ, ಅವನ ಅಧಿಕಾರಿಗಳ ವಿರುದ್ಧವಾಗಿ ದೂರುಸಲ್ಲಿಸಿದ್ದನು. ವೆಂಡೆನ್‌ನ ಪ್ರಕಾರ ಅವನ ಹರೆಯದ ಮಡದಿ (ಆರು ತಿಂಗಳ ಹಿಂದೆ ಮಾತ್ರ ಅವನು ಮದುವೆ ಯಾಗಿದ್ದನು) ತನ್ನ ತಾಯಿಯೊಡನೆ ಚರ್ಚಿಗೆ ಹೋಗಿದ್ದಳು. ಪ್ರಾರ್ಥನೆ ಕೊನೆ ಗೊಳ್ಳುವ ತನಕ ಅವಳಲ್ಲಿ ನಿಲ್ಲಲಿಲ್ಲ. ಮೊದಲು ಸಿಕ್ಕಿದ ಬಾಡಿಗೆಗಾಡಿಯನ್ನು ತೆಗೆದು ಕೊಂಡು ಅವಳು ಮನೆಗೆ ಹೋದಳು. ಗಾಡಿಚಾಲಕ ಎಚ್ಚರತಪ್ಪಿ, ಗಾಡಿ ಓಡಿಸು ತ್ತಿದ್ದನು. ಅಧಿಕಾರಿಗಳು ಅವಳ ಬೆನ್ನಟ್ಟಿದ್ದೇ ಆಗ. ಅವಳು ಭಯಭೀತಳಾಗಿ, ತನ್ನ ಮಹಡಿ ಮನೆಗೆ ಓಡಿ ಹೋಗುವಾಗ ತುಂಬ ಅಸ್ವಸ್ಥಳಾದಳು. ಕಚೇರಿಯಿಂದ ಹಿಂದಿರುಗಿ ದಾಗ ಬಾಗಿಲ ಗಂಟೆಯ ದನಿಯೂ, ವಿಚಿತ್ರಶಬ್ದಗಳೂ ವೆಂಡೆನ್‌ನ ಕಿವಿಯ ಮೇಲೆ ಬಿದ್ದುವು. ಕಾಗದದೊಡನಿದ್ದ ಅಮಲೇರಿದ ಇಬ್ಬರು ಅಧಿಕಾರಿಗಳನ್ನವನು ಕಂಡು, ಅವರನ್ನು ಹೊರಗೆ ನೂಕಿದನು. ಅವರಿಗೆ ಕಠಿನ ಶಿಕ್ಷೆ ನೀಡುವಂತೆ ಅವನೀಗ ಕೇಳಿ ಕೊಂಡಿದ್ದನು.

'ಏನು ಹೇಳಬೇಕೆಂದಿರುವೆಯೋ ಹೇಳು' ಎಂದು ದಳಪತಿ ತನ್ನ ಕಚೇರಿಗೆ ಬರಮಾಡಿಕೊಂಡಿದ್ದ ವ್ರಾಂಸ್ಕಿಯೊಡನೆ ನುಡಿದನು. 'ಪೆತ್ರೀತ್ಸ್ಕಿ ಅಸಾಧ್ಯನಾಗು

ತ್ತಿದ್ದಾನೆ. ಅವನ ಮೇಲೆ ಅಪವಾದವಿಲ್ಲದ ವಾರವೇ ಇಲ್ಲ. ಇದನ್ನು ಕೈಬಿಡಲು ಹಕ್ಕು ದಾರಿಕೆಯ ಸಲಹೆಗಾರ ಅವಕಾಶ ಕೊಡುವುದಿಲ್ಲ. ಅವನು ಮೇಲಿನ ಕಚೇರಿಯಲ್ಲಿ ಮೊಕದ್ದಮೆ ಮುಂದುವರಿಸಿಯಾನು.'

ಆ ಸಂಗತಿ ಉಪದ್ರವಕಾರಿಯಾಗಿತ್ತೆಂದೂ, ದ್ವಂದ್ವಯುದ್ಧದಿಂದ ಅದನ್ನು ನಿವಾರಿಸಲಾಗದೆಂದೂ, ಸಲಹೆಗಾರನನ್ನು ಸಮಾಧಾನಗೊಳಿಸುವ ಸಲುವಾಗಿ ಸರ್ವ ಪ್ರಯತ್ನವನ್ನು ನಡಸಬೇಕೆಂದೂ, ಆದಷ್ಟು ಬೇಗ ಆ ವಿಷಯವನ್ನು ಮುಚ್ಚಿಬಿಡ ಬೇಕೆಂದೂ ವ್ರಾನ್ಸ್ಕಿ ಯೋಚಿಸಿದನು. ವ್ರಾನ್ಸ್ಕಿ ಜಾಣನೆಂದು, ಕುಲೀನನೆಂದು, ಎಲ್ಲಕ್ಕಿಂತ ಮಿಗಿಲಾಗಿ ದಳದ ಗೌರವವನ್ನೆತ್ತಿ ಹಿಡಿಯಬಲ್ಲವನೆಂದು ತನಗೆ ಮನವರಿಕೆ ಯಾಗಿದ್ದುದರಿಂದ ದಳಪತಿ ಅವನನ್ನು ಮಧ್ಯಸ್ಥಿಕೆಗಾಗಿ ಆರಿಸಿಕೊಂಡಿದ್ದನು. ಪೆತ್ರೀತ್‍ಸ್ಕಿ ಮತ್ತು ಕೆದ್ರೋವ್‍ರು ವ್ರಾನ್ಸ್ಕಿಯ ಜತೆಯಲ್ಲಿ ಸಲಹೆಗಾರನನ್ನು ಭೇಟಿಮಾಡಿ, ಕ್ಷಮೆ ಯಾಚಿಸಬೇಕೆಂದು ಚರ್ಚೆಯನಂತರ ಅವರು ತೀರ್ಮಾನಿಸಿದರು. ಕುಪಿತ ಪತಿಯನ್ನು ಮೃದುಗೊಳಿಸುವಲ್ಲಿ ವ್ರಾನ್ಸ್ಕಿಯ ಹೆಸರು ಮತ್ತು ಸ್ಥಾನಮಾನಗಳು ಸಾಕಷ್ಟು ಸಹಾಯಕವಾಗುತ್ತವೆಂಬ ಸಂಗತಿ ವ್ರಾನ್ಸ್ಕಿ ದಳಪತಿಯರಿಬ್ಬರಿಗೂ ತಿಳಿದಿತ್ತು. ಈ ಎರಡು ಪ್ರಭಾವಗಳು ಸಾಕಷ್ಟು ಪರಿಣಾಮಕಾರಿಯಾಗಿದ್ದುವು; ಆದರೂ ಅವರ ಪ್ರಯತ್ನಗಳ ಫಲ ಸಂಶಯಾತ್ಮಕವಾಗಿತ್ತು; ಏಕೆಂದರೆ ಕತೆ ಹೇಳುತ್ತಿದ್ದಾಗಲೇ ವ್ರಾನ್ಸ್ಕಿ ಕಾರಣಗಳನ್ನು ವಿವರಿಸಿದ್ದನು.

ಫ್ರೆಂಚ್ ರಂಗಮಂದಿರದಲ್ಲಿ ವ್ರಾನ್ಸ್ಕಿ ದಳಪತಿಯನ್ನು ಆರಾಮಕೋಣೆಯ ಒಂದು ಭಾಗಕ್ಕೆ ಕರೆದೊಯ್ದು, ತನ್ನ ಜಯಾಪಜಯಗಳ ವಿಷಯ ತಿಳಿಸಿದನು. ದೀರ್ಘ ಪರ್ಯಾಲೋಚನೆಯ ನಂತರ ಯಾರಿಗೂ ಶಿಕ್ಷೆ ನೀಡಬಾರದೆಂದು ದಳಪತಿ ನಿರ್ಧರಿಸಿದನು; ತನ್ನ ಆತ್ಮತೃಪ್ತಿಗಾಗಿ ಅವನು ವ್ರಾನ್ಸ್ಕಿಯಿಂದ ಭೇಟಿಯ ವಿವರಗಳನ್ನು ಕೇಳಿ ತಿಳಿದುಕೊಂಡನು. ಸಲಹೆಗಾರ ತುಸುಹೊತ್ತು ತಣ್ಣಗಾಗಿದ್ದು, ವಿವರಗಳು ನೆನಪಿಗೆ ಬಂದಕೂಡಲೇ ಅವನು ಹೇಗೆ ಮತ್ತೆ ರೇಗುತ್ತಿದ್ದನೆಂಬುದನ್ನು, ಶಾಂತಿ ಸಂಧಾನ ಜಯಪ್ರದವಾಗುತ್ತದೆನ್ನುವಷ್ಟರಲ್ಲಿ, ಪೆತ್ರೀತ್‍ಸ್ಕಿಯನ್ನು ಅವನ ಮುಂದೆ ತಳ್ಳಿ, ಆದಷ್ಟು ಬೇಗ ತಾನು ಜಾರಿಕೊಳ್ಳುತ್ತಿದ್ದ ಬಗೆಯನ್ನು ವ್ರಾನ್ಸ್ಕಿ ವಿವರಿಸಿದಾಗ ದಳಪತಿ ತನ್ನ ನಗುವನ್ನು ತಡೆಯಲಾಗಲಿಲ್ಲ.

'ಅಸಹ್ಯವಾದ ಘಟನೆ, ಆದರೆ ವಿಪರೀತಕ್ಕಿಟ್ಟುಕೊಂಡ ತಮಾಷೆ. ಆ ದೊಡ್ಡ ಮನುಷ್ಯನೊಡನೆ ದ್ವಂದ್ವಯುದ್ಧ ನಡಸುವ ಕೆದ್ರೋವ್‍ನನ್ನು ಕಲ್ಪಿಸಿಕೊ! ಕಡಜದ ಹಾಗೆ ಹುಚ್ಚಾದ ಎಂದು ನೀವು ಹೇಳುತ್ತೀರಲ್ಲವೆ?' ಎಂದು ದಳಪತಿ ಮತ್ತೆ ಹೊಟ್ಟೆ ಬಿರಿಯೆ ನಗುತ್ತ ಕೇಳಿದನು. 'ಆದರೆ ಈ ರಾತ್ರಿ ಕ್ಲೇರ್‍ಳ ವಿಷಯ ನೀವೇನು ಯೋಚಿಸಿ ದ್ದೀರಿ?' ಎಂದವನು ನೂತನ ಫ್ರೆಂಚ್ ಅಭಿನೇತ್ರಿಯ ವಿಷಯ ಪ್ರಸ್ತಾಪಿಸುತ್ತ ಪ್ರಶ್ನಿಸಿದನು. 'ಅವಳು ಅದ್ಭುತ ಅಭಿನೇತ್ರಿಯಲ್ಲವೆ? ಅವಳ ಅಭಿನಯ ಒಂದೇ ರೀತಿಯಾಗಿರುವುದಿಲ್ಲ; ಪ್ರತಿ ರಾತ್ರಿ ನೋಡಿದರೂ ಅದು ಭಿನ್ನವಾಗಿರುತ್ತದೆ. ಅದು ಫ್ರೆಂಚ್ ನಟಿಯಿಂದ ಮಾತ್ರ ಸಾಧ್ಯ.'

೬

ಕೊನೆಯ ಅಂಕ ಮುಕ್ತಾಯಗೊಳ್ಳುವ ಮುಂಚೆಯೇ ರಾಜಕುಮಾರಿ ಬೇಟ್ಸಿ ರಂಗಮಂದಿರದಿಂದ ಕಾಲ್ತೆಗೆದಳು. ಅವಳು ತನ್ನ ಒಳಗೋಣೆಯನ್ನು ಪ್ರವೇಶಿಸಿ, ತನ್ನ ಉದ್ದನೆಯ ಕಾಂತಿಹೀನ ಮುಖದ ಮೇಲೆ ಪುಡಿಯುದುರಿಸಿ, ಉಜ್ಜಿಕೊಂಡು, ತಲೆಗೂದಲನ್ನು ಸರಿಪಡಿಸಿಕೊಂಡು, ದೊಡ್ಡ ದಿವಾನಖಾನೆಗೆ ಬಂದು ಚಹ ಅಣಿಗೊಳಿಸುವಂತೆ ಸೇವಕನಿಗೆ ಆಜ್ಞಾಪಿಸುವಷ್ಟರಲ್ಲಿ, ಒಂದಾದ ಮೇಲೊಂದು ಗಾಡಿಗಳು ಬರಲಾರಂಭಿಸಿದುವು. ಅವಳ ಭವ್ಯ ಸೌಧವಿದ್ದದ್ದು ಬಲ್ಷಾಯ ಮರ್ಸ್ಕಯಾದಲ್ಲಿ. ವಿಶಾಲವಾದ ಪ್ರವೇಶದ್ವಾರದಲ್ಲಿ ಅತಿಥಿಗಳು ಬಂದಿಳಿದರು. ಗಾಜಿನ ಬಾಗಿಲುಗಳ ಹಿಂದಿನಿಂದ ದಾರಿಹೋಕರ ತಿಳಿವಳಿಕೆಗಾಗಿ ವರ್ತಮಾನ ಪತ್ರಿಕೆಗಳನ್ನೋದುವುದರಲ್ಲಿ ಕಾಲ ಕಳೆಯುತ್ತಿದ್ದ ದಢೂತಿ ದ್ವಾರಪಾಲಕನೊಬ್ಬ ಸದ್ದಿಲ್ಲದಂತೆ ಹೆಬ್ಬಾಗಿಲನ್ನು ತೆರೆದು, ಅತಿಥಿಗಳಿಗೆ ದಾರಿಮಾಡಿಕೊಡುವ ಸಲುವಾಗಿ ಪಕ್ಕಕ್ಕೆ ಸರಿದನು.

ಸರಿ ಸುಮಾರು ಅದೇ ಸಮಯದಲ್ಲಿ ಪುನಶ್ಚೇತನಗೊಂಡ ಮುಖದ, ಸರಿಪಡಿಸಿಕೊಂಡ ಕೂದಲಿನ ಯಜಮಾನಿ ಒಂದು ಬಾಗಿಲ ಮೂಲಕ ಒಳಗೆ ಪ್ರವೇಶಿಸಿದರೆ, ದಿವಾನಖಾನೆಯ ಮತ್ತೊಂದು ಬಾಗಿಲಿಂದ ಅತಿಥಿಗಳು ಒಳಗೆ ಬರುತ್ತಿದ್ದರು. ದಿವಾನಖಾನೆಯ ಗೋಡೆಗಳು ಕಪ್ಪಗಿದ್ದುವು; ನೆಲಕ್ಕೆ ಮಂದವಾದ ಜಮಖಾನೆಗಳನ್ನು ಹಾಸಲಾಗಿತ್ತು; ಬೆಳಕು ಚೆಲ್ಲುತ್ತಿದ್ದ ಮೇಜಿನ ಮೇಲೆ ಬಿಳಿಯ ಬಟ್ಟೆಯನ್ನು ಹೊದಿಸಲಾಗಿತ್ತು; ಅದರ ಮೇಲೊಂದು ಬೆಳ್ಳಿಯ ಟೀಪಾತ್ರೆ ಇತ್ತು; ಮೊಂಬತ್ತಿಯ ಬೆಳಕಿನಲ್ಲಿ ಪಾರದರ್ಶಕ ಚೀನಾ ಪಾತ್ರೆಗಳು ಮಿರುಗುತ್ತಿದ್ದುವು.

ಯಜಮಾನಿ ಟೀ ಪಾತ್ರೆಯ ಬಳಿ ಕುಳಿತುಕೊಂಡು, ಕೈಗವಸುಗಳನ್ನು ತೆಗೆದಳು. ಯಾರಿಗೂ ಕಾಣಿಸಿಕೊಳ್ಳದ ರೀತಿಯಲ್ಲಿ ಓಡಾಡುತ್ತಿದ್ದ ಸೇವಕರ ಸಹಾಯದೊಡನೆ ಅತಿಥಿಗಳು ಕುರ್ಚಿಗಳನ್ನೆಳೆದುಕೊಂಡು ಎರಡೆರಡು ಗುಂಪುಗಳಾಗಿ ಓರಣಿಸಿಕೊಳ್ಳುತ್ತಿದ್ದರು. ಒಂದು ಗುಂಪು ಟೀಪಾತ್ರೆಯ ಬಳಿ ಯಜಮಾನಿಯ ಪಕ್ಕದಲ್ಲಿ ತಳವೂರಿದರೆ, ಮತ್ತೊಂದು ಗುಂಪು ದಿವಾನಖಾನೆಯ ದೂರದ ತುದಿಯಲ್ಲಿ ರಾಯಭಾರಿ ಪತ್ನಿಯ ಸುತ್ತ ನೆರೆಯಿತು. ಚೆಲುವೆ ರಾಯಭಾರಿ ಪತ್ನಿ ಕಪ್ಪನೆಯ ಮೊಕಮಲ್ಲಿನ ಮೇಲಂಗಿ ಧರಿಸಿದ್ದಳು; ಅವಳ ಕಪ್ಪು ಹುಬ್ಬುಗಳು ಮನೋಹರವಾಗಿದ್ದುವು. ಸಾಮಾನ್ಯವಾಗಿ ಎಲ್ಲ ಸಂಭಾಷಣೆಗಳಂತೆ ಎರಡು ಗುಂಪುಗಳ ಸಂಭಾಷಣೆಯೂ ಪ್ರಾರಂಭದಲ್ಲಿ ವಿಷಯಾನ್ವೇಷಣೆಗಾಗಿ ತಡವರಿಸುತ್ತಿತ್ತು. ಹೊಸ ಅತಿಥಿಗಳ ಆಗಮನ, ಶುಭಾಶಯ ವಿನಿಮಯ ಮತ್ತು ಟೀ ನೀಡಿಕೆಗಳಿಂದಾಗಿ ಅದಕ್ಕೆ ಆಗಾಗ್ಗೆ ಅಡಚಣೆಯೊದಗುತ್ತಿತ್ತು.

‘ಅವಳ ಅಭಿನಯ ಅಸಾಧಾರಣವಾದದ್ದು; ಅವಳು ಕೌಲ್‌ಬಾಕ್‌ನ ಶಿಷ್ಯೆಯೆಂಬುದು ಯಾರಿಗಾದರೂ ತಟಕ್ಕನೆ ಹೊಳೆಯದಿರಲಾರದು’ ಎಂದು ರಾಯಭಾರಿ ಪತ್ನಿಯ ಬಳಿಯಿದ್ದ ರಾಜತಂತ್ರಜ್ಞ ನುಡಿದನು. ‘ಅವಳು ಹೇಗೆ ಮೂರ್ಛೆಹೊಂದಿದಳೆಂಬುದನ್ನು ನೀವು ನೋಡಿದಿರಾ?’

‘ಓ, ದಯೆಯಿಟ್ಟು ನೀಲ್ಸನ್ ವಿಷಯವನ್ನೆತ್ತಬೇಡಿ. ಅದರಲ್ಲಿ ಹೊಸದೇನೂ ಇಲ್ಲ’ ಎಂಬ ಮಾತು ದುಂಡು ದುಂಡಾಗಿದ್ದ, ಕೆಂಪು ಮೊಗದ, ಹುಬ್ಬಿಲ್ಲದ, ತಲೆಗಂಟಿಲ್ಲದ,

ಹಳೆಯ ರೇಷ್ಮೆ ವಸ್ತ್ರ ಧರಿಸಿದ್ದ, ಚೆಂಗೂದಲ ಮಹಿಳೆಯೊಬ್ಬಳ ಬಾಯಿಂದ ಹೊರಹೊಮ್ಮಿದುವು. ಅವಳೇ ರಾಜಕುಮಾರಿ ಮ್ಯಾಕಯ. ಮುಚ್ಚುಮರೆಯಿಲ್ಲದ ಒರಟು ಮಾತಿಗೆ ಅವಳು ಹೆಸರುವಾಸಿಯಾಗಿದ್ದಳು. ಅದಕ್ಕಾಗಿ ಅವಳನ್ನು ಭಯಂಕರ ಶಿಶು ಎಂದು ಕರೆಯಲಾಗುತ್ತಿತ್ತು. ರಾಜಕುಮಾರಿ ಮ್ಯಾಕಯ ಎರಡು ಗುಂಪುಗಳ ನಡುವೆ, ಆಯಕಟ್ಟಿನ ಜಾಗದಲ್ಲಿ ಕುಳಿತಿದ್ದಳು; ಅವಳು ಎರಡು ಕಡೆಯ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದಳು. ಆ ಈ ಸಂಭಾಷಣೆಗಳೆರಡರಲ್ಲಿಯೂ ಅವಳು ಒಮ್ಮೊಮ್ಮೆ ಭಾಗವಹಿಸುತ್ತಿದ್ದಳು. 'ಈ ದಿನ ಕೌಲ್‌ಬಾಕ್ ಬಗ್ಗೆ ಮೂವರೂ ಏಕಪ್ರಕಾರವಾಗಿ ಟೀಕೆಮಾಡಿದ್ದಾರೆ. ನಿಜಕ್ಕೂ ಅದು ಬಹಳವಾಯಿತು! ಆ ಟೀಕೆ ಅವರಿಗೇಕಿಷ್ಟು ಇಷ್ಟವಾಯಿತೋ ನಾ ಬೇರೆ ಕಾಣೆ.'

ಅವಳ ಮಾತು ಆ ವಿಷಯಕ್ಕೆ ವಿರಾಮ ಹಾಕಿದುವು; ಆದ್ದರಿಂದ ಅವರು ಹೊಸ ವಿಷಯವನ್ನೆತ್ತಿಕೊಳ್ಳಬೇಕಾಗಿತ್ತು.

'ಮಾತ್ಸರ್ಯ ದೂರವೂ ವಿನೋದಾತ್ಮಕವೂ ಆದ ವಿಷಯವಿದ್ದರೆ ಹೇಳಿ' ಎಂದು ರಾಯಭಾರಿ ಪತ್ನಿ ನುಡಿದಳು. ಇಂಗ್ಲಿಷಿನವರು 'ಚಿಲ್ಲರೆ ಮಾತು' ಎಂದು ಕರೆಯುವ ಮಧುರವಾದ ಗೊಡ್ಡುಹರಟೆಯಲ್ಲವಳು ಪ್ರವೀಣೆ. ಏನು ಹೇಳಬೇಕೊ ತಿಳಿಯದ ರಾಜತಂತ್ರಜ್ಞನ ಕಡೆಗೆ ತಿರುಗಿಕೊಂಡು ಅವಳು ಆ ಮಾತು ಆಡಿದ್ದಳು.

'ಅದು ಕಷ್ಟದ ವಿಷಯವೆಂದೂ, ಮಾತ್ಸರ್ಯ ದೂರವಾದದ್ದು ವಿನೋದಾತ್ಮಕವಾಗಿರುವುದಿಲ್ಲವೆಂದೂ ಜನ ಹೇಳುತ್ತಾರೆ' ಎಂದವನು ಮಂದಹಾಸದೊಡನೆ ಪ್ರಾರಂಭಿಸಿದನು. 'ಆದರೆ ನಾನು ಪ್ರಯತ್ನಿಸುತ್ತೇನೆ. ನನಗೊಂದು ವಿಷಯ ಹುಡುಕಿ ಕೊಡಿ. ಎಲ್ಲವೂ ವಿಷಯವನ್ನವಲಂಬಿಸಿದೆ. ಒಮ್ಮೆ ವಿಷಯವೊಂದು ದೊರೆತದ್ದಾದರೆ, ಅದನ್ನು ಎಷ್ಟು ಪ್ರಮಾಣದಲ್ಲಾದರೂ ನೇಯಬಹುದು. ಕಳೆದ ಶತಮಾನದ ಸುಪ್ರಸಿದ್ಧ ವಾಗ್ಮಿಗಳ ವಾಕ್ಕೌಶಲ ಈ ದಿನಗಳಲ್ಲಿ ನಡೆಯುವುದಿಲ್ಲವೆಂದು ನನಗೆ ಆಗಾಗ್ಗೆ ತೋರುತ್ತದೆ. ಬುದ್ಧಿವಂತಿಕೆಯ ವಿಷಯಗಳೆಲ್ಲವೂ ಹಳಸಿಕೊಂಡಿವೆ.'

'ಜಾಣತನವೆಲ್ಲವೂ ಖರ್ಚಾಗಿದೆ' ಎಂದು ರಾಯಭಾರಿಯ ಮಡದಿ ನಗುತ್ತ, ಮಧ್ಯೆ ಬಾಯಿ ಹಾಕಿದಳು.

ಸಂಭಾಷಣೆಯ ಪ್ರಾರಂಭ ಆಕರ್ಷಕವಾಗಿತ್ತು; ಅದು ಆಕರ್ಷಕವಾಗಿದ್ದುದರಿಂದಲೇ ಬೇಗ ಕೊನೆಮುಟ್ಟಿತು. ಅದು ಮುಂದುವರಿದಿದ್ದರೆ ಕೆಟ್ಟದಾಗುತ್ತಿತ್ತು; ಖಂಡಿತವಾಗಿಯೂ ಅಪನಿಂದೆಯೆಂದು ಕರೆಯಬಹುದಾದ ಸಂಭಾಷಣೆಯ ಜಾತಿಯ ಕಡೆಗೆ ಅದು ಜಾರುತ್ತಿತ್ತು.

'ಹದಿನೈದನೆಯ ಲೂಯಿಯ ಗುಣಸ್ವಭಾವಗಳು ತುಷ್ಕೆವಿಚ್‌ನಲ್ಲಿ ಕಾಣಿಸುತ್ತವಲ್ಲವೆ?' ಎಂದವನು ಮೇಜಿನ ಬಳಿ ನಿಂತಿದ್ದ ಚೆಂಗೂದಲ ಸುಂದರ ಯುವಕನ ಕಡೆಗೆ ಕಣ್ಣು ಹೊರಳಿಸುತ್ತ ನುಡಿದನು.

'ನಿಜ, ನಿಜ. ಅವನು ಈ ದಿವಾನಖಾನೆಯ ಅಂದಚೆಂದಗಳಿಗೆ ತಕ್ಕಂತಿದ್ದಾನೆ. ಆದ್ದರಿಂದಲೇ ಅವನನ್ನಿಲ್ಲಿ ಸದಾ ಕಾಣಬಹುದು.'

ಈ ದಿವಾನಖಾನೆಯಲ್ಲಿ ನೇರವಾಗಿ ಎತ್ತಲಾಗದ ಕೆಲವು ಅಪ್ರತ್ಯಕ್ಷ ಸೂಚನೆಗಳು, ಎಂದರೆ ತುಷ್ಕೆವಿಚ್ ಮತ್ತು ತಮ್ಮ ಯಜಮಾನಿ ರಾಜಕುಮಾರಿ ಬೇಟ್ಸಿಯರ ನಡುವಣ

ಬಾಂಧವ್ಯಗಳು ಸಂಭಾಷಣೆಯ ವಿಷಯವಾಗಿರಲಾಗಿ, ಸಂಭಾಷಣೆ ನಿಲ್ಲದೆ ಮುಂದುವರಿಯಿತು.

ಏತನ್ಮಧ್ಯೆ ಟೀ ಪಾತ್ರೆಯ ಬಳಿಯ ಸಂಭಾಷಣೆ ಮೂರು ಅನಿವಾರ್ಯ ವಿಷಯಗಳ ನಡುವೆ ಅಲೆದಾಡುತ್ತಿತ್ತು; ಇತ್ತೀಚಿನ ಬಿಸಿಬಿಸಿ ಸುದ್ದಿ, ರಂಗಮಂದಿರ, ಮತ್ತು ನೆರೆಹೊರೆಯವರ ಟೀಕೆ. ಕೊನೆಗದು ಕೊಟ್ಟಕೊನೆಯ ವಿಷಯಕ್ಕೆ ಸಂಬಂಧಿಸಿದ ಕುಹಕ ನಿಂದೆಯಲ್ಲಿ ನೆಲೆಯೂರಿತು.

‘ಮದಾಂ ಮಾಲ್ತಿಶ್ಚೇವ–ಮಗಳಲ್ಲ, ತಾಯಿಯೆಂಬುದು ನೆನಪಿನಲ್ಲಿರಲಿ ಗುಲಾಬಿ ರಂಗಿನ ಪೋಷಾಕು ಪಡೆದಿದ್ದಾಳೆಂಬುದನ್ನು ನೀವು ಕೇಳಿದ್ದೀರಾ?’

‘ನಿಜಕ್ಕೂ ಇರಲಾರದು! ಓ, ಅದು ಅತ್ಯಮೂಲ್ಯವಾದದ್ದು!’

‘ಅವಳಂಥ ವಿವೇಕವುಳ್ಳ ಹೆಂಗಸು—ಅವಳನ್ನು ಬೆಪ್ಪುತಕ್ಕಡಿ ಎನ್ನಲಾಗದು—ಎಷ್ಟು ಹಾಸ್ಯಾಸ್ಪದಳಾಗಿ ತೋರಿಸಿಕೊಳ್ಳುತ್ತಾಳೆನ್ನುವುದೇ ಅಚ್ಚರಿಯ ಸಂಗತಿ!’

ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಆ ಬಡಪ್ರಾಣಿ ಮದಾಂ ಮಾಲ್ತಿಶ್ಚೇವಳ ಅಣಕನಿಂದೆಗಳಲ್ಲಿ ಪಾಲ್ಗೊಂಡರು; ಹೊಸದಾಗಿ ಹೊತ್ತಿಸಿದ ಸೌದೆಕಂತೆಯಂತೆ ಮಾತು ಉಲ್ಲಾಸದಿಂದ ಚಟಪಟಗುಟ್ಟಿತು.

ಕ್ಲಬ್ಬಿಗೆ ಹೋಗುವ ಮುನ್ನ ತನ್ನ ಹೆಂಡತಿಯ ಅತಿಥಿಗಳನ್ನು ಮಾತಾಡಿಸುವ ಸಲುವಾಗಿ ರಾಜಕುಮಾರಿ ಬೇತ್ಸಿಯ ಗಂಡ ದಿವಾನಖಾನೆಯೊಳಗೆ ಬಂದನು. ಅವನೊಬ್ಬ ಸತ್ಸ್ವಭಾವದ ದಢೂತಿ ಮನುಷ್ಯ; ಉತ್ಸಾಹೀ ಕೆತ್ತನೆವಸ್ತು ಸಂಗ್ರಾಹಕ. ಅವನು ದಪ್ಪನೆಯ ಜಮಖಾನದ ಮೇಲೆ ನಿಶ್ಶಬ್ದವಾಗಿ ನಡೆದು, ರಾಜಕುಮಾರಿ ಮ್ಯಾಕಯಳನ್ನು ಸಮೀಪಿಸಿದನು.

‘ನೀಲ್ಸನ್ ನಿಮಗೆ ತುಂಬ ಹಿಡಿಸಿರಬೇಕಲ್ಲವೆ?’ ಎಂದವನು ಅವಳನ್ನು ಕೇಳಿದನು.

‘ಮಿತ್ರರೆ, ನೀವು ಈ ರೀತಿ ಸದ್ದಿಲ್ಲದಂತೆ ಒಬ್ಬ ವ್ಯಕ್ತಿಯ ಬಳಿ ಕದ್ದು ಬರಬಾರದು ನನಗೆಷ್ಟು ಭಯವಾಯಿತು, ಗೊತ್ತೆ?’ ಎಂದವಳು ನುಡಿದಳು. ‘ಗೀತನಾಟಕದ ಬಗ್ಗೆ ನೀವು ನನ್ನೊಡನೆ ಮಾತಾಡಕೂಡದೆಂದು ವಿನಂತಿಸಿಕೊಳ್ಳುತ್ತೇನೆ. ಸಂಗೀತದ ಬಗ್ಗೆ ನಿಮಗೇನೂ ಅರ್ಥವಾಗದು. ನಾನು ನಿಮ್ಮ ಕ್ಷೇತ್ರಕ್ಕಿಳಿದು, ಮೆಜೊಲಿಕ ಇತಾಲಿಯಾ ಮಣ್ಣಿನ ಪಾತ್ರೆಗಳು ಮತ್ತು ಕೆತ್ತನೆ ಚಿತ್ರಗಳ ಬಗ್ಗೆ ಮಾತಾಡುವುದೆ ಮೇಲು. ಕೌತುಕ ವಸ್ತುಗಳ ಅಂಗಡಿಯಲ್ಲಿ ನೀವು ಹೊಸದಾಗಿ ಕೊಂಡುತಂದಿರುವ ವಸ್ತು ಯಾವುದು?’

‘ನಾನದನ್ನು ನಿಮಗೆ ತೋರಿಸಬೇಕೇನು? ಆದರೆ ಅಂಥ ಅಮೂಲ್ಯ ವಸ್ತುಗಳು ನಿಮಗರ್ಥವಾಗುವುದಿಲ್ಲ.’

‘ನನಗವನ್ನು ತೋರಿಸಿ. ನಾನವರಿಂದ—ಅವರ ಹೆಸರೇನು?—ಆ ಬ್ಯಾಂಕಿನವರಿಂದ ಅವುಗಳ ಬಗ್ಗೆ ಕಲಿತುಕೊಳ್ಳುತ್ತಿದ್ದೇನೆ. ಅವರ ಬಳಿ ಅತ್ಯುತ್ಕೃಷ್ಟವಾದ ಕೆತ್ತನೆ ವಸ್ತುಗಳಿವೆ. ಅವರವನ್ನು ನಮಗೆ ತೋರಿಸಿದರು.’

‘ಏನು, ನೀವು ಷೂಡ್‌ಬರ್ಗ್‌ರ ಮನೆಗೆ ಹೋಗಿದ್ದಿರಾ?’ ಎಂದು ಟೀ ಪಾತ್ರೆಯ ಹಿಂದಿನಿಂದ ಯಜಮಾನಿ ಪ್ರಶ್ನಿಸಿದಳು.

'ನಿಜ, ಮಿತ್ರೆ. ನನ್ನನ್ನೂ ನನ್ನ ಗಂಡನನ್ನೂ ಅವರು ಊಟಕ್ಕೆ ಕರೆದರು. ಆ ಊಟದಲ್ಲಿ ಬಡಿಸಿದ ಗೊಜ್ಜಿಗೆ ಒಂದುಸಾವಿರ ರೂಬಲ್ ಖರ್ಚಾಯಿತೆಂದು ಕೇಳಿದೆ' ಎಂದು ರಾಜಕುಮಾರಿ ಮ್ಯಕಯ, ಎಲ್ಲರೂ ತನ್ನ ಮಾತು ಕೇಳಿಸಿಕೊಳ್ಳುತ್ತಿದ್ದರೆಂಬ ಅರಿವುಳ್ಳವಳಾಗಿ, ಗಟ್ಟಿದನಿಯಲ್ಲಿ ನುಡಿದಳು. 'ಎಂತೋ ಏನೋ, ಅದು ಕೆಟ್ಟಗೊಜ್ಜು. ಹಸುರು ಹಸುರಾಗಿತ್ತು. ಅವರ ಮರುಪಯಣದಲ್ಲಿ ನಾನವರಿಗೆ ಎಂಬತ್ತೈದು ಕೊಪೆಕ್ ಬೆಲೆಯ ಗೊಜ್ಜನ್ನು ಬಡಿಸಿದೆ. ಅದು ಅವರಿಗೆ ತುಂಬ ತೃಪ್ತಿಯನ್ನು ನೀಡಿತು. ಒಂದು ಸಾವಿರ ರೂಬಲ್ ಬೆಲೆಯ ಗೊಜ್ಜು ಬಡಿಸುವ ಶಕ್ತಿ ನನಗಿಲ್ಲ.'

'ಯಾರೂ ಅವಳಂತಿಲ್ಲ!' ಎಂದು ಯಜಮಾನಿ ಗೊಣಗಿದಳು.

'ಅಸಾಧಾರಣ ವ್ಯಕ್ತಿ!' ಎಂದು ಯಾರೋ ತನ್ನ ಅಭಿಪ್ರಾಯ ಸೂಚಿಸಿದನು.

ರಾಜಕುಮಾರಿ ಮ್ಯಕಯಳ ಟೀಕೆಗಳಿಂದ ಉದ್ಭವವಾದ ಪರಿಣಾಮ ಯಾವಾಗಲೂ ಒಂದೆಯಾಗಿರುತ್ತಿತ್ತು. ಸರಳಾಭಿವ್ಯಕ್ತಿಯೇ, ಸರ್ವಗ್ರಾಹ್ಯವಾಗುವಂತೆ ಹೇಳುವುದೇ ಆ ಪರಿಣಾಮದ ರಹಸ್ಯವಾಗಿತ್ತು; ಆದರೆ ಕೆಲವೊಮ್ಮೆ ಅವಳ ಮಾತು ಅಸಂಬದ್ಧವಾಗಿರುತ್ತಿತ್ತು. ಅವಳು ವ್ಯವಹರಿಸುತ್ತಿದ್ದ ಸಮಾಜದಲ್ಲಿ, ಹರಿತವಾದ ಚತುರೋಕ್ತಿಗಳು ಎಂಥ ಪರಿಣಾಮವನ್ನುಂಟುಮಾಡುತ್ತಿದ್ದುವೋ ಅಂಥವೇ ಪರಿಣಾಮ ಅವಳ ಟೀಕೆಗಳಿಂದ ಪ್ರಾಪ್ತವಾಗುತ್ತಿತ್ತು. ಅಂಥ ಪರಿಣಾಮ ಏಕೆ ಸಂಭವಿಸುತ್ತಿತ್ತೆಂಬುದು ರಾಜಕುಮಾರಿ ಮ್ಯಕಯಳಿಗೆ ಅರ್ಥವಾಗುತ್ತಿರಲಿಲ್ಲ. ಆದರೆ ಅಂಥ ಪರಿಣಾಮ ಸಂಭವಿಸುತ್ತಿತ್ತೆಂಬುದನ್ನು ಮಾತ್ರ ಅವಳು ಬಲ್ಲವಳಾಗಿದ್ದಳು. ಅದರ ಪ್ರಯೋಜನವನ್ನಂತು ಅವಳು ಪಡೆದಳು.

ರಾಜಕುಮಾರಿ ಮ್ಯಕಯಳ ಮಾತನ್ನು ಯಾರೂ ಕೇಳಿಸಿಕೊಳ್ಳದೆ, ರಾಯಭಾರಿ ಮಡದಿ ಬಳಿಯ ಸಂಭಾಷಣೆ ನಿಂತು ಹೋದದ್ದರಿಂದ, ಯಜಮಾನಿ ರಾಯಭಾರಿ ಮಡದಿಯ ಕಡೆಗೆ ತಿರುಗಿಕೊಂಡು 'ನಿಮಗೆ ಟೀ ಬೇಕಿಲ್ಲವೇನು? ನೀವು ನಮ್ಮೊಡನೆ ಸೇರಿಕೊಳ್ಳಬಾರದೆ' ಎಂದು ಹೇಳುತ್ತ, ಎರಡು ಗುಂಪುಗಳನ್ನೂ ಒಟ್ಟುಗೂಡಿಸಲು ಪ್ರಯತ್ನಿಸಿದಳು.

'ಇಲ್ಲ, ನಾವಿದ್ದೆಡೆಯೇ ಸರಿಯಾಗಿದ್ದೇವೆ' ಎಂದು ರಾಯಭಾರಿ ಪತ್ನಿ ಮುಗುಳು ನಗೆ ಚೆಲ್ಲುತ್ತ, ಮುರಿದಿದ್ದ ಸಂಭಾಷಣೆಯ ಸೂತ್ರವನ್ನೆತ್ತಿಕೊಂಡಳು.

'ಅದು ಅತ್ಯಂತ ಹಿತಕರವಾದ ಸಂಭಾಷಣೆಯಾಗಿತ್ತು. ಅವರು ಕರೆನಿನ್ ದಂಪತಿಗಳ ಬಗ್ಗೆ ಮಾತಾಡುತ್ತಿದ್ದರು.

'ಮಾಸ್ಕೊ ಭೇಟಿಯ ನಂತರ ಅನ್ನಾ ತುಂಬ ಬದಲಾಯಿಸಿದ್ದಾಳೆ. ಅವಳ ನಡತೆ ವಿಚಿತ್ರವಾಗಿದೆ' ಎಂದು ಅನ್ನಾಳ ಗೆಳತಿಯೊಬ್ಬಳು ನುಡಿದಳು.

'ಅಲೆಕ್ಸಿವ್ರಾಂಸ್ಕಿಯ ನೆರಳು ಅವಳನ್ನು ಹಿಂಬಾಲಿಸುತ್ತಿರುವುದೇ ಆ ಬದಲಾವಣೆಗೆ ಕಾರಣ' ಎಂದು ರಾಯಭಾರಿಯ ಪತ್ನಿ ನುಡಿದಳು.

'ಅದರಿಂದೇನಾಗುತ್ತದೆ? ತನ್ನ ಛಾಯೆಯಿಂದ ವಂಚಿತನಾದ ವ್ಯಕ್ತಿಗೆ ಸಂಬಂಧಿಸಿದ ವಿಷಯವೇ ಗ್ರಿಮ್ ಕತೆಗಳಲ್ಲೊಂದು. ಇದೋ ಅದೋ!, ಯಾವುದಕ್ಕೋ ಒಂದು ಶಿಕ್ಷೆ.

ಅದು ಶಿಕ್ಷೆಯೇಕಾಗಬೇಕೆಂಬುದು ನನಗರ್ಥವಾಗುವುದಿಲ್ಲ. ತನ್ನನ್ನು ಹಿಂಬಾಲಿಸುವ ನೆರಳಿಲ್ಲದಿರುವಾಗ ಸ್ತ್ರೀಯಾದವಳು ಅಸಮಾಧಾನಗೊಳ್ಳಬೇಕಾದ್ದು ಸರಿಯೆ.'

'ಹೌದು, ಆದರೆ ಯಾವುದಾದರೂ ನೆರಳು ತನ್ನನ್ನು ಹಿಂಬಾಲಿಸಿದ್ದಾದರೆ ಹೆಂಗಸು ಕೊನೆಗೆ ಕಷ್ಟದಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ' ಎಂದು ಅನ್ನಾಳ ಗೆಳತಿ ನುಡಿದಳು.

'ಎಂಥ ಕೆಟ್ಟನಾಲಗೆ!' ಎಂದು ರಾಜಕುಮಾರಿ ಮ್ಯಾಕಯ ಆ ಮಾತುಗಳನ್ನಾಲಿಸಿದ ಕೂಡಲೆ ಪ್ರತಿಕ್ರಿಯೆ ವ್ಯಕ್ತಪಡಿಸಿದಳು. 'ಮದಾಂ ಕರೆನಿನ ಮನೋಹರೆ. ಅವಳ ಗಂಡನನ್ನು ಕಂಡರೆ ನನಗಾಗದು, ನಾನವಳನ್ನು ಬಹುವಾಗಿ ಪ್ರೀತಿಸುತ್ತೇನೆ.'

'ಅವಳ ಗಂಡನನ್ನೇಕೆ ನೀವು ದ್ವೇಷಿಸುತ್ತೀರಿ? ಅವನೆಂಥ ತಾಜಾ ಮನುಷ್ಯ ಗೊತ್ತೆ?' ಎಂದು ರಾಯಭಾರಿ ಪತ್ನಿ ಮಾಕರಿಸಿದಳು. 'ಯೂರೋಪಿನಲ್ಲಿ ಅವರಿಗೆಣೆಯಾದ ಮುತ್ಸದ್ದಿಗಳು ಬಹಳ ಜನರಿಲ್ಲವೆಂದು ನನ್ನ ಗಂಡ ಹೇಳುತ್ತಾರೆ.'

'ನನ್ನ ಗಂಡ ಹೇಳುವುದೂ ಅದೇ, ಆದರೆ ನಾನವನನ್ನು ನಂಬಲಾರೆ' ಎಂದು ರಾಜಕುಮಾರಿ ಮ್ಯಾಕಯು ನುಡಿದಳು. 'ನಾವೇ ಸ್ವಸ್ವರೂಪದಲ್ಲಿ ನೋಡುವಂಥ ವಿಷಯಗಳನ್ನು ಕುರಿತು ನಮ್ಮ ಗಂಡಂದಿರು ನಮಗೇನನ್ನೂ ಹೇಳದಿದ್ದರೆ ಮೇಲು. ನಾವೇ ಅವುಗಳನ್ನು ವಾಸ್ತವಿಕ ದೃಷ್ಟಿಯಿಂದ ನೋಡಬಹುದು. ಅಲೆಕ್ಸಿ ಅಲೆಕ್ಸಾಂದ್ರೊವಿಚ್ ಕರೆನಿನ್‌ನನ್ನ ಮಟ್ಟಿಗೆ ಮೂರ್ಖನೆಂಬುದಂತು ನಿಜ. ನಾನು ಆ ವಿಷಯವನ್ನು ಕುರಿತು ಮೆಲುದನಿಯಲ್ಲಿ ಹೇಳಬಹುದು. ಆದರೆ ನಾನದನ್ನು ಕುರಿತು ಹೇಳುವಾಗ, ಎಲ್ಲವೂ ಸ್ಪಷ್ಟವಾಗುವುದಿಲ್ಲವೆ? ಅವರು ವಿವೇಕಿಯೆಂದು ಮೊದಲು ಜನ ನನಗೆ ಹೇಳಿದಾಗ, ಏಕೆ ಹಾಗಿರಬೇಕೆಂದು ತಿಳಿಯಲು, ಅವನ ಆ ಶಕ್ತಿಯನ್ನು ಪರೀಕ್ಷಿಸಲು ನಾನು ಪ್ರಯತ್ನಿಸಿದೆ; ಅವರು ವಿವೇಕಿಯಲ್ಲವೆಂದು ನನಗೆ ಮನವರಿಕೆಯಾದಾಗ, ನಾನೇ ಮೂರ್ಖಳಿರಬೇಕೆಂದು ನಿಶ್ಚಯಿಸಿಕೊಂಡೆ. ಆದರೆ ಅವರು ಮೂರ್ಖರೆಂದು ನೇರವಾಗಿ, ಪಿಸುಮಾತಿನಲ್ಲಿ ಹೇಳಿದಾಗ, ಎಲ್ಲವನ್ನು ಸ್ಪಷ್ಟಪಡಿಸಿದಂತಾಗಲಿಲ್ಲವೆ?'

'ಈ ಸಂಜೆ ನೀನೆಂಥ ಪ್ರತೀಕಾರ ಬುದ್ಧಿಯವಳಾಗಿದ್ದೀಯೆ!'

'ಖಂಡಿತ ಇಲ್ಲ. ನಾನು ಮತ್ತೇನು ಮಾಡುವುದಿತ್ತು? ನಮ್ಮಲ್ಲೊಬ್ಬರಾದರೂ ಮೂರ್ಖರಾಗಬೇಕಿತ್ತು. ಆದರೆ ಯಾರಾದರೂ ಸರಿಯೆ, ತನ್ನನ್ನು ತಾನು ಮೂರ್ಖನೆಂದು ಕರೆದುಕೊಳ್ಳುವುದಿಲ್ಲ.'

'"ಎಷ್ಟೇ ಶ್ರೀಮಂತಿಕೆ ಇದ್ದರೂ ಮನುಷ್ಯನಿಗೆ ತೃಪ್ತಿಯಿರುವುದಿಲ್ಲ, ಆದರೆ ವಿವೇಕವಿದ್ದಲ್ಲಿ ತೃಪ್ತಿಯಿರುತ್ತದೆ" ಎಂಬ ಫ್ರೆಂಚ್ ಸಾಹಿತಿಯೊಬ್ಬನ ಸುಭಾಷಿತವನ್ನು ರಾಜತಂತ್ರಜ್ಞ ಉದ್ಧರಿಸಿದನು.

'ನಿಜ, ನಿಜ' ಎಂದು ರಾಜಕುಮಾರಿ ಮ್ಯಾಕಯು ತಟಕ್ಕನೆ ಅವನ ಕಡೆಗೆ ತಿರುಗಿಕೊಂಡು ನುಡಿದಳು. 'ಆದರೆ ಅನ್ನಾ ನಿಮ್ಮ ಬಿಗಿಹಿಡಿತಕ್ಕೆ ಬೀಳದಂತೆ ನಾನು ಎಚ್ಚರಿಕೆಯಿಂದಿರುತ್ತೇನೆಂಬುದನ್ನು ನೀವು ತಿಳಿಯಬೇಕಾಗಿದೆ. ಅವಳು ಒಳ್ಳೆಯ ಮುದ್ದು ಪ್ರಾಣಿ. ಪ್ರತಿಯೊಬ್ಬರೂ ಅವಳನ್ನು ಪ್ರೀತಿಸುವುದಾದರೆ, ನೆರಳಿನಂತೆ ಅವಳನ್ನು ಹಿಂಬಾಲಿಸುವುದಾದರೆ, ತಪ್ಪು ಅವಳದೆನ್ನುವಿರಾ?'

'ಅದಕ್ಕಾಗಿ ನಾನವಳನ್ನು ದೂಷಿಸುತ್ತಿಲ್ಲ' ಎಂದು ಅನ್ನಾಳ ಗೆಳತಿ ಆತ್ಮಸಮರ್ಥನೆಗಾಗಿ ನುಡಿದಳು.

'ನಮ್ಮ ನೆರಳಿನಂತೆ ನಮ್ಮನ್ನು ಹಿಂಬಾಲಿಸುವವರು ಯಾರೂ ಇಲ್ಲವಾದರೆ, ಇತರರ ಬಗ್ಗೆ ತಪ್ಪು ಕಂಡುಹಿಡಿಯುವ ಹಕ್ಕು ನಮಗಿದೆಯೆಂದು ಹೇಳಲಾರೆ.'

ಅನ್ನಾಳ ಗೆಳತಿಗೆ ಅವಳ ಜಾಗ ತೋರಿಸಿ, ರಾಜಕುಮಾರಿ ಮ್ಯಕಯ ಮೇಲೆದ್ದಳು; ರಾಯಭಾರಿಮಡದಿಯೊಡನೆ ಟೀ ಮೇಜಿನ ಸುತ್ತ ಕುಳಿತಿದ್ದ ಗುಂಪನ್ನು ಸೇರಿದಳು. ಅಲ್ಲಿ ಎಲ್ಲರೂ ಪ್ರಷ್ಯಾದೊರೆಯ ವಿಷಯ ಕುರಿತು ಮಾತಾಡುತ್ತಿದ್ದರು.

'ಯಾವ ವಿಷಯ ಕುರಿತು ನೀವು ಅಷ್ಟು ಗಟ್ಟಿಯಾಗಿ ಹರಟುತ್ತಿದ್ದಿರಿ?' ಎಂದು ಬೀಟ್ಸಿ ಕೇಳಿದಳು.

'ಕರೆನಿನ್‌ರ ವಿಚಾರ. ರಾಜಕುಮಾರಿ ಅಲೆಕ್ಸಿ ಅಲೆಕ್ಸಾಂಡ್ರೊವಿಚ್‌ನ ಬಗ್ಗೆ ತನ್ನ ಅಭಿಪ್ರಾಯ ತಿಳಿಸಿದರು' ಎಂದು ರಾಯಭಾರಿಯ ಮಡದಿ ಉತ್ತರಿಸಿ, ಮುಗುಳು ನಗುತ್ತ ಕುಳಿತುಕೊಂಡಳು.

'ಅಯ್ಯೋ, ನಾವದನ್ನು ಕೇಳಿಸಿಕೊಳ್ಳಲಿಲ್ಲ' ಎಂದು ಯಜಮಾನಿ ನುಡಿಯುತ್ತ, ದ್ವಾರ ಪ್ರದೇಶದ ಬಾಗಿಲ ಕಡೆಗೆ ಕಣ್ಣು ಹಾಯಿಸಿದಳು. 'ಆಹ! ಕೊನೆಗೂ ನೀವು ಬಂದಿರಲ್ಲ!' ಎಂದವಳು ಆದೆ ತಾನೆ ಒಳಗೆ ಪ್ರವೇಶಿಸಿದ ವ್ರಾಂಸ್ಕಿಗೆ ಮಂದಹಾಸದ ಸ್ವಾಗತ ನೀಡಿದಳು.

ಅಲ್ಲಿದ್ದ ಜನರೆಲ್ಲರನ್ನೂ ವ್ರಾಂಸ್ಕಿ ಬಲ್ಲವನಾಗಿದ್ದನು. ಪ್ರತಿನಿತ್ಯ ಅವರನ್ನು ಭೇಟಿ ಮಾಡುತ್ತಿದ್ದನು. ಆದ್ದರಿಂದ ಅದೇತಾನೆ ಅಗಲಿದ ಗೆಳೆಯರನ್ನು ಮತ್ತೆ ಸಲೀಸಾಗಿ ಸೇರಿಕೊಳ್ಳುವ ಸಲುಗೆಯಿಂದ ಅವನು ಪ್ರವೇಶಿಸಿದನು.

'ನಾನೆಲ್ಲಿಂದ ಬಂದೆನೆಂದು ಕೇಳಿದಿರಾ?' ಎಂದವನು ರಾಯಭಾರಿ ಮಡದಿಗೆ ಉತ್ತರ ನೀಡುವ ಭಂಗಿಯಿಂದ ನುಡಿದನು. 'ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ. ಒಪ್ಪಿಕೊಳ್ಳಲೇಬೇಕು. ಇಟಾಲಿಯಾ ಗೀತನಾಟಕ ನೋಡಲು ಹೋಗಿದ್ದೆ. ಪ್ರತ್ಯಕ್ಷಃ ನಾನದನ್ನು ನೂರುಸಲ ನೋಡಿರಬೇಕು. ಅದನ್ನು ನೋಡಿದಾಗಲೆಲ್ಲ ನನ್ನ ಸಂತೋಷ ವರ್ಧಿಸುತ್ತದೆ. ಆನಂದವೋ ಆನಂದ! ನಾನು ನಾಚಿಕೆ ಪಟ್ಟು ಕೊಳ್ಳಬೇಕಾದ್ದು ಸರಿಯೆ. ಆದರೆ ಗಂಭೀರವಾದ ಗೀತನಾಟಕದಲ್ಲಿ ನಾನು ನಿದ್ದೆ ಮಾಡಿಬಿಡುತ್ತೇನೆ. ಇಟಾಲಿಯಾ ಗೀತನಾಟಕದಲ್ಲಾದರೆ ಕೊನೆಯತನಕ ಕುಳಿತಿರುತ್ತೇನೆ; ಅದರ ಸವಿಯನ್ನನುಭವಿಸುತ್ತೇನೆ. ಉದಾಹರಣೆಗೆ, ಈ ರಾತ್ರಿ....'

ಅವನು ಫ್ರೆಂಚ್ ಅಭಿನೇತ್ರಿಯ ಹೆಸರನ್ನೆತ್ತಿಕೊಂಡನು; ಅವಳ ಬಗ್ಗೆ ಮಾತಾಡಲನುವಾದನು. ಆದರೆ ಅಷ್ಟರಲ್ಲಿ ರಾಯಭಾರಿ ಮಡದಿ ಭಯವನ್ನು ನಟಿಸುತ್ತ, ಅವನ ಮಾತನ್ನು ತಡೆಗಟ್ಟಿದಳು.

'ದಯಮಾಡಿಟ್ಟು ಆ ಭಯಂಕರ ವಿಷಯವನ್ನು ಪ್ರಸ್ತಾಪಿಸಬೇಡಿ.'

'ಸರಿಸರಿ. ಗಾಬರಿ ಹುಟ್ಟಿಸುವ ಆ ಸಂಗತಿ ನಿಮಗೆಲ್ಲರಿಗೂ ಗೊತ್ತಿರುವುದರಿಂದ, ನಾನದನ್ನು ಕೈಬಿಡುತ್ತೇನೆ.'

'ಗಂಭೀರವಾದ ಗೀತನಾಟಕದಂತೆ ಅದೇ ಸರಿಯೆಂದು ಒಪ್ಪಿಕೊಳ್ಳುವದಾದರೆ ಎಲ್ಲರೂ ಅಲ್ಲಿಗೆ ಹೋಗಬಹುದು' ಎಂದು ರಾಜಕುಮಾರಿ ಮ್ಯಕಯ ನುಡಿದಳು.

೭

ಬಾಗಿಲಲ್ಲಿ ಹೆಜ್ಜೆ ಸದ್ದು ಕೇಳಿಸಿದುವು. ಬಂದವಳು ಮಾದಾಂ ಕರೆನಿನ ಎಂದು ತಿಳಿದ ರಾಜಕುಮಾರಿ ಬೇತ್ಸಿ ವ್ರಾಂಸ್ಕಿಯ ಕಡೆಗೆ ಕಣ್ಣು ಮಿಟುಕಿಸಿದಳು. ಬಾಗಿಲು ಕಡೆಗೆ ನೋಡಿದಾಗ, ಅವನ ಮುಖದ ಮೇಲೆ ನೂತನ ರಾಗಭಾವ ಸಂಚರಿಸಿತು. ಒಳಗೆ ಬಂದ ಮಹಿಳೆಯನ್ನು ತೀವ್ರಾಸಕ್ತಿಯಿಂದ, ಹರ್ಷೋದ್ರೇಕದಿಂದ, ಅಂತೆಯೇ ದೈನ್ಯದಿಂದ ನಿಟ್ಟಿಸುತ್ತಿದ್ದಂತೆ, ಅವನು ನಿಧಾನವಾಗಿ ಮೇಲೆದ್ದನು. ವಾಡಿಕೆಯಂತೆ ಅವಳ ಶರೀರಭಂಗಿ ನೆಟ್ಟಗಿತ್ತು; ಎಡಕ್ಕಾಗಲಿ ಬಲಕ್ಕಾಗಲಿ ಅವಳು ಕಣ್ಣು ಮಿಟುಕಿಸುತ್ತಿರಲಿಲ್ಲ; ಅವಳ ಗತಿ ನಿಧಾನವಾಗಿತ್ತು; ನಿಶ್ಚಲವಾಗಿತ್ತು; ಆಧುನಿಕ ಮಹಿಳೆಯ ಗತಿಯು ಗತ್ತಿನಿಂದ ವಿಭಿನ್ನವಾಗಿತ್ತು; ಅವಳು ಯಜಮಾನಿಯ ಬಳಿ ಬಂದು, ಅವಳ ಕೈಯದುಮಿ, ಮುಗುಳುನಗೆ ಬೀರಿದಳು; ಅದೇ ಮುಗುಳುನಗೆಯಿಂದವಳು ವ್ರಾಂಸ್ಕಿಯ ಕಡೆಗೆ ಕಣ್ಣು ಹಾಯಿಸಿದಳು. ಅವನು ನತಶಿರನಾಗಿ, ಅವಳಿಗೊಂದು ಕುರ್ಚಿಯನ್ನು ಸರಿಸಿದನು. ತಲೆಯೊಲೆತದಿಂದಲೇ ತನ್ನ ಕೃತಜ್ಞತೆಯನ್ನು ಸೂಚಿಸುತ್ತಿದ್ದಂತೆ ಅವಳ ಮುಖ ರಂಗೇರಿತು; ಅವಳ ಹುಬ್ಬು ಗಂಟಿಕ್ಕಿತು. ಮರುಕ್ಷಣದಲ್ಲಿಯೇ ಅವಳು ತನ್ನ ಗೆಳತಿಯರ ಕಡೆಗೆ ತಲೆಯಲ್ಲಾಡಿಸಿ, ತನ್ನ ಕಡೆಗೆ ಚಾಚಿದ ಕೈಗಳನ್ನದುಮಿದಳು. ಯಜಮಾನಿಯ ಕಡೆಗೆ ತಿರುಗಿಕೊಂಡು 'ನಾನು ಕೌಂಟೆಸ್ ಲಿಡಿಯಾರ ಮನೆಗೆ ಹೋಗಿದ್ದೆ. ಅಲ್ಲಿಂದ ಬೇಗ ಬರಬಹುದೆಂದುಕೊಂಡಿದ್ದೆ. ಆದರೆ ಹೆಚ್ಚು ಹೊತ್ತು ಕೂತಿರಬೇಕಾಯಿತು. ಸರ್‌ಜಾನ್ ಅಲ್ಲಿದ್ದರು. ಅವರು ತುಂಬ ಸ್ವಾರಸ್ಯವಾಗಿ ಕಂಡರು' ಎಂದವಳು ನುಡಿದಳು.

'ಓ, ಆ ಪಾದ್ರಿಯೆ?'

'ಹೌದು, ಅವರು ಇಂಡಿಯಾದ ಬಗ್ಗೆ ಅದ್ಭುತವಾದ ಕತೆಗಳನ್ನು ನಿರೂಪಿಸಿದರು.'

ಅವಳ ಪ್ರವೇಶದಿಂದ ಕಡಿದುಹೋಗಿದ್ದ ಸಂಭಾಷಣೆ ಊದಿದ ಉರಿಯಂತೆ ಭಗ್ಗನೆ ಪ್ರಜ್ವಲಿಸಿತು.

'ಸರ್ ಜಾನ್! ಓ, ಹೌದು–ಸರ್ ಜಾನ್. ನಾನವರನ್ನು ಭೇಟಿಮಾಡಿದ್ದೇನೆ. ಅವರು ಸ್ವಾರಸ್ಯವಾಗಿ ಮಾತಾಡುತ್ತಾರೆ. ಮದಾಂ ವ್ಲಾಸೀವ ಖಂಡಿತವಾಗಿಯೂ ಅವರನ್ನು ಪ್ರೀತಿಸುತ್ತಾಳೆ.'

'ಅವಳ ಕಿರಿಯ ಮಗಳು ತೊಪ್ರೊವ್‌ನನ್ನು ಮದುವೆಯಾಗುತ್ತಾಳಂತೆ, ನಿಜವೆ?'

'ಹೌದು, ಮದುವೆ ನಿಶ್ಚಿತವಾಗಿದೆಯೆಂದು ಕೇಳಿದೆ.'

'ಈ ವಿಷಯದಲ್ಲಿ ಅವಳ ತಂದೆತಾಯಿಯರ ಅಭಿಪ್ರಾಯವೇನಿದೆಯೊ ತಿಳಿಯದು. ಅದು ಪ್ರೇಮವಿವಾಹವೆಂದು ಹೇಳುತ್ತಾರೆ.'

'ಪ್ರೇಮವೆ? ಎಂಥ ಓಬಿರಾಯನ ಕಾಲದ ಭಾವನೆ ನಿನ್ನವು! ಈ ಕಾಲದಲ್ಲಿ ಯಾರೇ ಆಗಲಿ, ಪ್ರೇಮದ ಬಗ್ಗೆ ಮಾತಾಡುತ್ತಾರೆಯೆ?' ಎಂದು ರಾಯಭಾರಿ ಪತ್ನಿ ನುಡಿದಳು.

'ಉಪಾಯಾಂತರವಿಲ್ಲ. ಅದೊಂದು ಹಳೆಯಕಾಲದ ಗೊಡ್ಡು ಸಂಪ್ರದಾಯ. ಅದಿನ್ನೂ ಚಾಲ್ತಿಯಲ್ಲಿದೆ' ಎಂದು ವ್ರಾಂಸ್ಕಿ ನಡುವೆ ಬಾಯಿಹಾಕಿದನು.

'ಈ ಸಂಪ್ರದಾಯಕ್ಕಂಟಿಕೊಂಡಿರುವವರ ಪಾಡು ಹೇಳತೀರದು. ನನಗೆ ಗೊತ್ತಿದ್ದಂತೆ ವಿವೇಕದಿಂದಾದ ಮದುವೆಗಳು ಮಾತ್ರ ಸುಖಪ್ರದವಾಗಿರುತ್ತವೆ.'

'ಹೌದು, ಆದರೆ ನೀನು ಮಾನ್ಯಮಾಡದ ಪ್ರೇಮ ತಲೆಹಾಕಿದಾಗ, ವಿವೇಕ ದಿಂದಾದ ಮದುವೆಗಳ ಸುಖ ಧೂಳಿನಂತೆ ಚೆದರಿಹೋಗುತ್ತದೆ' ಎಂದು ವ್ರಾಂಸ್ಕಿ ಸೊಲ್ಲಿಸಿದನು.

'ಓ, ಆದರೆ ಎರಡು ಕಡೆಯವರೂ ಮೊದಲೇ ಸ್ವೇಚ್ಛಾಚಾರದಿಂದ ವರ್ತಿಸಿದ ತರುವಾಯ ನಡೆಯುವ ಮದುವೆಗಳನ್ನು ವಿವೇಕಪೂರ್ವ ವಿವಾಹಗಳೆಂದು ಕರೆಯು ತ್ತೇವೆ. ಪ್ರೇಮವೆಂಬುದು ಕೆಂಜ್ವರ (ದಡಾರ) ದಂತಿದೆ. ಅದು ಬಂದಾಗ ಅನು ಭವಿಸಲೇಬೇಕು; ಅನುಭವಿಸುತ್ತಲೇ ಅದನ್ನು ವಾಸಿಮಾಡಿಕೊಳ್ಳಬೇಕು.'

'ಸಿಡುಬು ಬಂದಾಗ ಚುಚ್ಚು ಲಸಿಕೆಯನ್ನು ಬಳಸುವಂತೆ, ಪ್ರೇಮವನ್ನು ಕೃತ್ರಿಮೋಪಾಯಗಳ ಮೂಲಕ ಪ್ರಚೋದಿಸಬೇಕಾಗಿದೆ.'

'ನಾನು ಚಿಕ್ಕವಳಾಗಿದ್ದಾಗ, ನಮ್ಮ ಚರ್ಚಿನ ಪಾರುಪತ್ಯಗಾರನನ್ನು ಪ್ರೀತಿಸು ತ್ತಿದ್ದೆ' ಎಂದು ರಾಜಕುಮಾರಿ ಮ್ಯಾಕಯ ಮಾತು ತೆಗೆದಳು. 'ಅದರಿಂದ ನನಗೆ ಅನುಕೂಲವಾಯಿತೆಂದು ಹೇಳುವಂತಿಲ್ಲ.'

'ಆದರೆ ತಮಾಷೆ ಒತ್ತಟ್ಟಿಗಿರಲಿ. ನನಗೆ ತಿಳಿದಂತೆ ಪ್ರೇಮದ ರಹಸ್ಯವನ್ನರಿತು ಕೊಳ್ಳುವ ಏಕೈಕ ಮಾರ್ಗವೆಂದರೆ ತಪ್ಪುಮಾಡಿ, ತಿದ್ದಿಕೊಳ್ಳುವುದೆ ಆಗಿದೆ' ಎಂದು ಬೇತ್ಸಿ ನುಡಿದಳು.

'ಮದುವೆಯ ನಂತರವೂ?' ಎಂದು ರಾಯಭಾರಿ ಪತ್ನಿ ತಮಾಷೆ ಮಾಡಿದಳು.

'ತಡವಾದರೂ ತಿದ್ದಿಕೊಳ್ಳುವಲ್ಲಿ ಗುಣವಿದೆ' ಎಂದು ರಾಜತಂತ್ರಜ್ಞ ಇಂಗ್ಲಿಷ್ ಗಾದೆಯನ್ನುಕ್ತಿಸಿದನು.

'ನಿಜ, ನಿಜ' ಎಂದು ಬೇತ್ಸಿ ಆತುರಾತುರವಾಗಿ ಅವನನ್ನು ಬೆಂಬಲಿಸಿದಳು. 'ತಪ್ಪು ಮಾಡುವುದು ಅನಿವಾರ್ಯ. ಆದರೆ ಅವುಗಳನ್ನು ತಿದ್ದಿಕೊಳ್ಳಬೇಕಾದ್ದು ಮನುಷ್ಯನ ಹೆಗ್ಗುಣ. ನಿಮ್ಮ ಅಭಿಪ್ರಾಯವೇನು?' ಎಂದವಳು ಅನ್ನಾಳನ್ನು ಪ್ರಶ್ನಿಸಿ ದಳು. ನಿಶ್ಚಲವಾದ, ಆದರೆ ಅಸ್ಪಷ್ಟ ಮಂದಹಾಸದಿಂದ ಅನ್ನಾ ಮೌನವಾಗಿ ಸಂಭಾಷಣೆಯನ್ನಾಲಿಸುತ್ತಿದ್ದಳು.

'ಎಷ್ಟು ತಲೆಗಳಿವೆಯೋ ಅಷ್ಟೇ ಬುದ್ಧಿಗಳಿವೆ; ಎಷ್ಟು ಹೃದಯಗಳಿವೆಯೋ ಅಷ್ಟು ಬಗೆಯ ಪ್ರೀತಿಗಳಿವೆಯೆಂದು ನನಗನಿಸುತ್ತದೆ' ಎಂದು ಹೇಳುತ್ತಾ ಅನ್ನಾ ಅದೆ ತಾನೆ ಹೊರಗೆಳೆದಿದ್ದ ಕೈಗವಸಿನೊಡನೆ ಆಟವಾಡುತ್ತಿದ್ದಳು.

ಉಸಿರಾಟ ನಿಲ್ಲಿಸಿ ಆಕೆಯ ಉತ್ತರಕ್ಕಾಗಿ ಕಾದ ವ್ರಾಂಸ್ಕಿ ಅದೆತಾನೆ ಅಪಾಯ ದಿಂದ ಸುರಕ್ಷಿತವಾಗಿ ಪಾರಾದವನಂತೆ, ನಿಡುಸುಯ್ದನು.

ಅನ್ನಾ ತಟಕ್ಕನೆ ಅವನ ಕಡೆಗೆ ತಿರುಗಿದಳು: 'ಮಾಸ್ಕೋದಿಂದ ಇದೆ ತಾನೆ ಪತ್ರವೊಂದು ಬಂದಿದೆ. ಕಿಟ್ಟಿ ಶಚ್ಬಾತ್‌ಸ್ಕಾಯ ತುಂಬ ರೋಗಗ್ರಸ್ತೆಯಾಗಿದ್ದಾಳೆಂಬ ವಿಚಾರ ಅದರಲ್ಲಿದೆ.'

'ಓ, ನಿಜವೆ!' ಎಂದು ನುಡಿಯುವಾಗ ವ್ರಾಂಸ್ಕಿಯ ಹುಬ್ಬು ಗಂಟಿಕ್ಕಿಕೊಂಡಿತು.

ಅನ್ನಾ ಅವನ ಕಡೆಗೆ ಗಂಭೀರ ಭಾವದಿಂದ ನೋಡಿದಳು. 'ಆ ವಿಷಯದಲ್ಲಿ ನಿಮಗೆ ಆಸಕ್ತಿಯಿಲ್ಲವೆ?'

'ಅಪಾರ ಆಸಕ್ತಿಯುಂಟು. ಅವರು ಖಚಿತವಾಗಿ ಏನು ಬರೆದಿದ್ದಾರೆಂದು ಕೇಳಬಹುದೆ?'

ಅನ್ನಾ ಮೇಲೆದ್ದು, ಬೇತ್ಸಿಯ ಬಳಿಗೆ ಹೋದಳು. ಅವಳ ಕುರ್ಚಿಯ ಹಿಂದೆ ನಿಂತುಕೊಂಡು 'ನನಗೊಂದು ಲೋಟ ಚಹ ಸಿಗುತ್ತದೆಯೆ?' ಎಂದು ಕೇಳಿದಳು.

ಬೇತ್ಸಿ ಚಹ ಸುರಿಯುವಾಗ, ವ್ರಾಂಸ್ಕಿ ಅನ್ನಾಳ ಬದಿಗೆ ಬಂದನು. 'ಅವರೇನು ಬರೆದಿದ್ದಾರೆ?' ಎಂದವನು ಹಳೆಯ ಪ್ರಶ್ನೆಯನ್ನೆ ಪುನರುಕ್ತಿಸಿದನು.

'ಪುರುಷರು ಯಾವಾಗಲೂ ಅಗೌರವದ ವಿಷಯವನ್ನೆ ಕುರಿತು ಮಾತಾಡುತ್ತಾರೆ; ಆದರೆ ಯಾವುದು ಅಗೌರವದ ವಿಷಯವೆಂಬುದು ಅವರಿಗರ್ಥವಾಗದೆಂಬುದೇ ನನ್ನ ಚಿಂತೆ' ಎಂದವಳು ಅವನ ಪ್ರಶ್ನೆಗುತ್ತರ ನೀಡದೆಯೆ ಉಕ್ತಿಸಿದಳು. 'ಕೆಲವು ದಿನಗಳಿಂದ....ನಿಮಗೆ ಹೇಳಬೇಕೆಂದಿದ್ದೇನೆ' ಎಂದವಳು ಮಾತು ಪ್ರಾರಂಭಿಸಿ, ಕೋಣೆಯ ಮೂಲೆಯ ಕಡೆಗೆ ಸರಿದು, ಚಿತ್ರಸಂಪುಟಗಳಿದ್ದ ಸಣ್ಣ ಮೇಜಿನ ಮುಂದೆ ಕುಳಿತುಕೊಂಡಳು.

'ನಿಮ್ಮ ಮಾತು ನನಗರ್ಥವಾಗದು' ಎಂದವನು ಅವಳ ಚಹ ಲೋಟವನ್ನವಳಿಗೆ ಕೊಡುತ್ತ ನುಡಿದನು.

ತನ್ನ ಪಕ್ಕದ ಮೆತ್ತೆಯ ಮೇಲಿದ್ದ ಖಾಲಿ ಜಾಗದ ಕಡೆಗೆ ಅವಳು ಕಟಾಕ್ಷ ಬೀರಿದಳು; ಅವನು ಕುಳಿತುಕೊಂಡನು.

'ಹೌದು, ನಿಮಗೆ ನಾನು ಹೇಳಬೇಕೆಂದಿರುವುದಾದರೂ ಏನು ಗೊತ್ತೆ? ನೀವು ಖಂಡಿತವಾಗಿಯೂ ಕೆಟ್ಟದ್ದಾಗಿ, ತುಂಬ ಕೆಟ್ಟದ್ದಾಗಿ ನಡೆದುಕೊಂಡಿದ್ದೀರಿ.'

'ನಾನು ಕೆಟ್ಟದ್ದಾಗಿ ವರ್ತಿಸಿದ್ದೇನೆಂಬುದರ ತಿಳಿವಳಿಕೆ ನನಗಿಲ್ಲವೆಂದು ತಿಳಿದಿರಾ? ಆದರೆ ಆ ತಪ್ಪಿಗೆ ಜವಾಬ್ದಾರರು ಯಾರು?'

'ಅಂಥ ವಿಷಯವನ್ನು ನೀವು ನನಗೇಕೆ ಹೇಳಬೇಕು?' ಎಂದವಳು ಅವನ ಕಡೆಗೆ ನಿಷ್ಠುರ ದೃಷ್ಟಿ ಹಾಯಿಸಿದಳು.

'ಏಕೆಂಬುದು ನಿಮಗೆ ಗೊತ್ತೆ?' ಎಂದವನು ಧೈರ್ಯವಾಗಿ ಹಾಗೂ ನಿಸ್ಸಂಕೋಚವಾಗಿ ಉತ್ತರಿಸಿದನು; ಕೋಡದೆ, ಕೊಂಕದೆ ಅವಳ ಕಣ್ಣಲ್ಲಿ ತನ್ನ ಕಣ್ಣು ಕೀಲಿಸಿದನು.

ಅವಳು ಗಾಬರಿಗೊಂಡಳೇ ಹೊರತು, ಅವನಲ್ಲ.

'ನಿಮಗೆ ಹೃದಯವಿಲ್ಲವೆಂದು ಅದರಿಂದ ವ್ಯಕ್ತವಾಗುತ್ತದೆ' ಎಂದವಳು ನುಡಿದಳು. ಆದರೆ ಅವನಿಗೆ ಹೃದಯವಿತ್ತೆಂಬುದನ್ನವಳು ಬಲ್ಲಳು. ಅವಳ ಆ ಅರಿವು ಅವಳ ಕಣ್ಣುಗಳಲ್ಲಿ ವ್ಯಕ್ತವಾಗುತ್ತಿತ್ತು. ಅವನಲ್ಲವಳಿಗೆ ಭಯವಿದ್ದುದಕ್ಕೆ ಅದೇ ಕಾರಣ.

'ನೀವು ಇದೆ ತಾನೆ ಹೇಳಿದ್ದು ತಪ್ಪನ್ನು ಕುರಿತೇ ಹೊರತು, ಪ್ರೀತಿಯನ್ನಲ್ಲ.'

'ಆ ಪದವನ್ನು, ಆ ಭಯಂಕರ ಪದವನ್ನು ಉಚ್ಚರಿಸಕೂಡದೆಂದು ನಿಮಗೆ ಈಗಾಗಲೇ ಅಡ್ಡಿಪಡಿಸಿದ್ದೇನೆಂಬುದನ್ನು ಮರೆಯಬೇಡಿ' ಎಂದು ಅನ್ನಾ ಕಂಪಿತ ಸ್ವರದಲ್ಲಿ ನುಡಿದಳು; ಆದರೆ ತಾನು ಅಡ್ಡಿಪಡಿಸುತ್ತಿದ್ದೇನೆನ್ನುವ ಮಾತಿನಲ್ಲಿಯೇ ಅವನ ಮೇಲೆ ತನಗೆ ಹಕ್ಕುಂಟೆಂದು ಒಪ್ಪಿಕೊಂಡಂತೆ, ಅಷ್ಟರಿಂದಲೇ ಅವನು ತನ್ನೊಡನೆ ಪ್ರೇಮದ ವಿಷಯ ಕುರಿತು ಮಾತಾಡುವ ಹಕ್ಕನ್ನು ಪಡೆದಂತೆ ಅವಳಿಗೆ ಕೂಡಲೇ ಅರಿವಾಯಿತು. 'ನಿಮಗೆ ಈ ವಿಷಯ ತಿಳಿಸಬೇಕೆಂದು ಕೆಲವು ದಿನಗಳಿಂದ ಅಪೇಕ್ಷೆಯುಳ್ಳವಳಾಗಿದ್ದೇನೆ' ಎಂದವಳು ನೇತ್ರಗಳಲ್ಲಿ ದೃಢನಿರ್ಧಾರವನ್ನು ಸೂಸುತ್ತ ನುಡಿದಳು. ಕಣ್ಣುಕುಕ್ಕುವಂತೆ ಅವಳ ಮುಖದಲ್ಲಿ ರಂಗು ಕಾರುತ್ತಿತ್ತು. 'ನಿಮ್ಮನ್ನು ನೋಡುವ ಉದ್ದೇಶದಿಂದಲೇ ಈ ರಾತ್ರಿ ನಾನಿಲ್ಲಿಗೆ ಬಂದದ್ದು. ಇದು ಕೊನೆಗೊಳ್ಳಬೇಕೆಂದು ಹೇಳಲೆಂದೇ ನಾನಿಲ್ಲಿಗೆ ಬಂದದ್ದು. ಈ ಹಿಂದೆ ನಾನು ಯಾರ ಮುಂದೆಯೂ ನಾಚಿಕೊಂಡದ್ದಿಲ್ಲ. ಆದರೆ ನಿಮ್ಮಿಂದಾಗಿ ನಾನೊಬ್ಬಳು ಅಪರಾಧಿಯೆಂದು ಭಾವಿಸುವಂತಾಗಿದೆ.'

ಅವನವಳನ್ನು ನೋಡುತ್ತಿದ್ದಂತೆ, ಅವಳ ಮುಖದಲ್ಲಿದ್ದ ನೂತನ ಅಧ್ಯಾತ್ಮಿಕ ಸೌಂದರ್ಯಕ್ಕೆ ಬೆರಗಾದನು.

'ನಾನೇನು ಮಾಡಬೇಕೆಂದು ನೀವು ಯೋಚಿಸಿದ್ದೀರಿ?' ಎಂದವನು ಸರಳವಾಗಿ ಶ್ರದ್ಧಾಯುಕ್ತನಾಗಿ ಪ್ರಶ್ನಿಸಿದನು.

'ನೀವು ಮಾಸ್ಕೋಗೆ ಹೋಗಿ, ಕಿಟ್ಟಿಯ ಕ್ಷಮೆ ಕೇಳಿಕೊಳ್ಳಿ' ಎಂದವಳು ನುಡಿದಳು.

'ನಿಮಗದು ಇಷ್ಟವಿಲ್ಲ' ಎಂದವನು ಉಸುರಿದನು.

ಯಾವುದನ್ನು ಹೇಳಬೇಕೆಂದವಳು ಯೋಚಿಸಿದ್ದಳೋ ಅದನ್ನವಳು ಹೇಳಿದ್ದಳೇ ಹೊರತು, ಅವಳ ಮನಸ್ಸಿನಲ್ಲಿದ್ದದ್ದು ಅಭಿವ್ಯಕ್ತಗೊಂಡಿರಲಿಲ್ಲವೆಂದವನು ಬಲ್ಲವನಾಗಿದ್ದನು.

'ನಿಮ್ಮ ಮಾತಿನಂತೆಯೇ ನೀವು ನನ್ನನ್ನು ಪ್ರೀತಿಸುವುದಾದರೆ, ಸರಿ; ಅದರಿಂದ ಮತ್ತೆ ನನ್ನ ಮನಸ್ಸಿಗೆ ಶಾಂತಿದೊರಗುತ್ತದೆ' ಎಂದವಳು ಪಿಸುಗುಟ್ಟಿದಳು.

ಅವನ ಮುಖದಲ್ಲಿ ಪ್ರಕಾಶೋದಯವಾಯಿತು. 'ನಿಜಕ್ಕೂ ನೀವೇ ನನಗೆ ಜೀವಾತುವೆಂಬುದನ್ನರಿಯಿರಿ. ಆದರೆ ನನ್ನ ಮನಸ್ಸಿನಲ್ಲಿಲ್ಲದ ಶಾಂತಿಯನ್ನು ನಿನಗೆ ಕೊಡುವುದಾದರೂ ಹೇಗೆ? ನನ್ನೊಲವೆ, ನನ್ನದೆಲ್ಲವನ್ನು ನಿನಗೆ ಸಮರ್ಪಿಸಿದ್ದೇನೆ. —ಹೌದು, ನೀನು ನನ್ನಿಂದ ಬೇರೆಯೆಂದು ಯೋಚಿಸಲಾರೆ. ನೀನೂ ನಾನೂ ಒಂದೇ. ನಿನಗಾಗಲಿ ನನಗಾಗಲಿ ಭವಿಷ್ಯದಲ್ಲಿ ಶಾಂತಿಯಿರಲಾರದು. ಸಂಕಟ ನಿರಾಶೆಗಳೆ ನನ್ನ ಕಣ್ಮುಂದೆ ನಿಲ್ಲುತ್ತವೆ....ಇಲ್ಲವೆ, ನನಗೆ ಸುಖ ಕಾಣಿಸಬಹುದು—ಎಂಥ ಸುಖವದು!... ಇದು ಸಾಧ್ಯವಿಲ್ಲವೆ?' ಎಂದವನ ತುಟಿಗಳು ಪಿಸುಗುಟ್ಟಿದುವು; ಆದರವಳಿಗೆ ಆ ಮಾತು ಕೇಳಿಸಿದುವು.

ತನ್ನ ಬುದ್ಧಿಶಕ್ತಿಯನ್ನೆಲ್ಲ ಖರ್ಚುಮಾಡಿ, ತಾನೇನು ಹೇಳಬೇಕೆಂದು ಯೋಚಿಸಿದ್ದಳೋ ಅದನ್ನೆಲ್ಲ ಹೇಳಿಬಿಡಲು ಅವಳು ಪ್ರಯತ್ನಿಸಿದಳು; ಆದರೆ ಅದಕ್ಕೆ ಪ್ರತಿಯಾಗಿ

ಅವಳು ತನ್ನ ದಿಟ್ಟಿಯನ್ನವನ ಮೇಲೆ ನೆಲೆಗೊಳಿಸಿದಳು; ಆ ದಿಟ್ಟಿಯಲ್ಲಿ ಪ್ರೇಮ ತುಂಬಿ ತುಳುಕುತ್ತಿತ್ತು; ಒಂದು ಸೊಲ್ಲೂ ಅವಳ ಬಾಯಿಂದ ಹೊರಡಲಿಲ್ಲ.

'ಕೊನೆಗೂ ಅದು ದಕ್ಕಿದಂತಾಯಿತು!' ಎಂದವನು ಆನಂದಪರವಶನಾಗಿ ತನ್ನೊಳಗೆ ತಾನುಡುಕೊಂಡನು. 'ನಾನು ಧೈರ್ಯಗುಂದಿ, ನಿರಾಶೆಯ ಪಾತಾಳದಲ್ಲಿ ಧುಮುಕುವಷ್ಟರಲ್ಲಿಯೇ ಅದು ಕೈಗೆಟುಕಿದೆ! ಇವಳು ನನ್ನನ್ನು ಪ್ರೀತಿಸುತ್ತಾಳೆ; ತಾನಾಗಿಯೇ ಒಪ್ಪಿಕೊಂಡಿದ್ದಾಳೆ.'

'ಹಾಗಾದರೆ, ನನಗೋಸ್ಕರ ಇದನ್ನೆಸಗಿ; ಮತ್ತೊಮ್ಮೆ ಈ ವಿಷಯವನ್ನು ನನ್ನ ಮುಂದೆ ಎತ್ತಬೇಡಿ. ನಾವು ಒಳ್ಳೆಯ ಗೆಳೆಯರಾಗಿರೋಣ' ಎಂಬ ಮಾತುಗಳು ಅವಳ ಬಾಯಿಂದ ಹೊರಬಿದ್ದುವು; ಆದರೆ ಅವಳ ಕಣ್ಣುಗಳ ಸಂದೇಶವೇ ತೀರಭಿನ್ನವಾಗಿತ್ತು.

'ನಾವೆಂದೂ ಗೆಳೆಯರಾಗಿರಲಾರೆವು. ನಿನಗದು ಗೊತ್ತಿದೆ. ಇತರ ಮರ್ತ್ಯರಿಗಿಂತ ನಾವು ಹೆಚ್ಚು ಸುಖಿಗಳಾಗಿರುತ್ತೇವೆಯೋ, ಅಥವಾ ಅತ್ಯಂತ ದುಃಖಿಗಳಾಗಿರುತ್ತೇವೆಯೋ ನಾನು ಮಾತ್ರ ಕಾಣೆ; ಅದು ನಿನ್ನ ಕೈಯಲ್ಲಿದೆ.'

ಅವಳು ಏನನ್ನೋ ಹೇಳಬೇಕೆಂದಿದ್ದಾಗ, ಅವನು ಮಧ್ಯೆ ಬಾಯಿ ಹಾಕಿದನು: 'ನಾನು ನಿನ್ನಲ್ಲಿ ಕೇಳಿಕೊಳ್ಳುವುದು ಒಂದೇ ಒಂದು ಸಂಗತಿ. ನಾನು ಈಗಿನಂತೆ ಸಂಕಟಪಡಬೇಕೋ, ಅಥವಾ ನನಗೆ ಮುಂದಿನ ಭರವಸೆಯ ಹಕ್ಕುಂಟೋ ಎಂದು ನಾನು ನಿನ್ನಿಂದ ತಿಳಿದುಕೊಳ್ಳಬೇಕಾಗಿದೆ. ಇದು ಅಸಾಧ್ಯವೆನ್ನುವುದಾದರೆ ಹೋಗುವಂತೆ ಹೇಳಿಬಿಡು; ನಾನು ಹೊರಟುಹೋಗುತ್ತೇನೆ. ನನ್ನ ಇರುವಿಕೆಯಿಂದ ನಿನಗೆ ಮುಜುಗರವಾಗುವುದಾದರೆ, ನೀನು ಎಂದೆಂದಿಗೂ ನನ್ನನ್ನು ಪುನಃ ನೋಡಲಾರೆ.'

'ನಾನು ನಿನ್ನನ್ನು ಕಳಿಸಬೇಕೆಂದಿಲ್ಲ.'

'ಹಾಗಾದರೆ, ಯಾವ ಬದಲಾವಣೆಗೂ ಮನಗೊಡಬೇಡ. ಎಲ್ಲ ಈಗಿರುವಂತೆಯೇ ಇರಲಿ' ಎಂದವನು ಕಂಪಿತಸ್ವರದಲ್ಲಿ ನುಡಿದನು. 'ಅಗೋ ನಿನ್ನ ಗಂಡ ಬಂದ.'

ನಿಜಕ್ಕೂ ಅದೇ ಕ್ಷಣದಲ್ಲಿ ಕರೆನಿನ್ ಪ್ರಶಾಂತವೂ ವಿಚಿತ್ರವೂ ಆದ ಭಂಗಿಯಲ್ಲಿ ದಿವಾನಖಾನೆಯನ್ನು ಪ್ರವೇಶಿಸಿದನು.

ಅವನು ವ್ರಾನ್ಸ್ಕಿ ಮತ್ತು ಮಡದಿಯರ ಕಡೆಗೆ ಕಣ್ಣು ಹಾಯಿಸಿದನು; ಯಜಮಾನಿಯ ಬಳಿಗೆ ಹೋದನು; ಚಹ ಕುಡಿಯಲು ಕುಳಿತುಕೊಂಡನು. ನಿರನಸರವೂ ಮರ್ಮಭೇದಿಯೂ ಆದ ಧ್ವನಿಯಲ್ಲಿ ಮಾತಾಡಲಾರಂಭಿಸಿದನು; ತನ್ನ ರೂಢಿಯ ಕುಚೋದ್ಯದ ಗತ್ತಿನಲ್ಲಿ ಯಾರನ್ನೋ ಅಣಕಿಸುತ್ತಿದ್ದನು.

'ದಿವಾನಖಾನೆಯ ಸಭೆ ಕಿಕ್ಕಿರಿದಿದೆ' ಎಂದವನು ಸಭೆಯ ಕಡೆ ಕಣ್ಣು ಹಾಯಿಸುತ್ತ ನುಡಿದನು. 'ಕಲಾ ದೇವತೆಗಳು ಹಾಗೂ ಸೌಂದರ್ಯಾಧಿದೇವತೆಗಳೆಲ್ಲ ಇಲ್ಲೇ ಇದ್ದಾರೆ.'

ರಾಜಕುಮಾರಿ ಬೇಟ್ಸಿ ಅವನ ಮಾತಿನ ಧಾಟಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಅಣಕವೆಂದು ಕರೆದು, ಅದನ್ನು ಸಹಿಸಲಾರದೆ, ಜಾಣತನದ ಯಜಮಾನಿಯಂತೆ ಸಂಭಾಷಣೆಯನ್ನು ಶೀಘ್ರವಾಗಿ ಬಲಾತ್ಕಾರದ ಸೈನ್ಯ ಸಂಗ್ರಹಣವನ್ನು ಕುರಿತ ಗಂಭೀರ ವಸ್ತುವಿನ ಕಡೆಗೆ ತಿರುಗಿಸಿದಳು. ಅವನು ಕೂಡಲೇ ಆ ವಿಷಯದಲ್ಲಿ ಆಸಕ್ತಿ ವಹಿಸಿ,

ಬೇತ್ಸಿ ಬಲವಾಗಿ ವಿರೋಧಿಸಿದ ನೂತನ ಸಾರ್ವಭೌಮ ಶಾಸನವನ್ನು ಗಂಭೀರವಾಗಿ ಸಮರ್ಥಿಸಿಕೊಳ್ಳತೊಡಗಿದನು.

ಅನ್ನಾ ಮತ್ತು ವ್ರಾಂಸ್ಕಿಯರು ಸಣ್ಣ ಮೇಜಿನ ಕಡೆಯಿಂದ ಅಲುಗಾಡಲಿಲ್ಲ.

'ಇದು ಅನುಚಿತ ವರ್ತನೆ' ಎಂದು ಮಹಿಳೆಯುಲ್ಲೊಬ್ಬರು ಅನ್ನಾ, ಅವಳ ಗಂಡ ಮತ್ತು ವ್ರಾಂಸ್ಕಿಯರ ಕಡೆಗೆ ಅರ್ಥಪೂರ್ಣವಾಗಿ ನೋಡುತ್ತ ಪಿಸುಗುಟ್ಟಿದಳು.

'ನಾನು ಹೇಳಿದ್ದೇನು' ಎಂದು ಅನ್ನಾಳ ಗೆಳತಿ ಉತ್ತರಿಸಿದಳು.

ತಮ್ಮ ಏಕಾಂತಕ್ಕೆ ಭಂಗಬರದಿರಲೆಂದು ಗುಂಪಿನಿಂದ ದೂರ ಸರಿದಿದ್ದ ಆ ಇಬ್ಬರಲ್ಲಿ ಈ ಮಹಿಳೆಯರ ದೃಷ್ಟಿ ಮಾತ್ರವಲ್ಲ, ರಾಜಕುಮಾರಿ ಮ್ಯಾಕಯ ಮತ್ತು ಬೇತ್ಸಿಯರು ಸೇರಿದಂತೆ ದಿವಾನಖಾನೆಯಲ್ಲಿದ್ದ ಪ್ರತಿಯೊಬ್ಬರ ದೃಷ್ಟಿಯೂ ನಾಟಿದ್ದಂತೆ ತೋರುತ್ತಿತ್ತು. ಕರೆನಿನ್ ಮಾತ್ರ ಆ ಕಡೆಗೆ ದಿಟ್ಟಿ ಹರಿಸಲಿಲ್ಲ; ತಾನು ತಲ್ಲೀನಗೊಂಡಿದ್ದ ಸ್ವಾರಸ್ಯಕರ ಸಂಭಾಷಣೆಯಿಂದ ಅವನ ಮನಸ್ಸು ಬೇರೆ ಕಡೆಗೆ ಹೊರಳಲಿಲ್ಲ.

ಪ್ರತಿಯೊಬ್ಬರ ಮೇಲೂ ಮೂಡಿಸಿದ್ದ ಅಹಿತಕರ ಪ್ರಭಾವವನ್ನು ಗಮನಿಸಿದ ರಾಜಕುಮಾರಿ ಬೇತ್ಸಿ ಕರೆನಿನ್‌ನ ಪಕ್ಕದ ತನ್ನ ಜಾಗದಲ್ಲಿ ಬೇರೊಬ್ಬಳನ್ನು ಪ್ರತಿಷ್ಠಾಪಿಸಿ, ಅನ್ನಾಳ ಕಡೆಗೆ ನಡೆದಳು.

'ನಿಮ್ಮ ಪತಿಯ ಸುಸ್ಪಷ್ಟವೂ ನಿಷ್ಕೃಷ್ಟವೂ ಆದ ಭಾಷೆಯ ಬಗ್ಗೆ ನಾನು ಯಾವಾಗಲೂ ವಿಸ್ಮಿತಳಾಗಿದ್ದೇನೆ' ಎಂದವಳು ನುಡಿದಳು. 'ಅತ್ಯಂತ ದುರ್ಜ್ಞೇಯ ಭಾವನೆಗಳನ್ನು ಕುರಿತು ಅವರು ಮಾತಾಡಿದರೆಂದರೆ, ಎಲ್ಲವೂ ನನಗೆ ವಿಶದವಾಗಿ ಅರ್ಥವಾಗುತ್ತವೆ.'

'ಓ, ಹೌದು' ಎಂದು ಅನ್ನಾ ಬೇತ್ಸಿ ಹೇಳಿದ ಒಂದು ಮಾತನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ, ಮುಗುಳು ನಗೆಯ ಬೆಳಕನ್ನು ಚೆಲ್ಲುತ್ತ ನುಡಿದಳು. ಆದರೂ ಅವಳು ದೊಡ್ಡ ಮೇಜಿನ ಬಳಿಗೆ ಸರಿದು, ಸಾಮಾನ್ಯ ಸಂಭಾಷಣೆಯಲ್ಲಿ ಪಾಲ್ಗೊಂಡಳು.

ಅರ್ಧ ಘಂಟೆಯ ಕಾಲ ತಳುವಿದನಂತರ, ಕರೆನಿನ್ ತನ್ನ ಮಡದಿಯ ಬಳಿಗೆ ಹೋದನು; ಇಬ್ಬರೂ ಒಟ್ಟಿಗೆ ಮನೆಗೆ ಹೋಗುವುದೆಂದು ಸೂಚಿಸಿದನು. ಅವನ ಕಡೆ ನೋಡದೆಯೆ ತಾನು ಊಟಕ್ಕೆ ನಿಲ್ಲುವುದಾಗಿ ಅವಳು ಉತ್ತರಿಸಿದಳು. ಕರೆನಿನ್ ತಲೆ ಮಣಿದು, ಹೊರಗೆ ಹೋದನು.

ಮಿರುಗುತ್ತಿದ್ದ ಚರ್ಮದ ಜಾಕೀಟು ಧರಿಸಿದ್ದ ಮುದಿ ದಡೂತಿ ಟಾರ್ಟರ, ಮದಾಂ ಕರೆನಿನಳ ಗಾಡಿಯಾಳು ಎಡಗೈಯಲ್ಲಿ ಕುದುರೆಯನ್ನು ಹಿಡಿದುಕೊಂಡು ಕಷ್ಟದಿಂದ ನಿಂತಿದ್ದನು. ದ್ವಾರ ಪ್ರದೇಶದಲ್ಲಿ ದೀರ್ಘಕಾಲ ಕಾದಿದ್ದುದರಿಂದ ಚಳಿ ಅವನ ಮೂಳೆಯನ್ನು ಸಹ ಕೊರೆಯುತ್ತಿತ್ತು. ಸೇವಕನೊಬ್ಬ ವಾಹನದ ಬಾಗಿಲನ್ನು ತೆರೆದು ಹಿಡಿದುಕೊಂಡಿದ್ದನು. ದ್ವಾರಪ್ರದೇಶದ ಬಾಗಿಲನ್ನು ಕೂಲಿಯಾಳು ತೆರೆದುಕೊಂಡಿದ್ದನು. ತನ್ನ ತುಪ್ಪಳು ಚರ್ಮದ ಮೇಲಂಗಿಯ ಕೊಕ್ಕೆಗೆ ಸಿಕ್ಕಿಕೊಂಡಿದ್ದ ಮಣಿಕಟ್ಟು ಪಟ್ಟಿಯ ರೇಷ್ಮೆ ಹೆಣಿಗೆಯನ್ನು ಅನ್ನಾ ತನ್ನೊಂದು ಚುರುಕು ಕಿರುಗೈಯಿಂದ ಬಿಡಿಸಿಕೊಳ್ಳುತ್ತ, ನತಶಿರಳಾಗಿಯೇ ತನ್ನನ್ನು ಬೀಳ್ಕೊಳ್ಳುವಾಗ ವ್ರಾಂಸ್ಕಿ ಹೇಳುತ್ತಿದ್ದ ಮಾತುಗಳನ್ನು ಆನಂದ ಪರವಶಳಾಗಿ ಆಲಿಸುತ್ತಿದ್ದಳು.

"ನೀನೇನೂ ಹೇಳಿದ್ದಿಲ್ಲ. ನಿನ್ನಿಂದ ಏನನ್ನಾದರೂ ಕೇಳುವ ಹಕ್ಕು ನನಗಂತು ಇಲ್ಲ' ಎಂದವನು ನುಡಿದನು. 'ಆದರೆ ನಿನ್ನ ಸ್ನೇಹದಿಂದ ನನಗೆ ತೃಪ್ತಿಯಾಗಿಲ್ಲವೆಂಬುದನ್ನು ನೀನು ಬಲ್ಲೆ. ನೀನು ಇಷ್ಟಪಡದಿರುವ ಆ ಒಂದು ಪದದಲ್ಲಿ ಬದುಕು ನನಗೆ ಒದಗಿಸಬಹುದಾದ ಏಕಮಾತ್ರ ಸುಖ ಹುದುಗಿದೆ. ಹೌದು, ಪ್ರೇಮ.'

ಒಳದನಿಯಲ್ಲಿ ನಿಧಾನವಾಗಿ ಅವಳು ಪ್ರೇಮ ಎಂಬ ಪದವನ್ನು ಪುನರುಕ್ತಿಸಿದಳು ; ಲೇಸ್ನ ಹೆಣಿಗೆಯನ್ನು ಬಿಡಿಸಿಕೊಳ್ಳುತ್ತಿರುವಾಗಲೇ ಅವಳು ತಟಕ್ಕನೆ 'ನನ್ನ ಮಟ್ಟಿಗೆ ಆ ಪದ ನೀವು ತಿಳಿದಿರುವುದಕ್ಕಿಂತ ಅಗಾಧವಾದ, ಅಪಾರವಾದ ಅರ್ಥವನ್ನೊಳಗೊಂಡಿರುವುದರಿಂದ ಅದು ನನಗೆ ಸೇರದು' ಎಂದು ನುಡಿದು, ಅವನ ಮುಖವನ್ನು ದಿಟ್ಟಿಸುತ್ತ, 'ಸುರಾತ್ರಿ' ಎಂದು ಹಾರೈಸಿದಳು.

ಅವಳವನ ಕೈಕುಲುಕಿ, ಚುರುಕು ಜಿಗಿಹೆಜ್ಜೆಯಿಡುತ್ತ, ಕೂಲಿಯಾಳನ್ನು ಹಿಂದೆ ಹಾಕಿ, ವಾಹನದೊಳಗೆ ಮರೆಯಾದಳು.

ಅವಳ ಕಟಾಕ್ಷ ಹಾಗೂ ಹಸ್ತಸ್ಪರ್ಶಗಳಿಂದ ಅವನ ಮೈಯೆಲ್ಲ ಉರಿಯತೊಡಗಿತು. ಅವಳು ಸ್ಪರ್ಶಿಸಿದ ತನ್ನ ಹಸ್ತದ ಭಾಗವನ್ನವನು ಚುಂಬಿಸಿದನು ; ಕಳೆದೆರಡು ತಿಂಗಳುಗಳಿಗಿಂತ ಆ ಸಂಜೆ ತನ್ನ ಉದ್ದೇಶ ಸಾಧನೆಯಲ್ಲಿ ಹೆಚ್ಚು ಪ್ರಗತಿಯನ್ನು ಪಡೆದಿದ್ದ ಅರಿವಿನ ಸುಖದ ತೆರೆಗಳ ಮೇಲೆ ತೇಲುತ್ತ, ಅವನು ಮನೆಗೆ ಹೋದನು.

೮

ಇತರರಿಂದ ದೂರವಾಗಿ, ಸಣ್ಣದೊಂದು ಮೇಜಿನ ಮುಂದೆ ತನ್ನ ಮಡದಿ ವ್ರಾನ್ಸ್ಕಿಯೊಡನೆ ಕುಳಿತಿದ್ದುದರಲ್ಲಿ, ಹಾಗೂ ಅವನೊಡನೆ ಸರಸಸಲ್ಲಾಪಗಳಲ್ಲಿ ತೊಡಗಿದ್ದುದರಲ್ಲಿ ಯಾವ ವಿಶೇಷವನ್ನಾಗಲಿ, ಅನೌಚಿತ್ಯವನ್ನಾಗಲಿ ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಕರೆನಿನ್ ಕಾಣಲಿಲ್ಲ. ಆದರೆ ದಿವಾನಖಾನೆಯಲ್ಲಿದ್ದ ಇತರ ಜನ ಆ ನಡೆವಳಿಯಲ್ಲಿ ವಿಶೇಷವನ್ನೂ ಅನೌಚಿತ್ಯವನ್ನೂ ಕಂಡ ಕಾರಣಕ್ಕಾಗಿ ಅದು ಅವನಿಗೂ ಸಹ ಅಸಭ್ಯವಾಗಿ ತೋರಿತು. ಆ ಬಗ್ಗೆ ತನ್ನ ಮಡದಿಯೊಡನೆ ಮಾತಾಡುವುದಾಗಿ ಅವನು ನಿಶ್ಚಯಿಸಿಕೊಂಡನು.

ಮನೆಗೆ ಹಿಂದಿರುಗಿದ ಕೂಡಲೇ ರೂಢಿಯಂತೆ ಅವನು ನೇರವಾಗಿ ಅಧ್ಯಯನ ಮಂದಿರಕ್ಕೆ ನಡೆದು, ತೋಳ್ಕುರ್ಚಿಯಲ್ಲಿ ತಳವೂರಿದನು ; ಪೋಪ್‌ಗುರುವಿಗೆ ಸಂಬಂಧಿಸಿದ ಪುಸ್ತಕವನ್ನು ಕೈಗೆತ್ತಿಕೊಂಡನು ; ಗುರುತಿಗಾಗಿ ಕಾಗದ ಚಾಕುವಿಟ್ಟಿದ್ದ ಪುಟವನ್ನು ತೆರೆದನು ; ಒಂದು ಗಂಟೆಯ ತನಕ ಓದು ಮುಂದುವರಿಸಿದನು. ಅದು ಸಹ ಅವನಿಗೆ ಅಭ್ಯಾಸಗತವಾಗಿತ್ತು ; ಆದರೆ ರಾತ್ರಿಯೆಲ್ಲ ಅವನು ತನ್ನ ಹಣೆಯ ಮೇಲೆ ಕೈಯಾಡಿಸುತ್ತಿದ್ದನು ; ಕಾಟಕೊಡುತ್ತಿದ್ದ ಆಲೋಚನೆಯನ್ನು ಹೊರಗಟ್ಟುವಂತೆ ತಲೆಯಲ್ಲಾಡಿಸುತ್ತಿದ್ದನು. ನಿತ್ಯದ ಪರಿಪಾಠದಂತೆ ಹಾಸಿಗೆಯ ಮೇಲೆ ಮಲಗುವ ಮುನ್ನ ಶೌಚಕರ್ಮದಲ್ಲಿ ತೊಡಗಲು ಮೇಲೆದ್ದನು. ಅನ್ನಾ ಇನ್ನೂ ಮನೆಗೆ ಬಂದಿರಲಿಲ್ಲ. ತೋಳ್ಸಂದಿಯಲ್ಲಿ ಪುಸ್ತಕವನ್ನಿರುಕಿಕೊಂಡು ಅವನು ಮಹಡಿಯ ಮೇಲಕ್ಕೆ ಹೋದನು. ರಾತ್ರಿಯ ವೇಳೆ ಸಾಮಾನ್ಯವಾಗಿ ಕಚೇರಿಗೆ ಸಂಬಂಧಿಸಿದ ವ್ಯವಹಾರ ಯೋಜನೆಗಳಲ್ಲಿ

ಅವನ ಆಲೋಚನೆ ಮಗ್ನವಾಗಿರುತ್ತಿತ್ತು. ಆದರೆ ಆ ರಾತ್ರಿ ತನ್ನ ಮಡದಿಗೆ ಸಂಬಂಧಿಸಿದ ಅಹಿತಕರವಾದ ಆಲೋಚನೆಗಳು ಅವನ ಮನಸ್ಸನ್ನೆಲ್ಲ ಆವರಿಸಿಕೊಂಡಿದ್ದುವು. ನಿತ್ಯಾಭ್ಯಾಸದಂತೆ ಅವನು ಹಾಸುಗೆಯ ಮೇಲೊರಗಲಿಲ್ಲ; ಬೆನ್ನಹಿಂದೆ ಕೈಯೊಂದಿಸಿ ಕೊಂಡು ಕೋಣೆಯಿಂದ ಕೋಣೆಗೆ, ಹಿಂದಕ್ಕೂ ಮುಂದಕ್ಕೂ ಅಡ್ಡಾಡುತ್ತಿದ್ದನು. ನೂತನ ಸಂದರ್ಭದ ಬಗ್ಗೆ ಆ ಮೂಲಾಗ್ರವಾಗಿ ಆಲೋಚಿಸದೆ ಅವನು ಮಲಗು ವಂತಿರಲಿಲ್ಲ

ತನ್ನ ಮಡದಿಯೊಡನೆ ಮಾತಾಡಬೇಕೆಂದು ಮೊದಲು ಕರೆನಿನ್ ನಿರ್ಧರಿಸಿ ಕೊಂಡಾಗ, ಅದು ಅವನಿಗೆ ತುಂಬ ಸರಳ ಸುಲಭ ವಿಷಯವಾಗಿ ತೋರಿತು; ಆದರೀಗ ಹೊಸಬಿಕ್ಕಟ್ಟಿನ ಬಗ್ಗೆ ಯೋಚಿಸಿದಂತೆಲ್ಲ ಅದು ಕಠಿನವಾಗಿಯೂ ಜಟಿಲವಾಗಿಯೂ ಕಂಡಿತು.

ಕರೆನಿನ್ ಮಾತ್ಸರ್ಯ ಪ್ರವೃತ್ತಿಯವನಲ್ಲ. ಮಾತ್ಸರ್ಯದಿಂದ ತನ್ನ ಮಡದಿಗೆ ಅವಮಾನವಾಗುತ್ತದೆಂಬುದು ಅವನಿಗೆ ಮನವರಿಕೆಯಾಗಿತ್ತು; ಗಂಡನಾದವನು ಹೆಂಡತಿಯಲ್ಲಿ ವಿಶ್ವಾಸವಿಡಬೇಕು. ತನ್ನ ಹೆಂಡತಿಯನ್ನೇಕೆ ನಂಬಬೇಕು,—ಅಂದರೆ, ತನ್ನ ಹರೆಯದ ಮಡದಿ ಸದಾ ತನ್ನನ್ನೇ ಪ್ರೀತಿಸಬೇಕೆಂಬ ವಿಷಯದಲ್ಲೇಕೆ ಪೂರ್ಣ ವಿಶ್ವಾಸವಿಟ್ಟುಕೊಳ್ಳಬೇಕು ಎಂಬ ವಿಷಯದ ಬಗ್ಗೆ ಅವನು ತನ್ನಷ್ಟಕ್ಕೆ ತಾನು ಪ್ರಶ್ನಿಸಿಕೊಳ್ಳಲಿಲ್ಲ; ಆದರೆ ಅವಳ ಬಗ್ಗೆ ಅವನಿಗೆ ಅಪನಂಬಿಕೆಯಿರಲಿಲ್ಲ; ಆದ್ದರಿಂದ ಅವನವಳಲ್ಲಿ ವಿಶ್ವಾಸವಿಟ್ಟಿದ್ದನು; ತಾನವಳನ್ನು ನಂಬಬೇಕೆಂದು ನಿರ್ಧರಿಸಿಕೊಂಡನು. ಈಗ ಹೊಟ್ಟೆಕಿಚ್ಚು ನಾಚಿಕೆಗೇಡೆಂದು ಅವನಿಗೆ ಮನವರಿಕೆಯಾಗಿದ್ದರೂ, ಗಂಡಸಾದವನು ಹೆಂಡತಿಯನ್ನು ನಂಬಬೇಕೆಂಬುದರಲ್ಲಿ ಅವನಿಗೆ ಸಂದೇಹವಿರದಿದ್ದರೂ, ವಿವೇಕಹೀನವೂ ತರ್ಕಹೀನವೂ ಆದ ಸನ್ನಿವೇಶವೊಂದು ತನಗೆದುರಾಗಿತ್ತೆಂದು ಅವನು ಭಾವಿಸಿದನು; ಅದರಿಂದ ಪಾರಾಗುವ ಬಗೆ ಅವನ ಬುದ್ಧಿಗೆ ಹೊಳೆಯಲಿಲ್ಲ. ಕರೆನಿನ್ ನಿಜವಾದ ಬದುಕನ್ನೆದುರಿಸುತ್ತಿದ್ದನು; ತನ್ನ ಮಡದಿ ಬೇರೊಬ್ಬನನ್ನು ಪ್ರೀತಿಸುವ ಸಾಧ್ಯತೆ ಅವನ ಮನಸ್ಸನ್ನು ಪರಚುತ್ತಿತ್ತು. ಅದು ನಿಜವಾದ ಬದುಕಾದದ್ದರಿಂದ ಇದು ಅವನಿಗೆ ವಿವೇಕಶೂನ್ಯವೂ ತರ್ಕಹೀನವೂ ಆಗಿ ಕಾಣುತ್ತಿತ್ತು. ತನಗೆ ನೆನಪಿರುವ ಮಟ್ಟಿಗೆ, ಜೀವನದ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಗೆ ಸಂಬಂಧಿಸಿದ ಉದ್ಯೋಗಕ್ಷೇತ್ರದಲ್ಲಿ ಮಾತ್ರ ಜೀವನದುದ್ದಕ್ಕೂ ಅವನು ಕೆಲಸ ಮಾಡಿದ್ದನು. ಪ್ರತಿಸಾರಿಯೂ ತಾನು ಯಾವುದ ರಿಂದ ಪಾರಾಗಲಿಚ್ಛಿಸಿದ್ದನೋ ಅಂಥ ವಾಸ್ತವ ಜೀವನವನ್ನೇ ಎಡತಾಕುತ್ತಿದ್ದನು. ಕಂದಕದ ಮೇಲಣ ಸೇತುವೆಯನ್ನು ಶಾಂತಚಿತ್ತನಾಗಿ ದಾಟುತ್ತಿರುವ, ಆದರೆ ಕೂಡಲೇ ಸೇತುವೆ ಮುರಿದುಬಿದ್ದು, ತನ್ನ ಮುಂದಿನ ಕಂದಕ ಆಕಳಿಸುತ್ತಿರುವುದನ್ನು ಕಾಣುವ ವ್ಯಕ್ತಿಯ ಮನಸ್ಸಿನಲ್ಲಿ ಸುಳಿದಾಡುವ ಭಾವಗಳೇ ಸದ್ಯದಲ್ಲವನ ಮನಸ್ಸಿನಲ್ಲಿಯೂ ಅಲೆದಾಡುತ್ತಿದ್ದುವು. ಆ ಕಂದಕವೇ ನಿಜವಾದ ಬದುಕು; ಕರೆನಿನ್ ಬದುಕುತ್ತಿದ್ದ ಕೃತಕ ಜೀವನವೇ ಆ ಸೇತುವೆ. ತನ್ನ ಮಡದಿ ಬೇರೊಬ್ಬನ ಪ್ರೇಮದ ಬಲೆಗೆ ಬೀಳುವ ಸಾಧ್ಯತೆಯನ್ನವನು ಮೊತ್ತಮೊದಲ ಬಾರಿಗೆ ಎದುರಿಸುತ್ತಿದ್ದನು; ಅವನು ಭಯವಿಹ್ವಲ ನಾದನು.

ಅವನು ಬಟ್ಟೆ ಕಳಚದೆಯೆ, ಒಂದೇ ಒಂದು ದೀಪ ಉರಿಯುತ್ತಿದ್ದ ಭೋಜನ ಶಾಲೆಯ ಹೊಳಲುಗೊಡುವ ಹಲಗೆ ನೆಲದ ಮೇಲೆ ಸಮತೂಕದ ಹೆಜ್ಜೆಯಿಡುತ್ತ, ಶತಪಥ ತಿರುಗುತ್ತಿದ್ದನು; ಇತ್ತೀಚೆಗೆ ತಾನೆ ಕುಂಚಗೊಂಡು, ಸೋಫದ ಮೇಲೆ ನೇತಾಡುತ್ತಿದ್ದ ತನ್ನದೇ ಆದ ದೊಡ್ಡ ಭಾವಚಿತ್ರವಿದ್ದ, ಅದರ ಮೇಲೆ ಮಾತ್ರ ಬೆಳಕು ಬೀಳುತ್ತಿದ್ದ ಕತ್ತಲಿಡಿದ ದಿವಾನಖಾನೆಯ ಜಮಖಾನದ ಮೇಲೂ ಅವನು ಆಗಾಗ್ಗೆ ಕಾಲಾಡಿಸುತ್ತಿದ್ದನು; ಅವಳ ಕುಟುಂಬದ ಹಾಗೂ ಸ್ನೇಹಿತರ ಚಿತ್ರಗಳನ್ನೂ ತನಗೆ ಅತ್ಯಂತ ಪರಿಚಿತವಾಗಿದ್ದು ಅವಳ ಮೇಜಿನ ಮೇಲೆ ಓರಣಗೊಂಡಿದ್ದ ಸುಂದರ ವಸ್ತುಗಳನ್ನೂ ಎತ್ತಿತೋರಿಸುವಂತೆ ಎರಡು ಮೋಂಬತ್ತಿಗಳು ಉರಿಯುತ್ತಿದ್ದ ಅವಳ ಕೋಣೆಯ ಮೂಲಕ ಅವನು ಅಡ್ಡಾಡುತ್ತಿದ್ದನು. ಅವಳ ಕೋಣೆಯ ಮೂಲಕ ಹಾಯ್ದು, ತಮ್ಮ ಶಯನ ಮಂದಿರದ ಬಾಗಿಲಿಗೆ ಬರುತ್ತಿದ್ದಂತೆಯೇ ಅವನು ಹಿಂದಿರುಗಿದನು.

ಪ್ರತಿಸಲದ ತಿರುಗಾಟದ ಕೊನೆಯಲ್ಲಿಯೂ, ದೀಪವುರಿಯುತ್ತಿದ್ದ ಭೋಜನ ಶಾಲೆಯ ಹಲಗೆ ನೆಲವನ್ನು ತಲುಪಿದಾಗ ಸಾಮಾನ್ಯವಾಗಿ ಅವನು ನಿಂತು, ತನ್ನಷ್ಟಕ್ಕೆ ತಾನು ಹೇಳಿಕೊಳ್ಳುತ್ತಿದ್ದನು: 'ಹೌದು, ನಾನೀಗ ಒಂದು ನಿರ್ಧಾರಕ್ಕೆ ಬರಬೇಕಾಗಿದೆ, ಅದನ್ನು ತಡೆಗಟ್ಟಬೇಕಾಗಿದೆ. ನನ್ನ ಅಭಿಪ್ರಾಯಗಳನ್ನು ವಿವರಿಸಿ, ನಿರ್ಣಯವನ್ನು ಸ್ಪಷ್ಟಪಡಿಸಬೇಕಾಗಿದೆ.' ಅವನು ಮತ್ತೆ ಹಿಂದಿರುಗುತ್ತಿದ್ದನು. 'ನಾನು ವಿವರಿಸುವುದೇನನ್ನು? ನಾನು ಸ್ಪಷ್ಟಪಡಿಸುವ ನಿರ್ಣಯವಾದರೂ ಏನು?' ಎಂದವನು ದಿವಾನಖಾನೆಯನ್ನು ತಲುಪಿದ ಕೂಡಲೇ ತನ್ನಷ್ಟಕ್ಕೆ ತಾನು ಪ್ರಶ್ನಿಸಿಕೊಳ್ಳುತ್ತಿದ್ದನು. ಅವನು ಅವಳ ಕೋಣೆಯ ಕಡೆಗೆ ತಿರುಗುತ್ತಿದ್ದಂತೆ 'ಏನಾಗಿದೆ? ಏನೂ ಇಲ್ಲವಲ್ಲ. ಅವಳು ಅವನೊಡನೆ ದೀರ್ಘಕಾಲ ಮಾತಾಡುತ್ತಿದ್ದುದು ನಿಜ. ಅದರಿಂದಾದದ್ದೇನು? ಸಮಾಜದಲ್ಲಿರುವ ಸ್ತ್ರೀಯರು ಎಲ್ಲ ಬಗೆಯ ಜನರೊಡನೆ ಮಾತಾಡುತ್ತಾರೆ' ಎಂದವನು ತನ್ನೊಳಗೆ ತಾನಂದುಕೊಂಡನು. 'ಮಾತ್ಸರ್ಯದಿಂದ ನನ್ನನ್ನು ನಾನೇ ಹೀನಯ್ಸಿಕೊಳ್ಳುತ್ತೇನೆ; ಅವಳನ್ನೂ ಅವಮಾನಕ್ಕೊಳಗುಮಾಡುತ್ತೇನೆ' ಎಂದವನು ಅವಳ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆ ಒಳಗೊಳಗೆ ಅಂದುಕೊಂಡನು. ಆದರೆ ಈಚೀಚೆಗೆ ತಾನೆ ಸಾಕಷ್ಟು ತೂಕವುಳ್ಳವಾಗಿ ತೋರಿದ್ದ ಈ ತರ್ಕಗಳು ಈಗ ತಮ್ಮ ಬೆಲೆಯನ್ನು ಕಳೆದುಕೊಂಡಿದ್ದುವು; ಅರ್ಥಹೀನವಾಗಿದ್ದುವು. ಶಯನಮಂದಿರದ ಬಾಗಿಲಿಂದಲೇ ಅವನು ಮರಳಿ, ದಿವಾನಖಾನೆಗೆ ನಡೆದನು. ಕತ್ತಲಿಡಿದ ದಿವಾನಖಾನೆಯನ್ನವನು ಮತ್ತೆ ಪ್ರವೇಶಿಸುತ್ತಿದ್ದಂತೆ, ಅವನು ತಪ್ಪಿತಸ್ತನೆಂದೂ, ಇತರರ ಕಣ್ಣಿಗೆ ಏನಾದರೂ ಬಿದ್ದಿದ್ದೇ ನಿಜವಾದರೆ ಅದರಲ್ಲೇನೋ ಸತ್ಯಾಂಶ ಇದ್ದಿರಬೇಕೆಂದೂ ಧ್ವನಿಯೊಂದು ಅವನೊಡನೆ ಹೇಳಿತು. ಅವನು ಪುನಃ ಭೋಜನಶಾಲೆಯಲ್ಲಿ ತನ್ನಷ್ಟಕ್ಕೆ ತಾನಂದುಕೊಂಡನು: 'ಈಗ ನಾನೊಂದು ನಿರ್ಧಾರಕ್ಕೆ ಬರಲೇಬೇಕಾಗಿದೆ; ಅದಕ್ಕೆ ಪೂರ್ಣವಿರಾಮ ಹಾಕಬೇಕಾಗಿದೆ; ನನ್ನ ಅಭಿಪ್ರಾಯಗಳನ್ನು ವಿವರಿಸಬೇಕಾಗಿದೆ....' ಅವನು ಮತ್ತೆ ದಿವಾನಖಾನೆಯ ಕೊನೆಯಲ್ಲಿ ಹಿಂದಿರುಗುವಾಗ 'ನಿರ್ಧಾರವೆಂಥದು?' ಎಂದು ತನ್ನನ್ನು ತಾನೆ ಪ್ರಶ್ನಿಸಿಕೊಂಡನು. 'ನಡೆದಿರುವುದಾದರೂ ಏನು?' ಎಂದವನು ತನ್ನಷ್ಟಕ್ಕೆ ತಾನು ಪ್ರಶ್ನಿಸಿಕೊಂಡನು. 'ಏನೂ ಇಲ್ಲವಲ್ಲ' ಎಂದವನು ಉತ್ತರಿಸಿದನು.

ಮಾತ್ಸರ್ಯದಿಂದ ತನ್ನ ಮಡದಿಗೆ ಅವಮಾನವಾಗುತ್ತದೆಂಬ ಭಾವನೆ ಮತ್ತೆ ನೆನಪಾಯಿತು. ಆದರೆ ಏನೋ ಸಂಭವಿಸಿರಬೇಕೆಂದು ದಿವಾನಖಾನೆಗೆ ಬಂದಾಗ ಅವನಿಗೆ ಮನವರಿಕೆಯಾಯಿತು. ಯಾವೊಂದು ಹೊಸ ನಿರ್ಧಾರಕ್ಕೂ ಬರದೆ, ಅವನ ಶರೀರದಂತೆ ಅವನ ಆಲೋಚನೆಗಳೂ ವೃತ್ತಾಕಾರದಲ್ಲಿ ಚಲಿಸಿದುವು. ಅದು ತನ್ನ ಗಮನಕ್ಕೆ ಬರಲಾಗಿ, ಅವನು ತನ್ನ ಹಣೆಯನ್ನುಜ್ಜಿಕೊಂಡು, ಅವಳ ಕೋಣೆಯಲ್ಲಿ ಕುಳಿತನು.

ಮಿರುಗುವ ಹಸುರು ಲೋಹದ ಲೇಖನೋಪಕರಣಗಳೂ, ಪೂರ್ಣಗೊಳ್ಳದ ಪತ್ರವೂ ಇದ್ದ ಮೇಜಿನ ಮೇಲೆ ಕಣ್ಣು ಹಾಯಿಸುತ್ತ ಕುಳಿತಿರುವಾಗ, ಅವನ ಆಲೋಚನೆಗಳು ತಟಕ್ಕನೆ ಹೊಸ ತಿರುವು ತೆಗೆದುಕೊಂಡುವು. ಅವನು ಅವಳ ವಿಷಯ ಆಲೋಚಿಸತೊಡಗಿದನು. ಅವಳೇನು ಯೋಚಿಸುತ್ತಿರಬಹುದು, ಭಾವಿಸುತ್ತಿರಬಹುದು ಎಂದು ಎಣಿಸತೊಡಗಿದನು. ಮೊತ್ತಮೊದಲಬಾರಿಗೆ ಅವಳ ಸ್ವಂತ ಜೀವನ, ಅವಳ ಆಲೋಚನೆಗಳು ಮತ್ತು ಅವಳ ಆಶೆ ಆಕಾಂಕ್ಷೆಗಳು ಸುಸ್ಪಷ್ಟವಾಗಿ ಅವನ ಕಣ್ಣೆದುರು ನಿಂತುವು. ಅವಳಿಗೂ ತನ್ನದೇ ಆದ ಸ್ವಂತ ಜೀವನವುಂಟೆಂಬ ಯೋಚನೆ ಭಯಂಕರವಾಗಿ ತೋರಿತು; ಅವನದನ್ನು ತನ್ನ ಮನಸ್ಸಿನಿಂದ ನೂಕಲು ತ್ವರೆಮಾಡಿದನು. ಆ ಕಂದಕದ ಕಡೆಗೆ ಕಣ್ಣು ಹಾಯಿಸುವ ಧೈರ್ಯ ಅವನಿಗಿರಲಿಲ್ಲ. ಮತ್ತೊಬ್ಬ ವ್ಯಕ್ತಿಯ ಭಾವಾಲೋಚನೆಗಳಲ್ಲಿ ತಾದಾತ್ಮ್ಯ ಹೊಂದುವ ಆಧ್ಯಾತ್ಮಿಕ ಸಾಧನೆ ಕರೆನಿನ್‌ನ ಸ್ವಭಾವಕ್ಕೆ ವಿದೇಶೀಯವಾಗಿತ್ತು. ಕಲ್ಪನಾ ಪ್ರತಿಭೆಗೆ ಅಂಥ ಆಧ್ಯಾತ್ಮಸಾಧನೆ ಅಪಾಯಕಾರೀ ಪ್ರತಿಬಂಧಕವಾಗುತ್ತದೆಂದವನು ಬಗೆದನು.

'ಅತ್ಯಂತ ಅಪಾಯಕಾರೀ ಸಂಗತಿಯೆಂದರೆ, ನನ್ನ ಯೋಜನೆ ಯಶಸ್ವಿಯಾಗಿ ಮುಕ್ತಾಯಗೊಳ್ಳುತ್ತಿರುವ (ಆ ಸಮಯದಲ್ಲಿ ತಾನು ಕಾರ್ಯಗತಗೊಳಿಸಲಿದ್ದ ಯೋಜನೆಯೊಂದು ಅವನ ಮನಸ್ಸಿನಲ್ಲಿತ್ತು) ಈ ಸಮಯದಲ್ಲಿ, ನನಗೆ ಮನಶ್ಶಾಂತಿ ಮತ್ತು ಆತ್ಮಶಕ್ತಿಗಳು ಅವಶ್ಯವಾಗಿರುವ ಇದೇ ಸಂದರ್ಭದಲ್ಲಿ ಅನವಶ್ಯವಾದ ತಳ್ಳಂಕ ಕಾತರತೆಗಳ ಹಿಂಸೆಗೊಳಗಾಗುವುದು. ಇದು ಸರಿಯಲ್ಲ. ಆದರೆ ಈಗ ಮಾಡುವುದೇನಿದೆ? ಅವನ್ನೆದುರಿಸುವ ನೈತಿಕಶಕ್ತಿಯಿಲ್ಲದೆ ಚಿಂತೆ ಕಳವಳಗಳಿಗೆ ಶರಣಾಗುವ ಗುಂಪಿಗೆ ನಾನು ಸೇರಿದವನಲ್ಲ' ಎಂದವನು ಬಗೆದನು.

'ನಾನವನ್ನು ಕುರಿತು ಗಂಭೀರವಾಗಿ ಚಿಂತಿಸಬೇಕು, ಒಂದು ನಿರ್ಣಯಕ್ಕೆ ಬರಬೇಕು, ನನ್ನ ಮನಸ್ಸಿನ ಭಾರವನ್ನಿಳಿಸಿಕೊಳ್ಳಬೇಕು' ಎಂದವನು ಗೊಣಗಿಕೊಂಡನು.

'ಅವಳ ಅಂತರಂಗದಲ್ಲಿ ನಡೆಯುವ ವ್ಯಾಪಾರಗಳಿಗೂ ನನಗೂ ಏನೇನೂ ಸಂಬಂಧವಿಲ್ಲ. ಅವಳ ಭಾವಾಲೋಚನೆಗಳ ಪ್ರಶ್ನೆ ಅವಳ ಅಂತಃಸಾಕ್ಷಿಗೆ ಸಂಬಂಧಿಸಿದ್ದು, ಧಾರ್ಮಿಕವಲಯಕ್ಕೆ ಸೇರಿದ್ದು' ಎಂದವನು ತನಗೆ ತಾನೇ ಹೇಳಿಕೊಂಡನು. ಈ ನೂತನ ಸನ್ನಿವೇಶ ನೀತಿ ಸತ್ತ್ವೆಯ ಯಾವ ಸೂತ್ರಕ್ಕೆ ಅನ್ವಯಿಸುತ್ತದೆಂಬ ವಿಷಯವನ್ನರಿತುಕೊಂಡ ಸಮಾಧಾನ ಅವನ ಮನಸ್ಸಿನಲ್ಲುದಿಸಿತು. 'ಆದ್ದರಿಂದ ಅವಳ ಅಂತರಂಗದ ವ್ಯಾಪಾರಗಳು ಅವಳ ಆತ್ಮಸಾಕ್ಷಿಗೆ ಸಂಬಂಧಿಸಿದ ಪ್ರಶ್ನೆಗಳೇ ಹೊರತು, ನನಗೆ ಸಂಬಂಧಿಸಿದುವಲ್ಲ. ನನ್ನ ಹೊಣೆಗಾರಿಕೆಯೂ ಸುಸ್ಪಷ್ಟವಾಗಿದೆ, ನಿಜ. ಕುಟುಂಬದ ಯಜಮಾನ

ನಾಗಿ, ಅವಳಿಗೆ ಮಾರ್ಗದರ್ಶನ ಮಾಡುವ ಕರ್ತವ್ಯ ನನ್ನದು. ನನ್ನ ಹೊಣೆಗಾರಿಕೆ ಸಹ ಭಾಗಶಃ ಇದ್ದೇ ಇದೆ. ನನ್ನ ಅನುಭವಕ್ಕೆ ಬರುವ ಅಪಾಯವನ್ನವಳ ಗಮನಕ್ಕೆ ತರಲೇ ಬೇಕು, ಅವಳಿಗೆ ಎಚ್ಚರಿಕೆ ನೀಡಬೇಕು, ಅನಿವಾರ್ಯವಾದರೆ ನನ್ನ ಅಧಿಕಾರವನ್ನು ಚಲಾಯಿಸಬೇಕು. ನಾನವಳೊಡನೆ ಮುಚ್ಚುಮರೆಯಿಲ್ಲದೆ ಮಾತಾಡಿಬಿಡಬೇಕು.'

ತನ್ನ ಮಡದಿಗೆ ಹೇಳಬಹುದಾದ ವಿಷಯ ಕರೆನಿನ್‌ನ ಮನಸ್ಸಿನಲ್ಲಿ ಸ್ಪಷ್ಟಾಕಾರ ವನ್ನು ಪಡೆಯಿತು. ತಾನೇನು ಹೇಳಬೇಕೆಂಬುದನ್ನು ಕುರಿತು ಆಲೋಚನೆ ನಡಸುವಾಗ, ಗೃಹಕೃತ್ಯಕ್ಕೆ ಸಂಬಂಧಿಸಿದ ಖಾಸಗಿಸ್ವರೂಪದ ಕ್ಷುಲ್ಲಕ ವಿಷಯದ ಬಗ್ಗೆ ತನ್ನ ಸಮಯ ಮತ್ತು ಮಾನಸಿಕ ಶಕ್ತಿಯನ್ನು ವ್ಯಯಮಾಡುವುದು ಸರಿಯೆ ಎಂದವನು ಯೋಚಿಸಿ ದನು. ಇಷ್ಟಾದರೂ, ಅವಳ ಮುಂದೆ ಹೇಳಬಹುದಾದ ಮಾತಿನ ಮಾಟಧಾಟಿಗಳು ಸಾರ್ವಜನಿಕ ವರದಿಯೋ ಎನ್ನುವಂಥ ರೀತಿಯಲ್ಲಿ ಸುಸ್ಪಷ್ಟವಾಗಿ ನಿಷ್ಕೃಷ್ಟವಾಗಿ ಅವನ ಮನಸ್ಸಿನಲ್ಲಿ ಆಕಾರ ಪಡೆದುವು.

'ಮುಂದಿನ ಕೆಲವು ಸಂಗತಿಗಳನ್ನು ನಾನು ಸ್ಪಷ್ಟಪಡಿಸಬೇಕು: ಮೊದಲನೆಯ ದಾಗಿ, ಸಾರ್ವಜನಿಕಾಭಿಪ್ರಾಯಕ್ಕೆ ಹಾಗೂ ಸಭ್ಯಾಚಾರಗಳಿಗೆ ಕಟ್ಟಬಹುದಾದ ಬೆಲೆಯ ವಿವರಣೆ, ಎರಡನೆಯದಾಗಿ, ವಿವಾಹ ಸಂಬಂಧವಾದ ಧಾರ್ಮಿಕ ಮಹತ್ವ, ಮೂರನೆಯ ದಾಗಿ, ಅಗತ್ಯವಾದರೆ ನಮ್ಮ ಮಗ ಮುಂದೆ ಅನುಭವಿಸಬೇಕಾದ ಸಂಕಟ, ನಾಲ್ಕನೆಯ ದಾಗಿ, ಅವಳಿಗೊದಗಬಹುದಾದ ಕೇಡು. ಕರೆನಿನ್ ಕೈಬೆರಳುಗಳನ್ನು ತಳಕುಹಾಕಿ, ಅಂಗೈಗಳನ್ನು ನುಲಿದು, ಗೆಣ್ಣುಗಳಲ್ಲಿ ನೆಟಿಕೆ ಬರುವವರೆಗೆ ತೋಳುಗಳನ್ನು ಚಾಚಿದನು. ಈ ಅಭಿನಯ—ಅಂದರೆ ಬೆರಳುಗಳ ತಳಕು ಮತ್ತು ಗೆಣ್ಣುಗಳ ನೆಟಿಕೆಯಿಂದ ಅವನಿಗೆ ಯಾವಾಗಲೂ ಸಮಾಧಾನವಾಗುತ್ತಿತ್ತು, ಆಲೋಚನೆಗಳ ಸ್ಪಷ್ಟತೆಗೆ ಸಹಾಯವಾಗು ತ್ತಿತ್ತು. ಆ ಸಮಯದಲ್ಲಂಥ ಅಭಿನಯ ಅತ್ಯವಶ್ಯವಾಗಿತ್ತು.

ದ್ವಾರ ಪ್ರದೇಶದಲ್ಲಿ ಸನ್ನಿಹಿತವಾಗುತ್ತಿದ್ದ ವಾಹನದ ಶಬ್ದ ಅವನ ಕಿವಿಯ ಮೇಲೆ ಬಿದ್ದಿತು. ಅವನು ದಿವಾನಖಾನೆಯ ನಡುವೆಯೆ ನಿಂತುಕೊಂಡನು.

ಮಹಡಿಯನ್ನೇರುತ್ತಿದ್ದ ಹೆಂಗಸಿನ ಹೆಜ್ಜೆ ಕೇಳಿಸಿತು. ಭಾಷಣ ಸಿದ್ಧಪಡಿಸಿ ಕೊಂಡಿದ್ದ ಕರೆನಿನ್ ಮತ್ತೊಂದು ನೆಟಿಕೆಯನ್ನು ನಿರೀಕ್ಷಿಸಿ, ತಳಕುಹಾಕಿಕೊಂಡಿದ್ದ ಬೆರಳುಗಳನ್ನು ಮುರಿಯುತ್ತ ನಿಂತನು. ನೆಟಿಕೆ ಚಿಮ್ಮಿತು.

ಅವಳು ಹತ್ತಿರ ಬರುತ್ತಿದ್ದುದನ್ನು ಮೆಟ್ಟಿಲೇರುತ್ತಿದ್ದ ಅವಳ ಹಗುರ ಹೆಜ್ಜೆಗಳ ಸದ್ದು ಸಾರಿತು. ತಾನು ಸಿದ್ಧಪಡಿಸಿಕೊಂಡಿದ್ದ ಭಾಷಣ ತೃಪ್ತಿಕರವಾಗಿದ್ದರೂ, ಭಾವೀ ಸಂದರ್ಶನಕ್ಕವನು ಹೆದರಿದನು.

೯

ಅನ್ನಾ ತನ್ನ ತಲೆ ಮುಸುಕಿನ ಕುಚ್ಚಿನೊಡನೆ ಆಟವಾಡುತ್ತ, ನತಶಿರೆಯಾಗಿ ಮೆಟ್ಟಲು ಹತ್ತಿದಳು. ಅವಳ ಮುಖ ಪ್ರಕಾಶಮಾನವಾಗಿತ್ತು; ಆದರದು ಆನಂದದ ಪ್ರಕಾಶವಾಗಿರಲಿಲ್ಲ; ರಾತ್ರಿಯ ಕತ್ತಲಲ್ಲಿ ಪ್ರಜ್ವಲಿಸುವ ಅಗ್ನಿಯ ಭಯಾನಕ ಪ್ರಕಾಶ ದಂತಿತ್ತು. ಗಂಡ ಕಣ್ಣಿಗೆ ಬಿದ್ದ ಕೂಡಲೇ ಆದೆ ತಾನೆ ನಿದ್ರೆ ತಿಳಿದೆದ್ದವಳಂತೆ ತಲೆಯೆತ್ತಿ, ಮುಗುಳುನಗೆ ಸೂಸಿದಳು.

(ಮುಂದುವರಿಯುವುದು)

(೬೪ನೇ ಪುಟದಿಂದ)
ಒಳನೋಟದ ಮಾತನ್ನಾಡುತ್ತಾನೆ: "ಸಂಪ್ರದಾಯಶೀಲರಿಗೆ ಕ್ರಾಂತಿಕಾರಿ ಅನಿಸುವ ಮೋಡಿಯನ್ನುಂಟುಮಾಡುವ ಮೇಲಿನ ಸಾಲುಗಳಲ್ಲಿ ಅಡಗಿರುವ ವಿರೋಧಾಭಾಸ, ಹಸಿವಿನ ಸಮಸ್ಯೆಯನ್ನು ಅನುಕಂಪೆಯ ಮಟ್ಟದಲ್ಲಿ ಮಾತ್ರ ಗ್ರಹಿಸಿ ವಾಸ್ತವ ಅನುಭವವನ್ನು ಅಂತರ್ಯೀಕರಣಗೊಳಿಸಲಾರದೆ ಹೋದುದರ ಫಲವಾಗಿ ಉಂಟಾಗಿದೆ....ಅಂತರಾಳದ ಈ ಮೊರೆತ ಗರ್ಜನೆಯಾಗುವುದಾದರೂ ಹೇಗೆ? ಮೇಲೆ ಉದಾಹರಿಸಿದ ಸಾಲುಗಳೊಂದಿಗೆ 'ಬರಿದೋ ಬರಿದು ತೆರವೋ ತೆರವು ಬಡವರ ಬಗ್ಗರ ಕುತ್ತಿನ ಚೀಲ' ಎಂಬೀ ಸಾಲುಗಳು ಬಡತನದ, ಹಸಿವಿನ ಕುರಿತ ಘೋರವಾದ ಮತ್ತು ಚೊಕ್ಕವಾದ ಹೇಳಿಕೆ (statement) ಯಾಗಿ ನಿಲ್ಲುತ್ತವೆ ವಿನಾ, ಹಸಿವಿನ ರೂಪದ ಶೋಷಣೆಯ ಆಳಕ್ಕೆ ಪಾತಾಳ ಗರಡೆ ಹಾಕುವುದಿಲ್ಲ ....ಪ್ರಶೆಯಾಗಿ ಬಡತನದ ಸಮಸ್ಯೆಯ ಬಗ್ಗೆ ಲೇಖಕನ ವ್ಯಾಖ್ಯಾನದ ಮೂಲಕವೇ ಕವಿತೆ ನಮ್ಮ ಲಕ್ಷ್ಯ ಸೆಳೆಯುವ ಹಾಗಾಗಿದೆ. ಈ ಕೊರತೆ ನವೋದಯಕಾಲದ ಲೇಖಕರೆಲ್ಲರ ಕೊರತೆಯಾಗಿದ್ದು, ಅವರ ಸಾಮಾಜಿಕ ಕಾಳಜಿಯ ತೀವ್ರತೆಯನ್ನೂ, ಸಾಚಾತನವನ್ನೂ ಪ್ರಶ್ನಿಸುವ ಹಾಗೆ ಮಾಡುತ್ತದೆ" (೭೯, ಒತ್ತು ನನ್ನದು).

ಸಂಪ್ರದಾಯಶೀಲ, ಮೋಡಿ, ಚೊಕ್ಕವಾದ ಹೇಳಿಕೆ, statement, ಲೇಖಕನ ವ್ಯಾಖ್ಯಾನ, ಕಾಳಜಿಯ ತೀವ್ರತೆಯನ್ನೂ ಸಾಚಾತನವನ್ನೂ ಪ್ರಶ್ನಿಸ (ಬೇಕಾಗಿರುವಿಕೆ) —ಇವು ಬೇಂದ್ರೆ ಕಾವ್ಯದ ಸತ್ಯಾಸತ್ಯಗಳನ್ನು ಬಯಲಿಗೆಳೆದಿವೆ. ಜಾನ್ಸನ್ ಎನ್ನುವ ಕವಿ ಮಿಲ್ಟನ್ನಿನ ಲಿಸಿಡಾಸ್ ಎನ್ನುವ ಶೋಕ ಗೀತೆಯ ಬಗ್ಗೆ ಮಾತನಾಡುತ್ತಾ "ಎಲ್ಲಿ ಕಲ್ಪನೆಯ ಭೃಂಗದ ಬೆನ್ನೇರುವುದಕ್ಕೆ ವಿರಾಮವಿದೆಯೋ ಅಲ್ಲಿ ದುಃಖದ ಲವಲೇಶವೂ ಇರುವುದಿಲ್ಲ (There is but little grief where there is leisure for fiction)" ಎನ್ನುತ್ತಾ ಮಿಲ್ಟನ್ನಿನ ಲಿಸಿಡಾಸ್ ಕೇವಲ ಕವಿಸಮಯಗಳ ಪರಿಶ್ರಮವಾಗಲಿ, ಪ್ರಾಮಾಣಿಕವಾದ ಶೋಕವಲ್ಲವೆಂಬುದನ್ನು ಸಾಬೀತು ಮಾಡುವಂತೆ, ಆಕ್ಕೆ ನಾವು ಮಿಲ್ಟನ್ನಿನಂತೆ ವಿಭೂತಿ ಪೂಜೆ ಮಾಡುತ್ತಿರುವ ಬೇಂದ್ರೆಯ ಬಣ್ಣವನ್ನು ಬಯಲಿಗೆಳೆದಿದ್ದಾನೆ—ಅದನ್ನು ಕಾವ್ಯದ ಪ್ರಾಕ್ಟಿಕಲ್ ಕ್ರಿಟಿಸಿಸಮ್ಮಿನ ಸಾಕ್ಷ್ಯದಲ್ಲಿ ನಿಲ್ಲಿಸಿದ್ದಾನೆ.

ಆದರೆ ಬೇಂದ್ರೆಯ ಈ "ಮೋಡಿ"ಗೆ, "ಶಬ್ದಗಳ ಗುಂಗುಂಗಾನಕ್ಕೆ" ನಾವೆಷ್ಟು ಮಾರುಹೋಗಿದ್ದೇವೆ, ಮಾರಿಕೊಂಡೂ ಬಿಟ್ಟಿದ್ದೇವೆಯೆಂದರೆ, ನಮ್ಮಲ್ಲಿ ಇಂಗ್ಲಿಷ್ ಸಾಹಿತ್ಯದ ಪರಿಶ್ರಮವುಳ್ಳ ಉಪಾಧ್ಯಾಯರುಗಳೂ, ಬರಹಗಾರರೂ ಆಗಿರುವ ರಾಮಚಂದ್ರ ದೇವರಂಥಾ ಓದುಗರೂ ಬೇಂದ್ರೆಯ ಮೋಡಿಗೆ ಬಲಿಬಿದ್ದಿದ್ದಾರೆ:

> "ಆತ (ಕೃಷ್ಣ) ಬೆಳಗನ್ನ ಹೊರತಾಗಿ ನೋಡಿದ್ದ. ಅದುವರೆಗೆ ಬೆಳಗಿನ ಹೊತ್ತು ಗಿಡಗಂಟಿಯ ಕೊರಳೊಳಗಿಂದ ಹಕ್ಕಿಗಳು ಹಾಡುತ್ತಿದ್ದುವು. ಅದರ ರತ್ನರಸದ ಕಾರಂಜಿಯಾಗಿ ಗಂಧರ್ವರ ಸೀಮೆಯಾಗುತ್ತಿತ್ತು.

> ಬೇಂದ್ರೆ ಕಂಡ ಈ ಅದ್ಭುತ ಬೆಳಗಿನಲ್ಲಿ ಹಕ್ಕಿಗಳು ಮತ್ತು ಗಂಧರ್ವರು ಮತ್ತು ಶಾಂತಿರಸ ಇರುತ್ತಿದ್ದುವು. ಆದರೆ ಕೃಷ್ಣ ಮೊದಲನೆಯ ಸಲ ಬೆಳಗಿನ ಹೊತ್ತು ಹೊಳೆಯಲ್ಲಿ ಬಟ್ಟೆ ಒಗೆಯುವ ಹೆಂಗಸರಿರುತ್ತಾರೆ. ಹೊಳೆಬದಿಯಲ್ಲಿ ಬಹಿರ್ದೆಶೆಗೆ ಬಂದವನೊಬ್ಬ ಅವರ ಎತ್ತಿದ ಸೀರೆಡೆಯಿಂದ ಇಣುಕುವ ತೊಡೆಗಳನ್ನು ಕಣ್ಣಲ್ಲಿ ನೆಕ್ಕುತ್ತಿರುತ್ತಾನೆ ಎಂಬುದನ್ನು ಕಂಡಿದ್ದ. ಆ ಬೆಳಗು ಬೇಂದ್ರೆಯವರು ಕಂಡ ಬೆಳಗಿನಷ್ಟೆ ಶಾಂತಿಯುತವಾದದ್ದಾಗಿರಲಿಲ್ಲ. ಅದು ದಿನನಿತ್ಯದ ಜೀವನ ರಗಳೆ ತಾಪತ್ರಯಗಳ ಸುರುವಿನ ಗಳಿಗೆಯಾಗಿತ್ತು. ಆದರೆ ಕೃಷ್ಣ ಬರೆಯುವ ಹೊತ್ತಿಗೆ ಶಾಂತಿಯ ಬೆಳಗು ಮರೆಯಾಗಿ ಅದು ಕೆಲಸ ಪ್ರಾರಂಭಿಸುವ ರಗಳೆಗಳ ಮೊದಲ ಕ್ಷಣವಾಗಿ ಮಾರ್ಪಟ್ಟಿತ್ತು. ಹೀಗೆ ಕೃಷ್ಣ ಮಾರ್ಪಟ್ಟ ಒಂದು ಸಂವೇದನೆಗೆ ಮಾತುಕೊಟ್ಟಿದ್ದ" (ಕನ್ನಡ ಪ್ರಭ ೨೯-೧-೮೯, ಪು. ೪).

ಇದೀಗ ಆರ್ಕೆಯ ವಿಮರ್ಶೆಯ ಸ್ವೋಪಜ್ಞತೆಗೂ, ದೇವನ ಸಂಪ್ರದಾಯ ಶರಣತೆಗೂ ಇರುವ ಬದುಕು ಸಾವಿನ ವ್ಯತ್ಯಾಸ. ದೇವನ ವಿಮರ್ಶೆಯನ್ನು ನಾನಿಲ್ಲಿ ನಮ್ಮಲ್ಲಿನ ಇಂಗ್ಲಿಷ್ ಸಾಹಿತ್ಯದ ಪರಿಶ್ರಮವುಳ್ಳವರೂ, ಇಂಗ್ಲಿಷ್ ಅಧ್ಯಾಪಕರೂ ಆಗಿ ಬರೆಯುತ್ತಿರುವವರ ವಿಮರ್ಶೆಯನ್ನು ಪ್ರತಿನಿಧಿಸುವ ವಿಮರ್ಶೆಯನ್ನಾಗಿ ಪ್ರತಿಕ್ರಿಯಿಸುತ್ತಿದ್ದೇನೆ, ಯಾಕೆಂದರೆ ಸಾಹಿತ್ಯವನ್ನು ಸಮಾಲೋಚಿಸಿ ಬರೆಯುತ್ತಿರುವ ಮುಖ್ಯರೆನಿಸಿಕೊಂಡವರಲ್ಲಿ ಅನೇಕರು ಇಂಗ್ಲಿಷ್ ಪರಿಶ್ರಮವುಳ್ಳವರೂ, ಹಾಗೂ ಇಂಗ್ಲಿಷ್ ಅಧ್ಯಾಪಕರೂ ಆಗಿರುವವರು. ಅವರು ಅವರಲ್ಲಿರುವ ಇಂಗ್ಲಿಷ್ ಪರಿಶ್ರಮದ ಆತ್ಮವಿಶ್ವಾಸದಿಂದ ಅಥವಾ ಅಹಂಕಾರದಿಂದ ಕನ್ನಡ ಕಾವ್ಯದ ವಿಮರ್ಶೆ ಮಾಡುವಾಗ ಒಂದು ರೀತಿಯ ಅಧಿಕಾರದ ಗತ್ತು, ಗರ್ವಗಳಿರುತ್ತವೆ; ಅವರ ವಿಮರ್ಶೆಯಲ್ಲಿ ಹುಡುಕುವ, ಅನ್ವೇಷಣೆಯ ವಿನಯ, ಋಜುಭಾವಗಳು ಕಡಿಮೆಯಾಗಿದ್ದು, ತೀರ್ಪು ತೀರ್ಮಾನಗಳ ನ್ಯಾಯಾಧಿಪತ್ಯ ಹೆಚ್ಚಾಗಿರುತ್ತದೆ. ಉದಾಹರಣೆಗೆ ದೇವ ಹೇಳಿರುವ ಮಾತುಗಳಲ್ಲೇ ಕೃಷ್ಣ "ಬೆಳಗನ್ನ ಹೊಸತಾಗಿ ನೋಡಿದ....ಆದರೆ....ಅದುವರೆಗೆ ಬೆಳಗಿನ ಹೊತ್ತು ಗಿಡಗಂಟೆಯ ಕೊರಳೊಳಗಿಂದ ಹಕ್ಕಿಗಳು ಹಾಡುತ್ತಿದ್ದುವು. ಅದು ರತ್ನರಸದ ಕಾರಂಜಿಯಾಗಿ, ಗಂಧರ್ವರ ಸೀಮೆಯಾಗುತ್ತಿತ್ತು", ಎನ್ನುವಲ್ಲಿ ಬೇಂದ್ರ ಬೆಳಗು ಹೇಗೆ "ಹೊಸ" ತಲ್ಲ, ಹೇಗೆ ಈ ಕ್ಲೀಷೆಗಳಾದ "ಗಿಡಗಂಟೆ", "ಹಕ್ಕಿಗಳ ಹಾಡು" "ರತ್ನರಸದ ಕಾರಂಜಿ", "ಗಂಧರ್ವರ ಸೀಮೆ" ಎನ್ನುವ ಪದಗಳಲ್ಲಿ, "ಕವಿಸಮಯ"ಗಳಲ್ಲಿ ಯಾವುದೇ ರೀತಿಯ ಸಂವೇದನೆಯಾಗಲೀ, ಭಾವವಾಗಲೀ ಬರಲಿಕ್ಕೆ ಸಾಧ್ಯವೇ ಇಲ್ಲ ಎನ್ನುವ ಸತ್ಯ ಹೊರಬಿದ್ದರೂ, ಸಂಪ್ರದಾಯದ ಶರಣಾಗತಿ ಎಷ್ಟರಮಟ್ಟಿನ ದಾಸ್ಯದ್ದಾಗಿದೆ ಯೆಂದರೆ ಇದನ್ನು "ಬೇಂದ್ರೆ ಕಂಡ ಈ ಅದ್ಭುತ ಬೆಳಗು" ಎನ್ನುತ್ತದೆ, ಹಾಗೂ "ಈ ಅದ್ಭುತ ಬೆಳಗಿನಲ್ಲಿ ಹಕ್ಕಿಗಳು ಮತ್ತು ಗಂಧರ್ವರು ಮತ್ತು ಶಾಂತಿರಸ ಇರುತ್ತಿದ್ದುವು" ಎನ್ನುತ್ತದೆ. ಈ ಬೆಳಗು ಹೇಗೆ "ಅದ್ಭುತ", ಹೇಗೆ ಇದರಲ್ಲಿ "ಗಂಧರ್ವರು" ಇರು

ತ್ರಿದ್ವರು, ಹೇಗೆ ಇದರಲ್ಲಿ "ಶಾಂತಿರಸ" ಸೋರುತ್ತಿತ್ತು ? ; ಇದರ ಅದ್ಭುತತೆ ಹೇಗೆ ತಾನೆ ಓದುಗನಿಗೆ ಸಾಕ್ಷಾತ್ಕಾರವಾಯಿತು, ಹೇಗೆತಾನೆ "ಗಂಧರ್ವರು" ಇವನಿಗೆ ಪ್ರತ್ಯಕ್ಷ ರಾದರು, ಯಾವ ಮಾಯದಿಂದ "ಈ ಶಾಂತಿರಸ" ವೆನ್ನುವುದು ಇವನ ಅನುಭಾವದ ಜಿಹ್ವೆಗೆ ಸೋರಿಬಂತು ?—ಈ ಪ್ರಶ್ನೆಗಳಿಗೆ ಉತ್ತರವಿಲ್ಲ. ಆರ್ಕೆ ಹೇಳಿರುವ ಈ "ಸಂಪ್ರದಾಯಶೀಲ(ತೆ)," ನೋಡಿ, ಜೊಳ್ಳಾದ ಹೇಳಿಕೆ, statement, ಲೇಖಕನ ವ್ಯಾಖ್ಯಾನ "ಇವಿಷ್ಟೇ ಸಾಕು, ಭಾವೋದ್ರೇಕಕ್ಕೆ, ರಸಾನಂದದ ಬ್ರಹ್ಮಾನಂದಕ್ಕೆ, ಯಾಕೆಂದರೆ ಅದೆಲ್ಲಾ ಬೇಂದ್ರೆ, ಬೇಂದ್ರೆಯೆಂದರೆ ಸಂಪ್ರದಾಯ, ಸನಾತನ ಸಂಸ್ಕೃತಿ—ಗಂಧರ್ವರು, ದೇವರು, ಶಾಂತಿರಸ—ಅದಕ್ಕೇ ! ಅಲ್ಲಾ, ಹೇಗಾದರೂ, ಯಾವ ವಿಪರೀತ ಕಲ್ಪನೆಯಲ್ಲಾದರೂ, ಬೆಳಗು ಎನ್ನುವ ದಳ್ಳುರಿ, ಎಲ್ಲಾ ಜಡವನ್ನೂ ಚೈತನ್ಯಗೊಳಿಸಿ ತಾಂಡವವಾಡುವ ಸೂರ್ಯೋದಯ, ಶಾಂತಿರಸವನ್ನು ಸ್ಫುರಿಸಬಲ್ಲುದು? ಶಾಂತಿರಸವೆನ್ನುವುದು ಬೆಳಕು ಕಳೆದು ಕತ್ತಲು ಆವರಿಸುವ, ಹಕ್ಕಿಗಳು ಗೂಡು ಸೇರಿ, ದನಕರುಗಳು ಹಟ್ಟಿ ಸೇರಿ, ರೈತಕಾರ್ಮಿಕರು ಮನೆ ಸೇರಿ, ನೆಮ್ಮದಿಯಲ್ಲಿರುವ ಪ್ರಶಾಂತತೆಯಲ್ಲಿ ಮಾತ್ರ ಸಾಧ್ಯವಾಗುವ ಅನುಭವವಾದೀತು. ಇಲ್ಲಿ ನೋಡಿ, ವರ್ಡ್ಸ್‌ವರ್ತ್ ಕವಿಯ ಸಾನೆಟ್ಟೊಂದರಲ್ಲಿ, ಸೂರ್ಯಾಸ್ತದಲ್ಲಿನ ಶಾಂತಿರಸದ ಸಾಕ್ಷಾತ್ಕರಣ ಎಂತಹ ಕಣ್ಣು ಕಟ್ಟುವ ರೂಪಕಗಳಲ್ಲಿ, ಜೀವಂತ ಪ್ರತಿಮೆಗಳಲ್ಲಿ ಹರಳು ಗಟ್ಟಿದೆ :

It is a beauteous evening, calm and free
The holy time is quiet as a Nun
Breathless with adoration : the broad sun
In sinking down in tranquility

ಇದೊಂದು ಸೌಂದರ್ಯದ ಸಂಜೆ, ಶಾಂತ,
ಈ ಪುನೀತ ಮುಹೂರ್ತ, ಭಿಕ್ಷುಣಿಯಂತೆ ಸ್ತಬ್ಧ,
ಉಸಿರಾಡದ ಸಮಾಧಿ : ವಿಶಾಲ ರವಿ
ಇಳಿಯಿಳಿಯುತ್ತಾ ಶಾಂತ, ಪ್ರಶಾಂತ

ಇಲ್ಲಿ ಶಾಂತಿರಸದ ಸಾಕ್ಷಾತ್ಕರಣವಿದೆ—ಇಂದ್ರಿಯಗ್ರಾಹ್ಯವಾದ ಪ್ರತಿಮೆಗಳಲ್ಲಿ ಅತೀಂದ್ರಿಯವಾದ ಶಾಂತಿ ಸಮಾಧಿಗಳ ಅನುಭವವಿದೆ. ಇಂಥದನ್ನು ಕಂಡುಕೊಂಡ ವಿಮರ್ಶಕನೊಬ್ಬ ಹೇಗೆ ತಾನೇ

ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ-ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ

ಎನ್ನುವ ಹೇಳಿಕೆಗಷ್ಟೇ, ಕೇವಲ statement ಗಷ್ಟೇ ಮಾರುಹೋಗಿ ಶಾಂತಿರಸದ ದೀಕ್ಷಿತನಾಗುತ್ತಾನೆ?

ಬೇಂದ್ರೆಯ "ಶಬ್ದದ ಗಾನದ ಸಂಗಂ" ಈ ನಮ್ಮ ಇಂಗ್ಲಿಷ್ ಸಾಹಿತ್ಯದ ಪ್ರಬುದ್ಧರನ್ನ, ಕಿಂದರಜೋಗಿಯಂತೆ ಸಮ್ಮೋಹನಗೊಳಿಸಿ, ತಲೆದೂಗಿಸಿ, ತೂಕಡಿಸ ಹಚ್ಚುತ್ತದೆ, ಹಚ್ಚುತ್ತಿದೆ. ಈ ತೂಕಡಿಕೆಯ ಜೊಂಪಿನಲ್ಲಿ ಅವರು ಸೂರ್ಯೋದಯದಲ್ಲೂ ಶಾಂತಿರಸದ ರಸಾಭಾಸವನ್ನು ಸವಿಯುವ ರಸಋಷಿಗಳಾಗಿಬಿಡುತ್ತಾರೆ, ಬಿಟ್ಟಿದ್ದಾರೆ!

ರಾಮಚಂದ್ರದೇವ ಬೇಂದ್ರೆಯ "ಬೆಳಗು" ಗೆ ಎಷ್ಟು ಎಚ್ಚರದಪ್ಪಿದ್ದಾನೋ, ಅಷ್ಟೇ ಕೃಷ್ಣನ "ಬೆಳಗು"ಗೂ ನಿದ್ದೆಹೋಗಿದ್ದಾನೆ—ಕೃಷ್ಣನ ಬೆಳಗು ದೇವನಿಗೆ "ರಗಳೆ—ತಾಪತ್ರಯ" ಗಳಾಗಿವೆ. ಯಾವ ಕೃಷ್ಣನ "ಬೆಳಗು" ಜೀವೋತ್ಕರ್ಷದ ಕೇಕೆಯೋ, ಜೀವಾಕ್ರಮಣದ ಮಮ್ಮಲ ಮರುಗುವಿಕೆ, ಅದು "ರಗಳೆ—ತಾಪತ್ರಯ" ಗಳಾಗಿರುವುದು ತುಂಬಾ ಶೋಚನೀಯವೂ, ಹಾಸ್ಯಾಸ್ಪದವೂ ಆಗಿರುವ ಸಂಗತಿ. ಇಲ್ಲಿ ನೋಡಿ, ಹೇಗೆ ಜೀವೋತ್ಕರ್ಷದ ಕೇಕೆ ಜೀವಾಕ್ರಮಣದ ಕಂಪನದೊಂದಿಗೆ ಬೆರೆತು, ಸೃಷ್ಟಿಯ ಬದುಕು—ಸಾವಿನ ದ್ವಂದ್ವವನ್ನು ಹೃದಯಂಗಮವಾಗಿ ಧ್ವನಿಸುತ್ತದೆ:

ಕಿಲುಬಿಡಿದ ಹಳೆಯ ಕವಿಸಮಯಗಳ
ಥಳಥಳಿಸಿ ಹೊಳೆಯಲೆಂದಾಜ್ಞೆ ಬೆಳಗಲು
ಹೊಳೆಯ ಕಡೆ ಹೊರಟಾಗ—
ಹಡೆದ ಹೂಮರಿಗಳ ಬಿಟ್ಟೋಡಲಾಗದೆಯೆ
ಲಂಟಾನಾ ಪೊದೆಯೊಳಗೆ ಪತರಗುಟ್ಟುವ
ಬೆಳ್ಳಿ ಮೊಲವ
ನನ್ನ ಮನೆ ಧಾಂಡಿಗ ನಾಯಿ ಗಬಕ್ಕನೆ
ಕಚ್ಚಿ ಕಿತ್ತೆಳೆದೊಡನೆ ರಕ್ತ ಚಿಲ್ಲೆಂದಾಗ—
ನನ್ನೊಳಗನಲಿ ಬೆಳಗಾಯಿತು.

"ಹಡೆದ ಹೂಮರಿ"—ಎಂಥಾ ನವುರಾದ ಸ್ವೋಪಜ್ಞ ಸಾಕ್ಷಾತ್ಕಾರಣ, "ಹೂಮರಿ" ಎನ್ನುವ ಹೊಸ ನುಡಿನಾಣ್ಯವನ್ನೇ ಟಂಕಿಸಿಕೊಂಡ, ಕಾಯಿನ್ (coin) ಮಾಡಿಕೊಂಡ, ಕೋಮಲವಾದ "ಹೂ"ವನ್ನೂ, ನವುರಾದ "ಮರಿ"ಯನ್ನೂ ಮಾರ್ದವತೆಯ ಸಂವೇದನೆಯಲ್ಲಿ ಒಂದುಗೂಡಿಸಿದ ಅನುಭವದ ವಾಸ್ತವ! ತಾಯ್ತನದ ಕರುಳ ತುಯ್ದದಲ್ಲಿ "ಹಡೆದ ಹೂಮರಿಗಳ ಬಿಟ್ಟೋಡಲಾರದೆಯೆ ಲಂಟಾನಾ ಪೊದೆಯೊಳಗೆ ಪತರಗುಟ್ಟುವ (ಎಷ್ಟು ಯುಕ್ತವಾದ ಕಣ್ಣು ಕಟ್ಟುವ ಭಯದ ಚಿತ್ರಣ, "ಪತರಗುಟ್ಟು!") ಬೆಳ್ಳಿ ಮೊಲ" ತಾಯ್ತನಕ್ಕೆ ಹುತಾತ್ಮವಾದ ದಾರುಣ ಚಿತ್ರ. "ಧಾಂಡಿಗ ನಾಯಿ ಗಬಕ್ಕನೆ ಕಚ್ಚಿ ಕಿತ್ತೆಳೆದಾಗ (ಎಷ್ಟು ವಾಸ್ತವವಾದ ಕ್ರಿಯಾಕ್ಷಣಗಳ ಏಕ ಗ್ರಹಿಕೆ—ಗಬಕ್ಕನೆ, ಕಚ್ಚಿ, ಕಿತ್ತು, ಎಳೆಯುವ ಕ್ರಿಯಾಕ್ಷಣಗಳ ಮಿಂಚಿನ ಕ್ರಿಯೈಕ್ಯತೆ.) "ರಕ್ತ ಚಿಲ್ಲೆ"ನ್ನುವ ಅವಾಕ್ಕು. ರಕ್ತ ಚಿಲ್ಲೆಂದು ಚಿಮ್ಮಲಿಲ್ಲ, ಯಾಕೆಂದರೆ

ಚಿಲ್ಲೆನ್ನುವುದು, ಚಿಮ್ಮುವುದು ಬೇರೆ ಬೇರೆ ಕ್ರಿಯೆಗಳಲ್ಲ: ಚಿಲ್ಲೆನ್ನುವುದೇ ಚಿಮ್ಮು. "ರಕ್ತ ಚಿಲ್ಲೆಂದಾಗ" ಎನ್ನುವಲ್ಲಿ "ಗಬಕ್ಕನೆ ಕಚ್ಚಿ ಕಿತ್ತೆಳೆದ"ಲ್ಲೇ "ರಕ್ತ ಚಿಲ್ಲೆನ್ನುವ", ಕಾಲದ ಗತಿಯನ್ನೇ ಗಕ್ಕನೆ ನಿಲ್ಲಿಸಿ ಕ್ರಿಯೆಯನ್ನೇ ತಂತಾನಾಗಿಸಿ ಅನಂತಗೊಳಿಸಿರುವ ಪವಾಡ.

"ಕವಿಯಾದವ ಚಿತ್ರಿಸುವುದಿಲ್ಲ, ಕಣ್ಣಿಗೊಡ್ಡಿ ಬಿಡುತ್ತಾನೆ, The poet does not describe, he presents" ಎನ್ನುವ ಎಜ್ರಾ ಪೌಂಡಿನ ಮಾತನ್ನು ಎಷ್ಟು ಸಾಕ್ಷಾತ್ಕರಿಸುತ್ತದೆ. ಗಬಕ್ಕನೆ ಕಚ್ಚಿ ಕಿತ್ತೆಳೆವದ್ದೇ ರಕ್ತ ಚಿಲ್ಲೆನ್ನಬೇಕಾದರೆ, ಅದು ನಿಜಕ್ಕೂ "ಬೆಳಗೇ", ಅರಿವಿನ ಸ್ಫೋಟವೇ—"ನನ್ನೂರಲ್ಲಿ ಬೆಳಗಾಯಿತು".

ಇಲ್ಲಿ ಗಮನಿಸಬೇಕಾದ ಒಂದು ದಾರ್ಶನಿಕಾಂಶವೇನೆಂದರೆ ಪ್ರಕೃತಿಯಲ್ಲಿ ಹಿಂಸೆಯೆನ್ನುವುದಿಲ್ಲ—ಅದು ಮಾನವಜನಿತವಾದ ಪ್ರಭೇದವಷ್ಟೇ ಎನಿಸುವಿಕೆ. ನಾಯಿ "ಗಬಕ್ಕನೆ ಕಚ್ಚಿಕಿತ್ತೆಳದ"ದ್ದೇ "ರಕ್ತ ಚಿಲ್ಲೆ"ನ್ನ ಬೇಕಾದರೆ, ತಾಯಿ ಮೊಲಕ್ಕೆ ನೋವನ್ನ, ಕತ್ತಿ ಕಿತ್ತೆಳೆಯ ಹಿಂಸೆಯನ್ನ ಅನುಭವಿಸುವುದಕ್ಕೆ ಮುಂಚೆಯೇ ರಕ್ತ ಚಿಲ್ಲೆಂದು ಅದರ ಪ್ರಾಣಾಪಹರಣವಾಗುತ್ತದೆ: ಆದ್ದರಿಂದ ಬೆಳಗು ಜೀವೋತ್ಕರ್ಷದ ಬುಗ್ಗೆಯೇ ಸರಿ; ಅದರೊಂದಿಗೆ ತಾಯಿ ಮೊಲ ತನ್ನನ್ನು ತಾನು ಬಲಿಗೊಟ್ಟು ತನ್ನ ಹೂಮರಿ ಸಂತಾನವನ್ನು ಬೆಳಗಿಸಿದ್ದೂ, ಬೆಳಗಿನ ಜೀವೋತ್ಕರ್ಷವೇ, ಸೃಷ್ಟಿಯ ಚಿರಂಜೀವತ್ವವೇ.

"ಬೆಳಗು" ಕವನದ ಈ ಪಂಕ್ತಿ ಕವನದ ಜೀವಾಳವೇ ಸರಿ. ಇದೊಂದು ಒಲವಿನ, ಅನುಕಂಪದ ಮಿಂಚಿನ ದರ್ಶನ. ಈ ಪಂಕ್ತಿಯಲ್ಲಿ, ಹಿಂದಿನ ಪಂಕ್ತಿಗಳ ಕಾಮದ ಬಯಕೆ ಪ್ರೇಮದ ಸಾಂತ್ವನವಾಗಿ, ತಾಯ್ತನದ ಬಲಿದಾನವಾಗಿ ಸಾಫಲ್ಯತೆಯನ್ನು ಪಡೆದುಕೊಳ್ಳುತ್ತದೆ. ಇದರ ಮುಂದಿನ ಪಂಕ್ತಿ ಮುದಿತನದ ಕಾಮಲಾಲಸೆ ಹಾದರದ ನಗೆಯಾಗಿ ಬೆಳಕು ಹರಿಸುತ್ತದೆ:

ಹೊಳೆಯ ನಡು ನೀರೊಳಗೆ
ಬುಳಬುಳನೆ ಮುಳಗುತ್ತ ಒಣಮಂತ್ರ ವಟಗುಡುವ
ಅರವತ್ತರ ಗಡಿಮುಟ್ಟಿದ ಕಚ್ಚೆಹರುಕ ಶಾನುಭೋಗ;
ಕೆರೆಗೆ ಬಂದೂರ ಗರತಿಯರು ಮೊಣಕಾಲಮಟ
ನೀರೊಳಗೆ ಸೀರೆ ಮೇಲೆತ್ತಿ ನೀರ ಮೊಗೆವಾಗವರ
ಗಡಗುಡುವ ತುಂಬುತೊಡೆಗಳ ಕಂಡು ಹಾದರದ ನಗೆ ನಕ್ಕಾಗ
ನನ್ನೂರಲಿ ಬೆಳಗಾಯಿತು.

ಬೆಳಗು ಬೆಳಗುವುದು ಜೀವನನ್ನೇ ಯವ್ವನದ ತುಂಬು ತೊಡೆಗಳು ಗಡಗುಡುವುದನ್ನೇ, ಜೀವೋತ್ಸಾಹ ಜೀವೋತ್ಕರ್ಷಗಳನ್ನೇ, ಬಿಸಿರಕ್ತ ಪುಟಿದು ಓಕುಳಿಯಾಡುವುದನ್ನೇ.

ಬೆಳಗಿನ ಬೆಳಗೇ ರಕ್ತದ್ದು—ಬಿಸಿರಕ್ತದ್ದು, ಕೆಂಪು ಖಂಡದ್ದು :

ಇರುಳ ಚಿತ್ತಲೆ ಬಿಡಿಸಿಕೊಂಡೆದ್ದ
ಸೂರ್ಯ : ಜಿಬುರುಗಣ್ಣೊರೆಸುತ್ತಾ ಕಳಿಸಿ
ಕೊಬ್ಬಿದಾಡು, ಕುರಿ, ಕೋಳಿ ಸಿಗಿದು ಸೀಳಿ
ಕಂದು, ನೀಲಿ, ಬಿಳಿ, ಕೆಂಪು ಖಂಡಗಳ ತೂಗಿಟ್ಟು
ಬಣ್ಣ ಬಣ್ಣದ ಮೂಡಣದ ಮಾಂಸದಂಗಡಿ ತೆರೆದಾಗ
ನನ್ನೂರಿನಲಿ ಬೆಳಗಾಯಿತು.

ನಮಗೆ ಅನುಭವಕ್ಕೆ ಬರುವಂತೆ ಸೂರ್ಯೋದಯ ಸೂರ್ಯಾಸ್ತಗಳು ರಕ್ತದ ಕಾರಂಜಿಗಳು. ಆದರೆ ಬೆಳಗು ಎನ್ನುವಂಥಾದ್ದು ಮೂಡಲ ಬಾನಲ್ಲಿ "ಕೊಬ್ಬಿದಾಡು, ಕುರಿ, ಕೋಳಿ ಸಿಗಿದು ಸೀಳಿ....ತೂಗಿಟ್ಟ....ಮಾಂಸದಂಗಡಿ" ಎನ್ನುವಂಥಾ ಕಲ್ಪನೆ ಎಷ್ಟು ಸೋಪಜ್ಞವಾದದ್ದೋ ಅಷ್ಟೇ ಪ್ರಜ್ಞೆಯಲ್ಲಿ ಅಚ್ಚೊತ್ತಿ ನಿಲ್ಲುವ ಕಾಣ್ಕೆಯದು.

"ಬೆಳಗು" ಕವನ ಮೊದಲಿಂದ ಕೊನೆಯವರೆಗೆ ಸೃಷ್ಟಿಯ ಧಾತುವಾದ ಕಾಮದ ಉತ್ಕರ್ಷ, ಸಂಭ್ರಮ. ಸೂರ್ಯನೇ ಪ್ರಣಯಿಯಂತೆ "ಇರುಳ ಚಿತ್ತಲ ತೆಕ್ಕೆ ಬಿಡಿಸಿಕೊಂಡೇಳುವ" ಜಿಬುರುಗಣ್ಣಿನ ಆಲಸಿ. ಡನ್ನಿನ ಸೂರ್ಯನೂ ಇದೇ ರೀತಿಯಾಗಿ ಆಲಸಿಗಳಾದ ಪ್ರಣಯಿಗಳನ್ನು ಬಿಡಿಸೇಳಿಸುವ ಮೂರ್ಖ : "Busy old fool, unruly sun" ಎನ್ನುತ್ತಾನೆ, ಡನ್ನಿನ ಪ್ರಣಯಿ. ಕೃಷ್ಣನ ಸೂರ್ಯನಂತೆ "ಜಿಬುರುಗಣ್ಣೊರಸುತ್ತಾ ಕಳಿಸಿ", ಆಲಸಿಯಾಗಿ ; ಇದೇ ಧಾಟಿಯ ಕೃಷ್ಣನ ಶಿಲಾಂಗಿನ ಸೂರ್ಯದಲ್ಲಿನ ಬೆಳಗನ್ನು ಗಮನಿಸಬೇಕು :

ಕೋಳಿ ಕೂಗುವ ಹೊತ್ತಿಗೆ
    ನಮ್ಮೂರಿನಲ್ಲಿ
ಸೂರ್ಯ ಹುಟ್ಟಿಬಿಡುತ್ತಾನೆ
    ಈ ಊರಿನಲ್ಲಿ

ಹಗಲು ಹನ್ನೆರಡ ಆದರೂ
    ಬಿಸಿಯೇರದ
    ಸ್ವಚ್ಛಗೊಳ್ಳದ
ಇವನ ಪಸಿರುಗಣ್ಣಿನ
ದ್ರಾಬೆ ಮುಖಕ್ಕಿಂತ

        ನಮ್ಮೂರಿನ ಚಂದ್ರ
            ಸ್ತ್ರೀ—
        ಲಿಂಗವಾದರೂ

ಎಷ್ಟೋವಾಸಿ
    ನೊಚ್ಚಗೆ
ಇವನಿಗಿಂತ ಬೆಚ್ಚನೆ

ಸೂರ್ಯೋದಯ, ಬೆಳಗು, ಈ ಎರಡೂ ಕವನಗಳಲ್ಲಿ ಹೊಚ್ಚಹೊಸ ಅನುಭವದ ಕಾಣ್ಕೆಗಳು, "ಬೆಳಗು" ಕವನ ಅನುಭವದಲ್ಲಿ ಎಷ್ಟು ಸೋಪಜ್ಞವೋ, ಭಾಷೆಯಲ್ಲೂ ಅಷ್ಟೇ ಸೃಜನಾತ್ಮಕ—"ಕಿಲುಬಿಡಿದ ಹಳೆಯ ಕವಿಸಮಯಗಳ ನುಡಿ, ನುಡಿಗಟ್ಟುಗಳ ಹೊಚ್ಚ ಹೊಸ ಪ್ರಯೋಗ".

ಬೆಳಗು ಕತ್ತಲೆನ್ನುವ ಬಂಧನದ ಬಿಡುಗಡೆ, ತಮಸ್ಸಿನ ಜಡತೆಯಿಂದ ರಜಸ್ಸಿನ ಚೈತನ್ಯಕ್ಕೆ ಪುಟಿಯುವ ಸ್ವಾತಂತ್ರ್ಯದ ಚಿಲುಮೆ :

ಮೈನೆರೆದೇಳುವರುಷವಾದರೂ ಒಬ್ಬಂಟಿ
ಕತ್ತಲ ಸೆರೆಯೊಳಗೆ ಕೀಲುನೋವಿಗತ್ತುನರಳುವ,
ನಮ್ಮೂರ ವೈದಿಕರ ಮಗಳ
ಬಿಡುಗಡೆಗೆಂದು ಕಾದಿದ್ದ ಗಾಳಿ
ಹಿತ್ತಲ ಕದತಟ್ಟಿ, ಪಿಸುಗುಟ್ಟಿ ಕದ್ದು ನಡೆದಾಗ
ನಮ್ಮೂರಿನಲ್ಲಿ ಬೆಳಗಾಯಿತು

ಹಾಗೇನೇ

ಧಗಧಗನುರಿವ ಹದಿನೆಂಟರ ಕೆನ್ನಾಲಗೆ ಚಾಚಿ
ಸೀಳುನಾಯಾಗಿ ನಿಂತ ಗೌಡರ ಹುಡುಗ :
ಮುಗಿಲಾಚೆ ಬಾನೆತ್ತರಕೆ
ಬಯಕೆಯೆದೆ ತಿದಿಯೊತ್ತಿ
ಹತ್ತಿ ಹೊರಟಾಗ ಜೆಂಕಿ—ಹೂವಿನ ಹಡಗ
ನನ್ನೂರಿನಲಿ ಬೆಳಗಾಯಿತು

"ಮೈ ನೆರೆದೇಳು ವರ್ಷವಾದರೂ ಒಬ್ಬಂಟಿ"ಯಾಗಿರುವ ವೈದಿಕರ ಮಗಳ "ಕೀಲು ನೋವ"ನ್ನೂ "ಧಗಧಗ ನುರಿವ ಹದಿನೆಂಟರ ಕೆನ್ನಾಲಗೆ ಚಾಚಿಸೀಳು ನಾಯಾಗಿ ನಿಂತ ಗೌಡರ ಹುಡುಗ"ನ ಬಯಕೆಯ ಬೇಗೆಯನ್ನೂ ಎಷ್ಟು ಅಂತರ್ಯಾಮಿಯಾಗಿ, ಒಳಹೊಕ್ಕು ಹೊರಗೆಡವಿದೆ ಈ ಕಾವ್ಯದ ಸೂಕ್ಷ್ಮ ಸಂವೇದನೆ. ಇದೀಗ "ಅದ್ಭುತ"ವಾಗಲಿ, ಹಕ್ಕಿಗಳ ಹಾಡನ್ನೂ, ಗಂಧರ್ವರ ಸೀಮೆಯನ್ನೂ, ಶಾಂತಿರಸವನ್ನೂ ಎಳೆದು ತಂದ ಕವಿಸಮಯಗಳ ಬೇಂದ್ರೆ "ಬೆಳಗು" ಅಲ್ಲ.

ರಾಮಚಂದ್ರದೇವ "ಬೆಳಗಿನ ಹೊತ್ತು ಹೊಳೆಯಲ್ಲಿ ಬಟ್ಟೆ ಒಗೆಯುವ ಹೆಂಗಸರಿರುತ್ತಾರೆ. ಹೊಳೆ ಬದಿಯಲ್ಲಿ ಬಹಿರ್ದೆಸೆಗೆ ಬಂದವನೊಬ್ಬ ಅವರ ಎತ್ತಿದ ಸೀರೆಯೆಡೆಯಿಂದ ಇಣುಕುವ ತೊಡೆಗಳನ್ನು ಕಣ್ಣಲ್ಲಿ ನೆಕ್ಕುತ್ತಿರುತ್ತಾನೆ" ಎಂದು ಬರೆಯುವಾಗ ಅನುಭವದ ದಾರಿದ್ರ್ಯವನ್ನೂ, ಅಕ್ಷಮ್ಯವಾದ ಬೇಜವಾಬ್ದಾರಿತನವನ್ನೂ ಏಕಕಾಲದಲ್ಲಿ ಪ್ರಕಟಮಾಡಿದ್ದಾನೆ. ಕೃಷ್ಣನ "ಬೆಳಗು" ಕವನದ ಹೆಂಗಸರು ಬೆಳಗಿನ ಹೊತ್ತು ಬಟ್ಟೆ ಒಗೆಯಲು ಬಂದವರಲ್ಲ, ನೀರನ್ನು ಮೊಗೆಯಲು ಬಂದವರು, ಆ ಮೊಗೆಯುವ

ಕಾರಣಕ್ಕಾಗಿ ಸ್ವಲ್ಪ ಆಳಕ್ಕೆ ಹೋಗಿ, ಸೀರೆ ಮೇಲೆತ್ತಿಕೊಂಡವರು. ಸಾಮಾನ್ಯವಾಗಿ ಬೆಳಗಿನ ಹೊತ್ತು ಯಾವ ಹೆಂಗಸೂ ಬಟ್ಟೆ ಒಗೆಯಲು ಬರುವುದಿಲ್ಲ, ನೀರು ಮೊಗೆಯಲು ಬರುತ್ತಾರೆ; ಬಟ್ಟೆ ಒಗೆಯುವ ಕೆಲಸ ಮನೆಗೆಲಸ ತೀರಿದ ಮೇಲೆ, ಮಧ್ಯಾಹ್ನದ ಹೊತ್ತಿಗೆ ಮಾಡುವ ಕೆಲಸ. ಆಮೇಲೆ ಕಚ್ಚೆಹರುಕ ಶಾನುಭೋಗ ನಡುನೀರಿನೊಳಗೆ ಬುಳಬುಳನೆ ಮುಳುಗಿ ಸ್ನಾನ ಮಾಡಲು ಬಂದವ, "ಬಹಿರ್ದೆಶೆಗೆ ಬಂದವನಲ್ಲ".

ಬಹಿರ್‌ದೆಶೆಗೆ ಹೋಗುವ ನಮ್ಮ ವೈದಿಕ ಜನ "ಬಹಿರ್ದೆಶೆ" ಗಾಗಿಯಲ್ಲದೆ, ಬೇರಾವುದಕ್ಕೂ ಹೋಗುವ ಪರಿಪಾಠದವರಲ್ಲ ತಾನೆ? ಅದಕ್ಕೆ ತೇಜಸ್ವಿ "ಕಕ್ಕಸ್ಸಿಗಲ್ಲದೆ ಕಾಡಿಗೆ ಹೋಗದ ಬ್ರಾಹ್ಮಣರಿಗೆ ಕಾಡಿನ ಬಗ್ಗೆ ಯಾವ ಸಂವೇದನೆಯಾದರೂ ಹೇಗೆ ಬಂದೀತೆ"ಂದು ಪ್ರಶ್ನಿಸಿರುವುದು (ಸಂಕ್ರಮಣ ೬೦, ೧೯೭೪) ಇಲ್ಲಿ ಸೂಕ್ತವಾಗಿ ನೆನೆಯಬೇಕಾಗಿದೆ. ಯಾಕೆಂದರೆ ನಾನು ಪ್ರಾತಿನಿಧಿಕವಾಗಿ ತೆಗೆದುಕೊಂಡಿರುವ ದೇವ ವಿಮರ್ಶೆ ಹೇಗೆ ಕೃಷ್ಣನ ಇಡಿಯ "ಬೆಳಗು" ಕವನದ ಹೊರಗೇ ನಿಂತಿದೆಯೋ ಹಾಗೇನೇ ಕೃಷ್ಣನ "ಪ್ರತಿಯೊಂದು ಕವನವೂ....ವರದಿ"ಯೆಂದೂ, "ಅವನೆಲ್ಲಾ ಕವನಗಳೂ....ಕರಡು" ಗಳೆಂದು ಮುನ್ನುಡಿಯಲ್ಲಿ ಆಪಾದಿಸಿದ ಅಡಿಗ ವಿಮರ್ಶೆಯೂ "ಬಹಿರ್ದೆಶೆ"ಯಲ್ಲೇ ನಿಂತಿದೆ.

ಕರ್ಮವೇ ಶೂದ್ರವಾಗಿರುವ, ಮುಟ್ಟುವ ಸೃಷ್ಟಿಕ್ರಿಯೆಯೇ ಮೈಲಿಗೆಯಾಗಿರುವ, ಮುಟ್ಟದ ಸಾವಿನ ಮಡಿಯೇ ಮೌಲ್ಯವಾಗಿರುವ ನಮ್ಮ ಸಂವೇದನೆಗೆ ಬೇಂದ್ರೆಯ "ಬೆಳಗು"ವಿನ "ಕನವರಿಕೆಯ ಯುಗ" (ಅಡಿಗ)ದ ಗಂಧರ್ವರು, ಕಣ್ಣಿಗೆ ಕಾಣದ "ದೇವರು" ಆಧ್ಯಾತ್ಮದ "ಶಾಂತಿರಸ"ಗಳು ಸಹೃದಯನನ್ನು ಸೂರೆಗೊಳ್ಳುವ "ಅದ್ಭುತ" (ದೇವ)ಗಳು ; ಆದರೆ ಬೆಳ್ಳಿಮೋಲದ ತಾಯ್ತನದ ಕರುಳ ತುಯ್ತ ಹೆತ್ತ ಹೂಮರಿಗಳಿಗಾಗಿ ಕಚ್ಚಿದ ನಾಯಿ ಬಾಯಲ್ಲಿ ರಕ್ತವಾಗಿ ಚಿಲ್ಲೆನ್ನುವ ಕ್ರಿಯಾ ಭೂಕಂಪ "ವರದಿ", "ಕರಡು" "ಕೃತಿಯಾಗ ಬಯಸುತ್ತಿರುವ ಅನುಭವ" (ಅಡಿಗ)!; "ರಗಳೆ" "ತಾಪತ್ರಯ" (ದೇವ)"!! ಯಾವ "ಬೆಳಗು" "ಮೈನೆರೆದೇಳುವರ್ಷವಾದರಿನ್ನೂ ಒಬ್ಬಂಟಿ ಕತ್ತಲ ಸೆರೆಯೊಳಗೆ ಕೀಲು ನೋವಿಗತ್ತು ನರಳುವ ನಮ್ಮೂರ ವೈದಿಕರ ಮಗಳ ಬಿಡುಗಡೆ"ಯೋ, ಯಾವ "ಗೌಡರ ಹುಡುಗ"ನನ್ನು "ಧಗಧಗ ನುರಿವ ಹದಿನೆಂಟರ ಕೆನ್ನಾಲಿಗೆ ಚಾಚಿ ಸೀಳುನಾಯಾಗಿ"ಸಿ ನಿಲ್ಲಿಸಿದೆಯೋ, ಯಾವ "ನೀರೊಳಗೆ ಸೀರೆ ಮೇಲೆತ್ತಿ ನೀರ ಮೊಗೆವ" "ಗರತಿಯರ" "ಗದಗುಡುವ ತುಂಬು ತೊಡೆ"ಗಳು ಕಚ್ಚೆಹರುಕ ಶ್ಯಾನುಭೋಗ"ನಿಂದ "ಹಾದರದ ನಗೆ ನಕ್ಕಿ"ಸಿದೆಯೋ, ಆ ಕ್ರಿಯಾ ಕ್ರಾಂತಿಗಳ "ಹೊಸ ಶಕೆ", "ನಿಜವಾದ ಕಸಬುಗಾರಿಕೆಯ ಯುಗ", "ವರದಿ" "ಕರಡು", "ಕೃತಿಯಾಗ ಬಯಸುತ್ತಿರುವ ಅನುಭವ", "ರಗಳೆ", "ತಾಪತ್ರಯ"ಗಳಾದರೆ, ನಮ್ಮ ಅಡಿಗ—ದೇವ ವಿಮರ್ಶಾಪರಂಪರೆ ಎಷ್ಟು ಎಚ್ಚತ್ತಿದೆ, ಸತ್ತಿದೆ ಎನ್ನುವುದರ ಅಜಮಾಸು ಯಾರಿಗೂ ದಕ್ಕಬಹುದಂಥಾದ್ದು.

ಇಂಗ್ಲಿಷ್ ಸಾಹಿತ್ಯದಲ್ಲಿ "ಹೊಸ ಶಕೆ"ಯನ್ನೂ, "ನಿಜಯುಗ"ವನ್ನೂ ಆರಂಭಿಸಿದ ಜಾನ್ ಡನ್ನನು ತಾನು ಬರೆದ ೩೦ ವರ್ಷಗಳಲ್ಲಿ ಹೇಳ ಹೆಸರಿಲ್ಲದವನಾದರೂ, ತಾನು ಸತ್ತ ೩೦೦ ವರ್ಷದ ಮೇಲೆ ಜಗದ್ವಿಖ್ಯಾತನಾಗಿ ಈಗಲೂ ಜೀವಂತವಾಗಿ ಮಿಡಿಯುತ್ತಿರುವ, ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಮಕಾಲೀನ ಕಾವ್ಯದ ಮೇಲೆ

ಪ್ರಭಾವವನ್ನು ಬೀರುತ್ತಿರುವ ಕ್ರಾಂತಿಕಾರಿ ಕವಿಯಾಗಿದ್ದಾನೆ. ಹಾಗೇನೇ, ನಮ್ಮ ಸಂಪ್ರದಾಯ ಶರಣ ಸಾಹಿತ್ಯ ಪರಂಪರೆಯಲ್ಲಿ "ಹೊಸ ಶಕೆ"ಯನ್ನು "ನಿಜಯುಗ"ವನ್ನು ಪ್ರಾರಂಭಿಸಿದ ಕ್ರಾಂತಿಕಾರೀ ಕವಿ ಕೃಷ್ಣ ತಾನು ಮಣ್ಣಿನ ಹಾಡು ಪ್ರಕಟಿಸಿ ಜೀವಿಸಿದ್ದ ಎರಡುವರೆ ದಶಕಗಳಲ್ಲಿ ಅಡಿಗನಂತೆ ಸುದ್ದಿ ಮಾಡಲೇ ಇಲ್ಲ; ಈಗ ಅವನು ಸತ್ತ ತಿಂಗಳೊಪ್ಪತ್ತಿನಲ್ಲಿ ಆಲನಹಳ್ಳಿ ಕವಿತೆಗಳಲ್ಲಿ ಮೈಗೊಡವಿ ಮೇಲೇಳುತ್ತಿದ್ದಾನೆ—ಸಹೃದಯೀ ಕನ್ನಡ ಬಾಂಧವರೆಲ್ಲರೂ ಬಸವರಾಜ ಕಟ್ಟೀಮನಿಯ ಎಚ್ಚರಿಕೆ ಮಾತನ್ನು ಕಿವಿಗೊಟ್ಟು, ಎದೆಗೊಟ್ಟು ಕೇಳಲೇಬೇಕಾಗಿದೆ:

> "ಮೈಸೂರಿನಲ್ಲಿ ಪುಟ್ಟಪ್ಪ ಅಂತ ಒಬ್ಬ ಶೂದ್ರ ಬಂದಿದ್ದಾನ್ರಿ. ಏನ್ ಬರಿತಾನ್ರೀ; ಪದ್ಯ ತಕ್ಕೊಳ್ಳಿ, ಗದ್ಯ ತಕ್ಕೊಳ್ಳಿ, ನಾಟಕ ತಕ್ಕೊಳ್ಳಿ, ಬಲ್ ಚಲೋ ಬರೀತಾನ್ರಿ ...ನಮ್ ಯಾರ ಕೈಲೂ ಹಂಗ್ ಬರಿಯೋ ಕಾಗೋಲ್ರೀ"
>
> "ಬರೀಲಿ ಬಿಡ್ರಿ. ವಿಮರ್ಶೆ ನಮ್ ಕೈಲಿದೆ. ಚೆನ್ನಾಗಿಲ್ಲ ಅಂದ್ರೆ ಆಯ್ತು"
>
> **(ಕಾದಂಬರಿಕಾರನ ಕಥೆ)**

ಸಂಪ್ರದಾಯಿ ಶರಣತೆಯನ್ನು ಪ್ರತಿನಿಧಿಸುವ ಆ ತಲೆಮಾರಿನ **ಅಡಿಗ ಈ** ತಲೆಮಾರಿನ ದೇವರ ವಿಮರ್ಶೆಯನ್ನು ಕನ್ನಡ ಸಹೃದಯೀ ಬಾಂಧವರು ಅರ್ಕೆ (**ವಾಸ್ತವ,** ಸಾಹಿತ್ಯ) ಜಿ. ರಾಮಕೃಷ್ಣ (**ಮುನ್ನೋಟ**), ಕೆ. ಜಿ. ನಾಗರಾಜಪ್ಪ (**ಮರುಚಿಂತನೆ**) ನವರಂಥಾ, ಅವರ ಪುಸ್ತಕಗಳ ಹೆಸರೇ ಸೂಚಿಸುವಂತೆ, ವಾಸ್ತವದ, ಮುನ್ನೋಟದ, ಮರು ಚಿಂತನೆಯ ಎಚ್ಚರಕ್ಕೆ ಎಚ್ಚೆತ್ತು ನಿಜವಾದ ಜೀವಂತ ಸಾಹಿತ್ಯವನ್ನು ಕಂಡುಕೊಳ್ಳಬೇಕು.

ಆದರೆ ನಮ್ಮ ಪ್ರಜ್ಞೆ ಎಷ್ಟರ ಮಟ್ಟಿಗೆ ಸಂಪ್ರದಾಯಕ್ಕೆ ಜಡ್ಡು ಕಟ್ಟಿಹೋಗಿದೆಯೆಂದರೆ, ಅದು ತನ್ನ ಸಹಜ ಸ್ಪಂದನವನ್ನು ಸಂವೇದನೆಯನ್ನು ಕಳೆದುಕೊಂಡಿದೆಯೆಂದರೆ, "ಬೆಳಗು"ವಿನ ಕೃಷ್ಣನೇ ತನ್ನ "ಬೆಳಗು", ನಿಜವಾದ "ಖುರಪುಟದಗ್ನಿ ಕಿಡಿ"ಯಂಥಾ ಜೀವಂತ, ಜ್ವಲಂತ "ಬೆಳಗು", ಬೇಂದ್ರೆಯ ಕವಿಸಮಯಗಳ, "ಶಬ್ದಗಳ ಗುಂಗುಂಗಾನದ, ದೇವ–ಗಂಧರ್ವ–ಅಮೃತ–ಶಾಂತಿರಸಗಳೆನ್ನುವ ಕ್ಲೀಷೆ ಪದಗಳ ಸತ್ತ "ಬೆಳಗು" ಅಲ್ಲ ಎನ್ನುವುದನ್ನು ನಂಬಲಿಕ್ಕೆ ತಯಾರಿರಲಿಲ್ಲ: ಅವನು ಉದಾಹರಿಸುತ್ತಿದ್ದ ತಾನು ಅದೊಂದು ಅನುಭಾವದ ಸಾಲೆಂದು ಸಾರುತ್ತಿದ್ದ "ಇದು ಬರಿಬೆಳಗಲ್ಲೋ, ಅಣ್ಣಾ", ಎಷ್ಟು ಟೊಳ್ಳಾದ ಮೋಡಿ, ಬರೀ ಗುಂಗುಂ, ಎನ್ನುವುದು ಅವನಿಗೇ ಗೊತ್ತಾಗುತ್ತಿರಲಿಲ್ಲವೇಕೆಂದರೆ, ಲಾರೆನ್ಸನು ಹೇಳುವಂತೆ "An artist is a damned liar, ಕಲೆಗಾರ ಮುಠ್ಠಾಳ ಸುಳ್ಳ, Never trust the artist. Trust the tale. ಕಲೆಗಾರನನ್ನು ನಂಬಬೇಡ, ಅವನ ಕತೆಯನ್ನು ನಂಬು." ಎನ್ನುವ ಮಾತು ಅತ್ಯಂತ ಗಂಭೀರವಾದ ಸತ್ಯದ್ದು. ಕೃಷ್ಣನಂಥಾ ಸೋಪಜ್ಞ ಬರಹಗಾರ, "ಹೊಸ ಶಕೆ" "ನಿಜಯುಗ"ಗಳ ಆರಂಭಗಾರ, ತನ್ನ ಪ್ರಜ್ಞೆಯ ಆಳಕ್ಕಷ್ಟೇ ಅಲ್ಲ, ತನ್ನ ಜನಾಂಗದ ಪ್ರಜ್ಞೆಯ, racial unconsciousನ ಆಳಕ್ಕೇ ಧುಮುಕಿ,

ಕೃಷ್ಣನ ಮಾತಿನಲ್ಲೇ ಹೇಳುವುದಾದರೆ, "ಪಾತಾಳಗರಡಿ" ಹಾಕಿ, ಅವನ ಸಾಮಾನ್ಯ ಪರಿವೆಗೆ ಅರಿವಾಗದಂಥಾ ಸತ್ಯಗಳನ್ನು, ಕಠೋರ ನಿಷ್ಠುರ ಕ್ರಾಂತಿಕಾರೀ ಸತ್ಯಗಳನ್ನು ಹೊರಗೆಡಹುತ್ತಾನೆ. ಉದಾಹರಣೆಗೆ ಅವನ ದೇವಿ ಎನ್ನುವ ಕವನ ಅವನ ಸಾಮಾನ್ಯ ಪರಿವಿಗೇ ಅವಾಕ್ಕಾಗುವ ನಮ್ಮ ೫೦೦೦ ವರ್ಷದ ಸನಾತನದ ಸತ್ಯಾಸತ್ಯಗಳ ಎಂತಹ ಮಹದ್ದರ್ಶನನೆಂದರೆ ಅದು ಕನ್ನಡ ಸಾಹಿತ್ಯದ ಬೆಳಗನ್ನೇ ಬೆಳಗುವ, ಹೊಸ ಶಕೆಯ ನಿಜಯುಗದ ಆರಂಭವೇ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ:

ದೇವಿ

ನಮ್ಮೂರ ಕೆರೆಯೇರಿ ಕೆಳಗಿರುವ ದೇವಿ ಕೊಳವೆಂದರೆ
ಅಷ್ಟು ಭಯ. ಅಷ್ಟೇ ಇಷ್ಟ. ಕಟ್ಟಿದ್ದ ಪಾಚಿ ಕವಡಿವರೆ ಆಳ
ಕಾಣದ ನೀರು. ಮಲ ಮುಟ್ಟು ಮೈಲಿಗೆಯಿರಲಿ ಶೂದ್ರ
ಮುಖ ಕೂಡ ತೊಳೆವಂತಿಲ್ಲ. ದೇವಿ ಅಭಿಷೇಕಕ್ಕೆ ಮಾತ್ರ.

ಬತ್ತುವುದಿಲ್ಲ ಬೇಸಿಗೆಯಲ್ಲಿ ತುಂಬಿ ಉಕ್ಕುವುದು ಇಲ್ಲ
ಮಳೆಗೆ. ಹಸಿರು ಪರೆ. ಬೆಳೆದು ಬಿದ್ದ ಇದು ಸದಾ
ಇದ್ದಂತೆ. ಪೂಜಾರಿ ಬಿಟ್ಟರೆ ಹಸಿದ ಕೊಕ್ಕರೆ ಮತ್ತೆ
ಯಾರೂ ಬಂದಂತೆ ಕಾಣೆ ಇವಳ ತಂಟೆಗೆ, ನನ್ನ ಬಿಟ್ಟು.

ಗಾಳಿಹೊಡೆತಕ್ಕೆ ಒಮ್ಮೊಮ್ಮೆ ಸಿಕ್ಕಿ ಪಾಚಿಯೆಲ್ಲ ಮೂಲೆ
ಸೇರುವುದುಂಟು. ಕಂಡ ಜನ ಕೈಮುಗಿದು ನಿಲ್ಲುತ್ತಾರೆ
ದೇವಿಯೇ ದಯಮಾಡಿ ಮಜ್ಜನ ಮಾಡಿದ್ದಾರೆಂದು. ಪಾಪಿ
ನರಜನ್ಮ. ಅವಕ್ಕೆ ಕಾಣಿಸಳೆಂದು ಶಪಿಸುತ್ತಾರೆ ತಮ್ಮ ಹುಟ್ಟ

ಮಟಮಟ ಮಧ್ಯಾಹ್ನ. ಕೆಂಡ ಕಾರುವ ಸೂರ್ಯನುಗ್ರತೆಗೆ
ದನ ಕರುಗಳಿರಲಿ ಗರ ಬಡಿದು ನಿಸುಕದೆ ನಿಂತ ಮರ
ಗಿಡ. ನಡುವೆ ಬೀಸುವುದ ಮರೆತ ಗಾಳಿ. ಸುಡುಗಾಡ
ಸಿದ್ಧ ಒಬ್ಬನೆ ಕೂತೆ ಕದಡುತ್ತ, ಇವಳೆಡೆಗೆ ಕಾಲಿಟ್ಟು

ಕವಡಿನಂತೆಲ್ಲ ಪಾಚಿಸರೆ ಕಳಚಿ ಜೀವಬಂದ ಕೊಳದ ತಿಳಿ
ಮೈಯಲ್ಲಿ ಬಳಕುವ ಮರ. ತೇಲುವ ಮೋಡ. ಉರಿವ ಸೂರ್ಯ
ರಾಮನ ಕಾಲಿಂದ ಕಲ್ಲು ಮೈ ಕಳಚಿ ನಿಂತ ಅಹಲ್ಯೆಯ ಕಾಂತಿ
ಕಿರಣಗಳ ಮಿಂಚು ಸೆಳೆತ. ಇಳಿದೆ ಬೆತ್ತಲೆ ಮಂತ್ರ ಮುಗ್ಧ

ಸುಡುಬಿಸಿಲ ತಾಪ ಹಿತವೆನಿಸುವ ತಣ್ಣನೆ ನೀರ ಬಗೆಯುತ್ತ
ಬಗೆದು ಈಜುತ್ತ ಈಜಿ ಜಯಿಸುತ್ತ ಪುರಾತನ ಕೊಳದ ತಳ
ಕಾಣದ ಗೂಢ ಕಾಣಬೇಕೆಂಬ ಹಂಬಲ ತುಂಬಿ ಉಸಿರು ಕಟ್ಟಿ
ಮುಳುಗಿ ತಳ ಮುಟ್ಟಿದರೆ ನುಂಗಿಬಿಡುವ ಕೆಸರಿನೆಳೆತ

ಮೆಟ್ಟಿ ಮೇಲಕ್ಕೆ ಚಿಮ್ಮಿದೆ. ಶತಶತಮಾನಗಳು ಹಳಸಿದ್ದ ನೀರ
ಜೊತೆಗೇ ಚಿಮ್ಮಿದ ಕೊಳೆತ ಹೆಣಗಳ ಹೊಲಸು ವಾಸನೆ. ಹೇಸಿ
ದಡವೇರಿ ಮೂಗು ಮುಚ್ಚಿದೆ. ನೋಡನೋಡುತ್ತಿದ್ದಂತೆಯೇ ಮೇಲೆ
ಎದ್ದು ಬಂದಿದ್ದೆಲ್ಲ ತಳಕ್ಕಿಳಿದು ಕಳಚಿದ್ದ ಪಾಚಿಪರೆ ಕಟ್ಟಿತು ಮತ್ತೆ.

(ಆಲನಹಳ್ಳಿ ಕವಿತೆಗಳು, ಪು. ೬೨-೬೩)

ಎಂತಹ ಮೋಡಿ, ಈ ಸನಾತನದ್ದು : "ಅಷ್ಟು ಭಯ. ಅಷ್ಟೇ ಇಷ್ಟ"; ಎಂತಹ diabolic fascination, ಮಾರಣ ಮೋಹ! "ಕೊಳೆತ ಹೆಣಗಳ ಹೊಲಸ" ಹುದುಗಿಸಿಟ್ಟ ಈ ವಿಷಜಲ "ದೇವಿ ಅಭಿಷೇಕಕ್ಕೆ ಮಾತ್ರ"....ಮತ್ತೆ ಈ ಸನಾತನದ ಗ್ರಾಹಕರಾದರು ಯಾರು?—"ಪೂಜಾರಿ ಬಿಟ್ಟರೆ ಹಸಿದ ಕೊಕ್ಕರೆ"!!! ಸನಾತನದ ಸ್ಥಿತಿ ಎಂಥಾದ್ದು : "ಹಸಿರು ಪರೆ ಬೆಳೆದು ಬಿದ್ದ ಇದು ಸದಾ ಇದ್ದಂತೆ". ಎಂತಹ ಎದೆಯ ಬಿಸಿ ರಕ್ತವನ್ನೇ ಹೆಪ್ಪುಗಟ್ಟಿಸುವ ತಣ್ಣನೆಯ ಮರಣಸತ್ಯ : "ಇದು ಸದಾ ಇದ್ದಂತೆ". ಆದರೆ "ಗಾಳಿಹೊಡೆತಕ್ಕೆ ಒಮ್ಮೊಮ್ಮೆ ಸಿಕ್ಕಿ ಪಾಚಿಯೆಲ್ಲ ಮೂಲೆ ಸೇರುವುದುಂಟು. ಕಂಡಜನ ಕೈಮುಗಿದು ನಿಲ್ಲುತ್ತಾರೆ, ದೇವಿಯೇ ದಯಮಾಡಿ ಮಜ್ಜನ ಮಾಡಿದ್ದಾಳೆಂದು. ಪಾಪಿ ನರಜನ್ಮ. ಅದಕ್ಕೆ ಕಾಣಿಸದೆಂದು ಶಪಿಸುತ್ತಾರೆ ತಮ್ಮ ಹುಟ್ಟ". ಇಂತಹ ಘೋರವಾದ ಮೂಢನಂಬಿಕೆಯ ಸನಾತನಕ್ಕೆ "ಸುಡುಗಾಡ ಸಿದ್ದ ಒಬ್ಬನೆ 'ಕೂತೆ, ಕದಡುತ್ತ ಇವಳೆಡೆಗೆ ಕಾಲಿಟ್ಟು....ಉಟೇ ಈ ಮಹಾಪಾತಕಕ್ಕಿಂತ ಘೋರವಾದ ಅಹಂಕಾರದ ಪಾತಕ :" "ಇವಳೆದೆಗೆ ಕಾಲು"? ಆದರೆ ಎಷ್ಟು ಮೃತ್ಯು ಮೋಹಕ, ದೇವಿಯ ದೈವೀ ಸನಾತನ ಸೌಂದರ್ಯ : "ಕದಡಿದಂತೆಲ್ಲ ಪಾಚಿಪರೆ ಕಳಚಿ ಜೀವಬಂದ ಕೊಳದ ತಿಳಿ ಮೈಯಲ್ಲಿ **ಬಳುಕುವ ಮರ, ತೇಲುವ ಮೋಡ, ಉರಿವ ಸೂರ್ಯ, ರಾಮನ ಕಾಲಿಂದ ಕಲ್ಲು ಮೈ ಕಳಚಿ ನಿಂತ ಅಹಲ್ಯೆಯ ಕಾಂತಿ ಕಿರಣಗಳ ಮಿಂಚು ಸೆಳೆತ**" (ಒತ್ತು ನನ್ನದು)! ಇಂಥಾ ಮೋಹಿನಿಯ ಎದೆಯೊಳಕ್ಕೆ ಇಳಿಯಬೇಕಾದರೆ, ಈ ದಿಟ್ಟ ಯಾವ ಕವಚ ಕರ್ಣಕುಂಡಲಗಳಿಲ್ಲದೆ ಬೆತ್ತಲೆಯಾಗಿ ಧುಮ್ಮಿಕ್ಕಬೇಕಲ್ಲವೇ?—"ಇಳಿದೆ ಬೆತ್ತಲೆ ಮಂತ್ರ ಮುಗ್ಧ". ಆದರೆ "ಉಸಿರು ಕಟ್ಟಿ ತಳ ಮುಟ್ಟಿ"ದರೆ, "ನುಂಗಿಬಿಡುವ ಕೆಸರಿನೆಳೆತ ಮೆಟ್ಟಿ ಮೇಲಕ್ಕೆ ಚಿಮ್ಮಿದ"ರೆ, ಕಂಡ ಕಾಣ್ಕೆ ಎಂತಹ ಬರಸಿಡಿಲು : "ಶತಶತಮಾನಗಳು ಹಳಸಿದ್ದ ನೀರ ಜೊತೆಗೇ ಚಿಮ್ಮಿದ ಕೊಳೆತ ಹೆಣಗಳ ಹೊಲಸು ವಾಸನೆ. ಹೇಸಿ ದಡವೇರಿ ಮೂಗ ಮುಚ್ಚಿದೆ"! ಆದರೆ ತದನಂತರದ ಘೋರತೆ ಎಷ್ಟು ಭಯಾನಕವಾದದ್ದು :

ನೋಡುತ್ತಿದ್ದಂತೆಯೇ ಮೇಲೆ
ಎದ್ದು ಬಂದಿದ್ದೆಲ್ಲ ತಳಕ್ಕಿಳಿದು ಕಳಚಿದ್ದ ಪಾಚಿ ಪರೆಕಟ್ಟಿತು ಮತ್ತೆ

ಇದೀಗ ಸನಾತನದ, ಪರಂಪರೆಯ ವಾಸ್ತವ ಸತ್ಯ—"ಪಾಚಿ ಪರೆ ಕಟ್ಟಿ ಮತ್ತೆ" "ಸದಾ ಇದ್ದಂತೆ" ಇರುವ, "ಅಷ್ಟು ಭಯ"ದ, "ಅಷ್ಟೇ ಇಷ್ಟ"ದ ಮೃತ್ಯುಮೋಹಿನಿ ರತಿಚುಂಬನದ ವಿಷಕನ್ಯೆ.

ಈ ಘೋರ ಧಾರುಣತೆಯನ್ನು, ಇಡಿಯ ೫೦೦೦ ವರ್ಷದ ಸನಾತನ ಪರಂಪರೆಯ ದುರಂತವನ್ನು ಕೃಷ್ಣ ತನ್ನ "ಪ್ರಕಟಿಸಲಾಗದ ಪದ್ಯಗಳ"ಲ್ಲೊಂದಾದ **ಬಾಗಿಲು ಮತ್ತು ಪೂಜಾರಿ** ಎನ್ನುವ ಪ್ರಕಟಿಸಿ ಪ್ರಚಾರಗೊಳಿಸಲೇಬೇಕಾದ ಪದ್ಯದಲ್ಲಿ ನಮ್ಮೆಲ್ಲರ ಪ್ರಜ್ಞೆಯ ಅಂತರಾಳಕ್ಕೆ ಪಾತಾಳಗರಡಿ ಹಾಕಿದ್ದಾನೆ:

೧

ಬಿಳಿಗಿರಿ ರಂಗನ ಬೆಟ್ಟದ ಗುಡಿ
ಅಲಮೇಲಮ್ಮನವರ ಸನ್ನಿಧಿ
ಬಾಗಿಲ ನಾಲ್ಕು ಚೌಕಟ್ಟಿನಲ್ಲಿ
ನಾಲ್ಕು ಸಂಭೋಗ ಶಿಲ್ಪ

೧. ತುಟಿಗೆತುಟಿ, ಕಟಿಗೆಕಟಿ
ತೊಡೆಅಗಲಿಸಿ ಪರಸ್ಪರ
ಕೂತೆ ಇಕ್ಕಳವಾದ ಗಂಡು–ಹೆಣ್ಣು
...
...

೪. ತಲೆಕೆಳಗು ಮೇಲೆತ್ತಿಕೊಂಡ
ಹೆಣ್ಣಯೋನಿ ಗಂಡ ಬಾಯಲ್ಲಿ
ಗಂಡಲಿಂಗ ಹೆಣ್ಣ ಬಾಯಲ್ಲಿ
ಹೀಗೆ—ಗಂಡೊಳಗೆ ಹೆಣ್ಣು
ಹೆಣ್ಣೊಳಗೆ ಗಂಡು
ಒಂದಾದ
ಸವಾಡ—ಬಾಗಿಲು

೨

ಗರ್ಭಗುಡಿ ಬಾಗಿಲೀಚೆ—ಭಕ್ತ
ಒಳಗೆ—ದೇವರು
ನಡುಮಧ್ಯೆ
ಇಬ್ಬರನ್ನೂ ಒಂದಾಗಿಸದ
ಪೂಜಾರಿ ಅಂತು?

ಇಲ್ಲಿ ಮಾತು ಮಾತಾಡುತ್ತಿಲ್ಲ—ಪ್ರತಿಮೆ ಧ್ವನಿಸುತ್ತಿವೆ. "ಬಾಗಿಲು" ಹೇಗೆ ಪ್ರವೇಶವೋ, ಗಮಿಸುವ, ಸೃಷ್ಟಿಕ್ರಿಯೆಯ ಸಮಾಗಮವೋ, "ಗರ್ಭಗುಡಿ"ಯೋ, ಹಾಗೆ "ಇಬ್ಬರನ್ನೂ ಒಂದಾಗಿಸದ", ಲೈಂಗಿಕಾಂಗವಾಗಿದ್ದರೂ, ಸಂಭೋಗಿಸಲೂ ಸಾಧ್ಯವಾದದ್ದಾದರೂ, ಸೃಷ್ಟಿಯನ್ನಾಗಗೊಡದ, ಅಡ್ಡಿಯ, ಆತಂಕದ "ಪೂಜಾರಿ ಅಂಡು" ಪ್ರವೇಶದ ಬಾಗಿಲಿಗೆ ವ್ಯತಿರಿಕ್ತವಾದ ನಿರ್ಗಮನವೂ, ಉಚ್ಚಿಷ್ಟದ ದ್ವಾರವೂ, ಗರ್ಭದ ನಿರೋಧಕವೂ ಆಗಿದೆ.

ಭಕ್ತ, ಅಂದರೆ ಪ್ರೇಮಿ ("ಭಜ್" ಧಾತುವಿನಿಂದ ಬರುವ ಈ ಪದ, ಲೈಂಗಿಕ ಭೋಗವನ್ನೂ ಸೂಚಿಸುತ್ತದೆ) ಪ್ರವೇಶದ, ಗರ್ಭಗುಡಿಯ, ಈಚೆ ಇದ್ದಾನೆ : ಸಮಾಗಮ ವನ್ನು, ಸೃಷ್ಟಿಕ್ರಿಯೆಯನ್ನು ಆಗಗೊಡದ ನಿರೋಧಿ, "ಪೂಜಾರಿ", ಅಂದರೆ ಸೃಷ್ಟಿಗೇ, ಜೀವೋತ್ಕರ್ಷಕ್ಕೇ ಮಾರಕನಾದ ವೈದಿಕ, ಸನಾತನಿ ಅಡ್ಡಗಟ್ಟಿದ್ದಾನೆ. ಯಾವುದು ಗರ್ಭಧಾರಣೆಯ ಯೋನಿಯಾಗಬೇಕಿತ್ತೋ, ಸೃಷ್ಟಿಯ ಕೇಂದ್ರವಾಗಬೇಕಿತ್ತೋ, ಅದು ಉಚ್ಚಿಷ್ಟದ ದ್ವಾರವಾಗಿದೆ, ಲೈಂಗಿಕತೆಯ ಸೋಗಿನಲ್ಲಿ, ವೀರ್ಯ ಕ್ಷಯದ ವಿಸರ್ಜನೆಯ ರಂಧ್ರವಾಗಿದೆ.

ಕೃಷ್ಣನ "ಮಣ್ಣಿನ ಹಾಡು" ಮತ್ತು ಇತರ ಕವನ ಸಂಕಲನಗಳು ಮಣ್ಣಿನ ವಾಸ್ತವ ಜೀವವನ್ನು, ಜೀವನವನ್ನು, ಸಾಕ್ಷಾತ್ಕರಿಸುವ ಜೀವೋತ್ಕರ್ಷದ ಕೇಕೆ, ಕುಣಿತ, ಸಂಭ್ರಮ, ಸಮಾರಂಭ. ಬಾಳೇ ಐಭೋಗ, ಈ ಬಾಳಿಗೆ ಬೆನ್ನು ತಿರುಗಿಸಿದ ಪರಂಪರೆ, ಸನಾತನ ಎಷ್ಟೇ ಹಳತಾಗಿರಲಿ ಭವ್ಯವೆಂದೂ, ದಿವ್ಯವೆಂದೂ ಪೂಜೆಗೊಂಡಿರಲಿ, ಅದು ಸಾವಿಗಿಂತಲೂ ಘೋರವಾದ ಕೇಡು, ಈವಿಲ್, evil, ಎನ್ನುವುದನ್ನು ಪ್ರಮಾಣಿಸಿ ಪ್ರತ್ಯಕ್ಷಗೊಳಿಸುತ್ತದೆ ಕೃಷ್ಣನ "ಆಲನಹಳ್ಳಿ ಕವಿತೆಗಳು". ಅಡಿಗ ಮುನ್ನುಡಿಯಲ್ಲಿ ಹೇಳಿದ ಮಾತು, ಕೃಷ್ಣನ ಕವನ "ಹೊಸ ಶಕೆ" ಯನ್ನು "ನಿಜಯುಗ"ವನ್ನು ಆರಂಭ ಮಾಡುತ್ತದೆ ಎನ್ನುವುದರ ಸತ್ಯವನ್ನು ಕಂಡುಕೊಳ್ಳಬೇಕಾದರೆ, ಅದು ಎಷ್ಟು ಜೀವಂತ ವಾಗಿರುವ ವಾಸ್ತವ ಎನ್ನುವುದನ್ನು ಅನುಭವಿಸಬೇಕಾದರೆ, ಅವನ ಕವನಗಳನ್ನು ಓದಬೇಕು, ಓದಿ ಅವುಗಳ ಗ್ರಹಿಕೆಯನ್ನು ಓದುಗ ಸಹೃದಯಿಗಳೊಂದಿಗೆ ಹಂಚಿಕೊಳ್ಳ ಬೇಕು :

ಶ್ರೀಕೃಷ್ಣ ಆಲನಹಳ್ಳಿ

ಹಾಳು ಕೂಗಿನ ಹಕ್ಕಿ
ಕೂಗಿತೇ ನಿನ್ನ
ಕೃಷ್ಣಾ,
ಅಂಗೈಲಾಡುವ ಮಗಳ
ತೆಕ್ಕೆ ಬೀಳುವ ಮಗನ
ಮರೆತು
ಓ ಎಂದೆ

ಹೇಳಿದ್ದೆ ಅರ್ಥ
ಹಾಳು ಕೂಗಿನ ಹಕ್ಕಿ
ಹಾಳನ್ನ
ಇನ್ನರ್ಥಕ್ಕೆ ಎಚ್ಚರ ದಪ್ಪಿ
ಓಗೂಗಿದ್ದೆ

ನಿನ್ನ ಬಯ್ಯುತ್ತಿದ್ದ
ಅಚ್ಚು ಯಂತ್ರದವರು
ಕೈತಂತ್ರ ಬಾಯ್ಮಂತ್ರದವರು
ನಿನ್ನಂಥಾ ಕವಿ ಇಲ್ಲಾ
ನಿನ್ನಂಥಾ ಕಲಿ ಇಲ್ಲಾ
ಎಂತೆಲ್ಲಾ ಅಂತಾರೆ
ನಿನ್ನ

ಸಂಕಿರಣ ಸೆಮಿನಾರು
ಸಾಹಿತ್ಯ ಗೋಷ್ಠಿಗಳ
ಪಿಂಡಗಳ ತಿಂತಾರೆ

ಮಾತ್ರ
ನೀಬಿಟ್ಟು ಹೋಗಿದ್ದ
ಗೆಂಡೆ ತಿಮ್ಮರು
ಸುಶೀ ಭುಜಂಗಯ್ಯರು
ಸುಟ್ಟ ತಿಕದ ದೇವರು
ನಿನ್ನ ಪರಿಸಂಗಾದ ಹಾಡ
ಹಾಡ್ತಾರೆ

ಹಾಳು ಕೂಗಿಗೆ ನಿನ್ನ
ಅಲ್ಲ ಹಳ್ಳಿಯ ಕೂಗಿ
ಕೃಷ್ಣಾ

ಕರುನಾಡ ಕಪ್ಪೇ
ಕರಿಜನರ ಕಪ್ಪೇ
ಕಪ್ಪೇ ಒಪ್ಪ
ಒಪ್ಪೇ ಕಪ್ಪು
ಅಂತಾ ನಿನ್ನೊಪ್ಪುತ್ತಾರೆ
ಅಂತಾ ನಿನ್ನಪ್ಪುತ್ತಾರೆ.

ಭುಜಂಗಯ್ಯನ ದಶಾವತಾರಗಳು : ತುಡಿವ ಮನ ಕುಪಿತ ಜನ

ಕಿಕ್ಕೇರಿ ನಾರಾಯಣ

ಪೀಠಿಕೆ :

ಶ್ರೀಕೃಷ್ಣ ಆಲನಹಳ್ಳಿಯ ಮೊದಲ ಕಾದಂಬರಿ 'ಕಾಡು' ಈಗಾಗಲೇ ಕನ್ನಡ ಕಾದಂಬರಿ ಸಂಸ್ಕೃತಿಯ ಪ್ರಜ್ಞಾತಲವನ್ನು ಮುಟ್ಟಿರುವ ಕೃತಿ. ಈ ಕೃತಿಯ ಪ್ರಮುಖ ಪಾತ್ರವಾದ ಪುಟ್ಟಬಾಲಕ ಕಿಟ್ಟಿಯ ಮುಗ್ಧ ಮನಃಪಟಲದ ಮೇಲೆ ಬೆಳೆದವರ ಲೋಕ ಮೂಡಿಸುವ ಕ್ರೌರ್ಯದ ಬರೆಗಳು ಮಾಸುವುದೇ ಇಲ್ಲ. ಈ ಕಾದಂಬರಿಯಲ್ಲಿ ವಿವರಗಳೆಲ್ಲವೂ ಭೌತಿಕ (Physical details) ವಲಯಕ್ಕೆ ಸೇರಿದ್ದು ಅವು ಓದುಗನ ಬೌದ್ಧಿಕ (intellectual) ವಲಯಕ್ಕೆ ದಾಟುತ್ತಾ ಅರ್ಥವೈಶಾಲ್ಯತೆಯನ್ನು ಪಡೆದುಕೊಳ್ಳುತ್ತಾ ಹೋಗುತ್ತವೆ. ಈ ಕಾದಂಬರಿ 'ನವ್ಯ'ದಿಂದ ಪಡೆದುಕೊಂಡದ್ದನ್ನು ದಕ್ಕಿಸಿಕೊಂಡಿದೆ.

ನಂತರ ಬರೆದ 'ಪರಸಂಗದ ಗೆಂಡೆತಿಮ್ಮ', 'ಕಾಡು'ವಿನ ಕಿಟ್ಟಿಯ ಮುಗ್ಧತೆಯ ಮುಂದುವರೆದ ರೂಪ. 'ಗೆಂಡೆತಿಮ್ಮ'ನ ಮುಗ್ಧತೆಯನ್ನು ಮರಂಕಿಯ 'ನಾಗರಿಕ' ಪ್ರಪಂಚ, ಮತ್ತು ಅವನೇ ತನಗರಿವಿಲ್ಲದಂತೆ ಹರಡಿದ ನಾಗರಿಕತೆಯಿಂದ ಗೌಡ್ನಳ್ಳಿಯ ಜನ ಅವನ ಮುಗ್ಧತೆಯನ್ನು ಚೂರುಚೂರು ಮಾಡಿ ಹಾಕುತ್ತಾರೆ. ಈ ಕಾದಂಬರಿಯಲ್ಲಿ ನಿರೂಪಣೆ ವಿವರಗಳು 'ಕಾಡು'ವಿನ ಸಾಂಕೇತಿಕ ವಿವರಗಳಾಗದೆ ನೇರವಾಗಿ ಕಥೆಯನ್ನು ಹೇಳುವಂಥದ್ದು. ಇಲ್ಲಿ ಪರಸಂಗ ಹೇಳುವವನದೇ ಒಂದು 'ಪರಸಂಗ'ವಾಗಿಬಿಡುತ್ತದೆ. ಈ ದೃಷ್ಟಿಯಿಂದ 'ಪರಸಂಗದ ಗೆಂಡೆತಿಮ್ಮ', 'ಕಾಡು'ವಿಗೆ ಅಭಿಮುಖವಾದ ಬರವಣಿಗೆ. 'ಪರಸಂಗ ಹೇಳುವ' ಧಾಟಿಗೇ (oral tradition) ಹತ್ತಿರವಾಗಿದೆ.

'ಪರಸಂಗ'ದ ನಾಗರಿಕ ಪ್ರಪಂಚ ಹಳ್ಳಿಯನ್ನು ಹಾದು ಹೋಗುವ ವಸ್ತುವಾದರೆ 'ಭಜಂಗಯ್ಯನ ದಶಾವತಾರ'ದಲ್ಲಿ ಭುಜಂಗಯ್ಯ

ಕೃಷಿ ಸಂಸ್ಕೃತಿಯಿಂದ 'ವ್ಯಾಪಾರ–ಸಂಸ್ಕೃತಿ'ಗೆ ಪ್ರವೇಶ ಪಡೆಯುವುದರಿಂದ ಆತ ಆತನ ಊರು ಅನುಭವಿಸುವ ಅನುಭವ ಚಿತ್ರಿತವಾಗಿದೆ. 'ಭುಜಂಗಯ್ಯ' ಕಾದಂಬರಿ ರಚನೆ ಯಲ್ಲಿ ಮೌಖಿಕ ಸಂಪ್ರದಾಯದ, ಅದರಲ್ಲೂ 'ಹರಟೆ'ಯ ಪ್ರಭೇದ ಎದ್ದು ಕಾಣುತ್ತದೆ.

ಭಾಗ ೧

ಮೌಖಿಕ ಸಂಪ್ರದಾಯವೂ 'ಭುಜಂಗಯ್ಯ....'ನೂ :

ಭಾಷೆಯ ಬಳಕೆಯಲ್ಲಿ ಬಿಗುವು, ಬಂಧವೂ, ಸಾಂಕೇತಿಕತೆಯೂ ಶಿಲ್ಪವೂ ಇರುವುದು ನವ್ಯ ಕಾದಂಬರಿಯ ಪ್ರಮುಖ ಗುಣಗಳು. ಇವುಗಳನ್ನು ಗಮನದಲ್ಲಿಟ್ಟು ಕೊಂಡು ಓದಿದರೆ 'ಭುಜಂಗಯ್ಯ....' ವಿರುದ್ಧ ದಿಕ್ಕಿನಲ್ಲಿರುವುದು ಕಂಡುಬರುತ್ತದೆ. ಇದಕ್ಕೆ ಬದಲಾಗಿ ಮೌಖಿಕ ಸಂಪ್ರದಾಯದ ಕೆಲವು ಮುಖ್ಯಲಕ್ಷಣಗಳು ಕಂಡುಬರು ತ್ತವೆ. ಈ ಗುಣಲಕ್ಷಣಗಳನ್ನು ಕಾದಂಬರಿಯಲ್ಲಿ ಹೀಗೆ ಗುರುತಿಸಬಹುದು.

೧ ಈ ಕಾದಂಬರಿಯ ಪ್ರಮುಖ ಪಾತ್ರ ಊರಿನ ಉಸಾಬರಿಯನ್ನೆಲ್ಲಾ ಭೂಮಿ ಯನ್ನು ಹೊತ್ತುಕೊಂಡ ಆದಿಶೇಷನಂತೆ ತನ್ನಮೇಲೆ ಹೊತ್ತುಕೊಳ್ಳುವ, ಯಾವಾಗಲೂ ಕ್ರಿಯಾತ್ಮಕವಾಗೇ ಇರುವ, ಅದಕ್ಕಾಗಿ ಅನೇಕ ರೀತಿಯ 'ಕಾಯಕ'ಗಳನ್ನು ಕೈಗೊಳ್ಳುವ ಭುಜಂಗಯ್ಯ. ಕಾದಂಬರಿಯಲ್ಲಿ ಚಿತ್ರಿತವಾಗಿರು ವುದು ಕೇವಲ ಭುಜಂಗಯ್ಯನ ಕ್ರಿಯೆಗಳೇ ಅಲ್ಲ. ಅದಕ್ಕೆ ಅವನು ತೋರಿಸುವ ಪ್ರತಿಕ್ರಿಯೆ ಮಾತ್ರವಲ್ಲ. ಅವನ ಸುತ್ತ ಅವನು ತೊಡಗಿಸಿಕೊಂಡಿರುವ ಪಾತ್ರ ಗಳು ಅವನ ಬಗ್ಗೆ, ಅವನ ಕ್ರಿಯೆಯ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ. ಆದ್ದರಿಂದ ಕೇಂದ್ರ ಪಾತ್ರದ ಕ್ರಿಯೆಯಲ್ಲಿ ಸುತ್ತಲಿನ ಪಾತ್ರದ ಕ್ರಿಯೆಗಳೂ, ಅನಿಸಿಕೆಗಳೂ ಕಾದಂಬರಿಯ ಕೇಂದ್ರ ಪ್ರಜ್ಞಾಬಿಂದುವಿಗೆ ಸುತ್ತಲಿಂದಲೂ ಅಪ್ಪಳಿಸುತ್ತಿರುತ್ತವೆ. ಒಂದೇ ವಿಷಯಕ್ಕೆ ಸಂಬಂಧಪಟ್ಟಂತಹ ಅನೇಕ ಪ್ರತಿಕ್ರಿಯೆ ಗಳು ವ್ಯಕ್ತವಾಗುತ್ತದೆ. ಆದ್ದರಿಂದ ಘಟನೆಗಳ ಪುನರಾವರ್ತನೆ, ಅವುಗಳ ಬಗೆಗಿನ ಪ್ರತಿಕ್ರಿಯೆ ಬರುವುದರಿಂದ ಹೇಳಿದ್ದನ್ನೇ ಮತ್ತೆ ಹೇಳುತ್ತಿರುವಂತೆ ಭಾಸವಾಗುತ್ತದೆ. ಇದು ಮೌಖಿಕ ಸಂಪ್ರದಾಯದ ಹರಟೆಯ ವಿಧಾನವೂ ಹೌದು. 'ಹರಟೆ'ಯಲ್ಲೂ ಒಂದು ಘಟನೆಯನ್ನು ನಾಕಾರು ಜನ ತಮ್ಮ ಅನಿಸಿಕೆಯ ಹಿಂದೆ ಅವುಗಳಿಗೆ ಅರ್ಥವನ್ನು ಕಟ್ಟುತ್ತಾ ಹೋಗುತ್ತಾರೆ ಎಂಬು ದನ್ನು ಗಮನಿಸಬಹುದು. ಭುಜಂಗಯ್ಯ ಹೋಟಲಿಟ್ಟಿದ್ದಕ್ಕೆ ನಾನಾ ಜನ ನಾನಾ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ಉದಾಹರಣೆಗೆ ನೋಡಬಹುದು. ಅಂತೆಯೇ ಮೊದಲ ಎರಡು ಅಧ್ಯಾಯಗಳಲ್ಲಿ ಭುಜಂಗಯ್ಯ ಯಾವತ್ತು ಭೂಮಿಯ ಬಗ್ಗೆ ನಿಷ್ಠೆ ಕಳೆದುಕೊಳ್ಳದವನು, ಆದಿನ ನಿಷ್ಠೆ ಪರಿಶ್ರಮವಾಗಿರುವು ದನ್ನು ವಿವರಿಸುವಲ್ಲಿ, ಅದರಿಂದ ಅವನ ಮನಸ್ಸಿನಲ್ಲಿ ಉಂಟಾಗುವ ಮಾನಸಿಕ ತುಮುಲ, ಅದನ್ನು ಅವನ ಹೆಂಡತಿ ಗಮನಿಸುವ ರೀತಿ, ಅಕ್ಕಪಕ್ಕದ ಹೊಲದ

ವರು ಗಮನಿಸುವ ಪ್ರತಿಕ್ರಿಯಿಸುವ ರೀತಿ ಮತ್ತು ಅದೇ ವಿಷಯವನ್ನು ಸಂಗ್ರಹಿಸಿ ಎರಡನೇ ಅಧ್ಯಾಯದಲ್ಲಿ ಓದುಗರಿಗೆ ಮತ್ತೆ ಜ್ಞಾಪಿಸುವ ರೀತಿಯನ್ನು ಗಮನಿಸ ಬಹುದು. ಇದೂ ಮೌಖಿಕ ಸಂಪ್ರದಾಯದ ಒಂದುಗುಣ. ಆದ್ದರಿಂದ ಕಾದಂಬರಿ ಯಲ್ಲಿ ಬಿಗುವನ್ನು ಕಾಣುವವರಿಗೆ ಪುನರಾವರ್ತನೆ ಮತ್ತು ಅತಿಶಯಗುಣ (redundency) ಕಾಣುತ್ತದೆ.

೨ ಯಾವುದಾದರೂ ಒಂದು ವಿಷಯವನ್ನು ಸ್ವಲ್ಪ ಹೇಳಿ ಅದರಿಂದ ವಿಮುಖವಾಗಿ ಮತ್ತೆ ಎಲ್ಲೋ ಆ ವಿಷಯಕ್ಕೆ ಬರುವುದನ್ನು ಕಾಣಬಹುದು. ಇದನ್ನು ಕಾದಂಬರಿ ಯಲ್ಲಿ ಅಲ್ಲಲ್ಲೇ ಗಮನಿಸಬಹುದು. ಉದಾಹರಣೆಗೆ. ಮೂರನೇ ಅಧ್ಯಾಯದ ಎರಡನೆ ಪ್ಯಾರಾದಲ್ಲಿ ಮೈಸೂರಿನಿಂದ ಸಾಮಾನುಗಳನ್ನು ತರುವ ವಿಷಯ ಪ್ರಾರಂಭವಾದರೆ, ಅದು ಅಲ್ಲಿ ನಿಂತು, ಮತ್ತೆ ಹೋಟೆಲ್ ಕಟ್ಟಡದ ಕಡೆಗೆ ತಿರುಗಿ, ಪೀಪದ ನೀರನ್ನು ತುಂಬಿ ತರಲು ಮನೆಗೆ ಹೋಗಿ ಅಲ್ಲಿ ಅವನ ಹೆಂಡತಿ —ಮಾವನ ಪ್ರತಿಕ್ರಿಯೆಗಳಿಗೆ ತಲೆಕೊಟ್ಟು—ಭುಜಂಗಯ್ಯ ಬಾಲ್ಯದಲ್ಲಿ ಊರು ಬಿಟ್ಟು ಹೋಗಿ ಅನುಭವಿಸಿದ್ದನ್ನು ಹೇಳಿ, ಹೋಟಲಿಗೆ ವಾಪಸ್ಸು ಬರುವುದನ್ನು ಹೇಳಿ, ನಂತರ ಭುಜಂಗಯ್ಯನೂ ಕೋಡಂಗಿ ಅಜ್ಜಪ್ಪನೂ ಮೈಸೂರಿಗೆ ಹೋಗು ತ್ತಾರೆ, ನಂತರ ನಾಲ್ಕನೆ ಅಧ್ಯಾಯದ ಮೂರನೆ ಪ್ಯಾರಾದಲ್ಲಿ 'ಒಂದು ವಾರಕ್ಕೆ ಬೇಕಾದ ಸಾಮಾನುಗಳನ್ನು ಮೈಸೂರಿನಿಂದ ತಂದಿದ್ದು ಸಣ್ಣ ಪುಟ್ಟ ಸಾಮಾನು ಗಳನ್ನು ಕ್ಯಾತನಹಳ್ಳಿಯ ಕಾಕನ ಅಂಗಡಿಯಿಂದ ತರಿಸಿಕೊಂಡರಾಯಿತೆಂದು ಕಾರ್ಯೋನ್ಮುಖನಾದ' ಎಂದು ಹೇಳುವುದು. ಈ ರೀತಿಯ ವಿವರಗಳನ್ನು ಹೆಚ್ಚಾಗಿ ಮಾತನಾಡುವ ಸಂಪ್ರದಾಯದಲ್ಲಿ ಕಾಣಬಹುದು.

೩ ಒಂದು ಕ್ರಿಯೆ ಮೊದಲು ಹೊಳೆದಿದ್ದು ನಂತರ ಅದಕ್ಕೆ ಬೇಕಾದ ವಿವರಣೆಗಳನ್ನು ಜೋಡಿಸುವುದನ್ನೂ ಆ ಹೇಳಿಕೆಗೆ ಸಮಜಾಯಿಷಿಯಂತೆ ಬರುವುದನ್ನೂ ಈ ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣಬಹುದು. "ಸುಶೀಲಳು ಭುಜಂಗಯ್ಯನಿಗೆ ಕಾಗದ ಬರೆದು ಡ್ರೈವರ್ ವಿಕ್ಟರನ ಹತ್ತಿರ ಕೊಟ್ಟು ಕಳುಹಿಸಿದಳು" ಎಂದು ಹೇಳಿ ನಂತರ 'ಅವಳಿಗೆ ಓದಲು ಬರೆಯಲು ಬರುತ್ತಿತ್ತು' ಎಂದು, ಆದರೆ ಅವಳು ಇನ್ನೊಬ್ಬರಿಗೆ ಬರೆದ ಮೊದಲ ಪತ್ರವೆಂದೂ ಹೇಳುವುದು. (ಪುಟ ೨೪೬)

ಭುಜಂಗಯ್ಯನಿಗೆ 'ಬರೇ ಗೆಜ್ಜಲು ಭೂಮಿ ಇತ್ತು' ಎಂದು ಹೇಳಿ (ಪುಟ ೫) ನಂತರ ಮತ್ತೆ ಜ್ಞಾಪಿಸಿಕೊಂಡಂತೆ ಅವನಿಗೆ 'ಊರ ಕೆರೆ ಬಯಲಲ್ಲಿ ಅರ್ಧ ಎಕರೆ ಗದ್ದೆ ಇದೆ' (ಪುಟ ೭) ಎಂದು ಹೇಳುವುದು ; ಇತ್ಯಾದಿ 'after thought' ಗಳನ್ನು ಸೇರಿಸಿಕೊಳ್ಳುವುದನ್ನು ಕಾದಂಬರಿಯಲ್ಲಿ ಕಾಣಬಹುದು.

೪ ಅನೌಪಚಾರಿಕತೆ ಮೌಖಿಕ ಸಂಪ್ರದಾಯದ ಮತ್ತೊಂದು ಗುಣ. ಅವರಲ್ಲೂ ಹರಟೆಯಲ್ಲಿ ಇದು ಎದ್ದು ಕಾಣುವಂಥದ್ದು.

ಭುಜಂಗಯ್ಯನ ಸ್ಥಾನಮಾನಗಳನ್ನು ಹೆಚ್ಚಿಸುವ, ಊರವರ ಕಣ್ಣಲ್ಲಿ ಗಣ್ಯ ನಾಗುವ ಸಂದರ್ಭವನ್ನು ಸೃಷ್ಟಿಸಿಕೊಳ್ಳುವಲ್ಲಿ ದೇವನೂರಿನ ಜಗದ್ಗುರುಗಳು ಅವನ ಮನೆಗೆ ಬಂದು ನಡೆಸುವ ಧಾರ್ಮಿಕ ಕ್ರಿಯೆಯ ವಿವರಣೆಗಿಂತಲೂ, ಗೌರವ, ಶ್ರದ್ಧೆ ತೋರಿಸುವಂತಹ ಸಂದರ್ಭದಲ್ಲೂ ಅದಕ್ಕೆ ಹೆಚ್ಚು ಒತ್ತು ಕೊಡದೆ, ಅದಾದ ನಂತರ ಪುಂಡ್ರಿ ಅದರ ಬಗ್ಗೆ ಹರಟುವುದನ್ನು ವಿವರ ವಾಗಿ ವರ್ಣಿಸಿರುವುದು. ಗುರುಗಳು ಅಮೇಧ್ಯ ತುಳಿದದ್ದು, ಅಂತೆಯೇ ಊರಿನ 'ಬಸವಿ' ಗುರುಗಳಿಗೆ ನಮಸ್ಕಾರ ಮಾಡುವಾಗ ಕಂಡ ದಪ್ಪ ಮೊಲೆಗಳ ವರ್ಣನೆ ಇತ್ಯಾದಿ ವಿವರಿಸಿ ಅನೌಪಚಾರಿಕ ಮಾತುಗಳಿಗೆ, ಹಗುರವಾದ ವಿಚಾರಕ್ಕೆ ಒತ್ತುಕೊಟ್ಟಿರುವುದು. ಕಾದಂಬರಿಯಲ್ಲಿ ಬಳಸುವ ಭಾಷೆಯಲ್ಲೂ ಈ ಗುಣ ಗಳನ್ನು ಕಾಣಬಹುದು.

೫ ಉಪಕಥೆಗಳನ್ನು ಸೇರಿಸುವುದು : ಭುಜಂಗಯ್ಯ ಮೊದಲಬಾರಿಗೆ ಊರಿನ ಗಣ್ಯ ರೊಡನೆ ಸೇರಿ ನ್ಯಾಯ ಹೇಳಿ ಸೈ ಅನ್ನಿಸಿಕೊಂಡ ಸಂದರ್ಭದಲ್ಲಿ (ಅಧ್ಯಾಯ ೧೩) ಬರುವ ಚಾಮನಾಯಕನ ಹೆಂಡತಿ ಕರಿಸಿದ್ದಿ ಮೈದುನನನ್ನು ಮಡಗಿಕೊಂಡಿರು ವುದರ ಬಗ್ಗೆ ಚರ್ಚೆ ನಡೆಯುತ್ತದೆ. ಆಗ ಅದಕ್ಕೆ ಉಪಕಥೆ ಎಂಬಂತೆ ಪುಂಡ್ರಿ ತನ್ನ ಗೆಳೆಯ ದೊಡ್ಡತಮ್ಮನ ಜೊತೆ ಎತ್ತುಗಳ ಚಾಟವ್ಯಾಪಾರಕ್ಕೆ ಹೋಗಿ ದ್ದಾಗ ಅವನು ಒಂದು ಹೆಣ್ಣಿನ ಜೊತೆ ಸಿಕ್ಕಿಬಿದ್ದು ಪಟ್ಟ ಪಾಡಿನ ಕಥೆಯನ್ನು ಅದಕ್ಕೆ ಉಪಕಥೆಯಾಗಿ ಹೇಳುತ್ತಾನೆ.

೬ ಸಾಂಕೇತಿಕತೆ : ಸಾಂಕೇತಿಕತೆ ಸಾಮಾನ್ಯವಾಗಿ ಶಿಷ್ಟ ಸಾಹಿತ್ಯದಲ್ಲಿ ಇರುವ ಒಂದು ಪ್ರಮುಖ ಗುಣ. ಶಿಷ್ಟ ಸಾಹಿತ್ಯದಲ್ಲಿ ಅದು ಕಥೆ ಹೇಳುವ ತಂತ್ರವಾಗಿ ಬರುತ್ತದೆ. ಮೌಖಿಕ ಸಂಪ್ರದಾಯದಲ್ಲಿ ಒಂದು ಕಥಾನಕ (discourse) ಮುಗಿದ ಮೇಲೆ ಅದು ಇನ್ನೊಂದಕ್ಕೆ ಸಂಕೇತವಾಗಿ ನಿಲ್ಲಬಹುದು. ಆದರೆ ಮೌಖಿಕ ಸಂಪ್ರದಾಯದಲ್ಲಿ, ಸಾಂಕೇತಿಕತೆ ಕಡಿಮೆ.

'ಭುಜಂಗಯ್ಯ....' ಕಾದಂಬರಿಯಲ್ಲಿಯೂ ಸಾಂಕೇತಿಕತೆ ಬರುವುದು ಬಹಳ ಕಡಿಮೆ. ಭುಜಂಗಯ್ಯ ತನ್ನ ಹೋಟೆಲಿನ ಪಕ್ಕದಲ್ಲಿ ಬಂದಿದ್ದ ಹಾವಿನ ವಿವರ ಮತ್ತು ಅಲ್ಲಿಗೆ ಮೊದಲಬಾರಿಗೆ ಸುಶೀಲ ಬರುವುದು, ಸಾಂಕೇತಿಕ ವಾಗುತ್ತದೇನೋ ಎಂಬಷ್ಟು ಹತ್ತಿರ ಬರುತ್ತದೆ. ಮುಂದೆ ಭುಜಂಗಯ್ಯನಿಗೂ ಸುಶೀಲಳಿಗೂ ಲೈಂಗಿಕ ಸಂಬಂಧ ಬೆಳೆಯುತ್ತದಾದರೂ, ಹಾವು ಅಲ್ಲಿ ಸಾಂಕೇತಿಕ ವಾಗದೆ, ಭುಜಂಗಯ್ಯನು ಹಾವಿನ ಜೊತೆ ಸರಸವಾಡುವ, ಹಾವು ಕಚ್ಚಿದರೆ ಔಷಧಿ ಕೊಡುವವನು ಎಂಬುದರ ಕಡೆಗೂ ಒತ್ತು ಬೀಳುತ್ತದೆ. ಆ ವಿವರ ಇಲ್ಲದೆಯೂ ಅವನು ಸುಶೀಲಳನ್ನು ಪ್ರೀತಿಸಬಹುದಿತ್ತು ಎಂಬುದು ಮುಂದಿನ ಕಾದಂಬರಿಯ ವಿವರಣೆಯಲ್ಲಿ ದೊರೆಯುತ್ತದೆ.

೭ ಮೌಖಿಕ ಸಂಪ್ರದಾಯದ ಭಾಷೆಯಲ್ಲಿ ವಾಕ್ಯರಚನೆ ಶಿಷ್ಟದಲ್ಲಿನಂತೆ ಉದ್ದವೂ ಸಂಕೀರ್ಣವೂ ಆಗಿರುವುದಿಲ್ಲ. ನೇರವೂ ಸರಳವೂ ಆದ ವಾಕ್ಯಗಳು ಇರುವಂತೆ 'ಭುಜಂಗಯ್ಯ....' ಕಾದಂಬರಿಯಲ್ಲೂ ಇವೆ.

ಇಲ್ಲಿ ಹೇಳಿದ ಈ ಗುಣಗಳಲ್ಲಿ ಒಂದೊಂದನ್ನು ಶಿಷ್ಟಸಂಪ್ರದಾಯದ ಬರಹಗಳಲ್ಲಿ ಕಂಡರೂ ಅವುಗಳು ಒಂದು ಕೃತಿಯಲ್ಲಿ ಗಮನಿಸಿದಾಗ, ಮುಖ್ಯ ಭಾಗಗಳಾಗಿ, ಎದ್ದು ಕಾಣುವಂತೆ ಬಂದಿರುವುದಿಲ್ಲ. ಈ ಗುಣಗಳು 'ಭುಜಂಗಯ್ಯ....' ಕಾದಂಬರಿಯಲ್ಲಿ ಕಣ್ಣಿಗೆ ಢಾಳಾಗಿ ಗೋಚರಿಸುತ್ತವೆ ಎಂಬುದನ್ನು ಗಮನಿಸಬಹುದು.

ಭಾಗ ೨

'ಭುಜಂಗಯ್ಯ....' ಕಾದಂಬರಿಯ ಮುಖ್ಯ ಪರಿಕಲ್ಪನೆ :

ಈ ಕಾದಂಬರಿಯ ಉದ್ದಕ್ಕೂ ಹಾಸುಹೊಕ್ಕಾಗಿ ಹರಡಿಕೊಂಡಿರುವ ಪರಿಕಲ್ಪನೆ 'ಒಳಗು—ಹೊರಗು' ಎಂಬುದು. ಈ ಪರಿಕಲ್ಪನೆ ಕಾದಂಬರಿಯಲ್ಲಿ ನಾನಾ ಸ್ತರಗಳಲ್ಲಿ ಕೆಲಸಮಾಡುತ್ತದೆ.

೧ ಕುಗ್ರಾಮವಾದ ಮಾದಳ್ಳಿಯ ಎಲ್ಲ ಜಾತಿಯ ಜನರೂ ಕೃಷಿಸಂಪ್ರದಾಯಕ್ಕೆ ಸೇರಿದ್ದವರು. ಅದು ಅವರಿಗೆ ತಲೆತಲಾಂತರದಿಂದ ಬಂದದ್ದು. ಆದರಿಂದ ಅವರು ಹೊರಬರುವ ಸಾಧ್ಯಗಳೇ ಇಲ್ಲ. ಸಂಪ್ರದಾಯ ಬದ್ಧವಾದ ಬೇಸಾಯವನ್ನೇ ಅವಲಂಬಿಸುತ್ತಿರುವ ಜನ. ಅದು ಅವರ ನರನಾಡಿಯನ್ನು ಮನಸ್ಸನ್ನೂ ಹೊಕ್ಕಿರುವಂಥದ್ದು. ಭುಜಂಗಯ್ಯನೂ ಇಂತದೇ ಸಂಪ್ರದಾಯಕ್ಕೆ ಬದ್ಧನಾದವನು. ಆದರೆ ಊರಿನವರನ್ನೆಲ್ಲಾ ಸೇರಿಸಿಕೊಂಡು ಮೂರುಬಾರಿ ಅವನು ಓಡಾಡಿ ಮಾಡಿದ 'ಪರ'ಕ್ಕೂ ಮಳೆರಾಯ ಓಗೊಟ್ಟೆರದಿದ್ದರಿಂದ ಮೊದಲ ಬಾರಿಗೆ ಅವನ ಮನಸ್ಸಿನಲ್ಲಿ ಜಮೀನಿನ ಜೊತೆಗೆ ಇನ್ನೇನಾದರೂ ವೃತ್ತಿಯನ್ನು ಅವಲಂಬಿಸಬೇಕೆಂಬುದು ಹೊಕ್ಕು, ಗುಂಗಿಹುಳದಂತೆ ಕೊರೆಯುತ್ತಿರುತ್ತದೆ. ಅದು ಆಕಾರ ತಳೆದದ್ದು ಯಾರೋ ಪ್ರಯಾಣಿಕನೊಬ್ಬ "ಈ ಊರಿನಲ್ಲಿ ಕುಡಿಯುವ ನೀರಿಗೂ ಬರ. ಒಂದು ಹೋಟಲಾದರೂ ಇದ್ದಿದ್ದರೆ" ಎಂದು ಹೇಳಿದ ಗಳಿಗೆಯಿಂದ.

ತನ್ನೊಳಗೆ ಬಂದು ಕುಳಿತುಕೊಂಡ ಈ ವಿಚಾರವನ್ನು ಮೊದಲು ತನ್ನ ಗೆಳೆಯರೊಡನೆ ಹೊರಹಾಕಿದ ತಕ್ಷಣ ಬಂದ ಪ್ರತಿಕ್ರಿಯೆ 'ಎಂಜಲು ಲೋಟ ತೊಳೆಯುವುದು ಶಿವಾಚಾರರಾದ ನಮಗೆ ಅಲ್ಲ' ಈ ಹೊಸ ಕಾಯಕ ಬೇಡ. ಅದೂ ಸ್ವಲ್ಪ ಆಸ್ತಿವಂತನೇ ಆಗಿರುವ ಭುಜಂಗಯ್ಯನ ಬಾಯಲ್ಲಿ ಈ ಮಾತು ಬಂದಿರುವುದು ಸರಿಯಲ್ಲ 'ಇದು ನಾವು ಮಾಡುವ ಕೆಲಸವಲ್ಲ' ಎಂಬ ಪ್ರತಿಕ್ರಿಯೆ.

ಆದರೂ ಇದನ್ನು ಮಾಡಿಯೇತೀರುತ್ತೇನೆಂದು ಪಟ್ಟುಹಿಡಿದು ಕೂತಾಗ ಭುಜಂಗಯ್ಯನ ಹೆಂಡತಿ, ತಾಯಿಯರೂ ಅದನ್ನು ವಿರೋಧಿಸುತ್ತಾರೆ. ಅವನ

ಹೆಂಡತಿ ಪಾರ್ವತಿಯಂತೂ ತನ್ನ ತೌರಿನಿಂದ ತಂದೆಯನ್ನು ಕರೆಸಿ ಭುಜಂಗಯ್ಯನಿಗೆ ಬುದ್ಧಿವಾದ ಹೇಳಿಸುತ್ತಾಳೆ. ಆತ ಪಾಪ–ಪುಣ್ಯ ಬೆರೆಸಿ ಎಚ್ಚರಿಕೆಯ ಉಪದೇಶಾಮೃತವನ್ನೇ ಬಿಗಿಯುತ್ತಾನೆ. ಭುಜಂಗಯ್ಯ ಚಿಕ್ಕವನಾಗಿದ್ದಾಗ ಊರುಬಿಟ್ಟು 'ಪತ್ರಾವಳಿ' ಎತ್ತುವ ಕೆಲಸಕ್ಕೆ ಬಿದ್ದಿದ್ದನ್ನು ಜ್ಞಾಪಿಸಿ ಹಂಗಿಸುತ್ತಾನೆ. ಇದರ ಪರಿಣಾಮವಾಗಿ ಭುಜಂಗಯ್ಯನಿಗೆ ಸೇರಿದ ಕುಟುಂಬದ ವ್ಯಕ್ತಿಗಳಿಗೇ ಹೊರಗಿನವನಾಗುತ್ತಾನೆ. ಮನೆಯಲ್ಲಿ ಮೌನಯುದ್ಧವೇ ಪ್ರಾರಂಭವಾಗುತ್ತದೆ. ಅದಕ್ಕೆ ಮುಖ್ಯ ಕಾರಣ ಭುಜಂಗಯ್ಯನು ಹೋಟೆಲಿನ ಕಡೆಗೆ ಹೆಚ್ಚು ಗಮನ ನೀಡಿ ಬೇಸಾಯವನ್ನು ಮರೆತೇಬಿಡುತ್ತಾನೆ ಎಂಬುದು.

ಊರಿನ ಕೆಲ ಜನರಾದರೂ ಭುಜಂಗಯ್ಯನ ಅಭ್ಯುದಯವನ್ನು ಕಂಡು ಮಾತನಾಡಿದರೂ ಹೋಟೆಲಿಗೂ ತನಗೂ ಏನೂ ಸಂಬಂಧವೇ ಇಲ್ಲ ಎನ್ನುವಂತೆ ಇದ್ದುಬಿಡುತ್ತಾರೆ. ಭುಜಂಗಯ್ಯ ಹೋಟೆಲಿನಿಂದ ತಂದ ತಿಂಡಿಯನ್ನು ಮಕ್ಕಳಿಗೆ ಕೊಡಲು ಬಿಡುವುದಿಲ್ಲ.

ಭುಜಂಗಯ್ಯ ಮತ್ತು ಹೆಂಡತಿ ಪಾರ್ವತಿ ಒಂದಾಗುವುದು ಮತ್ತೆ ಮಳೆ ಬಂದು ಭುಜಂಗಯ್ಯ ಸ್ವಲ್ಪದಿನ ಬೇಸಾಯಕ್ಕೆ ಗಮನಕೊಟ್ಟಾಗಲೇ. ಮತ್ತು ಆತ ಹೋಟೆಲ್ ಆದಾಯವನ್ನು ಅವಳ ಕೈಲಿ ಇಟ್ಟಾಗ.

ಭುಜಂಗಯ್ಯ ಹೋಟೆಲ್ ಇಟ್ಟ ಕ್ಷಣದಿಂದ ತನ್ನ ಮಾತಿನ ಶೈಲಿಯನ್ನೇ ಬದಲಾಯಿಸಿಕೊಳ್ಳುತ್ತಾನೆ. ಹೊಸ ನುಡಿಗಟ್ಟುಗಳು ವ್ಯಾಪಾರಕ್ಕಾಗಿ ಬೇಕಾಗುವ ಭಾಷೆಯನ್ನು ರೂಢಿಸಿಕೊಳ್ಳುತ್ತಾನೆ. ವೇಷಭೂಷಣಗಳಲ್ಲಿ ಬದಲಾಗುತ್ತಾನೆ. ತನ್ನ ಜಾತಿಯ ಜನರಿಗೆ ಹತ್ತಿರವಾಗದಿದ್ದರೂ ಕೆಲವರಿಗಂತೂ ಬಹಳ ಹತ್ತಿರದವನಾಗುತ್ತಾನೆ. ಆದರೆ ಭೂಮಿಯಿಂದ ಹಂತ ಹಂತವಾಗಿ ಹೊರಗಿನವನಾಗುತ್ತಾನೆ. ಅವನಿಗೆ ಸ್ವಲ್ಪ ಆದಾಯ ಬರತೊಡಗಿದಾಗ ಹೊಸ ಹೊಸ ಆಕಾಂಕ್ಷೆಗಳು ತೆರೆದುಕೊಳ್ಳುವ, ತುಂಬಿಕೊಳ್ಳುವ ಮಧುರವಾದ ದಿನಗಳಾಗತೊಡಗುತ್ತವೆ. ಕಂಡದ್ದೆಲ್ಲ ಸುಂದರವಾಗತೊಡಗುತ್ತದೆ. ಶ್ರಮವಿಲ್ಲದ ಬದುಕು ಸರಳವಾಗುತ್ತದೆ. ವ್ಯಾಪಾರದ ನೆರಳಿನಲ್ಲಿ ಕೂತು ಮಾಡಿದರೂ ಅದೂ ಕಡಿಮೆಯೇ ತಾನೆ ಎಂದು ಸಮಾಧಾನಪಟ್ಟುಕೊಳ್ಳುತ್ತಾನೆ. ಆದರೆ ಆತ ಕೃಷಿ ಮಾಡಲು ನೇರವಾಗಿ ತಾನು ಹೊಲಗದ್ದೆಗಳಿಗೆ ಹೋಗುವುದಿಲ್ಲ. ತನ್ನ ತಾಯಿಯ ಮೇಲುಸ್ತುವಾರಿಯಲ್ಲೇ ನಡೆಯುತ್ತದೆ. ತಿಂಗಳಾದರೂ ಮುಖಕ್ಷೌರ ಮಾಡಿಸಿಕೊಳ್ಳದವನು ವಾರಕ್ಕೆ ಮೂರುಬಾರಿ ಮಾಡಿಸಿಕೊಳ್ಳುತ್ತಾನೆ. ಹೀಗೆ ಬೇಸಾಯ ಸಂಸ್ಕೃತಿಯಿಂದ ಹಂತ ಹಂತವಾಗಿ ದೂರವಾಗುತ್ತಾನೆ. ಹುಂಡಿಯ ಮುದ್ದೇಗೌಡರ ಸಹಾಯದಿಂದ ಹೊಸ ಜಮೀನನ್ನು ಕೊಂಡರೂ ಆತ ನೇರವಾಗಿ ಬೇಸಾಯಕ್ಕೆ ತೊಡಗುವುದಿಲ್ಲ. ಜೀತದಾಳುಗಳನ್ನು ಇಟ್ಟುಕೊಂಡು ಉಸ್ತುವಾರಿ ರೈತನಾಗುತ್ತಾನೆ. ಹೀಗೆ ಕ್ರಮೇಣ ಬೇಸಾಯದಿಂದ ಪರಕೀಯನಾಗತೊಡಗುತ್ತಾನೆ.

ಇಷ್ಟು ಹೊತ್ತಿಗಾಗಲೇ ತನ್ನ ಜಾತಿಯ ಆಗದವರ ಕಣ್ಣು ಭುಜಂಗಯ್ಯನ ಅಭ್ಯುದಯಕ್ಕೆ ಕೆಂಪಾಗುತ್ತದೆ. ತನ್ನನ್ನು ಹೊರಹಾಕಿದ ಜನರ ಜೊತೆ ಪ್ರತಿಷ್ಠೆ

ಯನ್ನು ಸಂಪಾದಿಸಲು ಭುಜಂಗಯ್ಯ ದೊಡ್ಡಮಠದ ಸ್ವಾಮಿಗಳನ್ನು ತನ್ನ ಕುಗ್ರಾಮಕ್ಕೆ ಕರಸಿ, ಅವರ ಪಾದಧೂಳಿಯಿಂದ ಊರನ್ನು ಪವಿತ್ರಗೊಳಿಸುವ ಕೆಲಸ ಮಾಡುತ್ತಾನೆ. ಇದರಿಂದ ತನ್ನ ಹೊಸ ಕಾಯಕಕ್ಕೆ ಸ್ವಾಮಿಗಳ 'ಅಸ್ತು'ವಿನ ಮುದ್ರೆ ಒತ್ತಿಸಿ, ಅವನನ್ನು ಆಡಿಕೊಳ್ಳುವ ಜನರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾನೆ.

ಇದರ ಪರಿಣಾಮವಾಗಿ ಅವನಿಗೆ ಹೊರಗಿನವರೇ ಆಗಿ ಬಿಟ್ಟಿದ್ದ ಜನವೂ ಅವನನ್ನು ಒಳಗಿನವನಾಗಿ ಒಪ್ಪಿಕೊಳ್ಳಲು ತಯಾರಾಗುತ್ತಾರೆ. ಮಾವ ಪರ್ವತಪ್ಪನೂ ಇದಕ್ಕೆ ಹೊರತಲ್ಲ.

ಭುಜಂಗಯ್ಯ ದೊಡ್ಡ ಕುಳವಾಗುತ್ತಿದಂತೆ ಅವನನ್ನು ಪರಕೀಯನಾದವನಂತೆ ಜನ ನೋಡುತ್ತಾರೆ. ಅದನ್ನು ತಪ್ಪಿಸಿಕೊಳ್ಳಲು ನಾಟಕ ಮಾಡಿಸಿ ಜನರು ತನ್ನವನೆಂದು ತಿಳಿದುಕೊಳ್ಳುವಂತೆ ಮಾಡುತ್ತಾನೆ. ಆದರೆ ಭೂಮಿಯ ಬಗ್ಗೆ ಮಾತ್ರ ದೂರದೂರದವನಾಗುತ್ತಾ ಹೋಗುತ್ತಾನೆ.

ಸುಶೀಲನ ಪ್ರೇಮ 'ಮದುವೆ'ಯಲ್ಲಿ ಪರ್ಯವಸಾನವಾದಾಗ ಮತ್ತೆ ಊರಿನವರೂ ದೂರವಾದಂತೆ, ಹೆಂಡತಿಯೂ ಮನೆ ಬಿಟ್ಟು ಹೋಗುತ್ತಾಳೆ. ಪುನಃ ಅವಳು ಆ ಊರಿಗೆ ಬಂದರೂ ಕ್ರಮೇಣ ಭುಜಂಗಯ್ಯನ ಪಿತ್ರಾರ್ಜಿತ ಭೂಮಿ ಪಾರ್ವತಿಯ ಹೆಸರಿಗೆ ಹೋಗುತ್ತದೆ. ಈಗಂತೂ ಅವನು ಕೃಷಿಯಿಂದ ಹೊರಗಿನವನಾಗಿಯೇ ಉಳಿದು ಬಿಡುತ್ತಾನೆ. ಸ್ವಯಾರ್ಜಿತ ಜಮೀನು ಮಾತ್ರ ಅವನದಾಗಿರುತ್ತದೆ.

ಹೋಟೆಲಿಗೆ ಬೆಂಕಿಬಿದ್ದು ನಷ್ಟವಾದಾಗಲೂ ಅವನು ಭೂಮಿಯನ್ನು ಉಳಲು ವಾಪಸಾಗುವುದಿಲ್ಲ. ಅಂಗಡಿ ಇಡುತ್ತಾನೆ. ನಷ್ಟವಾದಮೇಲೆ ಕಂತ್ರಾಟುದಾರನಾಗುತ್ತಾನೆ. ಬಾವಿ ತೆಗೆಸುವ ವೃತ್ತಿಯನ್ನು ಅವಲಂಬಿಸುತ್ತಾನೆ. ಆದರೆ ಜಮೀನು ಉಳಲು ಹೋಗುವುದಿಲ್ಲ. ಯಾರೋ ಬೇರೆ ಊರಿನವನನ್ನು ಕರೆಸಿ ಜಮೀನು ಮಾಡಿಸುತ್ತಾನೆ.

ಕೊನೆಗೆ ಕಣ್ಣು ಕಳೆದುಕೊಂಡ ಮೇಲಂತೂ, ಕಂತ್ರಾಟಿನಲ್ಲಿ ಆದ ನಷ್ಟ ತುಂಬಿಕೊಳ್ಳಲು ತನ್ನ ಜಮೀನನ್ನೇ ಮಾರಿಬಿಡುತ್ತಾನೆ. ಒಂದು ಅಂಗೈ ಅಗಲದ ಭೂಮಿಯೂ ಇಲ್ಲದವನಾಗಿ ಕೃಷಿ ಸಂಸ್ಕೃತಿಯಿಂದಲೇ ಹೊರಗಿನವನಾಗಿ ಉಳಿದು ಬಿಡುತ್ತಾನೆ.

ಇದರ ಜೊತೆಗೆ ತನ್ನ ಕೈಹಿಡಿದ ಹೆಂಡತಿ ಇವನು ಕಣ್ಣು ಕಳೆದುಕೊಂಡಾಗಲೂ ಬಂದುನೋಡದೆ ಹೊರಗಿನವಳಾಗಿಯೇ ಉಳಿದುಕೊಂಡು ಬಿಡುತ್ತಾಳೆ. ಮಕ್ಕಳನ್ನೂ ಗಂಡನಿಂದ ದೂರಮಾಡಿಬಿಡುತ್ತಾಳೆ. ಹೀಗೆ ಭುಜಂಗಯ್ಯ ಕೃಷಿಯಿಂದ ಹೊರಗಾಗಿ, ಹೆಂಡತಿ ಮಕ್ಕಳಿಂದಲೂ ಹೊರಗಿನವನಾಗಿಯೇ ಉಳಿದು ಬಿಡುತ್ತಾನೆ.

೨ ಭುಜಂಗಯ್ಯನಿಗೆ ಹೋಟಲು ಇಡುವ ಮನಸ್ಸು ಯಾರೋ ಹೊರಗಿನವರಿಂದಾಗಿ ಬಂದಂತೆ ಅವನು ಹೋಟಲು ಇಡಲು ಮನಸ್ಸು ಮಾಡಿದಾಗ ಸಲಹೆಗಾಗಿ ಅರಸಿ

ಹೋಗುವುದು ಶಿವಾಚಾರದ ಕುಲದವನಾದರೂ, ಆ ಕುಲದ ದೃಷ್ಟಿಯಿಂದ ಅತ್ಯಂತ ಹೀನವಾದ ಹೆಂಡಮಾರುವ ವೃತ್ತಿಯನ್ನು ಹಿಡಿದಿರುವ ಕೋಡಂಗಿ ಅಜ್ಜಪ್ಪನ ಹತ್ತಿರ. ಅವನು ಭುಜಂಗಯ್ಯನ ಅಭಿಲಾಷೆಗೆ ಒತ್ತುಕೊಟ್ಟಿದ್ದೂ ಅಲ್ಲದೆ, ಹಣದ ಒತ್ತಾಸೆಯನ್ನು ನೀಡಿ, ಊರಹೊರಗೆ, ಕೂಡುರಸ್ತೆಯಲ್ಲಿರುವ ಜಮೀನಿನ 'ದೆವ್ವದ ಹುಣಿಸೇಮರ'ದ ಕೆಳಗೆ ಹೋಟಲಿಡುವ ಜಾಗವನ್ನು ಕೊಡುತ್ತಾನೆ. ಕೊನೆಗೆ ಅವನೇ ಭುಜಂಗಯ್ಯನಿಗೆ ಸಲಹೆಗಾರನೂ ಆಗಿ ಭುಜಂಗಯ್ಯನಿಗೆ ಅಂತರಂಗದ ವ್ಯಕ್ತಿಯಾಗಿಬಿಡುತ್ತಾನೆ.

೩ ಊರಿನ ಹೊರಗಿದ್ದ ಹೋಟಲಿಗೆ ಮೊದಮೊದಲು ಬರಲು ಹಿಂದೇಟು ಹಾಕುತ್ತಿದ್ದ ಜನ ಕ್ರಮೇಣವಾಗಿ ಯಾರ ಹೆದರಿಕೆ ಭಯವೂ ಇಲ್ಲದೆ ಬಂದು ಟೀ ಕುಡಿಯ ತೊಡಗಿದರು. ಕೊನೆಗೆ ಭುಜಂಗಯ್ಯನ ಹೋಟೆಲಿನ ತಿಂಡಿಯ ರುಚಿಗೆ ಬಿದ್ದವರು ಅದು ಇಲ್ಲದೆಯೇ ಇರಲು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬಂದು ಬಿಟ್ಟಿದ್ದರು.

೪ ಭುಜಂಗಯ್ಯನಿಗೆ ಯಾವಾಗಲೂ ಒತ್ತಾಸೆಯಾಗಿ ಹಿತೈಷಿಯಾಗಿ ನಿಂತಿದ್ದವರೆಂದರೆ ಕರೀಗೌಡರು ಮತ್ತು ಅವರ ತಮ್ಮ ಮುದ್ದೇಗೌಡರು. ಮಾದಳ್ಳಿಯ ಕರೀಗೌಡರ ಮನೆ ದಾನ ಧರ್ಮಕ್ಕೆ ಹೆಸರಾಗಿದ್ದರೆ ಹುಂಡಿಯಲ್ಲಿ ಮುದ್ದೇಗೌಡರ ಮನೆ, ಮುದ್ದೇಗೌಡರ ಹೆಂಡತಿ ಪುಟ್ಟವ್ವ. 'ಭುಜಂಗಯ್ಯ ತನಗೆ ಏನೇ ಕಷ್ಟಬಂದರೂ ತನ್ನ ಜಾತಿಯವರ ಹತ್ತಿರ ಹೋಗುತ್ತಿರಲಿಲ್ಲ. ನೇರವಾಗಿ ಹುಂಡಿಗೆ ಹೋಗಿ ಗೌಡರು ಇರಲಿ ಇಲ್ಲದಿರಲಿ ತನಗೆ ಬೇಕಾದದ್ದನ್ನು ಕೇಳಿ ಪಡೆಯುತ್ತಿದ್ದ. ಕರೀಗೌಡರು ಸ್ವಾಮಿಗಳನ್ನು ಕರೆಸಿದ್ದಾಗ ದವಸ ಧಾನ್ಯಗಳನ್ನು ಅವರಿಗೆ ಕೊಟ್ಟಿದ್ದರು. ಭುಜಂಗಯ್ಯ ಜಮೀನು ಕರೀದಿಸುವಂತೆ ಸಲಹೆಮಾಡಿದಾಗ ಅದನ್ನು ಕೊಳ್ಳಲು ಕೈಗಡವಾಗಿ ಹಣ ಕೊಟ್ಟವರು ಮುದ್ದೇಗೌಡರು. 'ಅವತ್ತಿನಿಂದ ಭುಜಂಗಯ್ಯನಿಗೆ ತನ್ನ ಕಷ್ಟ ಸುಖಕ್ಕೆ ನಿಜವಾಗಲೂ ಆಗುವ ಪುಣ್ಯಾತ್ಮರು ತನ್ನ ಜಾತಿಯವರಲ್ಲ, ಗೌಡರ ಮನೆಯವರು ಅನ್ನುವುದು ಖಚಿತವಾಗಿಬಿಟ್ಟಿತು." (ಪುಟ ೧೨೨) ಭುಜಂಗಯ್ಯ–ಸುಶೀಲರ ಸಂಬಂಧದಲ್ಲಿ ಭುಜಂಗಯ್ಯನನ್ನು ಕುಲದಿಂದ ಹೊರಹಾಕಲು ಮಾಡಿದ ನ್ಯಾಯದಲ್ಲಿ ಸಹಾಯ ಮಾಡಿದವರು ಕರೀಗೌಡರು.

ಒಮ್ಮೆ ಕರೀಗೌಡರಿಗೆ ಹಾವು ಕಚ್ಚಿದಾಗ ಊರಲ್ಲಿ ಯಾವತ್ತು ಯಾರಿಂಗೆ ಹಾವು ಕಚ್ಚಿದಾಗಲೂ ಅವನು ತಮ್ಮ ಜಾತಿಯವನನ್ನು ಬಿಟ್ಟು ಹೀಗೆ ಬಾಯಿ ಹಚ್ಚಿ ವಿಷ ತೆಗೆದಿರಲಿಲ್ಲ. ಈಗ ಮಾತ್ರ ಹಿಂದೂ ಮುಂದೂ ನೋಡದೆ ಬೇರೆ ದಾರಿಯೇ ಕಾಣದೆ ಬಾಯಿಹಚ್ಚಿ ವಿಷ ತೆಗೆಯುತ್ತಾನೆ. ಗೌಡರನ್ನು ಬದುಕಿಸುತ್ತಾನೆ. ಹೋಟೆಲು ಸುಟ್ಟುಭಸ್ಮವಾದ ಮೇಲೆ ಭುಜಂಗಯ್ಯನಿಗೆ ಆಸರೆಯಾದವರು ಕರೀಗೌಡರು.

ಹೀಗೆ ಜಾತಿಯ ಹೊರಗಿನವರು ಭುಜಂಗಯ್ಯನಿಗೆ ಒಳಗಿನವರಾಗುತ್ತಾರೆ.

ಭುಜಂಗಯ್ಯನಿಗೆ ಹೊರಗೆ ನಡೆಯುವ ವಿದ್ಯಮಾನವನ್ನೆಲ್ಲಾ ತಿಳಿಯುವಂತೆ ಮಾಡುವವರು, ಹೋಟೆಲ್‌ಗೆ ಪ್ರಯಾಣಿಕರನ್ನು ಕರೆತರುವವರು ಲಿಂಗಾಅಂಬ ಬಸ್ಸಿನ ಡ್ರೈವರ್ ವಿಕ್ಟರಣ್ಣ. ಅವನಿಗೆ ಸುಶೀಲಳ ಜೊತೆ 'ಮದುವೆ' ಮಾಡಿಸಲೂ ಅವರು ಸಹಾಯ ಮಾಡುತ್ತಾರೆ.

ಭುಜಂಗಯ್ಯನಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸುವ ಇನ್ನೊಬ್ಬವ್ಯಕ್ತಿ ಬ್ರಾಹ್ಮಣರಾದ ಗೋವಿಂದರಾಜು ಮಾಸ್ತರರು. ವೀರಶೈವಧರ್ಮದ ದೇವರುಗಳಿಗಿಂತ ಭಿನ್ನವಾದ ಭವಿಯಾಗಿಯೂ ದೈವತ್ವವನ್ನು ಪಡೆದುಕೊಂಡ ವ್ಯಕ್ತಿ ಗಾಂಧಿಯನ್ನು ಅವನಿಗೆ ಪರಿಚಯ ಮಾಡಿಸಿ, ಹರಿಜನೋದ್ಧಾರದ ಬಗ್ಗೆ ಭುಜಂಗಯ್ಯನಲ್ಲಿ ಹೊಸ ರೀತಿಯ ಪರಿಕಲ್ಪನೆಯನ್ನು ಮೂಡಿಸುತ್ತಾರೆ. ಇದರಿಂದ ಭುಜಂಗಯ್ಯ ತನ್ನ ವೀರಶೈವಧರ್ಮ ಎಷ್ಟು ದೊಡ್ಡದು, ಆದರೂ ಇದನ್ನು ಆಚರಿಸುವ ಜನರು ಎಷ್ಟು ಸಣ್ಣಮನಸ್ಸಿನವರು ಎಂದು ಅರಿತುಕೊಳ್ಳುತ್ತಾನೆ. ಹಿಂದೆ ಯಾವ ಜಾತಿಯವರಾದರೂ ತಮ್ಮ ಧರ್ಮವನ್ನು ಅಪ್ಪಿಕೊಳ್ಳುವಂತಿತ್ತು. ಆದರೆ ಈಗ? ಗೋವಿಂದರಾಜುವಿನ ಗಾಂಧೀ ತತ್ವ ಭುಜಂಗಯ್ಯನ ಮೇಲೆ ಅಪಾರ ಪ್ರಭಾವ ಬೀರುತ್ತದೆ. ವೀರಶೈವ ಧರ್ಮ ಜಾತಿಗೆ ಸೇರದ ಗಾಂಧಿಯ ಫೋಟೋ ಅವನ ಧರ್ಮದ ದೇವರುಗಳ ಜೊತೆ ನಗುನಗುತ್ತಾ ಸೇರಿ ಬಿಡುತ್ತದೆ. ಇದು ತಂಬೂರಿ ಅಯ್ಯನವರಿಗೂ ನುಂಗಲಾಗದ ತುತ್ತಾಗುತ್ತದೆ.

ನಂತರ ಹರಿಜನರ ಜಾತಿಗೆ ಸೇರಿದ ಕ್ಯಾತನಹಳ್ಳಿಯ ಹೊಸ ಮಾಸ್ತರು ಹೋಟೆಲ್ ಒಳಗೆ ಕುಳಿತು ಕಾಫಿ ಕುಡಿದದ್ದು, ಅದನ್ನು ಭುಜಂಗಯ್ಯ ವಹಿಸಿಕೊಂಡದ್ದು ತನ್ನ ವೀರಶೈವ ಜನಾಂಗ ಸಹಿಸದೆ ಭುಜಂಗಯ್ಯನ ಅಭ್ಯುದಯದ ಹೋಟೆಲನ್ನು ಸುಟ್ಟು ಅವನ ಅಭ್ಯುದಯವನ್ನೇ, ಕಾಯಕವನ್ನೇ ಅಳಿಸಿ ಹಾಕಿ ಬಿಡುತ್ತಾರೆ. ಬೇರೆ ದೇವರುಗಳ ಪಟವನ್ನು ಬಿಟ್ಟು ಗಾಂಧಿಪಟವನ್ನು ಒಡೆದು ಹಾಕಿ ಬಿಡುತ್ತಾರೆ.

ಭುಜಂಗಯ್ಯನ ಮನೆ ಮುಂದೆ ಬರಲಿ, ಅವನು ಮತ್ತಷ್ಟು ಭಾಗ್ಯಶಾಲಿಯಾಗಲಿ ಎಂದು ಹರಸುತ್ತಿದ್ದ ಜೀವ ಹಂಪಾಪುರದ ತಂಬೂರಿ ಅಯ್ನೋರದ್ದು. ಇವರು ಹೇಳುತ್ತಿದ್ದ ಪದಗಳು ಭುಜಂಗಯ್ಯನ ಮೇಲೆ ಪರಿಣಾಮ ಬೀರುತ್ತಿರುತ್ತವೆ. ಕುರುಡುತನದ ದೊಡ್ಡ ಭಾರವನ್ನು ಹೊತ್ತು ಮಾದಳ್ಳಿಗೆ ಬಂದ ಮೇಲಂತೂ ಅಯ್ನೋರು ಹಾಡಿದ ಪದಗಳೂ ಭುಜಂಗಯ್ಯನ ಅಂತರಾಳಕ್ಕೇ ಅನುಭವಗಳಾಗಿ ಇಳಿಯ ತೊಡಗುತ್ತವೆ. 'ಈ ಲೋಕವ ಬದುಕಿದೇ ಅಂಟಿಕೊಂಡರೆ ತಾನೂ ಭವಿಯಾಗಿ ಕೊಳೆತು ನಾರಿಹೋಗುತ್ತದೆ. ತಾನೂ ಒಬ್ಬ ಶರಣನಾಗಬೇಕು. ಈ ದೇಹಕ್ಕೆ ತನ್ನದು, ತಾನು ಅನ್ನುವ ಮಾಯೆ ಹೋಗಬೇಕು. ಮಾಯೆಯನ್ನು

ಗೆಲ್ಲಬೇಕು ಎಂಬ ವೇದಾಂತದ ದರ್ಶನ ಮಾಡಿಸುತ್ತಾರೆ. ಆಧ್ಯಾತ್ಮದ ಗುರುವಾಗಿ ಬಿಡುತ್ತಾರೆ. ಕೊನೆಗೆ ತಮ್ಮ ತಂಬೂರಿಯನ್ನೇ ಅವನಿಗೆ ಕೊಟ್ಟು ತಮ್ಮ ಕಾರ್ಯವನ್ನು ಮುಂದುವರೆಸಿಗೊಂಡು ಹೋಗುವಂತೆ ಮಾಡುತ್ತಾರೆ. ತಂಬೂರಿಯನ್ನು ಕೊಟ್ಟು ತಿರುಗಿನೋಡದೆ ಹೊರಟ ಅಯ್ನೋರು ಶಿವನ ಪಾದವನ್ನು ಸೇರಿಬಿಡುತ್ತಾರೆ. ಭುಜಂಗಯ್ಯನ ಮನದ ಒಳಗನ್ನೂ ಸೇರಿಬಿಡುತ್ತಾರೆ.

೮ 'ಒಳಗು–ಹೊರಗು' ಒಂದಾಗುವುದು

(ಅ) ಭುಜಂಗಯ್ಯನಿಗೆ ಎಲ್ಲ ರೀತಿಯಲ್ಲೂ ಹೊರಗಿನವಳಾಗಿಯೇ ಉಳಿಯುತ್ತಾಳೆ ಕಟ್ಟಿಕೊಂಡ ಹೆಂಡತಿ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಹೊರಗಿನಿಂದ ಬಂದ, ಹೊರ ಜಾತಿಯವಳಾದ ಸುಶೀಲ ಮಾತ್ರ ಭುಜಂಗಯ್ಯನಿಗೆ ಒಪ್ಪಿಸಿಕೊಂಡು ಬಿಡುತ್ತಾಳೆ. ಸ್ವತಃ ಭುಜಂಗಯ್ಯನಿಗೇ 'ಇಟ್ಟುಕೊಂಡವಳಾಗಿ' ಮೊದಮೊದಲು ಕಂಡ ಸುಶೀಲ, ಅವಳ ಆಸೆ ಅವನದೂ, ಅವನ ಆಸೆ ಅವಳದೂ ಆಗಿಬಿಡುತ್ತದೆ. ಯಾವ ಹಿಂದೂ ಸ್ತ್ರೀ ಸಂಹಿತೆಯನ್ನು ಓದದಿದ್ದರೂ ಅವಳು ಅದನ್ನು ಪಾಲಿಸಿಕೊಂಡು ನಡೆಯುತ್ತಾಳೆ. ಊರಹೊರಗೇ ತನ್ನ ಸಂಸಾರವನ್ನು ಪ್ರಾರಂಭಿಸುತ್ತಾಳೆ. ತಂದೆ ಬಳಿಶೆಟ್ಟರು 'ದಡ್ಡಾದ ಮಡ್ಕೆ' ಅದು ಎಂದು ಅವಳನ್ನು ಹೊರಹಾಕಿ ಬಿಡುತ್ತಾರೆ. ಇದರಿಂದಾಗಿ ವೀರಶೈವ ಜನಾಂಗವೆ ಭುಜಂಗಯ್ಯನನ್ನು ಕುಲದಿಂದಲೇ ಹೊರಹಾಕಲು ನ್ಯಾಯ ಸೇರುತ್ತಾರೆ. ಆದರೆ ಅದು ಗೊಂದಲದಿಂದ ಮುಕ್ತಾಯವಾಗುತ್ತದೆ.

ಭುಜಂಗಯ್ಯ ಸುಶೀಲಳನ್ನು ವಿದ್ಯುಕ್ತವಾಗಿ ಲಿಂಗಧಾರಣೆ ಮಾಡಿಸಿ ಜಾತಿಯ ಒಳಕ್ಕೆ ಸೇರಿಸಿಕೊಳ್ಳುವಂತೆ ಮಾಡುತ್ತಾನೆ. ಆದರೆ ಈ ಕದನದಿಂದ ಕೋರ್ಟಿಯ ಪೋಲಿಸಿನವರು ಮಾದಳ್ಳಿಗೆ ಹತ್ತಿರದವರಾಗುತ್ತಾರೆ.

ಕರೀಗೌಡರಿಗೆ ಹಾವು ಕಚ್ಚಿದಾಗ ಸುಶೀಲ ಅವರ ಮನೆಗೆ ಬಂದದ್ದು ಭುಜಂಗಯ್ಯನಿಗೇ ಆಶ್ಚರ್ಯವಾದ ಸಂಗತಿ. ಆದರೆ ಅವಳನ್ನು ಅಕ್ಕರೆಯಿಂದ ಕರೆದು ಕೂರಿಸಿಕೊಳ್ಳುತ್ತಾರೆ ಗೌಡರ ಹೆಂಡತಿ.

'ಶರಣನಿಗೆ ಕುಲವಿಲ್ಲ' ಎಂದ ಅಯ್ನೋರೂ ಸುಶೀಲೆಯನ್ನು ಲಿಂಗಧಾರಣೆಯಾದರೂ ಒಪ್ಪಿಕೊಂಡಿರಲಿಲ್ಲ. ಅವಳ ಕೈಯಿಂದ ನೀರೂ ಕುಡಿಯುತ್ತಿರಲಿಲ್ಲ. ಅವಳು ಆಗಲೇ ಯಾವ ಶರಣರಿಗೂ ಕಡಿಮೆ ಇಲ್ಲದೆ ಶಿವಪೂಜೆ ಮಾಡಲು ಕಲಿತುಕೊಂಡು ಬಿಟ್ಟಿದ್ದಾಳೆ. ಆದರೂ ಅಯ್ನೋರು ಇವಳನ್ನು ತಮ್ಮ ಧರ್ಮದವಳನ್ನಾಗಿ ಒಪ್ಪಿಕೊಳ್ಳಲಿಲ್ಲವೆಂದು ಆಲೋಚಿಸುತ್ತಾನೆ. ಇದರ ವಿಷಯವಾಗಿ ಅವರನ್ನು ಒಮ್ಮೆ ಕೇಳಿಯೂ ಬಿಡುತ್ತಾನೆ. ಆದರೂ ಅವರ ಮನಸ್ಸಿನಲ್ಲಿ ಅವಳು ಲಿಂಗಧಾರಣೆ ಮಾಡಿಸಿಕೊಂಡರೂ ಸೆಟ್ಟರವಳೇ. ಈ ಮಹಾತ್ಮಾಗಾಂಧಿಯನ್ನು ಭುಜಂಗಯ್ಯ ಪೂಜೆ ಮಾಡುವುದನ್ನು ನೋಡಿದರೆ, ಹೊಲೇರು ಲಿಂಗ ಕಟ್ಟಿಸಿಕೊಂಡು ಬಂದರೂ ನಮ್ಮವರೆಂದು ಒಪ್ಪಿಕೊಳ್ಳಿ ಎಂದು ಭುಜಂಗಯ್ಯ ಹೇಳಲಾರನೇ ಎಂಬುದರಿಂದ ಅವರು ಒಪ್ಪಿಕೊಳ್ಳುವುದಿಲ್ಲ.

ಭುಜಂಗಯ್ಯನ ಹೋಟಲು ಸುಟ್ಟಾಗಲೂ, ಕೈಯಲ್ಲಿ ಹಣವಿಲ್ಲದ್ದಾದರೂ ಸುಶೀಲ ಅವನನ್ನು ಅನುಸರಿಸಿಕೊಂಡಿರುತ್ತಾಳೆ. ಅವರಿಗೆ ಇರಲು ಜಾಗ ಕೊಟ್ಟವರು ವೀರಶೈವರ ಕೇರಿಯವರಲ್ಲ; ಆದರೆ ಕರೀಗೌಡರು. ಮುಂದೆ ಭುಜಂಗಯ್ಯ ಮನೆ ಕಟ್ಟಿಸಿದಾಗ ಅಯ್ನೋರು ಸುಶೀಲಳನ್ನು ತಮ್ಮ ಜಾತಿಯವಳೆಂದು ಸ್ವೀಕರಿಸುತ್ತಾರೆ. "ಊರಲ್ಲಿ ತಮ್ಮ ಜಾತಿಯ ಜನ ಏನೇ ಅಂದರೂ ಅಯ್ನೋರು ಮಾತ್ರ ಭುಜಂಗಯ್ಯನ ಮನೆ ಬಿಡುವುದಿಲ್ಲ. (ಪುಟ ೩೮೩)

ಆದರೆ ಒಮ್ಮೊಮ್ಮೆ ಭುಜಂಗಯ್ಯನೇ ಯಾವುದೋ ಜಾತಿಯ ಹೆಣ್ಣನ್ನು ಇಟ್ಟುಕೊಂಡಿದ್ದೇನಲ್ಲ. ತಾನು ಇಟ್ಟ ಹೆಜ್ಜೆ ತಪ್ಪಲ್ಲವೇ ಅಂದುಕೊಂಡದ್ದೂ ಉಂಟು (ಪುಟ ೩೮೩) ತಮ್ಮ ಜಾತಿಯವರು ಮೂರು ನಾಲ್ಕು ಮದುವೆಯಾದರೆ ಅವರ ಪ್ರತಿಷ್ಠೆ ಹೆಚ್ಚುತ್ತಿತ್ತು. ಆದರೆ ನಾನು? ಎಂಬ ಯೋಚನೆಗೆ ಒಳಗಾಗುತ್ತಾನೆ. ಆದರೆ ಸುಶೀಲ ತಾನು ಮಾಡುತ್ತಿರುವ ತ್ಯಾಗದಿಂದ ಅವನ ಮನಸ್ಸಿನ ಒಳಗೂ ಇಳಿಯುತ್ತಿರುತ್ತಾಳೆ.

ಭುಜಂಗಯ್ಯ ಸಿಡಿಮದ್ದಿನ ಅಪಘಾತಕ್ಕೆ ಒಳಗಾಗಿ ಕಣ್ಣು ಕಳೆದುಕೊಂಡಾಗ ಅವಳು ಧೃತಿಗೆಡದೆ ಅವನ ಸೇವೆ ಮಾಡುತ್ತಾಳೆ. ಅವನನ್ನು ಮಗುವೇನೋ ಎಂಬ ರೀತಿಯಲ್ಲಿ ಕಾಣುತ್ತಾಳೆ. ಅವಳ ಕಣ್ಣುಗಳು ಅವಳದಷ್ಟೇ ಅಲ್ಲ ತನ್ನ ಗಂಡನವೂ ಆಗಿವೆ ಅಂದು ಕೊಳ್ಳುತ್ತಾಳೆ. "ನಾನಿರುವತನಕ ನಿಮಗೇನೂ ಆಗದಾಗೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ಇಡುತ್ತಾಳೆ. ಆಗ ಅವನಿಗೆ "ತಾನೆಂದೂ ಒಣಗಿ ಹೋಗದಂತೆ, ತನ್ನೊಳಗಿನದೇನೂ ಬತ್ತಿ ಹೋಗದಂತೆ ಅವಳು ಸದಾ ಆಸರೆಯಾಗುತ್ತಾಳೆ" ಎಂಬ ಭರವಸೆ ಮೂಡುತ್ತದೆ. ಬೆಳಕಾಡದ ಕಣ್ಣುಗಳಲ್ಲಿ ಬೆಳಕು ಕಾಣಲು ಯತ್ನಿಸುತ್ತಾಳೆ. ಇಬ್ಬರಿಗೂ ಬದುಕಿನಲ್ಲಿ ಏನೂ ಕೊರತೆ ಇಲ್ಲ. ಕಳೆದು ಹೋದದ್ದನ್ನೆಲ್ಲಾ ಮತ್ತೆ ಪಡೆದುಕೊಂಡಂತೆ ಎಲ್ಲ ತುಂಬಿ ಬಂದಂತೆ ಇಬ್ಬರಿಗೂ ಭಾಸವಾಗುವಂತೆ ಸುಶೀಲ ನಡೆದುಕೊಳ್ಳುತ್ತಾಳೆ. ಅಯ್ನೋರು ತಂದುಕೊಟ್ಟ ನಿಜಗುಣ ಶಿವಯೋಗಿಗಳ ವಚನವನ್ನು ಓದಿಹೇಳುತ್ತಾಳೆ. "ದೇವ್ರು ನನ್ನ ಕಣ್ಣು ಕಿತ್ತುಕೊಂಡಿದ್ರೂ ನಂಗೆ ಬ್ಯಾರೆ ಇನ್ನೆರ್ಡು ಕಣ್ಣು ಕೊಟ್ಟವ್ನೆ" ಅನ್ನಿಸುವಂತಾಗುತ್ತಾಳೆ.

ಜೀವನೋಪಾಯಕ್ಕಾಗಿ ಈಗ ಸುಶೀಲ ತನ್ನ ಹಳೆಕಾರ್ಯಕ್ಕೆ ಹಿಂದಿರುಗುತ್ತಾಳೆ. ಹಳ್ಳಿ ಹಳ್ಳಿಯ ಮೇಲೆ ಹೋಗಿ ಬಳೆ ಮಾರಿ ಬರುತ್ತಾಳೆ. "ಈಗ ಇಡೀ ಊರೇ ತನ್ನನ್ನು ಒಪ್ಪಿಕೊಂಡಿದೆ. ತಾನು ಮಾಡಿದ್ದ ತಪ್ಪನ್ನು ಮರೆತೇ ಬಿಟ್ಟಿದೆ. ಊರಲ್ಲಿ ಮೊದಲಿಗೆ ಬೇಕೆಂದೇ, ನೋವಾಗಲೆಂದೇ 'ಭುಜಂಗಯ್ಯ ಇಟ್ಟುಕೊಂಡವಳು' ಎಂದು ಹಗುರವಾಗಿ ಮಾತನಾಡುತ್ತಿದ್ದವರೂ ಈಗ ತಾವು ಆಡಿಕೊಂಡದ್ದಕ್ಕೆ ನಾಚಿಕೆ ಪಡುವಂತೆ ನಡೆದುಕೊಂಡಿದ್ದಾಳೆ (ಪುಟ ೪೮೨). ಹೀಗೆ ಸುಶೀಲ ತನ್ನ ಜಾತಿ ಕುಲದವರಿಗೇ ಅಲ್ಲ, ಊರಿನವರಿಗೇ ಒಳಗಿನವಳಾಗಿಬಿಟ್ಟಿದ್ದಾಳೆ.

ಈಗ ಭುಜಂಗಯ್ಯನ ಬದುಕಿಗೆ ಈ ಋತುಮಾನಗಳ ಹಂಗಿಲ್ಲ. ಕತ್ತಲಲ್ಲಿ ದೀಪ ಆರದಂತೆ ಸೆರಗಿನಿಂದ ಮರೆಮಾಡಿಕೊಂಡು ಎಚ್ಚರಿಕೆಯಿಂದ ಕಾಪಾಡಿಕೊಂಡಿದ್ದಾಳೆ ಸುಶೀಲ.

ನಾರಾಯಣನ ಒಳಗಿದ್ದ ಕಾಮದ ಮೃಗ ಹೊರಬಂದು ಸುಶೀಲನನ್ನು ಕೆಡಿಸಿದಾಗಲೂ, ಸುಶೀಲ ಈ ಹೊಲಸು ಶರೀರವನ್ನು ಮುಟ್ಟಬೇಡಿ ಎಂದು ಹೇಳಿದರೂ ಭುಜಂಗಯ್ಯ ಅವಳನ್ನು ಎಳೆಯ ಮಗುವೋ ಎಂಬಂತೆ ಎದೆಗೊತ್ತಿಕೊಂಡು ಮೃದುವಾಗಿ ಮೈದಡವಿ ಸಂತೈಸುತ್ತಾನೆ. ಬೆಳಕು ಇಂಗಿದ ಕಣ್ಣುಗಳಿಗೆ ಒಂದೊಂದೇ ದೃಶ್ಯ ಕಟ್ಟಿಕೊಂಡರೂ ಅಪ್ಪಿದ ಕೈಗಳು ಇನ್ನೂ ಬಿಗಿಯಾಗುತ್ತವೆ. ಹೀಗೆ ಸುಶೀಲ ಭುಜಂಗಯ್ಯನ ಮನಸ್ಸಿನ ಒಳಗೆ ಇಳಿದು ಬಿಡುತ್ತಾಳೆ. **'ಒಳಗು-ಹೊರಗು'ಗಳ ಪರಿಕಲ್ಪನೆಯನ್ನು ಇಲ್ಲವಾಗಿಸಿ ಒಂದಾಗಿ ಬಿಡುತ್ತಾಳೆ.**

(ಆ) ಸುಶೀಲಳ ಮೇಲೆ ವಿಷಕಾರುತ್ತಿದ್ದ ನಾರಾಯಣ ಅವಳನ್ನು ಕೆಡಿಸಿದ. ಆದರೆ ಭುಜಂಗಯ್ಯನ ಹೊರಕಣ್ಣು ಹೋಗಿದ್ದರೂ ವೇದಾಂತದ ಒಳಗಣ್ಣು ತೆರೆದುಗೊಂಡಿತ್ತು. ನಾರಾಯಣ ಹಾವುಕಚ್ಚಿ ವಿಷವೇರಿ ಬಿದ್ದಿದ್ದಾಗ, ನಿಜವಾಗಿ ಹಾವಿನ ವಿಷವನ್ನು ಹೊರತೆಗೆಯುವ ಶಕ್ತಿಯಿದ್ದ ಹಸಿರು ಔಷಧಿ ಅವನ ಹತ್ತಿರ ಮುಗಿದುಹೋಗಿದ್ದರೂ, ತನ್ನ ಮನೆ ಬಾಗಿಲಿಗೇ ಬಂದಿರುವ ಜೀವವನ್ನು ಉಳಿಸಲೇಬೇಕೆಂದು ಶಂಕರ ಕೊರೆದಿದ್ದ ಕಾಲಿನ ಗಾಯಕ್ಕೆ ಬಾಯಿಹಚ್ಚಿ ವಿಷವನ್ನು ಹೀರಿ ಹೀರಿ ತಂಬಾಳೆಗೆ ಉಗುಳುತ್ತಾನೆ. ಸುಸ್ತಾದರೂ ಅವನಲ್ಲಿದ್ದ 'ವಿಷ'ವನ್ನು ಹೊರಹಾಕುತ್ತಾನೆ. ನಾರಾಯಣನನ್ನು ಕಷ್ಟಪಟ್ಟು ಬದುಕಿಸುತ್ತಾನೆ. ಆದರೆ ಗಂಡಾಂತರದಿಂದ ಪಾರಾದ ನಾರಾಯಣ ಕಣ್ಣು ಬಿಡುತ್ತಿದ್ದಂತೆ ಭುಜಂಗಯ್ಯನ ಹೊಟ್ಟೆಯಲ್ಲಿ ಉರಿ ಸಂಕಟ ಪ್ರಾರಂಭವಾಗುತ್ತದೆ. ರೆಕ್ಕೆ ಮುರಿದುಬಿದ್ದ ಹಕ್ಕಿಯಂತೆ ಭುಜಂಗಯ್ಯನು ಚೀರುತ್ತ ಸುಶೀಲಳನ್ನು ಬರಸೆಳೆದುಕೊಂಡು ಪ್ರಾಣಬಿಡುತ್ತಾನೆ.

ಹೀಗೆ ನಾರಾಯಣನ ಒಳಗೆ ತುಂಬಿದ್ದ 'ವಿಷಯ'ದ ವಿಷವನ್ನು ತಾನು ನೀಲಕಂಠನಂತೆ ಹೀರಿ ತನ್ನ ಪ್ರಾಣವನ್ನು ಅರ್ಪಿಸಿಬಿಡುತ್ತಾನೆ. ಆಗ ಮಾತ್ರ ಒಳಗು–ಹೊರಗಿನ ಪ್ರಶ್ನೆ ಏಳದೆ ಭೇದ–ಭಾವ ಕರಗಿಹೋಗುತ್ತದೆ.

ಭಾಗ-೩

'ಭುಜಂಗಯ್ಯ ...', 'ಪರಸಂಗ....'ದಂತೆ ಜನಪ್ರಿಯ ಕಾದಂಬರಿ, ಅದರಲ್ಲೂ ಮಲಯಾಳಂ ಭಾಷೆಗೆ ಭಾಷಾಂತರಗೊಂಡ ಈ ಕಾದಂಬರಿ, ಕೇರಳದ ಜನತೆಯೊಡನೆ ಅತ್ಯಂತ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿತು. ಅದಕ್ಕೆ ಸಾಕ್ಷಿಯಾಗಿ ಮಲಯಾಳಂ ಭಾಷೆಯಲ್ಲಿ, ಇಂಗ್ಲಿಷ್ ಭಾಷೆಯಲ್ಲಿ ಕೃಷ್ಣನಿಗೆ ಬರುತ್ತಿದ್ದ ಪತ್ರಗಳೇ ಸಾಕ್ಷಿ. ನಮ್ಮಲ್ಲಿ ಜನಪ್ರಿಯ ಕಾದಂಬರಿಗಳಿಗೆ ಬರವಿಲ್ಲ. ಅವುಗಳನ್ನು ಓದಲು ತೆರೆಯುತ್ತಿದ್ದಂತೆಯೇ ಆ ಕಾದಂಬರಿ ಯಾವ ರೀತಿ ಕೊನೆಗೊಳ್ಳಬಹುದು ಎಂಬುದನ್ನು ಯಾವ ಯಾವ

ಪಾತ್ರಗಳು ಯಾವ ಯಾವ ರೀತಿ ನಡೆದುಕೊಳ್ಳುತ್ತವೆ ಎಂದು ಹೆಚ್ಚು ಕಡಿಮೆ ಹೇಳಿಬಿಡಬಹುದು. ಇವುಗಳು ಫಾರ್ಮುಲಾ ಕಾದಂಬರಿಗಳೆಂದೇ ವಿಮರ್ಶಾವಲಯದಲ್ಲಿ ಗುರುತಿಸಲ್ಪಟ್ಟಿವೆ.

ಆದರೆ, 'ಭುಜಂಗಯ್ಯ....' ಕಾದಂಬರಿ ಈ ರೀತಿಯ ಯಾವುದೇ 'ಟೈಪ್' ಆದ ಕಾದಂಬರಿಯಲ್ಲ. ಅದರಲ್ಲೂ ಹಳ್ಳಿಯ ಬದುಕಿನ 'ಅಥೆಂಟಿಕ್' ಪ್ರಪಂಚವನ್ನು ಪರಿಚಯಿಸಿಕೊಡುತ್ತದೆ. ಕಾದಂಬರಿಕಾರ ತನಗೆ ಗೊತ್ತಿರುವುದನ್ನು ಓದುಗನಿಗೆ ತಿಳಿಸಿ ಕೊಡುವ ಉತ್ಸಾಹ, ತವಕಗಳು ಇವೆ. ಆದ್ದರಿಂದ ಅದು 'ಟೈಪ್ಡ್' ಜನಪ್ರಿಯ ಕಾದಂಬರಿಗಳಿಗಿಂತ ಭಿನ್ನವಾದ ಕಥೆ (Story) ಯಾಗಿದೆ.

ಆದರೂ ಆ ಅನುಭವವನ್ನು ನಿರೂಪಿಸುವ ಪ್ರಕ್ರಿಯೆಯಲ್ಲಿ 'ಆಹಾ!' ಎನ್ನುವ ತನ್ಮಯತೆಯಿಂದ ಕಾದಂಬರಿಕಾರ ತೊಡಗಿಕೊಂಡಿದ್ದಾನೆಯೋ ಅನ್ನಿಸದೆ ಇರದು. ಈ ಕಾದಂಬರಿಯಲ್ಲಿ ಮೌಖಿಕ ಸಂಪ್ರದಾಯ ನವ್ಯದ ಬುದ್ಧಿಗೋಚರ (intellectual) ಪ್ರಪಂಚಕ್ಕೆ 'ವಿರುದ್ಧ'ವಾಗಿ ಬಂದಿದೆ ಎಂದು ಗೊತ್ತಾಗುತ್ತದೆ. ಭಾಗ ೨ರ ವಿಶ್ಲೇಷಣೆ ಅದನ್ನು ತೋರಿಸಿಕೊಟ್ಟಿದೆ. ಆದರೆ ಈ 'elements' ಕೇವಲ ಅಲಂಕಾರಿಕವಾಗಿ, ಸುಮ್ಮನೆ ಬಂದಿದೆಯೋ ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಮೌಖಿಕ ಸಂಪ್ರದಾಯದ ಭಾಷೆಯ ನಾದ, ಲಯ, ಸಂಗೀತ, ಭಾಷಾತನ್ಮಯತೆ ಕಥಾನಕಕ್ಕೆ (narration) ಬೇರೆಯ ತಿರುವನ್ನು ಕೊಡುವ ಸಾಧ್ಯತೆ ಏಕೆ ಬರಲಿಲ್ಲ. ಕೇವಲ 'ಕಚ್ಚಾ' ಆಗಿಯೇ ಉಳಿದುಬಿಡುತ್ತದೆ ಎನಿಸುತ್ತದೆ. ಮೌಖಿಕ ಸಂಪ್ರದಾಯದ ವಿವಿಧ ಆಯಾಮಗಳನ್ನು ತುಂಬಿಕೊಂಡು, ಸ್ವರ ಸಾಧ್ಯತೆಗಳನ್ನು, ಗಾಢವಾಗಿ ಕಲಕುವ ಮನಸ್ಸನ್ನು—ಕೊಡಲು ಸಾಧ್ಯವಾಗಿಲ್ಲವೇಕೆ? ಕೇವಲ ಸರಳರೇಖಾತ್ಮಕವಾಗಿ ಕಥಾನಕ ಜರುಗುವುದಲ್ಲ ಅನ್ನಿಸುತ್ತದೆ. ಏಕೆಂದರೆ ಮೌಖಿಕ ಸಂಪ್ರದಾಯದ ಮನಸ್ಸನ್ನು ಕೇವಲ ಒಂದು ಗೆರೆಯ ತಿರುವಿನಲ್ಲಿ ಸಮರ್ಥವಾಗಿ ಹಿಡಿಯುವ ದೇವನೂರರ 'ಕುಸುಮಬಾಲೆ' ನಮ್ಮ ಕಣ್ಣಮುಂದಿದೆ. ಸ್ವಲ್ಪದ್ದರಲ್ಲಿ ಅಗಾಧವಾದ ಧ್ವನ್ಯನ್ನ ತೋರಿಸುತ್ತದೆ. ಓದುಗನನ್ನು ಪದೇ ಪದೇ ವಿಚಾರಕ್ಕೆ ಹಚ್ಚಿಸುತ್ತದೆ, ಕಾಡುತ್ತದೆ. ಆದರೆ 'ಭುಜಂಗಯ್ಯ ...' ಓದುವ ತನಕ ಜೊತೆಯಲ್ಲಿದ್ದು ಆಮೇಲೆ ಓದುಗನ ಕೈಬಿಡುವುದಲ್ಲ ಅನ್ನಿಸುತ್ತದೆ. ಭುಜಂಗಯ್ಯ ಕಾದಂಬರಿ ಅಷ್ಟು ಗಾತ್ರವಾಗಿ ಬೆಳೆಯುವುದಕ್ಕೂ ಇವೇ ಕಾರಣಗಳಾಗಬಹುದು.

ಇದೇರೀತಿ ತೇಜಸ್ವಿಯವರ ಕರ್ವಾಲೋ ಅರ್ಥಕ್ಕಿಂತ ಹೆಚ್ಚು ಹರಟೆಯೋ ಆಗಿ ಬೆಳೆದಿದೆ. ಆದರ ಮುಂದೆ ಒಂಭತ್ತು ಸೊನ್ನೆ ಹಾಕಿದಷ್ಟು ವರ್ಷಗಳ ಹಿಂದಿನ ಜೀವಿಯನ್ನು ಅಲ್ಲಿಂದ ಆದ ಜೀವವಿಕಾಸವನ್ನು ಪತ್ತೆ ಹಚ್ಚುವ ಕಾರ್ಯಕ್ಕೆ ತೊಡಗಿದಾಗ ಆ ಕಾದಂಬರಿ ಪಡೆದುಕೊಳ್ಳುವ ಆಯಾಮ, ಹಚ್ಚುವ ಚಿಂತನೆ, ನಿಗೂಢತೆ, ಆಶ್ಚರ್ಯ, ಹರಟೆಗೂ ಬೇರೆ ಬೇರೆ ಆಯಾಮ ಒದಗಿಸಿವೆ. ಇವೆಲ್ಲವೂ 'ಭುಜಂಗಯ್ಯ'ನಲ್ಲಿ ಏಕಿಲ್ಲ ಎನ್ನಿಸುತ್ತದೆ. ಆದರೆ ಶ್ರೀಕೃಷ್ಣ ಅವರು ಬರೆದ 'ಸುಟ್ಟಿತಿಕದ ದೇವರು' ನೀಳ್ಗತೆಯಲ್ಲಿ ಇದೇ 'ಮೌಖಿಕ ಸಂಪ್ರದಾಯವು' ಪಡೆದುಕೊಳ್ಳುವ ಗಟ್ಟಿತನದ ಸುಳಿವು ಕಾಣುತ್ತದೆ. ಈ ದೃಷ್ಟಿಯಲ್ಲಿ 'ಭುಜಂಗಯ್ಯ...' ಮುಂದೆ ಶ್ರೀಕೃಷ್ಣ ಬರೆಯಬಹುದಾಗ ಕಥೆ ಅಥವಾ ಕಾದಂಬರಿಗೆ ನಡೆಸಿದ 'workshop' ಎಂದೆನ್ನಿಸುತ್ತದೆ.

ಕಾದಂಬರಿಯ ಮುಖ್ಯ ಪರಿಕಲ್ಪನೆ. 'ಒಳಗು–ಹೊರಗು' ಇದೂ ಕನ್ನಡ ಕಾದಂಬರಿಗಳಲ್ಲಿ ಅನೇಕಬಾರಿ ಬರುವ ಕಲ್ಪನೆ. ಇದು 'ಭುಜಂಗಯ್ಯ'ದಲ್ಲಿ ಉದ್ದಕ್ಕೂ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಸರಾಗವಾಗಿ ಹಿಡಿದಿಡಬಹುದಾಗಿದೆ. ಇದೇ ರೀತಿಯ ವಸ್ತುವನ್ನು ಕುವೆಂಪು ಅವರ 'ಮಲೆಗಳಲ್ಲಿ ಮಧುಮಗಳು' ಕೆಲವು ಭಾಗಗಳಲ್ಲಿ ಎಷ್ಟು ಸಂಕೀರ್ಣವಾಗಿ ಹಿಡಿದಿಟ್ಟಿದೆ ಅನ್ನಿಸುತ್ತದೆ (ಬೀಸೊಕಲ್ ನಾಗರೀಕತೆ, ಕ್ರಿಶ್ಚಿಯನ್ ಧರ್ಮ ಇತ್ಯಾದಿ; ಒಳಗೇ ಇರುವ ಹಿಂದೂಧರ್ಮ. ಅದನ್ನು ಬದಲಾಯಿಸಿಕೊಳ್ಳಲು ಅದರೊಳಗಿಂದಲೇ ಸೋಸಿ ತೆಗೆಯುವ ವಿಧಾನ ಇತ್ಯಾದಿ.) ಈ ರೀತಿ ನೋಡಿದಾಗ 'ಭುಜಂಗಯ್ಯ....' ಟೈಪ್ಡ್ ಆದ ಜನಪ್ರಿಯ ಕಾದಂಬರಿಗಿಂತ ಉತ್ತಮವಾಗಿ, ಆದರೆ ಮೌಖಿಕ ಸಂಪ್ರದಾಯದ ಸಾಧ್ಯತೆಗಳನ್ನು ಬಳಸಿಕೊಂಡಿರುವ, ಕುಸುಮಬಾಲೆ, ಕಾರ್ವಾಲೋಗಳಮಟ್ಟಕ್ಕೆ ಏರದ ಕಾದಂಬರಿಯಾಗಿ ಉಳಿದುಕೊಳ್ಳುತ್ತದೆ.

ಕುವೆಂಪು ಅವರ ಕಾದಂಬರಿಗಳಲ್ಲಿನ ಜೀವನ ಸಂವೃದ್ಧಿ ಭುಜಂಗಯ್ಯನಲ್ಲಿ ಕಾಣಬಹುದು. ಈ ಸಂವೃದ್ಧ ಜೀವನಾನುಭವಕ್ಕೆ ಬೇರೊಂದು ಬೌದ್ಧಿಕ ಆಯಾಮದ ಬೆಸುಗೆ 'ಭುಜಂಗಯ್ಯ....'ದಲ್ಲಿ ಸಾಧ್ಯವಾಗುವುದಿಲ್ಲವೇನೋ ಅನ್ನಿಸುತ್ತದೆ. ಈ ಅನುಭವಗಳಿಗೆ ಅನುರಣನ ಶಕ್ತಿ (vibratory power) ಇಲ್ಲವಾಗುತ್ತದೆ. 'ಕುಸುಮಬಾಲೆ'ಯಲ್ಲಿ ಬರುವ ಮಂಚದ ಉಪಕಥೆ ಕೇವಲ ಮಂಚದ ಉಪಕಥೆಯಾಗುವುದಿಲ್ಲ. ಬೇರೆ ಬೇರೆ ಹಂತದಲ್ಲಿ ಓದುಗರನ್ನು ಕಾಡಿಸುತ್ತದೆ.

ಕೃಷ್ಣ ಭಾವನೆಯ ಹಂತದಲ್ಲಿ ಓದುಗನನ್ನು ಕಾಡಿಸುವಂತೆ ಚಿಂತನೆಯ ಮಟ್ಟದಲ್ಲಿ ಕಾಡಿಸುವುದಿಲ್ಲ. ಆದರೆ ಚಿಂತನೆಯ ಮಟ್ಟದಲ್ಲೇ ಬೆಳೆಯುವ ಕಾದಂಬರಿಗಳಿಗಿಂತ ಅನೇಕ ವೇಳೆ ಕೃಷ್ಣನ ಬರವಣಿಗೆ ಮೇಲು ಸ್ತರದ್ದಾಗಿರುತ್ತದೆ. ಏಕೆಂದರೆ ಚಿಂತನಾ ಪ್ರಧಾನ ನವ್ಯ ಕಾದಂಬರಿಗಳಲ್ಲಿ 'ಚಿಂತನ' ವನ್ನು ಬಿಟ್ಟು ಅನುಭವವನ್ನು ನೋಡಿದರೆ ಏನೇನೂ ಇಲ್ಲ ಅನ್ನುವಂತಾಗಿಬಿಡಬಹುದು.

ಕೃಷ್ಣನ ಕಾದಂಬರಿಯನ್ನು ಓದಿ ಮುಗಿಸಿದ ನಂತರ ನಿಬ್ಬೆರಗಾಗುವ ಅನುಭವದ ದ್ರವ್ಯ ಓದುಗರಲ್ಲಿ ಉಂಟಾಗುತ್ತದೆ. ಕಾದಂಬರಿಯನ್ನು ಪೋಷಕಭಾವ (patronizing tone) ನಲ್ಲಿ ನೋಡಬೇಕಾಗುತ್ತದೆ. ಆದರೆ ತೇಜಸ್ವಿ–ಮಹದೇವರ ಕೃತಿಗಳನ್ನು ಪೋಷಕ ಭಾವದಿಂದ ನೋಡಲಾಗುವುದಿಲ್ಲ. ಅವು "ನನ್ನನ್ನು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡೆ" ಎಂದು ಪ್ರಶ್ನೆ ಹಾಕುತ್ತಲೇ ಇರುತ್ತವೆ.

ಈ ಎಲ್ಲ ಸಾಧ್ಯತೆಗಳ ತಿರುವುಗಳನ್ನು ತನ್ನದಾಗಿಸಿಕೊಳ್ಳುವ ಲಕ್ಷಣಗಳು ಶ್ರೀಕೃಷ್ಣರ 'ಸುಟ್ಟತಿಕದ ದೇವರು' ನೀಳ್ಗತೆಯಲ್ಲಿ ಸ್ವಲ್ಪ ಸ್ವಲ್ಪ ಬೆಳೆದುಬಂದಿವೆ. ಭಾವ–ಬುದ್ಧಿಗಳ ಸಂಗಮ ಕಾಣುತ್ತದೆ. ಬೇರೆ ಸ್ತರಕ್ಕೆ ನೆಗೆಯುತ್ತಿರುವ ಅನುಭವ ಓದುಗರಿಗಾಗುತ್ತದೆ. ಈ ಒಂದು ಆಯಾಮ ಪಡೆದುಕೊಳ್ಳುವ ಹೊತ್ತಿನಲ್ಲೇ ಕೃಷ್ಣನ ಬರವಣಿಗೆ ನಿಂತೇ ಹೋಯಿತಲ್ಲ ಎನ್ನಿಸುತ್ತದೆ.

ಹಿಂದಿಯಲ್ಲಿ ಶ್ರೀಕೃಷ್ಣ ಆಲನಹಳ್ಳಿ

ಡಾ. ತಿಪ್ಪೇಸ್ವಾಮಿ

ಶ್ರೀಕೃಷ್ಣ ಆಲನಹಳ್ಳಿ ಆಧುನಿಕ ಕನ್ನಡ ಕಥೆ, ಕಾದಂಬರಿ ಹಾಗೂ ಕಾವ್ಯ ಪ್ರಕಾರವನ್ನು ತನ್ನ ವಿಶಿಷ್ಟ ಅನುಭವಗಳಿಂದ ಸಮೃದ್ಧಗೊಳಿಸಿದ ಪ್ರತಿಭಾವಂತ ಲೇಖಕ. ಶ್ರೀಕೃಷ್ಣ ಲೇಖಕೀಯ ಅಹಮಿಕೆಯನ್ನು ತುಸು ಹೆಚ್ಚು ಅನ್ನುವಷ್ಟು ತನ್ನಲ್ಲಿ ಆತ್ಮೀಕರಿಸಿಕೊಂಡಿದ್ದ. ಶ್ರೀಕೃಷ್ಣನಲ್ಲಿದ್ದ ಈ ಅಹಮಿಕೆ ಅಹಂಕಾರದಿಂದಲ್ಲ, ಬದಲಾಗಿ ತನ್ನ ಓದು, ಅಭ್ಯಾಸ ಮತ್ತು ಜೀವನಾನುಭವಗಳಿಂದ ಬಂದದ್ದು ಎಂದು ಆತನೊಡನಿದ್ದ ನನ್ನ ಸುಮಾರು ೨೨ ವರ್ಷಗಳ ಸ್ನೇಹದ ಒಡನಾಟದಿಂದ ನಾನು ಕಂಡುಕೊಂಡಿದ್ದೇನೆ. ಕನ್ನಡ ಲೇಖಕನಾಗಿ ತಾನು ತನ್ನ ಎಷ್ಟೋ ಮಂದಿ ಸಮಕಾಲೀನ ಲೇಖಕರಿಗಿಂತ ಭಿನ್ನವಾಗಿ ಬರೆಯುತ್ತಿದ್ದೇನೆ, ಬರೆಯಬಲ್ಲೆ ಎಂಬ ಪ್ರಜ್ಞೆ ಆತನಲ್ಲಿ ಮೊದಲಿನಿಂದಲೂ ಆಳವಾಗಿತ್ತು. ಅಂತೆಯೇ ಭಾರತೀಯ ಭಾಷೆಗಳಲ್ಲಿ ಬರೆಯುತ್ತಿರುವ ಮಹತ್ವದ ಲೇಖಕರ ಮಟ್ಟಕ್ಕೆ ಏರಬೇಕು ಎಂಬ ತೀವ್ರ ಅಭೀಪ್ಸೆ ಆತನಲ್ಲಿ ಮೊದಲಿನಿಂದಲೂ ಗಾಢವಾಗಿತ್ತು. ಹೀಗಾಗಿ ಕನ್ನಡೇತರ ಭಾಷೆಗಳ ಸಾಹಿತ್ಯವನ್ನು ಅನುವಾದಗಳಲ್ಲಿ ಓದಿಕೊಂಡು ಖುಷಿಪಟ್ಟು, ಆ ಖುಷಿಯನ್ನು ಇತರರಿಗೂ ವಿಪುಲವಾಗಿ ಹಂಚುತ್ತಿದ್ದ ಕೃಷ್ಣ, ತನ್ನ ಸ್ನೇಹಿತರಿಗೆ ಯಾವುದು ಒಳ್ಳೆಯ ಸಾಹಿತ್ಯ, ಯಾವುದು ಕೆಟ್ಟ ಸಾಹಿತ್ಯ ಎಂಬುದನ್ನು ನಿಖರವಾಗಿ ಸ್ಪಷ್ಟಪಡಿಸುತ್ತಿದ್ದ, ಯಾವುದೇ ಭಾಷೆಯಲ್ಲಿ ಪ್ರಕಟವಾದ ಉತ್ತಮ ಕೃತಿಗಳತ್ತ ಗಮನ ಸೆಳೆಯುತ್ತಿದ್ದ.

ಶ್ರೀಕೃಷ್ಣ ನನ್ನ ಕನ್ನಡ ಹಾಗೂ ಹಿಂದಿ ಅನುವಾದಗಳ ಬಗೆಗೆ ಅಪಾರ ಪ್ರೀತಿ ಮತ್ತು ಹೆಮ್ಮೆಯನ್ನು ಅನುಭವಿಸುತ್ತಿದ್ದ. ತನಗೆ ಭೇಟಿಯಾದ ಹಿಂದೀ ಲೇಖಕರು ಆತನಿಗೆಂದು ಪ್ರೀತಿಯಿಂದ ಕೊಟ್ಟ ಅವರ ಕೃತಿಗಳನ್ನು ಜೋಪಾನವಾಗಿ ತಂದು ನನಗೆ ಕೊಟ್ಟು, ಓದುವಂತೆ ಪ್ರೇರೇಪಿಸುತ್ತಿದ್ದ. ಓದಿಯಾದ ಮೇಲೆ ಆ ಕೃತಿಗಳನ್ನು

ಕುರಿತಂತೆ ನನ್ನ ಅಭಿಪ್ರಾಯಗಳನ್ನು ಕೇಳುತ್ತಿದ್ದ. ನನ್ನ ಯಾವುದೇ ಹೊಸ ಅನುವಾದ ಪ್ರಕಟವಾದಾಗ, ಓದಿ, ನನ್ನ ಆಯ್ಕೆ ಸರಿ, ತಪ್ಪು ಎಂದೆಲ್ಲ ಪ್ರೀತಿಯಿಂದ ಹಾಗೂ ಅಷ್ಟೇ ಒರಟಾಗಿ ಹೇಳಿ, ಹಿಂದಿಯ ಅತ್ಯುತ್ತಮ ಕೃತಿಗಳನ್ನು ಮಾತ್ರ ಕನ್ನಡಕ್ಕೆ ತರುವಂತೆ, ಅಂತೆಯೇ ಕನ್ನಡದ ಶ್ರೇಷ್ಠರನ್ನು ಮಾತ್ರ ಹಿಂದಿಗೆ ಪರಿಚಯಿಸುವಂತೆ, ಮನೆಗೆ ಬಂದಾಗ, ಹಾಗೂ ಅಲ್ಲಿ–ಇಲ್ಲಿ ಭೇಟಿಯಾದಾಗಲೆಲ್ಲ ಹೇಳುತ್ತಿದ್ದ. ಬಹಳ ವರ್ಷಗಳ ಹಿಂದೆ ನಾನು ಅನುವಾದಿಸಿದ 'ಮಯೂರ' ಹಾಗೂ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಭೀಷ್ಮ ಸಾಹನಿಯವರ 'ಅಮೃತಸರ ಬಂತು' ಮತ್ತು ಹಿಮಾಂಶು ಜೋಶಿಯವರ 'ಸೂರ್ಯ ಮತ್ತು ಸಮುದ್ರದ ನಡುವೆ' ಮತ್ತು 'ಉರಿಯುತ್ತಿರುವ ರೆಕ್ಕೆಗಳು'[1] ಕತೆಗಳನ್ನು ಅಪಾರವಾಗಿ ಮೆಚ್ಚಿಕೊಂಡು ಅಂಥ ಕಥೆಗಳನ್ನು ತಾನೂ ಬರೆಯಬೇಕೆಂದು ಹಂಬಲಿಸಿದ್ದ. ಆದರಲ್ಲೂ ಭೀಷ್ಮ ಸಾಹನಿಯವರ 'ಅಮೃತಸರ ಬಂತು' ಕತೆಯ ಅನುಭವಗಳನ್ನು ಕುರಿತಂತೆ ಅಂಥ ಅನುಭವಗಳು ನಮಗೆ ಆಗಲೇ ಇಲ್ಲ, ಆಗುವುದು ಸಾಧ್ಯವೂ ಇಲ್ಲ ಎಂದು ಪರಿತಪಿಸಿದ. ಅವರ 'ತಮಸ್' ಕಾದಂಬರಿಯ ವಸ್ತುವನ್ನು ಬಹುವಾಗಿ ಮೆಚ್ಚಿಕೊಂಡಿದ್ದ.

ಶ್ರೀಕೃಷ್ಣನಿಗೆ ಅನೇಕ ಹಿಂದೀ ಬರಹಗಾರರ ನಿಕಟ ಪರಿಚಯವಿತ್ತು, ಆತ್ಮೀಯ ಸ್ನೇಹವಿತ್ತು. ಪ್ರೇಮಚಂದ್, ಮುಕ್ತಿಬೋಧ್, ನಿರ್ಮಲ್‌ವರ್ಮಾ, ಫಣೀಶ್ವರನಾಥ ರೇಣು, ಹಿಮಾಂಶು ಜೋಶಿ, ಭೀಷ್ಮ ಸಾಹನಿ ಆತನ ಮೆಚ್ಚಿನ ಹಿಂದೀ ಲೇಖಕರು. ನಿರ್ಮಲ್‌ವರ್ಮಾರ 'ವೇ ದಿನ್' ಅವನ ಪ್ರಿಯ ಕಾದಂಬರಿ.[2] ಈ ಕಾದಂಬರಿ ಕೃಷ್ಣನ ಮೇಲೆ ಎಷ್ಟು ಪ್ರಭಾವ ಬೀರಿತ್ತು ಅಂದರೆ ಅದನ್ನು 'ಗೀಜಗನಗೂಡು' ಕತೆಯಲ್ಲಿ ಗುರುತಿಸಬಹುದಾಗಿದೆ.

ತನ್ನ ಕೃತಿಗಳು ಹಿಂದಿಯಲ್ಲಿ ಪ್ರಕಟವಾಗಬೇಕು, ಆ ಮೂಲಕ ತಾನು ಅಖಿಲ ಭಾರತ ಮಟ್ಟದ ಲೇಖಕನಾಗಬೇಕು ಎಂಬ ಹಂಬಲ ಕೃಷ್ಣನಲ್ಲಿ ಬಲವಾಗಿದ್ದಿತು. ತನ್ನ ಕೃತಿಗಳು ಹಿಂದಿಯಲ್ಲಿ ಪ್ರಕಟವಾದಾಗ ಸಹಜವಾಗಿಯೇ ಆತ ಹೆಮ್ಮೆಯಿಂದ ಬೀಗುತ್ತಿದ್ದ. ಕೃಷ್ಣನ ಕೆಲವು ಕತೆಗಳನ್ನು ಶ್ರೀ ಭಾಲಚಂದ್ರ ಜಯಶೆಟ್ಟಿಯವರು ಸೊಗಸಾಗಿ ಹಿಂದಿಗೆ ಅನುವಾದಿಸಿ ಪ್ರಕಟಿಸಿದ್ದಾರೆ. ನಾನು ಸಹ ಒಂದೆರಡು ಕತೆಗಳನ್ನು ಅನುವಾದಿಸಿದ್ದು, ಆತನ ಪ್ರಸಿದ್ಧ ಕತೆ 'ಎತ್ತಣ ಮಾಮರ ಎತ್ತಣ ಕೋಗಿಲೆ' ದೆಹಲಿಯಿಂದ ಪ್ರಕಟವಾಗುವ 'ಸಾಪ್ತಾಹಿಕ ಹಿಂದೂಸ್ತಾನ'ದಲ್ಲಿ 'ಚುಗ್ತಾ ಚಕೋರ್ ಅಂಗಾರೇ' ಎಂಬ ಹೆಸರಿನಲ್ಲಿ ನಾನು ಅನುವಾದಿಸಿ ಪ್ರಕಟಿಸಿದ್ದೇನೆ. ಈ ಕಥೆಗಳು ಹಿಂದಿ ಓದುಗರನ್ನು ತುಂಬಾ ಆಕರ್ಷಿಸಿವೆ. ಆದರೆ ಕೃಷ್ಣನ ಕವಿತೆಗಳು ಅಷ್ಟಾಗಿ ಹಿಂದಿಗೆ ಅನುವಾದವಾಗಿ ಪ್ರಕಟವಾಗಿಲ್ಲ. ನಾನು ಕೆಲವು ಕವಿತೆಗಳನ್ನು ಬಹಳ ಹಿಂದೆ ಅನುವಾದಿಸಿದ್ದೆ. ಕೃಷ್ಣ ಆಕಾಶವಾಣಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕನ್ನಡವನ್ನು ಪ್ರತಿನಿಧಿಸಿ ಓದಿದ ಕನ್ನಡ ಕವಿತೆಯ ಹಿಂದಿ ಅನುವಾದವನ್ನು ಆಕಾಶವಾಣಿಗಾಗಿ

---

[1] ಈ ಕತೆಗಳು ನನ್ನ 'ಗಂಗಾ-ಕಾವೇರಿ' ಸಂಕಲನದಲ್ಲಿ ಸೇರಿವೆ.

[2] ಈ ಕಾದಂಬರಿ ಇಂಗ್ಲಿಷ್‌ನಲ್ಲಿ 'Days of Longing' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ 'ಆ ದಿನಗಳು' ಎಂಬ ಹೆಸರಿನಲ್ಲಿ ನಾನು ಅನುವಾದಿಸಿದ್ದು ಸಾಗರದ ಅಕ್ಷರ ಪ್ರಕಾಶನದಿಂದ ಪ್ರಕಟವಾಗಿದೆ.

ನಾನು ಅನುವಾದಿಸಿದ್ದೆ. ಈ ನನ್ನ ಅನುವಾದವನ್ನು ಆಧರಿಸಿ ಇತರೆ ಭಾಷೆಗಳಿಗೂ ಅದು ಅನುವಾದವಾಯಿತು.

ಶ್ರೀಕೃಷ್ಣನ ಮಹತ್ವದ ಕೃತಿಗಳಾದ 'ಕಾಡು' ಕಾದಂಬರಿಯನ್ನು 'ಜಂಗಲ್' ಎಂಬ ಹೆಸರಿನಲ್ಲಿ ಶ್ರೀ ಚಂದ್ರಕಾಂತ ಕುಸನೂರ್ ಮತ್ತು 'ಪರಸಂಗದ ಗೆಂಡೆತಿಮ್ಮ' ಕಾದಂಬರಿಯನ್ನು 'ದುಃಖ್ ಭರಾ ರಾಗ್' ಎಂಬ ಹೆಸರಿನಲ್ಲಿ ಶ್ರೀ ಭಾಲಚಂದ್ರ ಜಯಶೆಟ್ಟಿಯವರು ಹಿಂದಿಗೆ ಅನುವಾದಿಸಿದ್ದು ದೆಹಲಿಯ ಪ್ರಸಿದ್ಧ ಪ್ರಕಾಶನ ಸಂಸ್ಥೆಯಾದ 'ರಾಧಾಕೃಷ್ಣ ಪ್ರಕಾಶನ'ದಿಂದ ಅವು ಪ್ರಕಟಗೊಂಡಿವೆ. ಈ ಎರಡೂ ಕಾದಂಬರಿಗಳು ಕನ್ನಡದ ಮಹತ್ವದ ಅಂತೆಯೇ ಅತ್ಯಂತ ಜನಪ್ರಿಯ ಕಾದಂಬರಿಗಳು, ಚಲನಚಿತ್ರಗಳಾಗಿ ಜನಮನ ಸೂರೆಗೊಂಡ ಕೃತಿಗಳು. ಆದರೆ ಹಿಂದಿಯಲ್ಲಿ ಈ 'ಕಾಡು' ಬುದ್ಧಿಜೀವಿಗಳ ಗಮನವನ್ನು ಸೆಳೆಯಿತೇ ಹೊರತಾಗಿ ಕನ್ನಡದಲ್ಲಾದಷ್ಟು ಜನಪ್ರಿಯ ಕೃತಿಯಾಗಲಿಲ್ಲ. ಏಕೆಂದರೆ 'ಕಾಡು'ವಿನ ಅನುವಾದ ತುಂಬಾ ಅಸಮರ್ಪಕವಾಗಿದ್ದು ಕನ್ನಡದ ಒಂದು ಒಳ್ಳೆಯ ಕೃತಿಗೆ ತೀರಾ ಅನ್ಯಾಯವಾಗಿದೆ, ಕೃಷ್ಣನ ಕೃತಿತ್ವವನ್ನು ತುಂಬಾ ಕೆಟ್ಟದಾಗಿ ಹಿಂದೀ ಜನಕ್ಕೆ ಪರಿಚಯಿಸಲಾಗಿದೆ. 'ಜಂಗಲ್' 'ಕಾಡು'ವಿನ ತೀರಾ ಸರಳಾನುವಾದವಾಗಿದ್ದು ಮೂಲದ ಬನಿ ಹಾಗೂ ಭಾಷೆಯ ಸೊಗಡು ಹಿಂದಿಯಲ್ಲಿ ಸ್ವಲ್ಪವೂ ಉಳಿಯದೇ ಇರುವುದು ಇಲ್ಲಿನ ಮುಖ್ಯ ಸೋಲಾಗಿದೆ.[3]

'ಪರಸಂಗದ ಗೆಂಡೆತಿಮ್ಮ' ಕಾದಂಬರಿಯ ಶ್ರೀ ಭಾಲಚಂದ್ರ ಜಯಶೆಟ್ಟಿಯವರ ಹಿಂದೀ ಅನುವಾದ 'ದುಃಖ್ ಭರಾ ರಾಗ್' ಭಾರತ ಸರ್ಕಾರದಿಂದ ಪುರಸ್ಕೃತಗೊಂಡಿದೆ. ತನ್ನ ಕೃತಿಯ ಹಿಂದೀ ಅನುವಾದಕ್ಕೆ ಬಹುಮಾನ ಪ್ರಕಟವಾದಾಗ ಕೃಷ್ಣ ತನಗೇ ಬಹುಮಾನ ಬಂದಷ್ಟು ಸಂತೋಷವನ್ನು ಅನುಭವಿಸಿದ. ಶ್ರೀ ಜಯಶೆಟ್ಟರು ಕನ್ನಡದಿಂದ ಹಿಂದಿಗೆ ಸಮರ್ಥವಾಗಿ ಅನುವಾದಿಸಬಲ್ಲ ನಮ್ಮ ಉತ್ತಮ ಅನುವಾದಕರೊಬ್ಬರು. ಇವರ ಭಾಷೆ ಹಿಂದಿಯ ಜಾಯಮಾನಕ್ಕೆ ನಿಕಟವಾಗಿದ್ದು, 'ಪರಸಂಗದ ಗೆಂಡೆತಿಮ್ಮ'ದ ಹಿಂದಿ ಅನುವಾದ ಆ ಭಾಷೆಯ ಸಹಜ ಸೌಂದರ್ಯಕ್ಕೆ ಹತ್ತಿರವಾಗಿದ್ದು ನಿರಾಂತಕವಾಗಿ ಓದಿಸಿಕೊಳ್ಳುತ್ತದೆ. ಒಟ್ಟಾರೆ, ಶ್ರೀಕೃಷ್ಣನ ಕಾದಂಬರಿಗಳ ಹಿಂದಿ ಅನುವಾದಗಳನ್ನು ಓದಿರುವ ನನ್ನ ಹಿಂದೀ ಲೇಖಕ ಮಿತ್ರರು ಇವನ್ನು ಮೆಚ್ಚಿ ಮಾತನಾಡಿದ್ದಾರೆ.

ಅನುವಾದವನ್ನು ಕುರಿತಂತೆ ಕೃಷ್ಣನ ಅಭಿಪ್ರಾಯಗಳು ಸ್ಪಷ್ಟವಾಗಿದ್ದುವು. ಸ್ವತಃ ಕವಿಯಾಗಿದ್ದ ಕೃಷ್ಣ ಅನೇಕ ಕವಿತೆಗಳ ಸುಂದರ ಅನುವಾದ ಮಾಡಿದ್ದ. 'ಡೋಗ್ರಿ ಪಹಾರೀ ಪ್ರೇಮಗೀತೆಗಳು' ಸಂಕಲನದ ಅನುವಾದಗಳು ಅನುವಾದ ಅನ್ನಿಸದಷ್ಟು ಸಹಜಗೀತೆಗಳಾಗಿರುವುದಕ್ಕೆ ಆತನ ಕವಿಯಾತ್ಮದ ಧಾರೆಯಾಗಿರುವುದೇ ಕಾರಣವಾಗಿದೆ. ಈ ದೃಷ್ಟಿಯಿಂದ ಕವಿಗೆ ಕವಿಯೇ ಸಮರ್ಥ ಅನುವಾದಕ ಎಂಬುದು ಅವನ ಬಲವಾದ ನಂಬಿಕೆಯಾಗಿತ್ತು. ಅನುವಾದವನ್ನು ಕಲಿತ ಭಾಷೆಯಿಂದ ಮಾತೃಭಾಷೆಗೆ ಮಾಡಬೇಕು. ಹೀಗಾದಾಗ ಮಾತ್ರ ಕೃತಿಯ ಸಹಜ ಸೌಂದರ್ಯ ಅನುವಾದದಲ್ಲಿ

---

[3] ಈ ಕೃತಿಯ ಹಾಗೂ ಕನ್ನಡದಿಂದ ಹಿಂದಿಗೆ ಅನುವಾದಗೊಂಡಿರುವ ಇತರೆ ಕೃತಿಗಳ ವಿವರವಾದ ವಿಮರ್ಶೆಗೆ 'ನಾಗವಲ್ಲಿ' ಅಭಿನಂದನಾಗ್ರಂಥದಲ್ಲಿ ಪ್ರಕಟವಾಗಿರುವ ನನ್ನ ದೀರ್ಘ ಲೇಖನವನ್ನು ನೋಡಬಹುದು.

ವೈತುಂಬಿ ಬರುತ್ತದೆ ಎಂದು ನನ್ನಲ್ಲಿ ಬಹಳಷ್ಟು ಸಾರಿ ಹೇಳುತ್ತಿದ್ದ. ಈ ಕೆಲಸವನ್ನು ನೀನು ಕನ್ನಡದಲ್ಲಿ ಅತ್ಯುತ್ತಮವಾಗಿ ಮಾಡುತ್ತಿದ್ದೀಯಾ ಎಂದು ಹೇಳುತ್ತಿದ್ದ. ಹಿಂದೀ, ಪಂಜಾಬಿ, ಬಂಗಾಳಿ ಹಾಗೂ ಇನ್ನಿತರೆ ಭಾಷೀಯರು ಕನ್ನಡ ಕಲಿತು ಕನ್ನಡ ಕೃತಿಗಳನ್ನು ಮೂಲದಿಂದ ತಮ್ಮ ತಮ್ಮ ಭಾಷೆಗಳಿಗೆ ಭಾಷಾಂತರಿಸಿದಾಗ ಕನ್ನಡದ ಸಮೃದ್ಧ ಪರಂಪರೆಯ ಪರಿಚಯ ಹೊರಗಿನವರಿಗೆ ಆಗುತ್ತದೆ. ಆದರೆ ಈಗ ಆ ಕೆಲಸ ಆಗುತ್ತಿಲ್ಲ ಎಂದು ಕೊರಗುತ್ತಿದ್ದ. 'ನಮ್ಮ ಕನ್ನಡ ಕೃತಿಗಳ ಹಿಂದೀ ಅನುವಾದದಿಂದ ನಮಗೆ ಗೌರವ ಬರುತ್ತಿದೆಯೆ ?' ಎಂಬ ನನ್ನ ಲೇಖನ 'ಪ್ರಜಾವಾಣಿ'ಯಲ್ಲಿ ಪ್ರಕಟವಾದಾಗ, ಅದನ್ನು ಓದಿ, ಕನ್ನಡಿಗರು ಹಿಂದಿಯ ಎಷ್ಟೇ ವಿದ್ವಾಂಸರಾದರೂ ಅಲ್ಲಿನ ಆಡುಮಾತಿನ, ಮಣ್ಣಿನ ವಾಸನೆಯ ಪರಿಚಯ ಪಡೆದಿಲ್ಲವಾದ್ದರಿಂದ ಹೀಗಾಗಿದೆ ಎಂದು ಹೇಳಿದ. ಅನುವಾದಗಳ ಗುಣಮಟ್ಟವನ್ನು ಸುಧಾರಿಸಿಕೊಂಡು ಹೋಗಲು ಸಹಕಾರಿಯಾಗುವಂತೆ ಸರ್ಕಾರ ಯೋಜನೆಗಳನ್ನು ರೂಪಿಸಬೇಕು ಎಂದು ಹೇಳುತ್ತಿದ್ದ.

ಪ್ರಸಿದ್ಧ ಹಿಂದಿ ಕವಿ ಮಿತ್ರರಾದ ಶ್ರೀ ಭಗವತ್ ರಾವತ್ ಕೆಲವು ವರ್ಷಗಳ ಹಿಂದೆ ಮೈಸೂರಿನ ರೀಜನಲ್ ಕಾಲೇಜಿನಲ್ಲಿ ಹಿಂದೀ ಅಧ್ಯಾಪಕರಾಗಿದ್ದರು. ಅವರ ಪರಿಚಯವನ್ನು ತಿಳಿದುಕೊಂಡ ಕೃಷ್ಣ ಅವರ ಪರಿಚಯ ಮಾಡಿಕೊಳ್ಳಲು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದ. ನಮ್ಮ ಪರಿಚಯ ಕ್ರಮೇಣ ಆತ್ಮೀಯತೆಯಾಯಿತು. ನಾವು ಮತ್ತೆಮತ್ತೆ ಸೇರುತ್ತಿದ್ದೆವು. ರಾವತ್ ಓದುತ್ತಿದ್ದ ತಮ್ಮ ಹಿಂದಿ ಕವಿತೆಗಳನ್ನು ಕೃಷ್ಣ ಅತ್ಯಂತ ಆಸಕ್ತನಾಗಿ ಕೇಳುತ್ತಿದ್ದ, ವಿಮರ್ಶಿಸುತ್ತಿದ್ದ. ಮುಕ್ತಿಬೋಧ್ ಪಂಥದ ಕವಿ ರಾವತ್ ತಮ್ಮ ಕಾವ್ಯ ಮತ್ತು ವ್ಯಕ್ತಿತ್ವದಿಂದ ನಮ್ಮಿಬ್ಬರನ್ನು ಬೆರಗುಗೊಳಿಸಿದ್ದರು. ಆ ಸ್ನೇಹ, ಸಹವಾಸದಿಂದ ಪ್ರೇರಿತಗೊಂಡ ಕೃಷ್ಣ ಮುಕ್ತಿಬೋಧ್ ಹಾಗೂ ಇಂದಿನ ಸಮಕಾಲೀನ ಕವಿಗಳ ಹಿಂದಿ ಕವಿತೆಗಳ ಕನ್ನಡ ಅನುವಾದಗಳ ಒಂದು ಸಂಕಲನವನ್ನು ತರಬೇಕೆಂದು ನಿಶ್ಚಯಿಸಿ ನನಗೆ 'ನೀನು ಹಿಂದೀ ಪದ್ಯಗಳನ್ನು ಓದಿ ವಿವರಿಸು, ಇಲ್ಲ, ಗದ್ಯಾನುವಾದ ಮಾಡಿ ಹೇಳು, ನಾನು ಪದ್ಯಾನುವಾದ ಮಾಡುತ್ತೇನೆ' ಎಂದು ಹೇಳಿದ. ಅದರಂತೆ ಒಂದೆರಡು ದಿನ ಒಟ್ಟಿಗೆ ಕುಳಿತು ನಾಲ್ಕಾರು ಕವಿತೆಗಳ ಕರಡನ್ನು ಸಿದ್ಧಪಡಿಸಿದೆವು. ಕೃಷ್ಣನೇ ಎರಡು ಹಿಂದೀ ಕವಿತೆಗಳ ಕನ್ನಡ ಅನುವಾದವನ್ನು ಸುಂದರವಾಗಿ ಬರೆದ. ಆ ಎರಡು ಕವಿತೆಗಳ ಅನುವಾದ ಇಲ್ಲಿವೆ—

ಎರಡು ಕವಿತೆಗಳು

೧

ಬೆಚ್ಚನೆಯ ಹೊಸ ಕೋಟು ತೊಟ್ಟ
ಆ ಮನುಷ್ಯ
ಹೊರಟು ಹೋದ
ವಿಚಾರದ ಹಾಗೆ

ರಬ್ಬರ್ ಚಪ್ಪಲಿ ತೊಟ್ಟ
ನಾನು
ಹಿಂದೆಯೇ ಉಳಿದು ಬಿಟ್ಟೆ
ಚಳಿಗಾಲದಲ್ಲಿ ಬೆಳಗಿನಾರರ ಸಮಯದಲ್ಲಿ
ಕಳೆಚಿಟ್ಟ ಬಟ್ಟೆಗಳಂತೆ ಬೆಳಗಿನಾರರ ಸಮಯ
ಬೆಳಗಿನಾರರ ಸಮಯದಂತೆ.
ಮರದ ಕೆಳಗೊಬ್ಬ ನಿಂತಿದ್ದ;
ಮಂಜಿನಲ್ಲಿದ್ದ ಮಾನವಾಕೃತಿಯ ವ್ಯಕ್ತಿ
ಅವನೆ ಆಗಿದ್ದ
ಮರದ ಆಕೃತಿ ಮಾತ್ರ ಮರವಾಗಿಯೇ ಇತ್ತು
ಬಲಕ್ಕೊಂದು ಕಂತ್ರಿ ಕುದುರೆಯಿದ್ದಂತಿತ್ತು
ಅದು ಕಂತ್ರಿ ಕುದುರೆಯಂತೆಯೇ ಇತ್ತು.
ಕುದುರೆ ಹಸಿದಿದ್ದರೆ
ಗಾಳಿಯಲ್ಲಿ ಅದಕ್ಕೆ ಮೇವಾಗಿ ಮಂಜು ಬೆಳೆದಿತ್ತು
ಮತ್ತೆ ಮನೆಗಳು ಮರಗಳು ರಸ್ತೆಗಳು ಇತ್ಯಾದಿ...
ಆದರೆ ಅದಾವುದೂ ಕುದುರೆಯಾಗಿರಲಿಲ್ಲ.
ಅಲ್ಲಿ ಇದ್ದುದೊಂದೇ ಕುದುರೆ
ನಾನು ಮಾತ್ರ ಕುದುರೆಯಲ್ಲ
ಆದರೆ ಮಂಜಿನುಸಿರಿನ ಹಾಗೆಯೆ
ಏದುಸಿರು ಬಿಡುತ್ತಿರುವೆ ನಾನೂ
ಅದೇ ಮರದಡಿಯಲ್ಲಿ ಅದೇ ಸ್ಥಳದಲ್ಲಿ ನಿಂತಿದ್ದವನು
ಮಾಲೀಕನೇ ಆಗಿಬಿಟ್ಟದ್ದರೆ
ನಾನಾಗ ಓಡುತ್ತಿದ್ದೆ—ಚಪ್ಪಲಿ ತೊಟ್ಟು
ಕುದುರೆ ಲಾಳ ಹೊಡೆದಿದ್ದ ಚಪ್ಪಲಿ ತೊಟ್ಟು

ಮೂಲ: ವಿನೋದ್ ಕುಮಾರ್ ಶುಕ್ಲ

೨

ಅವನು ಮನುಷ್ಯನ ರೂಪದಲ್ಲಿ ನೌಕರಿ ಮಾಡಿದ
ಬಹಳ ದೊಡ್ಡ ನೌಕರಿ ಮಾಡಿದ
ಅವನು ಮನುಷ್ಯನ ರೂಪದಲ್ಲಿ ವ್ಯವಹಾರ ಮಾಡಿದ
ದೊಡ್ಡದೊಡ್ಡ ವ್ಯವಹಾರ ಮಾಡಿದ
ಅವನು ಮನುಷ್ಯನ ರೂಪದಲ್ಲಿ ಚುನಾವಣೆಗೂ ನಿಂತ
ಉಗ್ರ ಚುನಾವಣೆಗೇ ನಿಂತ
ಇನ್ನೂ ಇನ್ನೂ......

ಅವನು ಮನುಷ್ಯನ ಮಾತಿನಲ್ಲಿ ಕವಿತೆಯನ್ನು ಬರೆದ
ಪ್ರತಿಷ್ಠಿತ ಕವಿತೆಯನ್ನೇ ಬರೆದ
ಆದರೆ ಸತ್ತಮೇಲೆ—
ಅವನ ಸ್ಮಾರಕವನ್ನು ತೋಳಗಳು ಕಟ್ಟಿದವು,
ಯಾಕೆಂದರೆ
ಅವನೇ ನಿಜವಾದ ತೋಳವಾಗಿದ್ದ
ಮಹತ್ವದ ತೋಳವಾಗಿದ್ದ.

ಮೂಲ : ಸೋಮದತ್ತ
ಅನುವಾದ : ಶ್ರೀಕೃಷ್ಣ ಆಲನಹಳ್ಳಿ
ತಿಪ್ಪೇಸ್ವಾಮಿ

ಹಿಂದಿ ಕವಿತೆಗಳ ಕನ್ನಡ ಅನುವಾದ ಕಾರ್ಯವನ್ನು ನಾವು ಒಟ್ಟಿಗೆ ಮುಂದುವರಿಸಲಾಗಲಿಲ್ಲ. ಹೀಗಾಗಿ ಹಿಂದೀ ಕವಿತೆಗಳ ಕನ್ನಡ ಅನುವಾದದ ಒಂದು ಸಂಗ್ರಹವಾದರೂ ಕನ್ನಡದಲ್ಲಿ ಇನ್ನೂ ಪ್ರಕಟವಾಗಿಲ್ಲ. ಕೃಷ್ಣ ಈಗ ನಮ್ಮೊಡನಿಲ್ಲ. ಕೃಷ್ಣ ಇದ್ದಾಗ ಈ ಕಾರ್ಯ ಕೈಗೂಡಿದ್ದಿದ್ದರೆ ಕನ್ನಡ ಕಾವ್ಯ ಪ್ರಕಾರಕ್ಕೆ ಒಂದು ಅಪೂರ್ವ ಕೊಡುಗೆ ಲಭ್ಯವಾದಂತಾಗುತ್ತಿತ್ತು.

ಕಲ್ಲು ಬಂಡೆಗಳಿಂದ ಕಟ್ಟಲಾದ ಗುಡಿಗಳಿಗಿಂತಲೂ ನರಗಳಿಂದಲೂ ಮಾಂಸದಿಂದಲೂ ಕಟ್ಟಲಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ಗಾಂಧೀಜಿ

ಮಲಯಾಳದಲ್ಲಿ ಆಲನಹಳ್ಳಿ ಶ್ರೀಕೃಷ್ಣ

ಸಿ. ಕಮಲಾದೇವಿ

ಆಲನಹಳ್ಳಿ ಶ್ರೀಕೃಷ್ಣರ ಆಕಸ್ಮಿಕ ನಿಧನದ ಸುದ್ದಿ ಕೇರಳದ ಕಲ್ಲಿಕೋಟೆಯಿಂದ ಪ್ರಕಟವಾಗುತ್ತಿರುವ 'ಮಾತೃಭೂಮಿ' ಪತ್ರಿಕೆಯಿಂದ ನಾನು ತಿಳಿದೆ. ಸುಮಾರಾಗಿ ಅವರ ಮನೆಯ ನೆರೆಹೊರೆಯಲ್ಲೇ ಇದ್ದರೂ ಕೇರಳದಿಂದ ಬಂದ ಪತ್ರಿಕೆಯಿಂದ ಈ ಸುದ್ದಿ ತಿಳಿದದ್ದು ವಿಚಿತ್ರವೆಂದೆನಿಸಿತು. ಆದರೆ ಯೋಚನೆ ಮಾಡಿದಾಗ ಅದರಲ್ಲಿ ಯಾವುದೋ ಒಂದು ಬಗೆಯ ಸಾಂಗತ್ಯ ವನ್ನು ಕೂಡ ಗುರುತಿಸಲು ಸಾಧ್ಯವಾಯಿತು. ಅನ್ಯಭಾಷೆಯ ಬರಹಗಾರನೆಂಬ ಅಂಶ ಮರೆಯಾಗುವಂತೆ ಕೇರಳದಲ್ಲಿ ಶ್ರೀಕೃಷ್ಣ ಅವರು ಪಡೆದ ಗೌರವದಲ್ಲಿ 'ಮಾತೃಭೂಮಿ'ಯ ಪಾಲು ಇದೆ ಎಂಬುದರಲ್ಲಿ ಸಂದೇಹವಿಲ್ಲ. ಕೃಷ್ಣ ಅವರ ಎರಡು ಕಾದಂಬರಿಗಳು 'ಮಾತೃಭೂಮಿ'ಯಲ್ಲಿಯೇ ಧಾರಾವಾಹಿಯಾಗಿ ಪ್ರಕಟವಾದವು ಎಂಬುದು ಗಮನಾರ್ಹ. ಅದೇ 'ಮಾತೃಭೂಮಿ' ಈ ಅನಿರೀಕ್ಷಿತ ಮರಣದ ಸುದ್ದಿಯನ್ನೂ ಸೂಕ್ತವಾದ ಗೌರವ ದೊಂದಿಗೆ ಕೃಷ್ಣ ಅವರ ಮೆಚ್ಚಿನ ಓದುಗರಿಗೆ ತಿಳಿಸುವ ಹೊಣೆ ಗಾರಿಕೆಯನ್ನೂ ಹೊತ್ತಿತು.

ಶ್ರೀಕೃಷ್ಣರಿಗೂ ಕೇರಳಕ್ಕೂ ಇದ್ದ ನಂಟು ಯಾವಾಗ ಆರಂಭ ವಾಯಿತೆಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಚಿಕ್ಕಂದಿನ ದಲ್ಲಿಯೇ ಕೇರಳದೊಂದಿಗೆ ಸಂಬಂಧ ಬೆಳೆದದ್ದು ಎಂಬುದಾಗಿ 'ಮಲಯಾಳದ ಮೋಡಿ' ಎಂಬ ಲೇಖನದಲ್ಲಿ ಕೃಷ್ಣರು ಹೇಳಿದ್ದಾರೆ. ಬಾಲ್ಯದಲ್ಲಿ 'ಅದ್ಭುತಗಳ ನಾಡಾ'ಗಿ ಕಲ್ಪಿಸಿಕೊಂಡ ಕೇರಳದಲ್ಲಿ ಪ್ರವಾಸಮಾಡಲು ಸಿಕ್ಕ ಯಾವ ಅವಕಾಶವನ್ನೂ ಅವರು ಕೈ ಬಿಡಲಿಲ್ಲ. ಆಗಾಗ ನಮ್ಮ ಮನೆಗೆ ಬಂದಾಗ ಕೇರಳಕ್ಕೆ ಹೋಗಿ ಬಂದದ್ದನ್ನೂ ಅಲ್ಲಿನ ಲೇಖಕ ಗೆಳೆಯರೊಂದಿಗೆ ದೂರವಾಣಿಯಲ್ಲಿ ಮಾತಾಡಿದ್ದನ್ನೂ ವಿವರಿಸುತ್ತಾ ಇದ್ದದ್ದು ನೆನಪಿಗೆ ಬರುತ್ತದೆ. ಕೇರಳದ ಹಲವು ಬರಹಗಾರರು ನೇರವಾಗಿ ಅಥವಾ ಅನುವಾದಗಳ ಮೂಲಕ ಕೃಷ್ಣರಿಗೆ ಸುಪರಿಚಿತರಾದವರು. ಆದರೆ ಇವರಲ್ಲಿ

ಇಬ್ಬರು ವ್ಯಕ್ತಿಗಳೊಂದಿಗೆ ತಮಗೆ ಇರುವ ಆತ್ಮೀಯಸಂಬಂಧದ ಬಗ್ಗೆ ಶ್ರೀಕೃಷ್ಣರು ಒತ್ತಿ ಹೇಳುತ್ತಾ ಇದ್ದರು. ಗುರುವಾಗಿ ತಾವು ಆದರಿಸುತ್ತಿದ್ದ ವೈಕಂ ಮುಹಮ್ಮದ್ ಬಷೀರ್ ಹಾಗೂ ತಮ್ಮ ಮೆಚ್ಚಿನ ಕಾದಂಬರಿಕಾರರಾದ ಎಂ. ಟಿ. ವಾಸುದೇವನ್ ನಾಯರ್ ಶ್ರೀಕೃಷ್ಣರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದರು. ಈ ಇಬ್ಬರು ಲೇಖಕರೂ ಅವರಿಗೆ ಅತ್ಯಂತ ಆತ್ಮೀಯರಾಗಿದ್ದರು. ಸಣ್ಣಕಥೆಯಾಗಲಿ ಕಾದಂಬರಿಯಾಗಲಿ ಅಪೂರ್ವವಾದ 'ಕಾವ್ಯಧ್ವನಿ ಶಕ್ತಿಯಿಂದ ತುಂಬಿ ತುಳುಕಬೇಕು ಎಂಬ ತತ್ವವನ್ನು ಅವರಿಗೆ ತಿಳಿಸಿಕೊಟ್ಟದ್ದು ಬಷೀರನ ಬರಹಗಳಂತೆ. ಹಾಗೆಯೇ ಅವರಿಗೆ ಮಲಯಾಳ ಸಾಹಿತ್ಯದಲ್ಲಿ ಆಸಕ್ತಿಯನ್ನು ಕೆರಳಿಸಿದ ಮೊದಲನೆಯ ಕಾದಂಬರಿ ವಾಸುದೇವನ್ ನಾಯರರ 'ಚಾಕಟ್ಟನಮನೆ'. ಕೃಷ್ಣ ಅವರ ಜೊತೆ ತಮಗಿರುವ ವೈಯಕ್ತಿಕ ಸಂಬಂಧ ಬಗ್ಗೆ ಕೆಲವು ದಿವಸಗಳ ಹಿಂದೆ ಮೈಸೂರಿಗೆ ಬಂದಿದ್ದ ಎಂ. ಟಿ. ವಾಸುದೇವನ್ ನಾಯರ್ ಭಾವುಕತೆಯಿಂದ ಮಾತನಾಡಿದ್ದರು. ಒಬ್ಬ ಹಿರಿಯ ಸೋದರನಂತೆ ಪ್ರೀತಿ ವಾತ್ಸಲ್ಯಗಳಿಂದ ಕೃಷ್ಣರನ್ನು ಬೈದ, ಟೀಕಿಸಿದ ಮತ್ತು ಉಪದೇಶಿಸಿದ ಸಂದರ್ಭಗಳನ್ನು ಅವರು ಸ್ಮರಿಸಿದರು.

ಒಬ್ಬ ಬರಹಗಾರನನ್ನಾಗಿ ಕೃಷ್ಣರನ್ನು ಮಲಯಾಳಿಗಳಿಗೆ ಪರಿಚಯಮಾಡಿಕೊಟ್ಟದ್ದು ಅವರ 'ಕಾಡು' ಕಾದಂಬರಿಯ ಅನುವಾದ. ೧೯೭೭ ರಲ್ಲಿ ಇದು ಮಲಯಾಳದಲ್ಲಿ ಅಚ್ಚಾಗಿದೆ. ಅನಂತರ 'ಪರಸಂಗದ ಗೆಂಡೆತಿಮ್ಮ' ಕಾದಂಬರಿ 'ಪಾವತ್ತಾನ್' ಎಂಬ ಶೀರ್ಷಿಕೆಯಲ್ಲಿ 'ಮಾತೃಭೂಮಿ'ಯಲ್ಲಿಯೇ ಪ್ರಕಟವಾಯಿತು. ೧೯೮೭ರಲ್ಲಿ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿ 'ಮಾತೃಭೂಮಿ'ಯಲ್ಲಿಯೇ ಪ್ರಕಟವಾಯಿತು. (೧೯೮೦ರಲ್ಲಿ ಪಾವತ್ತಾನ್ ಮತ್ತು ೧೯೮೮ರಲ್ಲಿ ಭುಜಂಗಯ್ಯನ ದಶಾವತಾರಗಳು ಪುಸ್ತಕ ರೂಪದಲ್ಲಿ ಕೂಡ ಅಚ್ಚಾಗಿದೆ.) 'ಮಾತೃಭೂಮಿ'ಯಲ್ಲಿ ಧಾರಾವಾಹಿಯಾಗಿ ಬಂದ ಈ ಎರಡು ಕಾದಂಬರಿಗಳೂ ಕೃಷ್ಣರಿಗೆ ವಿಪುಲವಾದ ಜನಮೆಚ್ಚುಗೆಯನ್ನು ಗಳಿಸಿಕೊಟ್ಟವೆ. ತಮ್ಮ 'ಕಾಡು' ಕಾದಂಬರಿಗಿಂತ ಮಲಯಾಳಿಗಳು ಮೆಚ್ಚಿಕೊಂಡಿರುವುದು 'ಗೆಂಡೆತಿಮ್ಮ' ಮತ್ತು 'ಭುಜಂಗಯ್ಯ' ಎಂಬ ವಿಚಾರದಲ್ಲಿ ಕೃಷ್ಣರು ಹೆಮ್ಮೆಪಡುತ್ತಿದ್ದರು. ಈ ಕಾದಂಬರಿಗಳು ಪ್ರಕಟವಾಗುವ ಸಂದರ್ಭದಲ್ಲಿ ಬಂದ ಓದುಗರ ಪ್ರತಿಕ್ರಿಯೆಗಳನ್ನು ಶ್ರದ್ಧೆಯಿಂದ ಪರಿಶೀಲಿಸಲು ಅವರು ತವಕಗೊಂಡರು. ಈಚೆಗೆ ತಾವು ಕರ್ನಾಟಕದ ಯಾವುದೋ ಒಂದು ಹಳ್ಳಿಯ ಪೆಟ್ಟಿಗೆ ಅಂಗಡಿಗೆ ಹೋದಾಗ 'ಮರಂಕಿ'ಯನ್ನು ಕಂಡದ್ದಾಗಿ ಮಲಯಾಳದ ಪ್ರಸಿದ್ಧ ಕಾದಂಬರಿಕಾರರಾದ ಎಂ. ಟಿ. ವಾಸುದೇವನ್ ನಾಯರ್ ಕೃಷ್ಣರಿಗೆ ತಿಳಿಸಿದರಂತೆ. ಕಥಾಪಾತ್ರಗಳ ಚಿತ್ರಣವನ್ನು ಓದುಗರ ಮನಸ್ಸಿನಲ್ಲಿ ಕೆತ್ತುವ ಕೃಷ್ಣರ ಸಿದ್ಧಿಯನ್ನು ಕುರಿತ ಪ್ರಶಂಸೆಯನ್ನು ಈ ಮಾತುಗಳಲ್ಲಿ ಗುರುತಿಸಬಹುದು.

ಆಲನಹಳ್ಳಿಯವರು ಹೇಗೆ ಕೇರಳದ ಅತ್ಯಂತ ಜನಪ್ರಿಯ ಲೇಖಕರಾದರು. ಬದುಕಿನೊಂದಿಗೆ ರೂಪಿಸಿಕೊಂಡ ಗಾಢವಾದ ಅಂಟು–ನಂಟುಗಳೇ ಅವರ ಜನಪ್ರಿಯತೆಯ ಗುಟ್ಟು ಎಂದೆನಿಸುತ್ತದೆ. ಗಹನ ವಿಶ್ಲೇಷಣೆಗಿಂತ ಭಾವುಕತೆಯ ಬೆಸುಗೆಯಲ್ಲಿ ಬದುಕಿನ ಚಿತ್ರಣವನ್ನು ಅವರು ತಮ್ಮ ಕಾದಂಬರಿಗಳಲ್ಲಿ ಸಾಧಿಸಿದರು. ಒಬ್ಬ ಬರಹಗಾರನಿಗೆ ಸಂಬಂಧಿಸಿದಂತೆ ಇದೊಂದು ಮಿತಿಯಾಗಿದ್ದರೂ ಆ ಮಿತಿಯೊಳಗೇ ಅವರು ಸಾಕಷ್ಟು ಜನಪ್ರಿಯರಾದರು. ಅಲ್ಲದೆ ಗ್ರಾಮೀಣತೆಯ ಶುದ್ಧಿ ಮತ್ತು ಲಾಲಿತ್ಯಗಳನ್ನು ಒಂದು

ರಮ್ಯಸ್ಮರಣೆಯಾಗಿ ಮಾತ್ರ ಉಳಿಸಿಕೊಂಡಿರುವ ಈಗಿನ ಪರಿಸ್ಥಿತಿಯಲ್ಲಿ ಮಲಯಾಳಿ ಓದುಗರಲ್ಲಿ ಹಳಹಳಿಕೆಯ ತುಡಿತಗಳನ್ನು ಎಬ್ಬಿಸಲು ಅವರ ಕಾದಂಬರಿಗಳು ಸಮರ್ಥ ವಾಗಿವೆ. ಕೇರಳದಲ್ಲಿ ಅವರು ಸಾಧಿಸಿದ ಜನಪ್ರಿಯತೆಯನ್ನು ನೇರವಾಗಿ ನೋಡುವ ಒಂದು ಅವಕಾಶ ನನಗೆ ಕಳೆದ ವರ್ಷ ಸಿಕ್ಕಿತ್ತು. ಕೇರಳದ ಎರ್ನಾಕುಲಂನಲ್ಲಿ ನಡೆದ ಒಂದು ಸಭೆಯಲ್ಲಿ ಭಾಗವಹಿಸಲು ಕೃಷ್ಣ ಮತ್ತು ಅವರ ಕುಟುಂಬದೊಂದಿಗೆ ಪ್ರವಾಸಮಾಡುವ ಅವಕಾಶ ಬಂತು. ಸುದೀರ್ಘವಾದ ಭಾಷಣದ ಅನಂತರ ಆಯಾಸಗೊಂಡ ಕೃಷ್ಣರನ್ನು ಅಭಿಮಾನಿಗಳು ಸುತ್ತಿದರು. ಒಬ್ಬೊಬ್ಬರಿಗೂ ಏನೇನೋ ಕೇಳಬೇಕೆಂಬ ಆಸೆ.... ಭುಜಂಗಯ್ಯ, ಸುಶೀಲೆ, ಅವಳ ಅನಿರೀಕ್ಷಿತ ದುರಂತ, ಕಾದಂಬರಿಯ ಪರಿಸಮಾಪ್ತಿ ಇತ್ಯಾದಿಗಳನ್ನು ಕುರಿತು ನೂರಾರು ಪ್ರಶ್ನೆಗಳು ಬಂದವು. ಆ ದಿವಸಗಳಲ್ಲಿ 'ಭುಜಂಗಯ್ಯನ ದಶಾವತಾರಗಳು' 'ಮಾತೃಭೂಮಿ'ಯಲ್ಲಿ ಪ್ರಕಟವಾಗುತ್ತಾ ಇತ್ತು. ಭಾಷಣದ ಆಯಾಸವನ್ನು ಲೆಕ್ಕಿಸದೆ ಕೃಷ್ಣರು ಉತ್ಸಾಹದಿಂದ ಒಬ್ಬೊಬ್ಬರ ಜೊತೆಗೂ ಮಾತನಾಡುತ್ತಿದ್ದುದನ್ನು ನಾನು ಕುತೂಹಲದಿಂದ ನೋಡಿದ್ದೇನೆ.

ಒಬ್ಬ ಲೇಖಕನನ್ನು ಬೇರೊಂದು ಭಾಷೆಗೆ ಪರಿಚಯಿಸುವಾಗ ಬರಬಹುದಾದ ಗೆಲುವು-ಸೋಲುಗಳಿಗೆಲ್ಲ ಆ ಕೃತಿಗಳ ಅನುವಾದಕರೂ ಜವಾಬ್ದಾರರು. ಕೃಷ್ಣರ ಪ್ರತಿಭೆ ಯನ್ನು ಯಶಸ್ವಿಯಾಗಿ ಮಲಯಾಳದಲ್ಲಿ ಪುನಃಸೃಷ್ಟಿ ಮಾಡಿದ್ದರಲ್ಲಿ ಅವರ ಮೂರು ಕಾದಂಬರಿಗಳ ಅನುವಾದಕಾರರಾದ ಶ್ರೀ ಎ. ವಿ. ಎಂ. ನಾರಾಯಣರ ಪಾಲು ಗಮನಾರ್ಹ. ಅನುವಾದವು ಕೃತಕವಾಗದಂತೆ ಮರೆಯಲಾಗದ ಒಂದು ಅನುಭವವಾಗಿ ಮಾರ್ಪಡಿಸಿದ ಶ್ರೀ ನಾರಾಯಣರು ಅಭಿನಂದನಾರ್ಹರು. ಅನುವಾದದ ಕೃತಿಯಾಗಿ ತೋರದೆ ಮೂಲ ಗ್ರಂಥದ ಕಾವ್ಯಾತ್ಮಕತೆಯನ್ನು ಮಲಯಾಳಕ್ಕೆ ತಂದ ನಾರಾಯಣ ರಿಗೆ ಸ್ಫೂರ್ತಿಯಾಗಿ ನಿಂತದ್ದು ಅವರಿಬ್ಬರ ನಡುವೆ ಬೆಳೆದು ಬಂದಿದ್ದ ಆತ್ಮೀಯತೆ ಎಂದು ನಾನು ಭಾವಿಸುತ್ತೇನೆ.

ಕೃಷ್ಣರ 'ತಪ್ತ' ಎಂಬ ಸಣ್ಣ ಕಥಾಸಂಕಲನವೂ ಮಲಯಾಳಂಗೆ ಅನುವಾದಿತ ವಾಗಿದೆ. ಆದರೆ ಕಾದಂಬರಿಗಳಷ್ಟು ಪ್ರಸಿದ್ಧಿ ಈ ಸಂಕಲನಕ್ಕೆ ಬಂದಿಲ್ಲ. ಆಲನಹಳ್ಳಿ ಯವರು ಕಾದಂಬರಿಕಾರರು ಮಾತ್ರವಲ್ಲದೆ ಒಬ್ಬ ಕವಿಯೂ ಆಗಿದ್ದಾರೆ ಎಂಬುದು ಅವರ ನಿಧನದ ನಂತರ 'ಮಾತೃಭೂಮಿ'ಯಲ್ಲಿ ಬಂದ ಸಂಸ್ಮರಣ ಲೇಖನದಿಂದ ಮಲ ಯಾಳಿ ಓದುಗರಿಗೆ ತಿಳಿದುಬಂದಿತು.

ಕೃಷ್ಣರ ಅನಿರೀಕ್ಷಿತ ಅಗಲಿಕೆಯ ಆಘಾತದಿಂದ ಕೇರಳದ ಸಹೃದಯ ಲೋಕ ಈಗಲೂ ಮುಕ್ತವಾದ ಹಾಗೆ ಕಾಣುವುದಿಲ್ಲ. 'ಮಾತೃಭೂಮಿ'ಯಲ್ಲಿ ಪ್ರಕಟಿಸಿದ ಸಂಸ್ಮರಣ ಲೇಖನವನ್ನು ಓದಿದ ಓದುಗರಿಂದ ಅನೇಕ ಪ್ರತಿಕ್ರಿಯೆಗಳು ಬಂದಿವೆ ಎಂಬುದನ್ನು ಪತ್ರಿಕೆಯ ಕಚೇರಿಯಿಂದ ತಿಳಿದಿದ್ದೇನೆ. ಇದುವರೆಗೆ ಅನುವಾದವಾಗದೆ ಉಳಿದ ಅವರ ಎಲ್ಲಾ ಕಥೆಗಳನ್ನೂ, ಕವನಗಳನ್ನೂ ಮಲಯಾಳಕ್ಕೆ ಅನುವಾದ ಮಾಡಬೇಕು ಮುಂತಾದ ಕೋರಿಕೆಗಳೂ ಆ ಕಾಗದಗಳಲ್ಲಿವೆ. ಭವಿಷ್ಯದಲ್ಲೂ ಶ್ರೀಕೃಷ್ಣರ ಗೌರವ ಮಲಯಾಳ ಸಾಹಿತ್ಯದಲ್ಲಿ ಮುಂದುವರಿಯುತ್ತದೆ ಎಂಬುದನ್ನು ಇಂಥ ಪ್ರತಿಕ್ರಿಯೆಗಳು ಸೂಚಿಸುತ್ತಿವೆ.

ತೆಲುಗಿನಲ್ಲಿ ಆಲನಹಳ್ಳಿ ಶ್ರೀಕೃಷ್ಣ

ಡಾ॥ ಆರ್ವಿಯೆಸ್ ಸುಂದರಂ

ಶ್ರೀಕೃಷ್ಣ ಆಲನಹಳ್ಳಿ 'ಕಾಡು' ಕಾದಂಬರಿಯ ತೆಲುಗು ಅನುವಾದದ ಮೂಲಕ ಆಂಧ್ರದಲ್ಲೂ ಪರಿಚಿತರಾಗಿದ್ದಾರೆ. ಮೊದಲು ಕೃಷ್ಣ ಅವರ ಪರಿಚಯ ನನಗೆ 'ಕಾಡು' ಮೂಲಕವೇ ಆಯಿತು. ಅವರ ಕಾದಂಬರಿಯ ಆಧಾರದಿಂದ ತೆಗೆದ ಚಲನಚಿತ್ರಕ್ಕೆ ರಾಷ್ಟ್ರೀಯ ಪುರಸ್ಕಾರ ಲಭಿಸಿದಾಗ, ಆ ಚಿತ್ರವನ್ನು ತೆಲುಗಿನಲ್ಲೂ ತೆಗೆಯಬೇಕೆಂಬ ಯೋಚನೆ ಚಿತ್ರನಿರ್ಮಾಪಕರಿಗೆ ಇತ್ತು. ಶ್ರೀಕೃಷ್ಣ ಅವರು ನನಗೆ ಆ ಕೆಲಸವನ್ನು ವಹಿಸಿದ್ದು ಮಾತ್ರವಲ್ಲದೆ, ಚಿತ್ರವನ್ನು ತೋರಿಸಿ, ಚಲನಚಿತ್ರದ ಅನುವಾದಕ್ಕೆ ಅನುವು ಮಾಡಿಕೊಟ್ಟರು. ಆದರೆ, ಅನಂತರ ಆ ಯೋಜನೆಯನ್ನು ನಿರ್ಮಾಪಕರು ಕೈಬಿಟ್ಟರು.

ಶ್ರೀಕಂಠಮೂರ್ತಿ ಎಂಬವರು 'ಕಾಡು' ಕಾದಂಬರಿಯನ್ನು ತೆಲುಗಿಗೆ ಅನುವಾದ ಮಾಡಿ ೧೯೭೫ರಲ್ಲಿ 'ಆಂಧ್ರಜ್ಯೋತಿ' ಎಂಬ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. 'ಅಡಿವಿ' ಎಂಬ ಹೆಸರಿನಲ್ಲಿ ಪ್ರಕಟವಾದ ಈ ಧಾರಾವಾಹಿ ಅನೇಕ ಜನರ ಮೆಚ್ಚುಗೆಯನ್ನು ಪಡೆಯಿತು. ಓದುಗರ ಪತ್ರಗಳ ಮೂಲಕ ಹಲವರು ತಮ್ಮ ಮೆಚ್ಚುಗೆಯನ್ನು ಪ್ರಕಟಿಸಿದ್ದರು. ಆಗಸ್ಟ್ ೧೯೭೬ರಲ್ಲಿ ಎಂ. ಶೇಷಾಚಲಂ ಅಂಡ್ ಕಂಪೆನಿ ಅವರು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಎಂ. ಶೇಷಾಚಲಂ ಅಂಡ್ ಕಂಪೆನಿ ಆಂಧ್ರದ ಪ್ರತಿಷ್ಠಿತ ಪ್ರಕಾಶಕರು. ಇವರು 'ಎಮೆಸ್ಕೊ ಪಾಕೆಟ್ ಬುಕ್ಸ್' ಎಂಬ ಹೆಸರಿನಲ್ಲಿ ಸುಮಾರು ೫೦೦ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಕಾಡು' ಕಾದಂಬರಿ ತೆಲುಗರಿಗೆ 'ಎಮೆಸ್ಕೊ' ಮೂಲಕ ಕೈಸೇರಿ ಓದುಗರ ಮನಗೆದ್ದಿದೆ. ಶ್ರೀಕಂಠಮೂರ್ತಿ ಅವರು ತಾವು 'ಕಾಡು' ಕಾದಂಬರಿಯನ್ನು ಸ್ವೀಕರಿಸಲು ಕಾರಣವನ್ನು ಹೇಳುತ್ತಾ ಹೀಗೆಂದಿದ್ದಾರೆ (ಅನುವಾದಕನ ಮಾತು):

"ಈ ಕಾದಂಬರಿಯಲ್ಲಿ ಲೇಖಕರು ಗ್ರಾಮೀಣ ಜೀವನವನ್ನು ತುಂಬ ಸೊಗಸಾಗಿ ಚಿತ್ರಿಸಿದ್ದಾರೆ. ಪಾತ್ರಗಳ ಸ್ವಭಾವ ಚಿತ್ರಣದಲ್ಲೂ ಲೇಖಕರ ಜಾಣ್ಮೆ ಪ್ರಶಂಸಾರ್ಹ. ಒಟ್ಟು ಕಾದಂಬರಿಯನ್ನು ಒಬ್ಬ ಹುಡುಗನ ದೃಷ್ಟಿಯಿಂದ ಹೇಳಿದ ರೀತಿ ನನ್ನನ್ನು ಸೆಳೆಯಿತು. ಕಾದಂಬರಿಯೆಲ್ಲಾ ವಾಸ್ತವಿಕವಾಗಿ, ಸಹಜವಾಗಿ ನಡೆಯಿತು. ಪ್ರತಿ ವಿಷಯವನ್ನೂ ಸುನಿಶಿತವಾಗಿ ಪರಿಶೀಲಿಸಿದ ರೀತಿ, ಪ್ರತಿ ಸನ್ನಿವೇಶವನ್ನೂ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ ಜಾಣ್ಮೆ ಈ ಲೇಖಕರಲ್ಲಿ ಪ್ರತ್ಯೇಕವಾಗಿ ಕಾಣುತ್ತದೆ. ಇವು ನಾನು ಈ ಕಾದಂಬರಿಯನ್ನು ಆರಿಸಿಕೊಳ್ಳಲು ಕಾರಣಗಳು."

ಶ್ರೀಕೃಷ್ಣ ಅವರ 'ಕಾಡು' ಚಲನಚಿತ್ರವನ್ನು ಆಂಧ್ರದ ಅನೇಕ ಸ್ಥಳಗಳಲ್ಲಿರುವ 'ಫಿಲ್ಮ್ ಸೊಸೈಟಿ'ಗಳು ಪ್ರದರ್ಶಿಸಿದಾಗ ವಿಮರ್ಶಕರು ಮಾಡಿದ ಪ್ರಶಂಸೆಗಳು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಅದು ಆತನ ಅಚ್ಚಳಿಯದ ಸ್ಮಾರಕ.

ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ! ನಮ್ಮ ಎಷ್ಟು ತಪ್ಪುಗಳನ್ನು, ಎಂಥೆಂಥ ಮೋಸಗಳನ್ನು ಸಹಿಸುತ್ತಾನೆ.

ಗಾಂಧೀಜಿ

ಛಾತಿಯ ಚೇತನ

ಡಾ. ಪ್ರಧಾನ ಗುರುದತ್ತ

ಶ್ರೀಕೃಷ್ಣ ಆಲನಹಳ್ಳಿ ಅವರನ್ನು ನೆನೆದಾಗ ನನ್ನ ಮನಸ್ಸಿಗೆ ಮೊದಲು ತಟ್ಟುವುದು ಅವರ ಛಾತಿಯ ಚೇತನ. ಈಗ್ಗೆ ಸುಮಾರು ಮೂರು ದಶಕಗಳಿಗೂ ಹಿಂದೆ, ವಿದ್ಯಾರ್ಥಿಯಾಗಿ ನನಗೆ ಅವರು ಪರಿಚಿತರಾದಂದಿನಿಂದಲೂ ಅವರ ವ್ಯಕ್ತಿತ್ವದ ಈ ಅಂಶವೇ ನನಗೆ ಎದ್ದು ಕಾಣುತ್ತ ಬಂದಿದೆ. ಅವರು ಕಣ್ಮರೆಯಾಗಿ ಹೋಗಿರುವಾಗಲೂ ಈ ವೈಶಿಷ್ಟ್ಯವೇ ನನ್ನ ಮನಸ್ಸಿನಲ್ಲಿ ಸುಳಿದಾಡುತ್ತ ಇದೆ.

ನನ್ನ ಗೆಳೆಯರೊಬ್ಬರು ವಿದ್ಯಾರ್ಥಿ ಜೀವನದ ಆರ್ಥಿಕ ಹೊರೆಯನ್ನು ನಿಭಾಯಿಸುವ ಸಲುವಾಗಿ ಹಿಂದೀ ಮತ್ತು ಸಂಸ್ಕೃತ ತರಗತಿಗಳನ್ನು ನಡೆಸುವ ಏರ್ಪಾಟು ಮಾಡಿಕೊಂಡಿದ್ದರು. ಅದೇ ಸ್ಥಿತಿಯಲ್ಲಿದ್ದ ನಾನೂ ಅವರೊಂದಿಗೆ ಈ ವಿಷಯದಲ್ಲಿ ಸಹಕರಿಸುತ್ತಿದ್ದೆ. ೧೯೫೭ರಿಂದ ೫೯ರ ನಡುವಣ ಆ ಅವಧಿಯಲ್ಲಿಯೇ ಶ್ರೀಕೃಷ್ಣ ಹಿಂದೀ ಪರೀಕ್ಷೆಯನ್ನು ತೆಗೆದುಕೊಳ್ಳಬಯಸಿದ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿ ನನಗೆ ಪರಿಚಿತರಾದರು. ಅವರು ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಒಬ್ಬರೆಂಬುದು ಆಗಿನಿಂದಲೂ ನನ್ನ ಅನುಭವಕ್ಕೆ ಬರುತ್ತಿತ್ತು. ಪಠ್ಯವಾಗಿ ಗೊತ್ತುಪಡಿಸಲಾಗಿದ್ದ ಯಾವುದೋ ಒಂದು ಕಾದಂಬರಿಯ ಬಗ್ಗೆ ಮಾತನಾಡುತ್ತ, "ಇದರಲ್ಲಿ ದಟ್ಟವಾದ ಅನುಭವವೇ ಇಲ್ಲ. ಪಾತ್ರ ಚಿತ್ರಣವಾದರೂ ಅಷ್ಟೆ: ಸಹಜವಾಗಿ ಪರಿಸರದಿಂದ ಮೂಡಿ ಮೇಲೆದ್ದು ನಿಂತು ನಮ್ಮ ಮನಸ್ಸನ್ನು ಆಕ್ರಮಿಸುವಂಥ ಅನುಭವವೇ ಉಂಟಾಗುವುದಿಲ್ಲ. ಭಾಷೆಯೂ ಅಷ್ಟೆ: ಅದರಲ್ಲಿ ಜೀವಂತಿಕೆಯ ಸ್ಪಂದನವೇ ಇಲ್ಲ. ಆಯಾ ಸನ್ನಿವೇಶಕ್ಕೆ ಕೃತಕವಾಗಿ ಜೊಸೆದಂತೆ, 'ಟೈಲರ್‌ಮೇಡ್' ಎನ್ನುವಂತೆ ಇದೆ" ಎಂದು ಅಂದಿದ್ದರು. ಅಷ್ಟೇ ಅಲ್ಲ, ಕತೆಗಾರರಾಗಿ ಮಿಂಚತೊಡಗಿ ನಮ್ಮ ನಾಡಿನ ಖ್ಯಾತ ಪತ್ರಿಕೆಯ ಬಹುಮಾನವನ್ನು ಗಳಿಸಿದಾಗ,

ಇಂಥ ಇನ್ನೂ ಅನೇಕ ಪ್ರಶಸ್ತಿ ಬಹುಮಾನಗಳನ್ನು ಗಳಿಸಿದಾಗ "ನೋಡುತ್ತ ಇರಿ, ಸಾರ್! ಇನ್ನೂ ಏನೇನೋ ಸಾಧಿಸಿ ತೋರಿಸುತ್ತೇನೆ" ಎನ್ನುತ್ತಿದ್ದುದೂ ಉಂಟು. ಇಂಥ ಕೆಲವು ಸಂದರ್ಭಗಳಲ್ಲಿ, ತಾವು ರಚಿಸುತ್ತಿದ್ದ 'ಕಾಡು' ಕಾದಂಬರಿಯ ಕೆಲವು ವಿವರಗಳನ್ನೂ, ಮುಂದೆ ರಚಿಸಬೇಕೆಂದುಕೊಂಡಿದ್ದ 'ಗೋಡೆ' ಮತ್ತು 'ಬಿರುಸು' ಕಾದಂಬರಿಗಳ ಕೆಲವು ವಿಶಿಷ್ಟ ಸನ್ನಿವೇಶಗಳ ಬಗೆಗಿನ ಮಾಹಿತಿಯನ್ನೂ ಅವರು ಕೊಡುತ್ತ ಇದ್ದುದುಂಟು. ಅಪ್ರಯತ್ನವಾಗಿ, ಸಹಜವಾಗಿ, ಮಣ್ಣಿನ ವಾಸನೆ ಒಡಮೂಡುವಂಥ ರೀತಿಯಲ್ಲಿ ಅವರ ಮಾತುಕತೆ ಮತ್ತು ನಿರೂಪಣೆಗಳು ಸಾಗುತ್ತಿದ್ದು, ಇಲ್ಲೊಬ್ಬ "ಪ್ರಕೃತಿಯಿಂದಲೇ ಮೂಡಿ ಬರುತ್ತಿರುವ ಲೇಖಕ" ಇದ್ದಾನೆ ಎಂಬ ಅನುಭವ ನನಗೆ ಆಗುತ್ತಿತ್ತು. ಮುಂದೆ ಅವರು ತುಂಬ ದಟ್ಟ ಅನುಭವದ ಪರಿಣಾಮಕಾರಿ ನಿರೂಪಣೆಯನ್ನು ಒಳಗೊಂಡಿರುವಂಥ ಜೀವಂತ ಸಾಹಿತ್ಯವನ್ನೇ ಸೃಷ್ಟಿಸಿದರು.

ಬೆರಗನ್ನುಂಟುಮಾಡುವಂಥ ರೀತಿಯಲ್ಲಿ ಕೃಷ್ಣ ಬೆಳೆಯುತ್ತ ಬಂದರು. ಕವಿಯಾಗಿ, ಕತೆಗಾರನಾಗಿ, ಕಾದಂಬರಿಕಾರನಾಗಿ ತಮ್ಮ ವ್ಯಕ್ತಿತ್ವವನ್ನು ಅವರು ಸ್ಥಾಪಿಸುತ್ತ ನಡೆದರು. ತಮ್ಮ ವ್ಯಕ್ತಿತ್ವದ ಸಹಜ ಆಕರ್ಷಣೆಯಿಂದಲೇ ಅವರು ತಮ್ಮ ಮಿತ್ರವರ್ಗವನ್ನೂ ಬೆಳೆಸಿಕೊಳ್ಳುತ್ತ ನಡೆದಿದ್ದರು. ತಮ್ಮ ಕೃತಿಗಳನ್ನು ಮೆಚ್ಚಿದಂಥ ಮಿತ್ರವರ್ಗದವರ ಮೂಲಕ ಇಂಗ್ಲಿಷ್, ಹಿಂದೀ, ಮಲಯಾಳಮ್ ಮೊದಲಾದ ಭಾಷೆಗಳಿಗೆ ತಮ್ಮ ಕೃತಿಗಳು ಅನುವಾದವಾಗುವಂತೆಯೂ ಅವರು ನೋಡಿಕೊಂಡರು. "ಏಕೆ ಇಷ್ಟು ಆತುರ? ತಾವಾಗಿಯೇ ಅವೆಲ್ಲ ಇತರ ಭಾಷೆಗಳಿಗೂ ಅನುವಾದಗೊಳ್ಳುತ್ತವೆ" ಎಂದರೆ, "ರಾಷ್ಟ್ರದ ಮಟ್ಟದಲ್ಲಿ ನಮ್ಮ ಸಾಹಿತ್ಯವನ್ನು ಮೆರೆಸದೆ ಇದ್ದರೆ, ನಾವೆಲ್ಲ ಹಿಂದೆ ಬಿದ್ದುಬಿಡುತ್ತೇವೆ. ವೈಯಕ್ತಿವಾಗಿ ನಮಗೆ ಮಾತ್ರವಲ್ಲ, ನಮ್ಮ ಸಾಹಿತ್ಯಕ್ಕೇ ಆಗುವ ಅನ್ಯಾಯ ಇದು. ಕುವೆಂಪು, ಕಾರಂತ, ಬೇಂದ್ರೆಯವರಿಗಿಂತ ಉನ್ನತ ಮಟ್ಟದ ಸಾಹಿತಿಗಳು ಬೇರೆ ಭಾಷೆಗಳಲ್ಲಿ ಎಷ್ಟು ಜನ ಇದ್ದಾರೆ? ಅವರಿಗೆ ಸಿಕ್ಕಬೇಕಾದಷ್ಟು ಪ್ರಚಾರ-ಪ್ರಸಿದ್ಧಿಗಳು ದೊರೆತಿವೆಯೆ? ಆದ್ದರಿಂದ ನಮ್ಮ ತುತ್ತೂರಿಯನ್ನು ನಾವೇ ಊದಿದರೂ, ಅದು ತಪ್ಪೇನೂ ಅಲ್ಲ" ಎನ್ನುತ್ತಿದ್ದರು.

ತಮ್ಮ ಬಗ್ಗೆ ಮಾತ್ರವಲ್ಲದೆ, ನಾಡು-ನುಡಿಗಳ ಏಳಿಗೆಗಾಗಿ, ದುಡಿಯುತ್ತಿದ್ದಂಥ, ಸಿದ್ಧಿ; ಸಾಧನೆಗಳಿಗೆ ಕಾರಣರಾಗಿದ್ದಂಥ ವ್ಯಕ್ತಿಗಳ ವಿಷಯದಲ್ಲೂ ಅವರಿಗೆ ತುಂಬ ಕಾಳಜಿ ಇತ್ತು. ರಾವಬಹದ್ದೂರ್ ಅವರ 'ಗ್ರಾಮಾಯಣ'ದ ಬಗ್ಗೆ' ಗ್ರಾಮಾಯಣ ಸಮೀಕ್ಷೆ'ಯನ್ನು ಹೊರತರುವ ಆಲೋಚನೆಯನ್ನು ಹಮ್ಮಿಕೊಂಡಾಗ Fiction and the Reading public (ಸಂ: ಸಿ. ಡಿ. ನರಸಿಂಹಯ್ಯ) ಗ್ರಂಥದಲ್ಲಿ ಕೆ. ಡಿ. ಕುರ್ತಕೋಟಿಯವರ ಒಂದು ಉತ್ತಮ ಲೇಖನ ಪ್ರಕಟವಾಗಿದ್ದುದರ ಕಡೆ ನಾನು ಅವರ ಗಮನವನ್ನು ಸೆಳೆದೆ. ಅವರು ಕೂಡಲೇ "ಕುರ್ತುಕೋಟಿಯವರಿಂದ ಅನುಮತಿ ಪಡೆದುಕೊಳ್ಳುವ ವಿಚಾರವನ್ನು ನನಗೆ ಬಿಡಿ. ನೀವೇ ಆ ಲೇಖನವನ್ನು ಅನುವಾದಿಸಿಕೊಡಿ" ಎಂದು ಪಟ್ಟುಹಿಡಿದು ಆ ಕೆಲಸವನ್ನು ಮಾಡಿಸಿಕೊಂಡರು. ಅಂತೆಯೇ, ಪ್ರೊ|| ದೇಜಗೌ ಅವರ ಬಗ್ಗೆ 'ಅಂತಃಕರಣ' ಎಂಬ ಮೆಚ್ಚುಗೆಯ ಗ್ರಂಥವನ್ನು ಹೊರತರುವ ಸಂದರ್ಭದಲ್ಲಿಯೂ ಅವರು ಎಷ್ಟು ಶ್ರದ್ಧೇ-ಆಸಕ್ತಿಗಳಿಂದ

ದುಡಿದರು ಎಂಬುದು ಅವರ ಮಿತ್ರವರ್ಗಕ್ಕೆಲ್ಲ ಗೊತ್ತಿರುವ ಸಂಗತಿ. ಇಂಥ ಎಲ್ಲ ಕಾರ್ಯಗಳಲ್ಲಿಯೂ ಅವರ 'ಅಂತಃಕರಣ' ಎಲ್ಲರ ಅರಿವಿಗೂ ಬರುತ್ತಿತ್ತು.

ತಮ್ಮ ಒಂದೆರಡು ಕೃತಿಗಳನ್ನಾದರೂ ನಾನು ಹಿಂದಿಗೆ ಭಾಷಾಂತರಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಆದರೆ, ಅವರ 'ಅವಸರ'ಕ್ಕೆ ಸರಿಯಾಗಿ ಸ್ಪಂದಿಸುವುದು ನನಗೆ ಸಾಧ್ಯವಿರಲಿಲ್ಲ. ಹೀಗಾಗಿ, ನಾನು ಅವರ ಆಹ್ವಾನವನ್ನು ನಿರಾಕರಿಸಬೇಕಾಗಿ ಬಂತು. ಇತರರಿಂದ ತಮ್ಮ ಕೃತಿಗಳನ್ನು ಹಿಂದಿಗೆ ಅನುವಾದಿಸಿ, ಪ್ರಕಟಿಸುವಲ್ಲಿ ಅವರು ಯಶಸ್ವಿಯೂ ಆದರು. ಹಾಗೆ ಅನುವಾದಗೊಂಡ ತಮ್ಮ 'ಕಾಡು' ಕಾದಂಬರಿಯ ಹಿಂದೀ ಅನುವಾದವನ್ನ ಅವರು ನನಗೂ ಕೊಟ್ಟರು. ಆ ಅನುವಾದದಲ್ಲಿ ಕೆಲವು ಬಗೆಯ ದೋಷಗಳಿಗೆ ಎಡೆದೊರೆತಿರುವ ವಿಚಾರವನ್ನು ಮತ್ತೊಮ್ಮೆ ನಾನು ಅವರೊಂದಿಗೆ ಪ್ರಸ್ತಾಪಿಸಿದೆ. ಅವರ ಗಮನಕ್ಕೆ ನಾನು ತಂದ ಒಂದೆರಡು ಪ್ರಸಂಗಗಳು ಇವು:

೧) ಮೂಲ: "ಭಯವಾಗಿ ನಡುಗುತ್ತ ಆತ್ತೆಯನ್ನು ಗಟ್ಟಿಯಾಗಿ ತಬ್ಬಿದ".
ಅನು: "ಮಾಮಿಾ ನೇ ಉಸೇ ಅಪನೀ ಛಾತೀ ಕೀ ಓರ್ ಖೀಂಚ್ ಲಿಯಾ."
(ಅತ್ತೆ ಅವನನ್ನು ತನ್ನ ಎದೆಯ ಕಡೆಗೆ ಎಳೆದುಕೊಂಡಳು)

ಭಯದಿಂದ ನಡುಗುತ್ತಿದ್ದ ಕಿಟ್ಟ ಅತ್ತೆಯನ್ನು ಗಟ್ಟಿಯಾಗಿ ತಬ್ಬಿಕೊಳ್ಳುವುದಕ್ಕೆ ಬದಲಾಗಿ, ಅನುವಾದದಲ್ಲಿ ಅತ್ತೆಯೇ ಆ ಬಾಲಕನನ್ನು ತಬ್ಬಿಕೊಳ್ಳುವ ಅನೌಚಿತ್ಯ ಇಲ್ಲಿದೆ ಎಂಬುದು ಸ್ಪಷ್ಟವಾಗಿಯೇ ಇದೆ.

೨) ಮೂಲ: "ಸ್ವಲ್ಪ ಹೊತ್ತು ಸುಮ್ಮನಿದ್ದು 'ಅಮ್ಯಾಕೆ ಯೇಳ್ತೀನಿ ಇರು' ಎಂದ."
ಅನು: ಕಿಟ್ಟೇ ಕೇ ಪಾಸ್ ಭೀ ಇಸ್ಕಾ ಕೋಈ ಉತ್ತರ್ ನಹೀಂ ಥಾ."
(ಕಿಟ್ಟನ ಹತ್ತಿರವೂ ಇದಕ್ಕೆ ಯಾವುದೇ ಉತ್ತರ ಇರಲಿಲ್ಲ.)

ಇದು ಮೂಲಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾಗಿರುವ ಪ್ರಸಂಗ ಎಂಬುದನ್ನು ಬಿಡಿಸಿಹೇಳಬೇಕಾದ ಅಗತ್ಯವೇ ಇಲ್ಲ.

ಇಂಥ ಕೆಲವು ಪ್ರಸಂಗಗಳನ್ನು ಸ್ವತಃ ಶ್ರೀಕೃಷ್ಣ ಅವರೂ ಗಮನಿಸಿದ್ದರು ಎಂದು ಕಾಣುತ್ತದೆ. ತಮ್ಮ ಸ್ವಭಾವಕ್ಕೆ ಸಹಜವಾದ ರೀತಿಯಲ್ಲಿ ಅವರು ಇದರ ಬಗ್ಗೆ ಪ್ರತಿಕ್ರಿಯೆ ತೋರಿದರು: "ನೀವು ಮಾಡಿ ಅಂದ್ರೆ ಆಗಕ್ಕಿಲ್ಲ ಅಂದ್ರಿ. ಆ ಬ....ಕ್ಕೆ ಇಷ್ಟೊ ಅರ್ಥ ಆಗಲ್ಲ ಅಂದ್ರೆ ನಾ ಏನು ತಲೆ ಚಚ್ಚಿಕೊಂಡು ಸಾಯ್ಲ!" ಅನುವಾದ ಮಾಡಿದವರ ಬಗ್ಗೆ (ಮತ್ತು ಮಾಡದವರ ಬಗ್ಗೆಯೂ!) ಅವರ ಅಸಮಾಧಾನ ಹೀಗೆ ವ್ಯಕ್ತವಾಗಿತ್ತು.

ಮುಂದೆಯೂ 'ವಿಶ್ವಕನ್ನಡ ಸಮ್ಮೇಳನ'ದ ಸಂದರ್ಭದಲ್ಲಿಯೂ ಯಾವುದೋ ಒಂದು ಲೇಖನದ ಅನುವಾದವನ್ನು ತುರ್ತಾಗಿ ಸಿದ್ಧಪಡಿಸಿಕೊಡಬೇಕೆಂಬ ಅವರ ಕರೆಯನ್ನು ನಾನು ಮಾನ್ಯಮಾಡಲಾರದೆ ಹೋದೆ. ಇಂಥ ಪ್ರಸಂಗಗಳು ಅನೇಕವಿದ್ದುದಾದರೂ, ನನ್ನ ಬಗೆಗಿನ, ಅವರ ವಿಶ್ವಾಸಕ್ಕೆ ಮಾತ್ರ ಯಾವುದೇ ಕುಂದೂ ಉಂಟಾಗ

ಲಿಲ್ಲ ಎಂಬುದು ಮುಖ್ಯವಾದ ಸಂಗತಿ. ಇತ್ತೀಚೆಗೆ ತಮ್ಮ 'ಭುಜಂಗಯ್ಯನ ದಶಾವತಾರ ಗಳು' ಕಾದಂಬರಿಯ ಮಲಯಾಳಂ ಅನುವಾದವನ್ನು ತಂದು ತೋರಿಸಿದಾಗ ನನ್ನ ಸಂತೋಷವನ್ನು ವ್ಯಕ್ತಪಡಿಸಿದೆ. ಆ ಸಂದರ್ಭದಲ್ಲಿ ನಾನೊಂದು ಕುಚೋದ್ಯದ ಪ್ರಶ್ನೆ ಯನ್ನೂ ಹಾಕಿದೆ: "ಕೃಷ್ಣ, ನಾನು ನಿಮ್ಮ ಯಾವುದೇ ಕೃತಿಯನ್ನು ಅನುವಾದಿಸಲಿಲ್ಲ ಎಂಬ ಕಾರಣಕ್ಕಾಗಿ, 'ನೀವು' ಮಾಡದೆ ಇದ್ದರೆ ಏನಂತೆ! ನನ್ನ ಕೃತಿಗಳನ್ನು ಅನುವಾದಿಸಲು ಹಾತೊರೆಯುತ್ತಿರುವಂಥ ಜನ ಇದ್ದಾರೆ!' ಎಂಬುದನ್ನು ನನಗೆ ಮನವರಿಕೆ ಮಾಡಿಕೊಡಲೆಂದೇ ನೀವು ಈ ಅನುವಾದಗಳನ್ನು ನನಗೆ ತೋರಿಸುತ್ತಿಲ್ಲ ವಷ್ಟೆ?" ಅನರೆಂದರು: ಛೇ! ಛೆ! ಬಿಡ್ತು ಅನ್ನಿ ಸಾರ್. ಈ ಭಾವನೆಯಾದರೂ ನಿಮಗೆ ಏಕೆ ಬಂತು? ನಾನು ಮೇಲೆ ಬರುತ್ತ ಇರುವುದನ್ನು ಕಂಡು ನಿಜವಾಗಿಯೂ ಸಂತೋಷ ಪಡುವಂಥವರಲ್ಲಿ ನೀವೂ ಒಬ್ಬರು. ಅದಕ್ಕೋಸ್ಕರ ನಿಮಗೆ ತೋರಿಸುತ್ತಾ ಇದ್ದೀನಿ." ಸ್ವಲ್ಪಮಟ್ಟಿನ 'ಅಹಂ'ಭಾವದ, ಧೋರಣೆಯ ವ್ಯಕ್ತಿಯಾಗಿದ್ದೂ (ಇದರಲ್ಲಿ ಅಂಥ ಅಸಹಜತೆಯೇನೂ ಇರಲಿಲ್ಲ ಎಂಬುದು ನನ್ನ ಅನಿಸಿಕೆ), ಹಾಗೆಂದು ಹಲವರು ಅವರನ್ನು ಆಕ್ಷೇಪಿಸಿದ್ದರೂ, ಅವರ ಅಂತರಾಳದಲ್ಲಿ ವಿಶ್ವಾಸ ಹೇಗೆ ಬೀಡುಬಿಟ್ಟಿತ್ತು ಎಂಬುದನ್ನು ಇಂಥ ಕೆಲವು ಸಂದರ್ಭಗಳಲ್ಲಿ ನಾನು ಕಂಡು ಕೊಂಡಿದ್ದೇನೆ.

ಸಾಹಿತ್ಯಿಕ ಸಂದರ್ಭಗಳಲ್ಲಿ ನಿಯಮಾವಳಿಗಳ ಕಟ್ಟುಪಾಡುಗಳನ್ನು ಕಿತ್ತೊಗೆಯ ಬೇಕೆಂಬುದೇ ಶ್ರೀಕೃಷ್ಣ ಅವರ ನಿಲುವಾಗಿತ್ತು. ಒಮ್ಮೆ ಅವಕಾಶ ಮಾಡಿಕೊಟ್ಟಂಥ ಕವಿಗಳನ್ನು ಮತ್ತೆ ಮತ್ತೆ ಆಹ್ವಾನಿಸಬಾರದು ಎಂಬ ಒಂದು ತತ್ತ್ವದ ಮೇರೆಗೆ, ಒಂದು ವರ್ಷದ ದಸರಾ ಕವಿ ಸಮ್ಮೇಳನದ ಸಂದರ್ಭದಲ್ಲಿ, ಹೆಸರಾಂತ ಕವಿಗಳು ಕೆಲವರಾದರೂ ಇರದಂತಾಗಿಬಿಟ್ಟು, ಆ ಕವಿ ಸಮ್ಮೇಳನ ಹೆಚ್ಚಿನ ಪ್ರಭಾವವನ್ನೇನೂ ಬೀರಲಾರದೆ ಹೋಯಿತು. ಸಂಘಟಕರು ಶ್ರೀಕೃಷ್ಣ ಅವರ ಅಸಮಾಧಾನದ ಬಿರುನುಡಿಗಳನ್ನೇ ಕೇಳಬೇಕಾಗಿ ಬಂತು. ಮುಂದೆ ಅವರೇ ಆ ಸಂಬಂಧವಾದ ಸಮಿತಿಯ ಸದಸ್ಯರಾದಾಗ, ಈ ತತ್ತ್ವವನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿ, ಒಂದಿಷ್ಟು ಪ್ರಮಾಣದಲ್ಲಿ ಹಳಬರೂ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಲು ಕಾರಣರಾದರು. ಗುಣಮಟ್ಟಕ್ಕೆ ಒತ್ತು ನೀಡುವ ಅವರ ಮನೋಧರ್ಮಕ್ಕೆ ಇದೂ ಒಂದು ನಿದರ್ಶನವೆಂದು ನಾನು ಭಾವಿಸಿದ್ದೇನೆ.

ತಮ್ಮ ಸಾಹಿತ್ಯಿಕ ಸಾಧನೆಯಿಂದ ಮಾತ್ರವಲ್ಲದೆ, ವ್ಯಕ್ತಿತ್ವದ ವೈಶಿಷ್ಟ್ಯದಿಂದಲೂ ಶ್ರೀಕೃಷ್ಣ ಜನರ ಗಮನವನ್ನು ಸೆಳೆಯುತ್ತಿದ್ದರು. ಎಲ್ಲಿಯಾದರೂ 'ದ್ವಾರವನ್ನು, ಭೇದಿಸಿಕೊಂಡು' ಹೋಗಬಲ್ಲವರಾಗಿದ್ದರು, ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಅವರ ವ್ಯಕ್ತಿತ್ವದ ಈ ಮುಖದ ಪರಿಚಯ ನನಗೆ ಆಯಿತು. ಸಮ್ಮೇಳನದಲ್ಲಿ ನಿಜಕ್ಕೂ ಆಸಕ್ತಿಯನ್ನು ಹೊಂದಿದ್ದ ಹಲವಾರು ಸಾಹಿತಿಗಳಿಗೆ ವಿದ್ವಾಂಸರಿಗೆ ಆಹ್ವಾನಪತ್ರ ಮತ್ತು ಪ್ರವೇಶಪತ್ರಗಳು ದೊರೆತಿರಲಿಲ್ಲ. ಇದರಿಂದ ಅವರು ಬೇಸರಗೊಂಡಿದ್ದ ಸಂಗತಿ ಶ್ರೀಕೃಷ್ಣ ಅವರಿಗೆ ತಿಳಿದಾಗ, ಅವರು ನೇರವಾಗಿ ಸಮ್ಮೇಳನದ ಕಛೇರಿಗೆ ನುಗ್ಗಿ, ಅಲ್ಲಿಯ ಅಧಿಕಾರಿಗಳೊಂದಿಗೆ ವಾದಿಸಿ, ಅವರ ಬಳಿ ಇದ್ದ ಆಹ್ವಾನ ಪತ್ರಿಕೆಗಳನ್ನು ಮತ್ತು ಪ್ರವೇಶ ಪತ್ರಗಳನ್ನು 'ಕಸಿದು'ಕೊಂಡು, ಆಸಕ್ತರಾಗಿದ್ದ ಆ ಸಾಹಿತಿಗಳಿಗೆ ವಿದ್ವಾಂಸರಿಗೆ

ಹಂಚಿಬಿಟ್ಟರಂತೆ. ಇದರಿಂದಾಗಿ, ಸ್ವಲ್ಪಮಟ್ಟಿನ ಅವ್ಯವಸ್ಥೆಯೂ ಉಂಟಾಯಿತು ಎಂಬುದನ್ನು ನಾನು ಬಲ್ಲೆ. ಪೂರ್ವನಿರ್ಧಾರಿತ ಕಾರ್ಯಕ್ರಮದಿಂದಾಗಿ, ವಿಶ್ವಕನ್ನಡ ಸಮ್ಮೇಳನದ ಹಿಂದಿನ ದಿವಸ ಪ್ರವೇಶ ಪತ್ರವನ್ನು ಪಡೆದುಕೊಳ್ಳಲಾಗದ ನಾನು, ಅಧಿಕೃತ ಪ್ರಬಂಧ ಮಂಡಕನೇ ಆಗಿದ್ದರೂ, 'ಕಾರ್ಯಕರ್ತ' ಎಂಬ ಪ್ರವೇಶ ಪತ್ರವನ್ನು ಪಡೆದುಕೊಂಡು ಹೋಗಬೇಕಾಯಿತು. ಇಷ್ಟಾಗಿಯೂ ಈ ಪ್ರಸಂಗ ಶ್ರೀಕೃಷ್ಣ ಅವರ ಛಾತಿಯ ನಿದರ್ಶನವೇ ಆಗಿದೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಕೃಷ್ಣ ಅವರು ಮಾಡಿದ ಏಕೈಕ ಅನುವಾದ 'ಡೋಗ್ರೀ ಮತ್ತು ಪಹಾರೀ ಗೀತೆಗಳು'. ಆ ಸಂದರ್ಭದಲ್ಲಿ ನಾನು ಅವರನ್ನು ಕೇಳಿದೆ: "ಅಂತೂ ಅನುವಾದದ ಕ್ಷೇತ್ರಕ್ಕೆ ಬಂದಿರಿ! ನಿಮ್ಮ ಸ್ವಂತ ಕೃತಿಗಳ ರಚನೆಗೆ ಬಿಡುವು ಸಾಲದು ಅನ್ನುತ್ತಿದ್ದಿರಲ್ಲ? ಅದರಲ್ಲಿ ನಿಮ್ಮನ್ನು ಸೆರೆಹಿಡಿಯುವಂಥದೇನಿತ್ತು?" ಅವರೆಂದರು: "ಅದರ ಜಾನಪದ ಸತ್ವ ಮತ್ತು ತಾಜಾತನ ನನ್ನ ಮನಸ್ಸನ್ನು ಸೂರೆಗೊಂಡಿತು. ಆಗುಣಗಳಿಗೆ ಲೋಪ ಬರದಂತೆ, ಆ ಗೀತೆಗಳನ್ನು ಕನ್ನಡಕ್ಕೆ ಅಳವಡಿಸುವ ಪ್ರಯತ್ನ ಮಾಡಿದ್ದೇನೆ. ಅದರಲ್ಲಿ ಎಷ್ಟರಮಟ್ಟಿಗೆ ನಾನು ಯಶಸ್ವಿಯಾಗಿದ್ದೇನೆ ಎಂಬುದನ್ನು ನಿಮ್ಮಂಥವರು ಹೇಳಬೇಕು." ಆ ಅವಕಾಶ ನನಗೆ ದೊರೆಯಲೇ ಇಲ್ಲ. ಶ್ರೀಕೃಷ್ಣ ನನಗೆ ಕೊಡಲು ಮರೆತ ಕೃತಿ ಅದು! ಇತರ ಮೂಲಗಳಲ್ಲಿಯೂ ಅದು ನನ್ನ ಕಣ್ಣು ತಪ್ಪಿಸಿಯೇ ಇದೆ. ಈ ಸಂಗತಿ ಈಗ ನನ್ನ ವಿಷಾದವನ್ನು ಮತ್ತಷ್ಟು ತೀವ್ರವಾಗಿಸಿದೆ.

ರಾಷ್ಟ್ರ ಮಟ್ಟದಲ್ಲಿ ಕನ್ನಡದ ಕೀರ್ತಿಪ್ರತಿಷ್ಠೆಗಳಿಗೆ ಕಾರಣರಾದ ಕೆಲವೇ ಸಾಹಿತಿಗಳಲ್ಲಿ ಒಬ್ಬರಾಗಿದ್ದ ಶ್ರೀಕೃಷ್ಣ ಇಂಥ ಹಲವಾರು ವೈಶಿಷ್ಟ್ಯಗಳ ಸಂಗಮವೇ ಆಗಿದ್ದರು. ಅವರಿಂದ ಇನ್ನೂ ಬಹಳಷ್ಟು ಸಾಧನೆಗಳನ್ನು ಕನ್ನಡ ಸಾಹಿತ್ಯಲೋಕ ನಿರೀಕ್ಷಿಸುತ್ತಿದ್ದ ಕಾಲದಲ್ಲಿಯೇ ಆ ಉತ್ಸಾಹದ ಚಿಲುಮೆ ಇಂಗಿಹೋಗುವಂತಾದದ್ದು ನಿಜಕ್ಕೂ ನಮ್ಮೆಲ್ಲರ ದೌರ್ಭಾಗ್ಯ.

ಧರ್ಮ ಧರ್ಮಗಳಲ್ಲಿ ಜಗಳ ಸಲ್ಲದು. ಆದರೆ ಎಲ್ಲ ಧರ್ಮಗಳು ಅಧರ್ಮದ ವಿರುದ್ಧ ಹೋರಾಡಬೇಕು.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ॥ ಎ. ಎನ್. ಮೂರ್ತಿರಾವ್

ಮುಂದುವರಿದುದು

ನಾನು ಯುವಕನ ಧೈರ್ಯವನ್ನು ಮೆಚ್ಚಿದೆ. ಅದಕ್ಕಿಂತ ಹೆಚ್ಚಾಗಿ "ಆಂಗ್ಲನಿಗೆ ತಕ್ಕ ಶಾಸ್ತಿಯಾಯಿತಲ್ಲ!" ಎಂದುಕೊಂಡು ನಾನು ಪಟ್ಟ ಆನಂದ ಅಷ್ಟಿಷ್ಟಲ್ಲ. ಖುಷಿಯಿಂದ ಬಾಯಿ ಚಪ್ಪರಿಸಿಕೊಂಡು ಆ ಕಥೆಯನ್ನು ನನ್ನ ಸ್ನೇಹಿತರಿಗೆಲ್ಲ ಹೇಳಿದೆ. ಅವರು ಮೈಯೆಲ್ಲ ಕಿವಿಯಾಗಿ ಕೇಳಿದರು. ನಾವೆಲ್ಲ ಅಹಿಂಸಾ ತತ್ವಕ್ಕೆ ಒಪ್ಪಿಗೆ ಕೊಟ್ಟವರು. ಆದರೆ "ಯುವಕ ಒಂದೆರಡು ಏಟು ಕೊಟ್ಟಿದ್ದರೆ ಸಾಕಾಗಿತ್ತು" ಎಂಬ ಭಾವನೆ ಬರಲೇ ಇಲ್ಲ. ನಮಗಾದ ಸಂತೋಷ "ಆ ಯುವಕ ಭಾರತೀಯರ ಆತ್ಮಗೌರವ ಉಳಿಸಿದ" ಎಂದಲ್ಲ; ಆಂಗ್ಲನಿಗೆ ಪೆಟ್ಟು ಬಿತ್ತಲ್ಲ ಎಂದು. ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲದಲ್ಲಿ ನಮ್ಮೆಲ್ಲರ ಒಳಮನಸ್ಸಿನಲ್ಲೂ ಬ್ರಿಟಿಷರಿಗೆ ಸೋಲಾಗಲೆಂಬ ಆಸೆ. ಹಿಟ್ಲರ್ ಗೆದ್ದರೆ ಅದರ ಪರಿಣಾಮವೇನು ಎಂಬ ಪ್ರಶ್ನೆ ಮನಸ್ಸಿಗೆ ಬರಲೇ ಒಲ್ಲದು. ಬ್ರಿಟಿಷರು ಸೋತು ಮಣ್ಣು ಮುಕ್ಕಿದರೆ ಸಾಕು! ಆಮೇಲೆ ಏನಾದರೂ ಆಗಲಿ!

೧೯೮೧ರಲ್ಲಿ ನಾನು ಕೆನ್ಯ ದೇಶದ ರಾಜಧಾನಿ ನೈರೋಬಿಯಲ್ಲಿದ್ದೆ. ಒಂದು ದಿನ ಟಿ. ವಿ. ಯಲ್ಲಿ 'The Rise and Fall of Idi Amin' ಎಂಬ ಚಿತ್ರವನ್ನು ನೋಡಿದೆ. ಅದರಲ್ಲಿ ಒಂದು ದೃಶ್ಯ: ಇದಿ ಅಮೀನ್ ಜಬರ್ದಸ್ತಾಗಿ ಪಲ್ಲಕ್ಕಿಯಲ್ಲಿ ಕೂತು ಹೋಗುತ್ತಿದ್ದಾನೆ. ಪಲ್ಲಕ್ಕಿಯನ್ನು ಹೊತ್ತಿದ್ದವರು ನಾಲ್ಕು ಜನ ಆಂಗ್ಲರು. ಸಹಮಾನವರು ಹೊತ್ತ (ಅಥವಾ ಎಳೆಯುವ) ವಾಹನದಲ್ಲಿ ಕೂರುವುದೆಂದರೆ ನನಗೆ ಅಸಹ್ಯ. ಆದರೆ ಆ ದೃಶ್ಯವನ್ನು ನೋಡಿದಾಗ ನನಗೆ ಒಂದು ಬಗೆಯ ತೃಪ್ತಿ.

ಇವೆರಡು ಸಂದರ್ಭಗಳಲ್ಲೂ ನಾನು ಪಟ್ಟ ಸಂತೋಷ ಪಡಬಾರದ್ದು —ಗಾಂಧೀಜಿಯವರ ದೃಷ್ಟಿಯಲ್ಲಿ. ಆದರೆ ನಾನು ಸಂತೋಷ

ಪಟ್ಟದ್ದೇನೋ ಉಂಟು. ಈಗಲೂ ನನ್ನ ಮನಸ್ಸಿನಲ್ಲಿ "ಹೆಮ್ಮೆಯಿಂದ ಬೀಗುವ ಬ್ರಿಟಿಷ ರಿಗೆ ಹೀಗಾಗಬೇಕು" ಎಂಬ ಸೇಡುನಾರಿ ಸಂತೋಷ ಮತ್ತು 'ಇದು ಸಣ್ಣತನ' ಎಂಬ ಭಾವನೆ—ಎರಡೂ ಒಟ್ಟಿಗೆ ಕಾಣಿಸಿಕೊಳ್ಳುತ್ತವೆ.

ಟ್ಯೂಟರ್ ಗಿರಿ

ನಾನು ಎರಡನೆಯ ಎಂ. ಎ. ಕ್ಲಾಸಿನಲ್ಲಿದ್ದಾಗ ಪ್ರೊ॥ ರಾಲೊ ಆರು ತಿಂಗಳು ರಜ ತೆಗೆದುಕೊಂಡು ಇಂಗ್ಲೆಂಡಿಗೆ ಹೋದರು. ಇಂಥ ಸಂದರ್ಭಗಳಲ್ಲಿ ರಜ ಪಡೆದವರ ಇಲಾಖೆಯಲ್ಲಿ ಕೆಳಗಿನ ಅಧ್ಯಾಪಕರಿಗೆ ಹಂಗಾಮಿಯಾಗಿ ಬಡತಿ ಕೊಟ್ಟು ಕೊನೆಯ ಸ್ಥಾನಕ್ಕೆ (ಟ್ಯೂಟರ್ ಸ್ಥಾನಕ್ಕೆ) ಎಂ. ಎ. ಕ್ಲಾಸಿನಲ್ಲಿದ್ದು ಹೆಚ್ಚು ನಂಬರು ಗಳಿಸಿದ್ದವ ನನ್ನು ನೇಮಿಸುತ್ತಿದ್ದರು. ಆಗ ಪ್ರಿನ್ಸಿಪಲ್ ಆಗಿದ್ದ ಎಸ್. ಎಸ್. ಸುಬ್ಬರಾಯರನ್ನು ನಾನುಕಂಡು "ಟ್ಯೂಟರ್ ಹುದ್ದೆಯನ್ನು ಭರ್ತಿ ಮಾಡುತ್ತೀರ" ಎಂದು ಕೇಳಿದೆ. ಅವರು ಅರ್ಧ ಗಜ ಕಾಗದವನ್ನು ನನ್ನ ಕಡೆಗೆ ತಳ್ಳಿ "ಅರ್ಜಿ ಬರಿ" ಎಂದರು. ಅಲ್ಲೇ ಕುಳಿತು ಬರೆದುಕೊಟ್ಟೆ. ಅದರ ಮೇಲೆ ಕಣ್ಣಾಡಿಸಿ "From to-morrow, Moorthy Rao, come with a turban" (ನಾಳೆಯಿಂದ ರುಮಾಲು ಹಾಕಿಕೊಂಡು ಬಾ) ಎಂದರು. ಅಷ್ಟು ಸರಳವಾಗಿ ೮–೧೦ ನಿಮಿಷಗಳೊಳಗಾಗಿ ನೇಮಕ ನಡೆಯು ವುದು ಸಾಧ್ಯವಿತ್ತು, ಆ ಕಾಲದಲ್ಲಿ. ಈಗಲೂ ಹಾಗೆ ನಡೆಯುವುದು ಸಾಧ್ಯವೋ ಏನೊ—ನನಗೆ ತಿಳಿಯದು. ವಿಶ್ವವಿದ್ಯಾಲಯದ ಕಚೇರಿಯಿಂದ ನನಗೆ ಆರ್ಡರು ಬಂದದ್ದು ಸುಮಾರು ಒಂದು ತಿಂಗಳ ಮೇಲೆ.

ಟ್ಯೂಟರನ ಕೆಲಸ: ಆ ಇಲಾಖೆಯ ಪ್ರಾಧ್ಯಾಪಕರೋ ಅಧ್ಯಾಪಕರೋ ಹುಡುಗ ರಿಂದ ಬರೆಸಿದ ಪ್ರಬಂಧಗಳನ್ನು ತಿದ್ದಿ, ಅವರು (ಹುಡುಗರು) ಮಾಡಿದ್ದ ತಪ್ಪುಗಳನ್ನು ತೋರಿಸುವುದು; ಅವು ತಪ್ಪು ಎನ್ನುವುದಕ್ಕೆ ಕಾರಣವೇನು, ವ್ಯಾಕರಣದ ಯಾವ ನಿಯಮದ ಉಲ್ಲಂಘನೆ ನಡೆದಿದೆ, ಸರಿಪಡಿಸುವುದು ಹೇಗೆ, ಇದೆಲ್ಲವನ್ನೂ ಹುಡುಗರಿಗೆ ತಿಳಿಸುವುದು. ಒಂದೊಂದು ತರಗತಿಯಲ್ಲೂ ಸುಮಾರು ೨೫೦ ಜನ ಹುಡುಗರು! ಆದ್ದರಿಂದ ವಿವರಣೆಯನ್ನೆಲ್ಲ ತರಗತಿಯಲ್ಲೇ ಕೊಡಬೇಕು; ಹುಡುಗರನ್ನು ಒಬ್ಬೊಬ್ಬ ರನ್ನೇ ಕರೆದು ಬೋಧಿಸುವುದು ಅಸಾಧ್ಯ. ಇದಕ್ಕಾಗಿ ವಾರಕ್ಕೋ ಪಕ್ಷಕ್ಕೋ ಒಂದು ಘಂಟೆ ಮೀಸಲು. ಆಗಿಂದಾಗ ರಾಲೊ ಈ ಕೆಲಸವನ್ನು ತಾವೇ ಮಾಡುತ್ತಿದ್ದರು. ದೋಷವನ್ನು ಬೆದಕುವ ಈ ಕೆಲಸ ಅವರ ಕೈಯಲ್ಲಿ ಹಾಸ್ಯದ ಹಬ್ಬವಾಗುತ್ತಿತ್ತು. ನಾನು ಅವರ ಮೇಲುಪಂಕ್ತಿಯನ್ನು ಅನುಸರಿಸಿದೆ. ತಪ್ಪುಗಳ ಮೇಲೆ ವ್ಯಾಖ್ಯಾನ ಮಾಡುವುದೇನೋ ಹಿತವೇ; ಆದರೆ ಕೂತು ತಿದ್ದುವುದು ಮಾತ್ರ ಬಲು ಬೇಸರದ ಕೆಲಸ. ನಾನು ಅಧ್ಯಾಪಕನಾದ ಮೇಲೆ ಎಂ. ಎ. ಮತ್ತು ಆನರ್ಸ್ ಕ್ಲಾಸ್‌ಗಳ ಹುಡುಗರನ್ನು ಎದುರಿಗೇ ಕೂರಿಸಿಕೊಂಡು ಆ ಕೆಲಸ ಮಾಡುತ್ತಿದ್ದೆ. ಆ ಮಟ್ಟದಲ್ಲಿ ವ್ಯಾಕರಣ ಮಾತ್ರವಲ್ಲದೆ ಅಭಿಪ್ರಾಯಗಳೂ ಥಿಯರಿಗಳೂ ಚರ್ಚೆಗೆ ಬರುತ್ತಿದ್ದವಾದ್ದ ರಿಂದ ಕೆಲಸ ಹಿತವಾಗುತ್ತಿತ್ತು.

ಟ್ಯೂಟರಾಗಿದ್ದ ಕಾಲದಲ್ಲಿ ನಾನು ಇತ್ತ ವಿದ್ಯಾರ್ಥಿ, ಅತ್ತ ಮೇಷ್ಟರು. ಮೇಷ್ಟ ರಾದವನು ವಿದ್ಯಾರ್ಥಿಗೆ ಸಹಜವಾದ ಬೇಜವಾಬ್ದಾರಿ ಚೆಲ್ಲಾಟವನ್ನು ಹದದಲ್ಲಿಟ್ಟು

ಕೊಂಡು ಗಂಭೀರವಾಗಿ ವರ್ತಿಸಬೇಕು—ಇದು ಆ ಕಾಲದ ಸಂಪ್ರದಾಯ, ಒಂದು ಮಿತಿಯಲ್ಲಿ ಒಪ್ಪಬಹುದಾದ ಸಂಪ್ರದಾಯ. ಅದನ್ನು ಅನುಸರಿಸುವುದು ಅವಶ್ಯಕ, ಆದರೆ ನನ್ನಂಥವನಿಗೆ ಸ್ವಲ್ಪ ಕಷ್ಟ. ಯೌವನ ಸಹಜವಾದ ಅವಿಧ್ಯುಕ್ತ ನಡತೆಯನ್ನು ಬದಿಗಿಟ್ಟು ಗಂಭೀರವಾಗಿ ವರ್ತಿಸುವುದು ಹಿಂದಿನ ತಲೆಮಾರಿನವರಿಗೆ ಸುಲಭವಾಗಿದ್ದಂತೆ ಕಾಣುತ್ತದೆ. ಅವರು ಸಮವಯಸ್ಕರೊಡನೆ ಇದ್ದಾಗ, ಶಿಷ್ಯರು ಎದುರಿಗೆ ಇಲ್ಲದಿದ್ದಾಗ, ಬಿಗುಮಾನವನ್ನು ಮರೆಯುತ್ತಿದ್ದರೋ ಏನೊ. ನನ್ನ ಗುರುಗಳ ಪೈಕಿ ಗತ್ತುಗಾಂಭೀರ್ಯಗಳನ್ನು ಯಶಸ್ವಿಯಾಗಿ ಕಾಪಾಡಿಕೊಂಡವರೆಂದರೆ: ಎನ್. ಎಸ್. ಸುಬ್ಬರಾಯರು, ಎ. ಆರ್. ವಾಡಿಯ (ತತ್ವಶಾಸ್ತ್ರದ ಪ್ರಾಧ್ಯಾಪಕರು) ಮತ್ತು ಬಿ. ಎಂ. ಶ್ರೀಕಂಠಯ್ಯನವರು. ರಾಧಾಕೃಷ್ಣನ್ ತಮ್ಮ ಶಿಷ್ಯರೊಡನೆ ಯಾವಾಗಲೂ ಸಲಿಗೆಯಿಂದಲೇ ವರ್ತಿಸುತ್ತಿದ್ದರು. ಕಾರಿಡರ್‌ನಲ್ಲಿ ತಮ್ಮ ಅಂತಸ್ತಿನ ಸಹೋದ್ಯೋಗಿಗಳೊಡನೆ ಹೋಗುತ್ತಿದ್ದಾಗಲೂ ಶಿಷ್ಯರು ಎದುರಿಗಿದ್ದಾಗಲೂ ಅವರು ತಮಗೆ ಸಹಜವಾದ ಹಾಸ್ಯಕುಚೋದ್ಯಗಳಿಗೆ ತಡೆಹಾಕುವ ಗೋಜಿಗೆ ಹೋಗುತ್ತಿರಲಿಲ್ಲ.

ರಾಜ್ಯಶಾಸ್ತ್ರದ ಪ್ರೊಫೆಸರಾದ ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರು (ಅವರು ಎಲ್ಲರಿಗೂ 'ಎಸ್. ವಿ. ಕೆ') ಕಾಲೇಜಿನ ಎಲ್ಲ ಚಟುವಟಿಕೆಗಳಲ್ಲೂ—ನಾಟಕ, ಸಂಗೀತ ಗೋಷ್ಠಿಗಳು, ರೋವರ್ ಕ್ಯಾಂಪುಗಳು, ವಿದ್ಯಾರ್ಥಿಗಳು ಏರ್ಪಡಿಸಿದ ಸಂತೋಷಕೂಟಗಳು—ಎಲ್ಲದರಲ್ಲೂ ಹುಡುಗರೊಡನೆ ಹುಡುಗರಾಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅಲ್ಲದೆ, ನಾಟಕದಲ್ಲಿ ಪಾತ್ರವಹಿಸುವವರಿಗೆ ಬಣ್ಣ ಬಳಿಯುವುದರಿಂದ ಹಿಡಿದು ರೋವರ್ ಕ್ಯಾಂಪುಗಳಲ್ಲಿ ಅಡಿಗೆ ಮಾಡುವವರೆಗೆ "ಇದು ಪ್ರೊಫೆಸರಾದವನಿಗೆ ಅನುಚಿತ" ಎಂಬ ಹಿಂಜರಿಕೆಯೇನೂ ಇಲ್ಲದೆ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ಅವರು ತಮ್ಮ ಶಿಷ್ಯರಿಗೆಲ್ಲ ಚಿಕ್ಕಪ್ಪನೋ ದೊಡ್ಡಪ್ಪನೋ ಆಗಿದ್ದಿರಬಹುದು—ಅಷ್ಟು ವಿಶ್ವಾಸ, ಅಷ್ಟು ಸಲಿಗೆ! ಅದು ಶಿಸ್ತಿಗೆ ಭಂಗ ತರಲಿಲ್ಲ. ಅವರ ಶಿಷ್ಯರು ಮಾತ್ರವಲ್ಲ, ಕಾಲೇಜಿನ ಯಾವನೊಬ್ಬ ವಿದ್ಯಾರ್ಥಿಯಾಗಲಿ ಎಂದೂ ಅವರ ಮಾತನ್ನು ಕಡೆಗಣಿಸಿದ್ದಿಲ್ಲ. ಅವರು ಕೋಪಗೊಂಡು ತಮ್ಮ ಕೀರಲು ದನಿಯಲ್ಲಿ ಒಂದು ಕೂಗು ಹಾಕಿದರೆ ಸಾಕು—ಸಭೆಗಳಲ್ಲಿ ಎಷ್ಟು ಗಲಭೆಯಿದ್ದರೂ ಅದು ಕ್ಷಣಮಾತ್ರದಲ್ಲಿ ತಣ್ಣಗಾಗುತ್ತಿತ್ತು. ಗತ್ತುಗಾಂಭೀರ್ಯಗಳೇನೂ ಇಲ್ಲದೆ ಅವರು ವಿದ್ಯಾರ್ಥಿಗಳೆಲ್ಲರನ್ನೂ ವಶಪಡಿಸಿಕೊಂಡಿದ್ದರು!

ಎನ್. ಎಸ್. ಸುಬ್ಬರಾಯರ ದೃಷ್ಟಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಅರಿಯದ ಹುಡುಗರು, ತಿಳಿವಳಿಕೆ ಸಾಲದ ಬಚ್ಚಾಗಳು. ಅವರು ಆಗಾಗ ಸಲಿಗೆಯಿಂದ ಮಾತಾಡುತ್ತಿದ್ದರಾದರೂ ಸುಲಭಕೋಪಿಗಳು. ಆದ್ದರಿಂದ ಹುಡುಗರಿಗೆ ಅವರನ್ನು ಕಂಡರೆ ಹೆದರಿಕೆ. ಬಿ. ಎಂ. ಶ್ರೀಕಂಠಯ್ಯನವರಿಗೆ "ವಿದ್ಯಾರ್ಥಿಗಳಿಗೆ ಪ್ರೊಫೆಸರುಗಳ ವಿಷಯದಲ್ಲಿ ಇರಬೇಕಾದಷ್ಟು ಗೌರವವಿಲ್ಲ" ಎಂಬ ಶಂಕೆಯಿದ್ದಂತೆ ತೋರುತ್ತಿತ್ತು. ಅವರು ತಮ್ಮ ಬಿಗುಮಾನವನ್ನು ಎಂದೂ ಸಡಿಲಿಸುತ್ತಿರಲಿಲ್ಲ. ಗಂಭೀರವ ಗೌರವಮ್ಮ ಎಂದರೆ—ಬಿ. ಎಂ. ಶ್ರೀ! ಅವರೊಡನೆ ನಾನು ಅಳುಕಿಲ್ಲದೆ ಮಾತಾಡಲಾರಂಭಿಸಿದ್ದು ಅಧ್ಯಾಪಕನಾಗಿ ಕೆಲವು ವರ್ಷ ಕಳೆದ ಮೇಲೆ! ಗತ್ತುಗಾಂಭೀರ್ಯಗಳಲ್ಲಿ ಬಿ. ಎಂ. ಶ್ರೀ. ಅವರಿಗೆ ಸರಿಸಮ ಎನ್ನಬಹುದಾದವರು—ಪ್ರೊ|| ವಾಡಿಯ.

ಹೊಸದಾಗಿ ಉಪಾಧ್ಯಾಯ ವರ್ಗಕ್ಕೆ ಸೇರಿದ ನನಗೆ ನನ್ನ ಗುರುಗಳ ಪೈಕಿ ಮಾದರಿಯಾಗಬಹುದಾದವರು ಯಾರು? ಮೇಲೆ ಹೆಸರಿಸಿದವರೆಲ್ಲರಿಗಿಂತಲೂ ಹೆಚ್ಚಾಗಿ ನಾನು ಮೆಚ್ಚಿಕೊಂಡಿದ್ದವರು—ಪ್ರೊ॥ ಜೆ. ಸಿ. ರಾಲೊ. ಠೀವಿ, ಗತ್ತು, ಶ್ರೀಮದ್ ಗಾಂಭೀರ್ಯ ಇತ್ಯಾದಿಗಳು ಎಂದೂ ಅವರ ಬಳಿ ಸುಳಿದದ್ದಿಲ್ಲ. ಪಾಠ ಹೇಳಿದ ಮೇಲೆ ವೇದಿಕೆಯಿಂದ ಕಿಟಕಿಗೆ ದಾಪುಗಾಲು ಹಾಕಿ ಕಾರಿಡರ್‌ಗೆ ನೆಗೆಯಬಲ್ಲವರು—ರಾಲೊ! ಅವರ ಅವಿಧ್ಯುಕ್ತ ನಡವಳಿಕೆ, ಮಾತುಗಾರಿಕೆ, ಹಾಸ್ಯ ಇವೆಲ್ಲ ನನ್ನ ಮನೋಧರ್ಮಕ್ಕೆ ಹಿತ. ತರಗತಿಯಲ್ಲಿರುವಾಗ ರಾಲೋವಿನಂತೆ, ಹೊರಗೆಲ್ಲ ಎಸ್. ವಿ. ಕೆ.ಯಂತೆ ನಡೆದು ಕೊಳ್ಳಬೇಕೆಂದು ತೀರ್ಮಾನಿಸಿದೆ.

ಎಸ್. ವಿ. ಕೆ.ಯಂತೆ ನಡೆದುಕೊಳ್ಳುವುದು ನನಗೆ ಕಷ್ಟವೇ ಆಯಿತು. ಅದಕ್ಕೆ ಮುಖ್ಯ ಕಾರಣ: ನನಗೆ ಸಾಕಾದಷ್ಟು ಆತ್ಮವಿಶ್ವಾಸವಿರಲಿಲ್ಲ. ನನ್ನ ಎತ್ತರ ಕೇವಲ ಐದು ಅಡಿ ಮೂರೂವರೆ ಅಂಗುಲ. ಇದು ನನ್ನ ಮೇಲೆ ಅಳಿಸಲಾಗದಂತೆ ಹುಡುಗುತನದ ಮುದ್ರೆಯನ್ನು ಒತ್ತಿಬಿಟ್ಟಿತ್ತು! ತರಗತಿಗೆ ಹೋದರೆ ಹುಡುಗರು ತಮಗಿಂತ ಕಿರಿಯನಂತೆ ಕಾಣುತ್ತಿದ್ದ ನನ್ನನ್ನು ಹೇಗೆ ತಾನೆ ಗೌರವಿಸಿಯಾರು! ಮುಂದೆ ನಾನು ಲೆಕ್ಚರರ್ ಆಗಿ ತೀ. ನಂ. ಶ್ರೀಕಂಠಯ್ಯ (ಅವರೂ ಎರಡು ಮೂರು ತಿಂಗಳು ನನ್ನ ಪಾಠ ಕೇಳಿದವರು!) ನನ್ನ ಸ್ನೇಹಿತರಾದ ಮೇಲೆ ಅವರು ನನ್ನನ್ನು ಆಪಾದಮಸ್ತಕ ನೋಡಿ "How can anybody look up to you!" ಎಂದು ಹಾಸ್ಯ ಮಾಡುತ್ತಿದ್ದದ್ದು ನೆನಪಿದೆ.

ಇದಲ್ಲದೆ, ನಾನು ವಿದ್ಯಾರ್ಥಿಯೂ ಹೌದು, ಮೇಷ್ಟರೂ ಹೌದು; ಎಡಬಿಡಂಗಿ! ಇಲಕ್ಯೂಷನ್ (elocution) ಸ್ಪರ್ಧೆಗಳಲ್ಲಿ, ಭಾಷಣ ಸ್ಪರ್ಧೆಗಳಲ್ಲಿ, ಚರ್ಚಾ ಕೂಟಗಳಲ್ಲಿ ಭಾಗವಹಿಸಿ ನಾನು ಅನೇಕ ವೇಳೆ ವೇದಿಕೆಯ ಮೇಲೆ ನಿಂತದ್ದರಿಂದಾಗಿ ಹುಡುಗರಿಗೆಲ್ಲ ನಾನು ಇನ್ನೂ ಎಂ. ಎ. ಓದುತ್ತಿರುವವನೆಂದು ತಿಳಿದಿತ್ತು. ಈಗ ಮೇಷ್ಟರ ವೇಷ ಹಾಕಿಕೊಂಡು ಅವರೆದುರಿಗೆ ನಿಂತರೆ ಕೀಟಲೆ ಕುಚೋದ್ಯಗಳಿಗೆ ಆಹ್ವಾನ ಕೊಟ್ಟಂತೆ! ರುಮಾಲು—ಹಿರಿತನದ ಲಾಂಛನ—ಸ್ವಲ್ಪ ಮಟ್ಟಿಗೆ ನನ್ನ ನೆರವಿಗೆ ಬಂತು. ನಾನು ಲೆಕ್ಚರರಾಗಿ ಮತ್ತೆ ಕಾಲೇಜಿಗೆ ಬರುವವರೆಗೂ ಅದನ್ನು ಬಳಸುತ್ತಿದ್ದು ಅನಂತರ ಅದಕ್ಕೆ ಬಿದಾಯ ಹೇಳಿದೆ. ಮಹಾರಾಜರ ಕಾಲೇಜಿನಲ್ಲಿ ಗೌನ್ ಇಲ್ಲದ, ರುಮಾಲಿಲ್ಲದ, ಹೊಸ ಯುಗಕ್ಕೆ ನಾನೇ ಪ್ರವರ್ತಕ ಎಂದು ಮುಂದಿನ ಇತಿಹಾಸಕಾರರು ಸಂದೇಹವಿಲ್ಲದೆ ಹೇಳಬಹುದು!

ನಾನು ರುಮಾಲನ್ನು ತ್ಯಜಿಸಿದ್ದು ಹಾಸ್ಯ ಸನ್ನಿವೇಶವೊಂದಕ್ಕೆ ಅವಕಾಶ ಕೊಟ್ಟಿತು. ಇದು ಸುಮಾರು ೧೯೩೦ರ ಮಾತು. ಇಪ್ಪತ್ತರ ದಶಕದಲ್ಲಿ ನಮ್ಮ ಕಾಲೇಜಿಗೆ ಹುಡುಗಿಯರು ಬರುತ್ತಿದ್ದದ್ದು ಅಪರೂಪ. ಮಹಾರಾಣಿ ಮಹಿಳೆಯರ ಕಾಲೇಜಿನಲ್ಲಿ ಕೂಡ (ನಾನು ಅಲ್ಲಿ ಪಾಠ ಹೇಳಲಾರಂಭಿಸಿದ್ದು ೧೯೨೭ರಲ್ಲಿ) ಇಂಟರ್ ಮೀಡಿಯೆಟ್ ಮತ್ತು ಬಿ. ಎ. ತರಗತಿಗಳಲ್ಲಿ ೧೫–೨೦ ಹುಡುಗಿಯರಿದ್ದರೆ ಹೆಚ್ಚು. ಮಹಾರಾಜರ ಕಾಲೇಜಿಗೆ ಹುಡುಗಿಯರು ಹೆಚ್ಚಾಗಿ ಬರಲಾರಂಭಿಸಿದ್ದು ಆನರ್ಸ್ ತರಗತಿಗಳು ಪ್ರಾರಂಭವಾದ ಮೇಲೆ. ೧೯೩೦ ಅಥವಾ ೩೧ರಲ್ಲಿರಬಹುದು—ಬೇಸಗೆ

ರಜ ಮುಗಿದು ಕಾಲೇಜು ಆಗತಾನೆ ತೆರೆದಿತ್ತು. ಮೊದಲ ದಿನ ಆನರ್ಸ್ ಕ್ಲಾಸಿಗೆ ಪಾಠ ಹೇಳಲು ಹೋದಾಗ ಅಲ್ಲಿ ಒಬ್ಬಳೇ ಒಬ್ಬ ಹುಡುಗಿ ಕುಳಿತಿದ್ದಳು. ಉಳಿದ ವಿದ್ಯಾರ್ಥಿಗಳು ಬರುವವರೆಗೂ ಕಾಲ ಕಳೆಯಬೇಕಲ್ಲ! ನಾನು ವೇದಿಕೆಯ ಮೇಲಿನ ಕುರ್ಚಿಯಲ್ಲಿ ಕೂರದೆ ಒಂದು ಡೆಸ್ಕಿನ ತುದಿಯ ಮೇಲೆ ಅರ್ಧ ಒರಗಿ ಅರ್ಧ ಕೂತು ಆಕೆಯೊಡನೆ ಮಾತು ಪ್ರಾರಂಭಿಸಿದೆ: "ನೀವು ಮೈಸೂರಿನವರೆ ಹೊರಗಿನವರೆ, ಇಂಟರ್ ಮಿಡಿಯೆಟ್ ಪರೀಕ್ಷೆಯನ್ನು ಯಾವ ಕಾಲೇಜಿನಿಂದ ಪಾಸು ಮಾಡಿದಿರಿ," ಇತ್ಯಾದಿ. ಅಧ್ಯಾಪಕರೆಲ್ಲ ಗೌನು ರುಮಾಲುಗಳನ್ನು ಹಾಕಿಕೊಂಡು ತರಗತಿಗೆ ಹೋಗುತ್ತಿದ್ದ ಕಾಲ. ನಾನು ಆ ಲಾಂಛನಗಳನ್ನು ಧರಿಸಿರಲಿಲ್ಲ. ಅಲ್ಲದೆ ಐದು ಅಡಿ ಮೂರೂವರೆ ಅಂಗುಲ (ಆ ಅರ್ಧ ಅಂಗುಲವನ್ನು ಮರೆಯುವಷ್ಟು ಶ್ರೀಮಂತನಲ್ಲ ನಾನು!) ಎತ್ತರದವನು. ಆಕೆ "ಇವನು ನನ್ನ ಸಹಪಾಠಿಯಾಗಲಿರುವವನು, ಸಲಿಗೆಯನ್ನು ಬೆಳಸುವ ಪ್ರಯತ್ನ ಮಾಡುತ್ತಿದ್ದಾನೆ" ಎಂದುಕೊಂಡಳು. ನನಗೆ 'ರಾಸ್ಕಾತ್ಮಕ ರೋಮಿಯೊ' ಪಟ್ಟವನ್ನು ಕಟ್ಟಿದಳು. ಇತರ ವಿದ್ಯಾರ್ಥಿಗಳು ಬಂದ ಮೇಲೆ ನಾನು ವೇದಿಕೆಯನ್ನು ಹತ್ತಿ ಪಾಠ ಪ್ರಾರಂಭಿಸಿದೆ; ಆಗ ಆಕೆ "ಓಹೋ, ಈ ಪ್ರಾಣಿ ಮೇಷ್ಟರು" ಎಂದು ಕೊಂಡು ತನ್ನಲ್ಲಿ ತಾನೇ ನಕ್ಕುಕೊಂಡಳು. ಇದನ್ನು ತನಗೆ ಪರಿಚಿತರಾದ ರಾಳ್ಳಪಲ್ಲಿ ಅನಂತಕೃಷ್ಣಶರ್ಮರೊಡನೆ ನಗುತ್ತ ಹೇಳಿಕೊಂಡಳು. ಅವರು ನನ್ನನ್ನೂ ಹಾಸ್ಯ ಮಾಡಿದಾಗಲೇ ಈ ವಿಷಯ ನನಗೆ ತಿಳಿದದ್ದು.

ನಾನು ಟ್ಯೂಟರಾಗಿದ್ದದ್ದು ಐದು ತಿಂಗಳು ಮಾತ್ರ. ಎಳೆಯ ನಿಂಬೇಕಾಯಿಯೋ ಹೌದಾದರೂ ಕೆಲಸವನ್ನು ತಕ್ಕಮಟ್ಟಿಗೆ ನಿರ್ವಹಿಸಿದೆನೆಂದು ನೆನಪು.

* * *

ತಂದೆಯ ಉತ್ತರಕ್ರಿಯೆ ಮುಗಿದ ಮೇಲೆ ನಾನು ಖಾಯಲೆ ಮಲಗಿದ್ದನ್ನೂ ಅನಾರೋಗ್ಯ ದೀರ್ಘಕಾಲ ಕಾಡಿದ್ದರಿಂದಾಗಿ ೧೯೨೪ರಲ್ಲಿ ಎಂ. ಎ. ಪರೀಕ್ಷೆಗೆ (ಒಂದು ಪೇಪರು ವಿನಾ) ಕೂರಲಾಗಲಿಲ್ಲ ಎಂಬುದನ್ನೂ ಹಿಂದೆ ಕಾಣಿಸಿದ್ದೇನೆ. ನಾನು ಎಂ. ಎ. ಮುಗಿಸಿದ್ದು ೧೯೨೫ರಲ್ಲಿ. ಆಗ ಕಾಲೇಜಿನಲ್ಲಿ ಕೆಲಸ ಯಾವುದೂ ಖಾಲಿ ಇರಲಿಲ್ಲ. ಆದರೆ ನಾನು ನಿರುದ್ಯೋಗಿಯಾಗಿ ಕಾಲಹಾಕಬೇಕಾಗಲಿಲ್ಲ. ಮೈಸೂರಿನಲ್ಲೇ ಮಹಾರಾಜರ ಹೈಸ್ಕೂಲಿನಲ್ಲಿ ಅಧ್ಯಾಪಕನ ಕೆಲಸ ಸಿಕ್ಕಿತು. ಸಂಬಳ: ೭೫ ರೂಪಾಯಿ. ಗ್ರೇಡು (೭೫–೧೦–೧೨೫) ಎಲ್ಲೋ ದೂರದಲ್ಲಿ ಮಿನುಗುತ್ತಿತ್ತು. ಅದರ ಅನಿಶ್ಚಿತತೆಯನ್ನು ನೆನೆದು ನಾನು ತಲೆ ಕೆಡಿಸಿಕೊಳ್ಳಲಿಲ್ಲ—ಆ ಕೆಲಸದಲ್ಲಿ ಹೆಚ್ಚು ಕಾಲ ನಿಲ್ಲುವುದಿಲ್ಲ ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದೆ. ಬಿ. ಎ. ಕ್ಲಾಸಿಗೆ ಸೇರಿದಂದಿನಿಂದಲೂ ನನ್ನ ಆಸೆ ಕಾಲೇಜಿನಲ್ಲಿ ಅಧ್ಯಾಪಕನಾಗಬೇಕೆಂದು. ಅದು ಸಾಧ್ಯವಾಗದಿದ್ದರೆ ಬೊಂಬಾಯಿಗೆ ಹೋಗಿ ಅಲ್ಲಿ ಯಾವುದಾದರೂ ಕೆಲಸ ಸಂಪಾದಿಸುವುದು; ಸಂಜೆಯ ಹೊತ್ತು ಲಾ ಕಾಲೇಜಿಗೆ ಹೋಗಿ ಎಲ್ ಎಲ್. ಬಿ. ಮಾಡಿಕೊಂಡು ಬಂದು ಲಾಯರಾಗುವುದು—ಇದು ನಾನು ಹಾಕಿಕೊಂಡಿದ್ದ ಯೋಜನೆ. ಕೂಡಲೆ ಬೊಂಬಾಯಿಗೆ ಹೋಗುವಂತಿಲ್ಲ. ಸಂಸಾರ ನಡಸಲು ಸ್ವಲ್ಪ ಹಣ ಕೂಡಿಟ್ಟು ಅನಂತರ ಹೊರಡಬೇಕು.

ಮುಂದಿನ ಕಾರ್ಯಕ್ರಮ ಏನಾದರೂ ಆಗಲಿ, ಸದ್ಯಕ್ಕೆ ಕೆಲಸ ಬೇಕಾಗಿತ್ತು, ಅದು ಸಿಕ್ಕಿತು. ಅದುವರೆಗೆ ನಾನು ಒಂದು ದೃಷ್ಟಿಯಿಂದ ನೋಡಿದರೆ—ನಿರಾಧಾರ ಪರಂಜ್ಯೋತಿ. ನನ್ನದಾಗಿ ಏನೂ ಸಂಪಾದನೆಯಿರಲಿಲ್ಲ. ಇದ್ದ ಅಲ್ಪ ಸ್ವಲ್ಪ ಪಿತ್ರಾರ್ಜಿತ ಆಸ್ತಿಯನ್ನು ಅವಲಂಬಿಸಿ ನಿಲ್ಲುವಂತಿಲ್ಲ—ನಮ್ಮ ಸಂಸಾರ ದೊಡ್ಡದು. ಟ್ಯೂಟರ್ ಗಿರಿ ನಿಂತ ಮೇಲೆ ಮನಸ್ಸಿನಲ್ಲಿ ಒಂದು ಬಗೆಯ ಶಂಕೆಯಿತ್ತು : ಸಂಸಾರವನ್ನು ನಿರ್ವಹಿಸುವುದು ಹೇಗೆ? ಕೆಲಸ ಸಿಕ್ಕದಿದ್ದರೆ ಏನುಗತಿ ಎಂದು. ಈಗ ಆ ಭಯವಿಲ್ಲ. ಕಾಲೇಜಿನ ಕೆಲಸ ಸಿಕ್ಕಲಿ ಸಿಕ್ಕದಿರಲಿ, ಲಾಯರಾಗುವುದು ಸಾಧ್ಯವಾಗಲಿ ಆಗದಿರಲಿ, ಹೈಸ್ಕೂಲಿನಲ್ಲೇ ಮುಂದುವರಿಯುವುದು ಕಷ್ಟವಲ್ಲ. ಇತರರ ಮೇಲೆ ಭಾರ ಹಾಕದೆ ನನ್ನ ಜೀವನವನ್ನು ನಾನು ನಡಸಬಲ್ಲೆ ; ಸಂಸಾರದ ಜವಾಬ್ದಾರಿಯನ್ನೂ ಹೊರಬಲ್ಲೆ—ಈ ಧೈರ್ಯ ಬಂತು. ಆರ್ಥಿಕ ಭದ್ರತೆಯಿಂದ ಬಂದ ಧೈರ್ಯದ ಜೊತೆಗೆ ಹಿಂಜರಿಕೆಯಿಲ್ಲದೆ ಆಲೋಚನೆ ಮಾಡುವ ಧೈರ್ಯವೂ, ನನಗೆ ಪ್ರಿಯವಾದ ವಿಷಯಗಳನ್ನೇ ಕುರಿತು ಓದುವ, ಚಿಂತನೆ ಮಾಡುವ ಸ್ವಾತಂತ್ರ್ಯವೂ ಬಂದವು. ಎಂ. ಎ. ಮುಗಿದ ಮೇಲೆ ನಾನು ಪರೀಕ್ಷೆಗೆ ಗೊತ್ತಾದ ವಿಷಯಗಳನ್ನೆಲ್ಲ ಓದಿಯೇ ತೀರಬೇಕೆಂಬ ನಿರ್ಬಂಧ ಇಲ್ಲವಷ್ಟೆ. ಆ ನಿರ್ಬಂಧಕ್ಕೆ ನಾನು ಹಿಂದೂ ಅಷ್ಟಾಗಿ ಸಿಕ್ಕಿಬಿದ್ದಿರಲಿಲ್ಲ. ಆದರೂ 'ಮಾಡಬೇಕಾದ್ದನ್ನು ಕಡೆಗಣಿಸಿ ಇತರ ಹವ್ಯಾಸಗಳಿಗೆ ಮನಸ್ಸು ಕೊಡುತ್ತಿದ್ದೇನಲ್ಲ' ಎಂಬ ಯೋಚನೆ ಬಾಧಿಸುತ್ತಿತ್ತು. ಈಗ ಮನಸ್ಸಾಕ್ಷಿಯ ಬಾಯಿ ಮುಚ್ಚಿಸುವುದು ಸುಲಭವಾಯಿತು. ಒಟ್ಟಿನಲ್ಲಿ ನನ್ನ ಬದುಕು ನಿರ್ದಿಷ್ಟವಾದ ಘಟ್ಟವೊಂದಕ್ಕೆ ಒಂದು ಭದ್ರವಾದ ತಳಹದಿಯ ಮೇಲೆ ನಿಂತಂತಾಯಿತು.

(ಮುಗಿಯಿತು)

ಯಾವುದೇ ಬಾಹ್ಯ ಕ್ರಿಯೆಗಿಂತ ಮೂಕ ಪ್ರಾರ್ಥನೆಯು ಅನೇಕ ಸಲ ಹೆಚ್ಚು ಸಮರ್ಥವು ಎಂದು ನನ್ನ ವಿಶ್ವಾಸ. ದೇಹಕ್ಕೆ ಅನ್ನವು ಅವಶ್ಯವಿದ್ದರೆ ಆತ್ಮನಿಗೆ ಪ್ರಾರ್ಥನೆ ಅವಶ್ಯ.

ಗಾಂಧೀಜಿ

ಮರುನುಡಿ

ಆನೆಯು ಬಿಲೆ ಇದ್ದರೂ ಒಂದೆ, ಸತ್ತರೂ ಒಂದೆ ಎಂಬ ನುಡಿ ಹಳ್ಳಿಗರ ನಾಲಗೆಗಳಲ್ಲಿ ನಲಿದಾಡುತ್ತಿರುತ್ತದೆ. ಈ ಮಾತು ದಿವಂಗತ ಆಲನಹಳ್ಳಿ ಕೃಷ್ಣನಿಗೂ ಸಮುಚಿತವಾಗಿ ಅನ್ವಯಿಸುತ್ತದೆ. ರಂಗ ವೇದಿಕೆಯ ಮೇಲೆ ಕೇವಲ ಕೆಲವೇ ನಿಮಿಷ ಮಿಂಚಿ ಮರೆಯಾದರೂ, ತನ್ನ ಅಪೂರ್ವ ಬುದ್ಧಿ ಸಾಮರ್ಥ್ಯದಿಂದ, ವಿಶಿಷ್ಟ ಅಭಿನಯ ಚಾತುರ್ಯದಿಂದ ಪ್ರೇಕ್ಷಕರನ್ನು ದಂಗುಗೊಳಿಸಿ, ಅವರ ನೆನಪಿನಲ್ಲಿ ಭದ್ರವಾಗಿ ಬೇರೂರುವ ಸುದೈವೀ ನಟನಂತೆ ಅವನು ಚಿಕ್ಕವಯಸ್ಸಿನಲ್ಲಿಯೇ ಸಾಹಿತಿಗಳ ಮನವನ್ನು ಗೆದ್ದುಕೊಂಡು, ಕನ್ನಡ ಲೋಕದಲ್ಲಿ ಎಂದೂ ಅಳಿಯದ ಹೆಜ್ಜೆ ಜಾಡನ್ನು ನಿರ್ಮಿಸಿ, ಈ ಲೋಕದಿಂದ ಜಾರಿದನೆನ್ನುವುದಕ್ಕೆ ಅವನು ತೀರಿಕೊಂಡ ದಿನ ನೆರೆದಿದ್ದ ಜನಸಂದಣಿಯ ಶೋಕ ಹಾಗೂ ಅನಂತರ ನಾಡಿನ ಮೂಲೆಮೂಲೆಗಳಲ್ಲೆಲ್ಲ ಅನುರಣನಗೈದ ಗೋಳ್ದನಿಗಳೆ ಸಾಕ್ಷಿಯಾಗಿವೆ. ಅಂದು ಅಧ್ಯಾಪಕ ವಿದ್ಯಾರ್ಥಿಗಳೆಂಬ, ಮಂತ್ರಿ ಅಧಿಕಾರಿಗಳೆಂಬ, ಸಾಹಿತಿ ಸಾಮಾನ್ಯರೆಂಬ ಭೇದಭಾವವಿಲ್ಲದೆ ಅಶ್ರುಲೋಚನವಾಗಿ ನೆರೆದಿದ್ದ ಜನಸ್ತೋಮ ಅವನು ಬದುಕಿದ್ದಾಗ ಗಳಿಸಿದ್ದ ಜನಾನುರಾಗಕ್ಕೆ ನಿದರ್ಶನವಾಗಿದೆ. ಅವನ ಅಕಾಲಿಕ ಮರಣದ ಸುದ್ದಿ ಕಿವಿಯ ಮೇಲೆ ಬಿದ್ದಾಗ ನಿಡುಸುಯ್ಯದ, ಕಣ್ಣೀರ್ಗರೆಯದ ಜನರಿಲ್ಲ; ದುಃಖ ಸಂತಾಪ ವ್ಯಕ್ತಪಡಿಸದ ಪತ್ರಿಕೆಗಳಿಲ್ಲ. ಗೆಳೆಯರು ದಾರಿಯಲ್ಲೆದುರಾದಾಗ ಅವನದೇ ವಿಲಾಪ, ಪತ್ರಿಕೆಗಳ ಮುಖಪುಟಗಳಲ್ಲಿ ಅವನದೇ ಸಲ್ಲಾಪ. ಬದುಕಿದ್ದಾಗ ಭೌತದೇಹದಲ್ಲಿ ಮರೆಯಾಗಿದ್ದು ಮಸಕುಮಸಕಾಗಿ ಪ್ರಕಾಶ ಬೀರುತ್ತಿದ್ದ ಅವನ ಅಂತಶ್ಚೈತನ್ಯ ಸತ್ತನಂತರ ಪ್ರೋಜ್ಜ್ವಲವಾಗಿ, ಹಿಂದೆಂದೂ ಊಹಿಸಿಕೊಳ್ಳಲು ಸಾಧ್ಯವಾಗದಿದ್ದ ರೀತಿಯಲ್ಲಿ ಜನಮನವನ್ನು ಗೆದ್ದುಕೊಂಡಿದೆ. ಇದನ್ನು ಗಮನಿಸಿ ಸರ್ಕಾರ ಮತ್ತು ಸಮಾಜ ಅವನ ನೆನಪನ್ನು ಚಿರಸ್ಥಾಯಿಗೊಳಿಸಬೇಕಾದ್ದು ನ್ಯಾಯ ತಾನೆ!

ಪುಸ್ತಕ ಪ್ರಪಂಚದ ಗೌರವ ಸಂಪಾದಕನಾಗಿದ್ದ ಶ್ರೀಕೃಷ್ಣನ ಹೆಸರಿನಲ್ಲೊಂದು ನೆನಪಿನ ಸಂಚಿಕೆಯನ್ನು ಪ್ರಕಟಿಸುವುದುಚಿತವೆಂದು ಸಂಪಾದಕ ಮಂಡಲಿ ನಿರ್ಧರಿಸಿತು. ಕೂಡಲೇ ಲೇಖನ ಸಂಪಾದನೆಯ ಕಾರ್ಯ ಪ್ರಾರಂಭವಾಯಿತು. ನೆನೆದಾಗ ಮಾವಿನ ಹಣ್ಣು ಉದುರುವುದಿಲ್ಲ; ಕೇಳಿದಾಗ ಲೇಖನ ಹೊರಹೊಮ್ಮಲಾರದು, ಎರಡು ದಿನ ಹಿಂಚೋ ಮುಂಚೋ ಕೇಳಿಕೊಂಡ ಗೆಳೆಯರು ಲೇಖನಗಳನ್ನು ಕಳಿಸಿಕೊಟ್ಟದ್ದುಂಟು. ಆದರೆ ಸಕಾಲದಲ್ಲಿ ಅವು ಸಂಪಾದಕರ ಕೈಸೇರಲಿಲ್ಲವಾಗಿ ಈ ಸಂಚಿಕೆ ತಡವಾಗಿ ಗ್ರಾಹಕರನ್ನು ತಲಪುತ್ತಿದೆ. ಕೊನೆಕೊನೆಗೆ ಬಂದ ಲೇಖನಗಳಿಗೂ ಅವಕಾಶ ಕಲ್ಪಿಸುವ ದೃಷ್ಟಿಯಿಂದ, ಹಿಂದಿನಿಂದ ಅನುಸರಿಸಿಕೊಂಡು ಬಂದಿದ್ದ ವಿಷಯಾನುಕ್ರಮಣಿಕೆಯನ್ನು ಅಸ್ತವ್ಯಸ್ತಗೊಳಿಸಬೇಕಾಯಿತು; ಗಾತ್ರ ಪ್ರಮಾಣಮೀರಿ ಬೆಳೆದದ್ದರಿಂದ ಎರಡು ತಿಂಗಳ ಸಂಚಿಕೆಗಳನ್ನು ಒಟ್ಟುಗೂಡಿಸಬೇಕಾಯಿತು. ಈ ವಿಲಂಬಕ್ಕಾಗಿ ಹಾಗೂ ಇತರ ಪ್ರಮಾದಗಳಿಗಾಗಿ ಸಂಪಾದಕ ಮಂಡಲಿಯ ಪರವಾಗಿ ಗ್ರಾಹಕರ ಕ್ಷಮೆಯಾಚಿಸುತ್ತೇನೆ.

ದೇಜಗೌ

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	—	Karnataka State Adult Education Council. 1253, K. M. Puram, Mysore-4
Periodicity	—	Monthly
Printer's Name	—	Sri Rame Gowda (I/C)
Nationality & Address	—	Indian Karnataka State Adult Education Council Printing Press, 1253, K. M. Puram, Mysore-4
Publisher's Name & Address	—	General Secretary Karnataka State Adult Education Council. 1253, K. M. Puram, Mysore-4
Nationality	—	Indian
Editor's Name	—	Sri R. Boraiah
Nationality	—	Indian
Address	—	Karnataka State Adult Education Council 1253, K. M. Puram, Mysore-4

I, the General Secretary hereby declare that the particulars given above are true to the best of my Knowledge and belief.

K. N. Venkatakrishnaiah

General Secretary

KARNATAKA STATE ADULT EDUCATION COUNCIL

MYSORE

1 March 1989

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.